ISSN - 2347-7075
Impact Factor - 8.141

INTERNATIONAL JOURNAL OF ADVANCE AND APPLIED RESEARCH

Double-Blind Peer Reviewed / Bi-Monthly / Referred / Open Access Research Journal



Vol. 7 No. 53
September - October - 2026

Young Researcher Association

International Journal of Advance and Applied Research

(IJAAR)

A Multidisciplinary International Level Referred and Peer Reviewed Journal

ISSN–2347-7075 **Impact Factor–8.141**

September - October - 2026

Volume - 7 Issue – 53

Published by:
Young Researcher Association, Kolhapur, Maharashtra, India
Website: *https://ijaar.co.in*
Submit Your Research Paper on Email
Regular Issue: editor@ijaar.co.in
For Publication Call On - **8624946865**

K.L.E. SOCIETY'S

S.V.S. BELLUBBI ARTS & COMMERCE COLLEGE

SAUNDATTI-591126. DISTRICT: BELAGAVI. STATE: KARNATAKA

Accredited at the 'A' Level by NAAC 4th Cycle

Contemporary Issues in India: Research Perspective in Literature, Social Science and Commerce

Editorial Board

Editor in Chief

Sri Ramareddy.K.

Dr. Arundathi F. Badami

Member of Editorial Board

Sri Mohan Benachamardi

Dr. Geeta Mallapur

The Editors shall not be responsible for the originality and thought expressed in the papers. The author shall be solely held responsible for the originality and thoughts expressed in their papers.

INTERNATIONAL JOURNAL OF ADVANCE AND APPLIED RESEARCH
ISSN – 2347 -7075 (DOUBLE-BLIND Peer Reviewed) (Bi-Monthly Research Journal)
Vol. 7 No. 53
September - October – 2026

TABLE OF CONTENT

Sr. No.	Name of Author	Title of Paper	Page No.
1	ಡಾ.ಹೊಂಬಯ್ಯ	ವಚನ ಸಾಹಿತ್ಯದ ಮೌಲ್ಯಗಳು ಮತ್ತು ವರ್ತಮಾನದ ಮುಖಾಮುಖಿ(ನಡುಗನ್ನಡ ಸಾಹಿತ್ಯ ಅನುಲಕ್ಷಿಸಿ)	1 - 6
2	ರಾಮರೆಡ್ಡಿ. ಕೆ.	ಕನ್ನಡದಲ್ಲಿ ಜೈನ ಕವಿಗಳ ಧರ್ಮ: ಒಂದು ಜಿಜ್ಞಾಸೆ	7 - 12
3	ಡಾ. ಎಚ್. ಎ. ಭೋಗಲೆ	ಲಿಂಗ ತಾರತಮ್ಯ ಮಹಿಳಾ ಸಂವೇದನೆ: ಕನ್ನಡ ಸಾಹಿತ್ಯ	13 - 20
4	ಡಾ. ಶ್ರೀನಿವಾಸ್ ಎಸ್. ಜಿ.	ಪ್ರತಿರೋಧದ ಸಾಹಿತ್ಯ: ಕನ್ನಡ ದಲಿತ–ಬಂಡಾಯಬರಹಗಳಲ್ಲಿಸಾಮಾಜಿಕನ್ಯಾಯ	21 - 27
5	ಶ್ರೀಮತಿ ಶೋಭಾ ಸುರೇಶ್	ಪ್ರಸಕ್ತ ಸಮಾಜಕ್ಕೆ ವೀರಶೈವ ಸಾಹಿತ್ಯದ ಕೊಡುಗೆ	28 - 35
6	ಡಾ. ಆನಂದಕುಮಾರ ಎಂ ಜಕ್ಕಣ್ಣವರ	ಗ್ರಾಮೀಣ ಮಹಿಳೆಯ ಬದುಕು ಮತ್ತು ಸಾಹಿತ್ಯ	36 - 41
7	ಡಾ. ಚಂದ್ರಪ್ಪ ಮ. ತಳವಾರ	ಪ್ರಸ್ತುತ ಸಮಾಜಕ್ಕೆ ದಲಿತ–ಬಂಡಾಯ ಸಾಹಿತ್ಯದ ಅವಶ್ಯಕತೆ	42 - 49
8	ಡಾ. ಬಸವರಾಜ ಎಂ. ಜನಗೌಡ	ಸಮಾಜ ನಿರ್ಮಾಣದಲ್ಲಿ ಕನ್ನಡ ಸಾಹಿತ್ಯದ ಪ್ರಸ್ತುತತೆ	50 - 57
9	ಸಾಗರ ಶ್ರೀಕಾಂತ ಪಾಟೀಲ	ಪ್ರಸ್ತುತ ಸಮಾಜಕ್ಕೆ ದಲಿತ–ಬಂಡಾಯ ಸಾಹಿತ್ಯದ ಕೊಡುಗೆ	58 - 63
10	ಡಾ. ನೇತ್ರಾವತಿ ಗಬ್ಬೂರ	ಮಹಿಳಾ ಸಂವೇದನೆ: ವಿಭಿನ್ನ ನೆಲೆಗಳು ಒಂದು ವಿಶ್ಲೇಷಣೆ	64 - 73
11	ಶ್ರೀಮತಿ ಲಕ್ಷ್ಮಿ ಎಸ್. ಕುರಿ	ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಪಯಣ: ಪ್ರಸ್ತುತ ಸಮಾಜಕ್ಕೆ ಕನ್ನಡ ಸಾಹಿತ್ಯದ ಕೊಡುಗೆಗಳು	74 - 80
12	ಸೌಮ್ಯ. ಸಿ.	ವಚನ ಸಾಹಿತ್ಯ ಮತು ಲಿಂಗ ಸಮಾನತೆಯ ಧ್ವನಿ	81 - 87
13	ಶ್ರೀಮತಿ ಜಯಲಕ್ಷ್ಮಿ ಎನ್. ಕೌಜಗೇರಿ ಡಾ.ಎನ್.ಎ.ಕೌಜಗೇರಿ	ಕನ್ನಡ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆ ಮತ್ತು ಸುಸ್ಥಿರ ಅಭಿವೃದ್ಧಿ	88 - 93
14	ಶ್ರೀಪಾದ ಆರ್ ಮಾಳಗಿ	ಭಾರತದಲ್ಲಿ ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆ ಹಾಗೂ ಉದಯೋನ್ಮುಖ ಸವಾಲುಗಳು	94 - 101
15	ರಾಜು ಬಜಂತ್ರಿ	ರಾಜ್ಯಪಾಲರ ಸಂವಿಧಾನಾತ್ಮಕ ಅಧಿಕಾರಗಳು ಮತ್ತು ವಿವಾದಗಳು	102 - 108
16	ಡಾ. ಗಂಗಪ್ಪ ಸವದಿ	ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿಗಳ ಪಾತ್ರ, ಪ್ರತಿನಿಧಿತ್ವತೆ ಮತ್ತು ಉತ್ತರದಾಯಿತ್ವ : ಒಂದು ಅಧ್ಯಯನ	109 - 124
17	ಶ್ರೀ.ಮೋಹನ ಬೆಣಚಮರ್ಡಿ	ಪ್ರಸ್ತುತ ಸಮಾಜಕ್ಕೆ ಬಸವಣ್ಣನವರ ಕಾಯಕತತ್ವದ ಪರಿಕಲ್ಪನೆ	125 - 128
18	ಡಾ.ಸವಿತಾ ಕೊಟಬಾಗಿ	ಬೆಟಗೇರಿ ಕೃಷ್ಣಶರ್ಮ ಅವರ ನಲ್ವಾಡಗಳು: ಸಮಕಾಲೀನತೆಯ ನೆಲೆಗಳು ಮತ್ತು ಪ್ರಸ್ತುತತೆ.	129 - 133
19	ಡಾ. ನಾಗರಾಜ ಡಿ. ಮುರಗೋಡ	ನಗರೀಕರಣ ಮತ್ತು ಜಾಗತೀಕರಣದಿಂದ ಕನ್ನಡ ಸಾಹಿತ್ಯದ ಮೇಲಾದ ಸಾಂಸ್ಕೃತಿಕ ಬಿಕ್ಕಟ್ಟು	134 - 139
20	ಡಾ.ಅರುಂಧತಿಎಫ್.ಬದಾಮಿ	ಮಂಕುತಿಮ್ಮನ ಕಗ್ಗ ಆಧುನಿಕ ಸಮಾಜಕ್ಕೆ ಕೈಗನ್ನಡಿ	140 - 143

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ವಚನ ಸಾಹಿತ್ಯದ ಮೌಲ್ಯಗಳು ಮತ್ತು ವರ್ತಮಾನದ ಮುಖಾಮುಖಿ (ನಡುಗನ್ನಡ ಸಾಹಿತ್ಯ ಅನುಲಕ್ಷಿಸಿ)

ಡಾ.ಹೊಂಬಯ್ಯ
ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ,
ಶ್ರೀಮತಿ ಕುಸುಮಾವತಿ ಮಿರಜಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಬೇಡಕಿಹಾಳ, ಚಿಕ್ಕೋಡಿ
Corresponding Author –ಡಾ.ಹೊಂಬಯ್ಯ

DOI - 10.5281/zenodo.23527576

ಸಾರಲೇಖ:

ಹನ್ನೆರಡನೆ ಶತಮಾನದ ವಚನಕಾರರ ವಚನಗಳಲ್ಲಿ ಜೀವಪರವಾದ ಮೌಲ್ಯಗಳನ್ನು ಗುರುತಿಸುವುದು ಇಂದಿನ ವರ್ತಮಾನ ಕಾಲಕ್ಕೆ ಬಹುಮುಖ್ಯ. ಅವುಗಳಲ್ಲಿ ವಚನಕಾರರ ವಚನಗಳಲ್ಲಿ ಸತ್ಯ, ಸ್ನೇಹ, ಸೌಜನ್ಯ, ಪ್ರಾಮಾಣಿಕತೆ, ಕಾಯಕ, ದಯೆ, ಕರುಣೆ, ಸರಳತೆ, ಶಿಸ್ತು, ಸಂಯಮ, ಪರೋಪಕಾರ, ಸಹನೆ, ಸಹಬಾಳ್ವೆ, ಸ್ವಾಭಿಮಾನ, ನಂಬಿಕೆ, ಸ್ವಾತಂತ್ರ್ಯ, ವಿದ್ಯೆ, ಪ್ರೀತಿ, ಆತ್ಮೀಯತೆ, ಭಕ್ತಿ, ಬುದ್ಧಿ, ತ್ಯಾಗ, ಸತ್ಯಮೇವ ಜಯತೆ, ಸಾತ್ವಿಕತೆ, ದಾನ, ತಪಸ್ಸು, ಅಹಿಂಸೆ, ಶಾಂತಿ, ರಾಷ್ಟ್ರೀಯತೆ, ಶ್ರಮ ಸಂಸ್ಕೃತಿ, ಸಮಾನತೆ, ಬಟ್ಟೆ, ಆಹಾರ, ಬೆಳಕು, ಹಸಿವು, ವ್ಯಕ್ತಿ ಸ್ವಾತಂತ್ರ್ಯ, ಆದರ್ಶ, ಸಂಘರ್ಷ, ಹೋರಾಟ, ಶಿಕ್ಷಣ, ಸರಳ ಜೀವನ, ಹೀಗೆ ಹಲವಾರು ಜೀವಪರ ಮೌಲ್ಯಗಳು ಇವೆ. ಇವುಗಳು ಪ್ರತಿಯೊಬ್ಬರ ಜೀವನದ ರಸಪಾಕವಾಗಿರುತ್ತವೆ. ಮೌಲ್ಯ ಮತ್ತು ಜೀವನ ಒಂದು ನಾಣ್ಯದ ಎರಡು ಮುಖದಂತೆ ಹೊಂದಿಕೆಯಾಗಿರುತ್ತವೆ. ಈ ನೆಲೆಯಲ್ಲಿ ಪ್ರತಿಯೊಬ್ಬರು ಒಳ್ಳೆಯ ಮೌಲ್ಯ ಪ್ರತಿಪಾದನೆಯನ್ನು ಮಾಡುವುದರ ಮೂಲಕ ತಮ್ಮ ಜೀವನವನ್ನು ಸುಂದರವಾಗಿಟ್ಟುಕೊಳ್ಳಬೇಕೆಂಬುದು ವಚನಕಾರರ ಆಶಯವಾಗಿದೆ. ಈ ನೆಲೆಯಲ್ಲಿ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಮುಖ್ಯ ಸೂಚಿ ಪದಗಳು: ಕಾಯಕತತ್ವ, ಮೌಲ್ಯ ಪ್ರತಿಪಾದನೆಯ ಸಪ್ತ ಸೂತ್ರಗಳು, ಸಮಷ್ಠಿ ತತ್ವ, ಲಿಂಗ ಸಮಾನತೆಯ ಅಂಶಗಳು. ಸಾಮಾಜಿಕ ಸಮಾನತೆಯ ಆಶಯ.

ಕನ್ನಡ ಸಾಹಿತ್ಯವು ಎರಡು ಸಾವಿರ ವರ್ಷಗಳಿಗೂ ಅಧಿಕ ಇತಿಹಾಸವನ್ನು ಹೊಂದಿದೆ. ಬೌದ್ಧ ಮತ್ತು ಜೈನ ಸಾಹಿತ್ಯದಿಂದ ಕನ್ನಡ ಸಾಹಿತ್ಯ ಕ್ಷೇತ್ರವು ಮತ್ತಷ್ಟು ವಿಸ್ತರಿಸಿಕೊಂಡಿದೆ. ಇದಕ್ಕೆ ಇಮ್ಮಡಿಯಾಗಿ ಕನ್ನಡದ ಪ್ರಾಚೀನ ಶಾಸನಗಳ ಕೊಡುಗೆ ಅಪಾರವಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ನಾಡು– ನುಡಿ ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಅಸ್ಮಿತೆಯು ವರ್ತಮಾನದೊಂದಿಗೆ ಇಂದಿಗೂ ಮುಖಾಮುಖಿಯಾಗಿರುವುದನ್ನು ಗುರುತಿಸಬಹುದಾಗಿದೆ. ಏಕೆಂದರೆ ಕವಿರಾಜಮಾರ್ಗದ ಕೃತಿಯಲ್ಲಿ ಕನ್ನಡ ನಾಡು ನುಡಿಯ ಅಸ್ಮಿತೆಯನ್ನು ಗುರುತಿಸಿದರೆ, ಜೈನ ಸಾಹಿತ್ಯದಿಂದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಐಡೆಂಟಿಟಿಯನ್ನು ಗುರುತಿಸಲು ಸಾಧ್ಯವಾಗಿದೆ. ಪಂಪನ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಮಾತು ಸಾಮಾಜಿಕ ಕ್ರಾಂತಿಯ ಮೊದಲ ಹೆಜ್ಜೆಯಾಗಿದೆ. ಜೊತೆಗೆ ಜೈನ ಧರ್ಮದ ಪಂಚಾಣು ವ್ರತಗಳು ಇಂದಿನ ವರ್ತಮಾನ ಕಾಲದ ಬಹು ಮುಖ್ಯವಾದ ಮೌಲ್ಯಗಳಾಗಿವೆ.

ಇಂತಹ ಮೌಲ್ಯಗಳನ್ನು ಪ್ರತಿಪಾದಿಸಿದ ನಂತರ ಸಾಹಿತ್ಯ ಪ್ರಕಾರವೆಂದರೆ ಅದು ನಡುಗನ್ನಡ ಸಾಹಿತ್ಯ. *ಹನ್ನೆರಡನೆ* ಶತಮಾನದ ಕಾಲವನ್ನು ವಚನ ಕ್ರಾಂತಿಯ ಯುಗ ಎಂದು ಕರೆಯುತ್ತಾರೆ. ಇದೊಂದು ಸಾಮಾಜಿಕ ಕ್ರಾಂತಿ, ಸಮಾನತೆಯ ಆಶಯವನ್ನು ಹೊಂದಿದ ಸಾಹಿತ್ಯ ಪರಂಪರೆಯ ಕಾಲವಾಗಿದೆ. ಈ ಕಾಲದಲ್ಲಿ ಜನಪರವಾದ ಸಾಹಿತ್ಯ ಬೆಳೆದು ಬಂದಿತು. ಶರಣ ಚಳುವಳಿಯು

ನಡೆಯಿತು. ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಸಿದ್ಧರಾಮ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಹಡಪದ ಲಿಂಗಮ್ಮ, ನೀಲಾಂಬಿಕೆ, ಉರಿಲಿಂಗ ಪೆದ್ದಿ, ಡಕ್ಕೆಯ ಬೊಮ್ಮಣ್ಣ, ಮಾಡಿವಾಳ ಮಾಚಿದೇವ, ನುಲಿಯ ಚಂದಯ್ಯ, ಅಮುಗೆ ರಾಯಮ್ಮ, ಸೂಳೆ ಸಂಕವ್ವೆ, ಆಯ್ದಕ್ಕಿ ಮಾರಯ್ಯ, ಸೊಡ್ಡಳ ಬಾಚರಸ ಮುಂತಾದ ವಚನಕಾರರು ಈ ಕಾಲದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯನ್ನುಂಟು ಮಾಡಿದರು.

ಇವರ ಕಾಲದಲ್ಲಿ ಭಕ್ತಿ ಅಭಿವ್ಯಕ್ತಿಯಾಗಿರದೆ, ಸಮಾನತೆ, ಕಾಯಕದ ಗೌರವ, ದಾಸೋಹ, ಸಾಮಾಜಿಕ ನ್ಯಾಯ, ಸ್ತ್ರೀ ಗೌರವ ಮತ್ತು ಮೂಢ ನಂಬಿಕೆಗಳ ವಿರುದ್ಧ ಮುಂತಾದ ಜೀವ ಪರವಾದ ಮತ್ತು ಮನುಷ್ಯ ಪರವಾದ ಚಿಂತನೆ ನಡೆಸಿದ ಕಾಲಘಟ್ಟವಾಗಿ ಓದುಗರಿಗೆ ತಿಳಿದು ಬರುತ್ತದೆ. ಅಂದಿನಿಂದ ಇಂದಿನವರೆಗೆ ಸಾಮಾಜಿಕ ಸ್ಥಿತಿ–ಗತಿಗಳು ಬದಲಾಗಿಲ್ಲ ಎಂಬ ಅಂಶವನ್ನು ಗುರುತಿಸುವುದರ ಜೊತೆಗೆ ಶಿಕ್ಷಣದಲ್ಲಿ ಕ್ರಾಂತಿಯಾಗಿದೆ ಎಂಬ ಅಂಶವನ್ನು ಮನಗಾಣಬಹುದು. ಈ ಹಿನ್ನೆಲೆಯಲ್ಲಿ ಇಂದಿನ ಸಮಾಜ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಬಹಳಷ್ಟು ಮುಂದುವರಿದಿದ್ದರೂ ಸಾಮಾಜಿಕ ಅಸಮಾನತೆ, ಲಿಂಗಭೇದ, ಆರ್ಥಿಕ ಅಂತರ, ಶೋಷಣೆ, ಮೂಢ ನಂಬಿಕೆ ಮುಂತಾದ ವಿಚಾರಗಳು ಇಂದಿನ ಕಾಲಕ್ಕೆ ಮುಖಾಮುಖಿಯಾಗುವುದನ್ನು ಕಾಣಬಹುದಾಗಿದೆ. ಈ ಎಲ್ಲಾ ಅಂಶಗಳು ಅಂದು ಇತ್ತು ಇಂದು ಕೂಡ ಇದೆ. ಅಂದು ಬಸವಾದಿ ಶರಣರು ಸೇರಿ ಈ ಅಸಮಾನತೆ, ಲಿಂಗಭೇದ, ಆರ್ಥಿಕ ಅಂತರ, ಶೋಷಣೆ, ಮೂಢ ನಂಬಿಕೆ ಬಗ್ಗೆ ಹೋರಾಡಿದರೆ, ಇಂದು ಶೋಷಿತ ಸಮಾಜದ ಮತ್ತು ಹಿಂದುಳಿದ ವರ್ಗದ ಅಹಿಂದ ಸಂಘಟನೆಗಳು ತಮ್ಮ ಅಸ್ತಿತ್ವಕ್ಕಾಗಿ ನಿರಂತರವಾಗಿ ಹೋರಾಡುತ್ತಿದ್ದಾರೆ.

ಹತ್ತೊಂಭತ್ತು ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಶಿಕ್ಷಣಕ್ಕೆ ಬಹು ಮುಖ್ಯ ಮಹತ್ವ ದೊರೆಯಿತು. ಶೋಷಿತ ಸಮಾಜದವರು ಶಿಕ್ಷಣವಂತರಾಗಲು ಬಯಸಿದರು. ಅಂಬೇಡ್ಕರ್ ಅವರಂತಹ ದಲಿತ ನಾಯಕರು ಶಿಕ್ಷಣದಲ್ಲಿ ಕ್ರಾಂತಿ ಮಾಡಿದರು. ಇವರಿಂದ ಪ್ರೇರೆಪಿತರಾದ ಜನರು ಶಿಕ್ಷಣವನ್ನು ಪಡೆದು ಉದ್ಯೋಗ ಮತ್ತು ಆರ್ಥಿಕ ಅವಕಾಶ ದೊರೆತರು ಸಾಮಾಜಿಕ ಸಮಾನತೆ ಇದೆಯೇ ಎಂಬ ಪ್ರಶ್ನೆಯನ್ನು ನಾವು ಇಂದು ಕೇಳಿಕೊಳ್ಳಬೇಕಾಗಿದೆ. ಸಮಾನತೆಗಾಗಿ ಬಸವಾದಿ ಶರಣರು ಮಾಡಿದ ಕ್ರಾಂತಿಯನ್ನು ಇಂದಿಗೂ ಸಂಘಟನೆಗಳು ಮಾಡುತ್ತಿವೆ. ಆದರೆ ಅದರ ಪರಿಣಾಮ ಬೇರೆಯೇ ಆಗಿದೆ ಎಂಬುದು ಸಹ ಸುಳ್ಳಲ್ಲ. ಬಡವರು, ಕಾರ್ಮಿಕರು, ಗ್ರಾಮೀಣ ಜನರು ಮತ್ತು ಶೋಷಿತ ಸಮುದಾಯದ ಜನರು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವುದನ್ನು ಕಾಣಬಹುದಾಗಿದೆ. ಅಂದು ಬಸವಣ್ಣ ಹೋರಾಡಿದರು ಹತ್ತೊಂಭತ್ತು ಮತ್ತು ಇಪ್ಪತ್ತನೆಯ ಶತಮಾನದ ಸಂದರ್ಭದಲ್ಲಿ ಅಂಬೇಡ್ಕರ್, ಫುಲೆ, ಲೋಹಿಯಾ ಪೆರಿಯಾರ್ ನಾರಾಯಣ ಗುರು ಮುಂತಾದ ಸಾಮಾಜಿಕ ಸುಧಾರಕರು ಹೋರಾಡಿದರು. ಇಂದು ಶಿಕ್ಷಿತ ಸಾಮಾಜಿಕ ಹೋರಾಟಗಾರರು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿದ್ದಾರೆ.

ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟು ಕೊಂಡು ಮೌಲ್ಯಗಳನ್ನು ಪ್ರತಿಪಾದಿಸುತ್ತಾ, ಬಸವಾದಿ ಶರಣರು ನಡೆ ನುಡಿದಂತೆ ಒಂದಾಗಿಸಿ ಬದುಕಿದ್ದಾರೆ. ಈ ಹಿನ್ನೆಲೆಯಲ್ಲಿ 'ಮೌಲ್ಯ' ಎಂದರೆ, ಗೌರವ ಎಂದರ್ಥ. ಮನುಷ್ಯನು ತನ್ನ ಜೀವನದಲ್ಲಿ ಬೆಲೆ ಕೊಡುವ ಭಾವನೆ. *(ಎಂದು ಕನ್ನಡ ಸಾಹಿತ್ಯ ಪರಿಷತ್‌ನ ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ ದಾಖಲಾಗಿದೆ.)* ಅಂದರೆ ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿ ಮೌಲ್ಯಗಳಿಗೆ ಬೆಲೆಯನ್ನು ನೀಡುವುದರ ಮೂಲಕ ಒಬ್ಬ ಒಳ್ಳೆಯ ಪ್ರಜೆಯಾಗಿ ಸಮಾಜಮುಖಿಯಾದ ವ್ಯಕ್ತಿಯಾಗಿ ಕೆಲಸ ಮಾಡಬೇಕಾಗುತ್ತದೆ. ಏಕೆಂದರೆ ಇಂದು ಮೌಲ್ಯಗಳು ಕುಸಿಯುತ್ತಿವೆ. ಈ ಕುಸಿಯುತ್ತಿರುವ ಮೌಲ್ಯಗಳನ್ನು ಮತ್ತೆ ಅವುಗಳ ಮೌಲ್ಯಗಳನ್ನು ಅರಿಯುವ ಮತ್ತು ಅನುಸರಿಸಬೇಕಾದ ಅನಿವಾರ್ಯತೆ ಇಂದು ಬಹಳ ಮುಖ್ಯವಾಗಿದೆ. ಬುದ್ಧನ ತತ್ವ ಸಿದ್ಧಾಂತಗಳು, ಬಸವಣ್ಣನ ಸಮಾನತೆ, ಕಾಯಕ ಪರಂಪರೆ ಮತ್ತು ಈ ಕಾಲಘಟ್ಟದಲ್ಲಿ ನೂರಾರು ಶರಣ ಶರಣೆಯರ ವಚನಗಳಲ್ಲಿ ಅಭಿವ್ಯಕ್ತವಾಗುವ ಜೀವಪರ ಮೌಲ್ಯಗಳ ಪ್ರತಿಪಾದನೆಯು

ಇಂದಿನ ವರ್ತಮಾನಕ್ಕೆ ಮುಖಾಮುಖಿಯಾಗಬೇಕಾಗಿದೆ. ಗಾಂಧೀಜಿಯ ಸತ್ಯ, ಅಹಿಂಸೆ, ಹೋರಾಟ, ವರ್ಗ ತಾರತಮ್ಯವನ್ನು ಹೋಗಲಾಡಿಸಿ ಇಲ್ಲದವರ ಪರವಾಗಿ ಹೋರಾಟದ ಆಯಾಮ ರೂಪಿಸಬೇಕಾಗಿದೆ. ಅಂಬೇಡ್ಕರ್ ಅವರ ಶಿಕ್ಷಣ, ಸಂಘಟನೆ, ಹೋರಾಟದ ಸಾರ್ವತ್ರಿಕ ಮೌಲ್ಯಗಳು ಆಧುನಿಕ ಯುಗದಲ್ಲಿ ಬಹಳ ಮುಖ್ಯವಾದ ಸ್ಥಾನವನ್ನು ಪಡೆಯಬೇಕಾಗಿದೆ ಎಂಬುದು ವರ್ತಮಾನದ ಮುಖಾಮುಖಿಯಾಗಿದೆ.

ಹನ್ನೆರಡನೆ ಶತಮಾನದ ವಚನಕಾರರ ವಚನಗಳಲ್ಲಿ ಜೀವ ಪರವಾದ ಮೌಲ್ಯಗಳನ್ನು ಗುರುತಿಸಬಹುದು. ಇವುಗಳು ಇಂದಿನ ವರ್ತಮಾನದಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸಿವೆ. ಸತ್ಯ, ಸ್ನೇಹ, ಸೌಜನ್ಯ, ಪ್ರಾಮಾಣಿಕತೆ, ಕಾಯಕ, ದಯೆ, ಕರುಣೆ, ಸರಳತೆ, ಶಿಸ್ತು, ಸಂಯಮ, ಪರೋಪಕಾರ, ಸಹನೆ, ಸಹಬಾಳ್ವೆ, ಸ್ವಾಭಿಮಾನ, ನಂಬಿಕೆ, ಸ್ವಾತಂತ್ರ್ಯ, ವಿದ್ಯೆ, ಪ್ರೀತಿ, ಆತ್ಮೀಯತೆ, ಭಕ್ತಿ, ಬುದ್ಧಿ, ತ್ಯಾಗ, ಸಾತ್ವೀಕತೆ, ದಾನ, ತಪಸ್ಸು, ಅಹಿಂಸೆ, ಶಾಂತಿ, ರಾಷ್ಟ್ರೀಯತೆ, ಶ್ರಮ ಸಂಸ್ಕೃತಿ, ಸಮಾನತೆ, ಬಟ್ಟೆ, ಆಹಾರ, ಬೆಳಕು, ಹಸಿವು, ವ್ಯಕ್ತಿಸ್ವಾತಂತ್ರ್ಯ, ಆದರ್ಶ, ಸಂಘರ್ಷ, ಹೋರಾಟ, ಶಿಕ್ಷಣ, ಸರಳ ಜೀವನ, ಹೀಗೆ ಹಲವಾರು ಜೀವಪರ ಮೌಲ್ಯಗಳು ಪ್ರತಿಯೊಬ್ಬರ ಜೀವನದ ರಸ ಪಾಕವಾಗಿರುತ್ತವೆ. ಮೌಲ್ಯ ಮತ್ತು ಜೀವನ ಒಂದು ನಾಣ್ಯದ ಎರಡು ಮುಖದಂತೆ. ಈ ನೆಲೆಯಲ್ಲಿ ಪ್ರತಿಯೊಬ್ಬರು ಒಳ್ಳೆಯ ಮೌಲ್ಯ ಪ್ರತಿಪಾದನೆಯನ್ನು ಮಾಡುವುದರ ಮೂಲಕ ತಮ್ಮ ಜೀವನವನ್ನು ಸುಂದರವಾಗಿಟ್ಟುಕೊಳ್ಳಬೇಕೆಂಬುದು ವಚನಕಾರರ ಆಶಯವಾಗಿದೆ.

ಪ್ರತಿಯೊಬ್ಬ ಮನುಷ್ಯನು ತಮ್ಮ ಹುಟ್ಟು ಮತ್ತು ಸಾವಿನ ನಡುವೆ ಈ ಏಳು ಸೂತ್ರಗಳನ್ನು ಅಳವಡಿಸಿಕೊಳ್ಳಬೇಕು. ಮತ್ತು ಅನುಸರಿಬೇಕು. ಇವುಗಳು ಸಾರ್ವಕಾಲಿಕ ಸತ್ಯಗಳಾಗಿವೆ. ಆಗ ಮಾತ್ರ ಜೀವನ ಬಹಳ ಸುಂದರವಾಗಿರುತ್ತದೆ.

'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮ ದೇವನೊಲಿಸುವ ಪರಿ'[1]

ಬುದ್ಧ ಆಸೆಯೇ ದುಃಖಕ್ಕೆ ಮೂಲ ಕಾರಣ ಎಂದು ಹೇಳಿದ್ದಾನೆ. ತನಗೆ ಎಷ್ಟು ಸಿಗುತ್ತದೆ ಅಷ್ಟಕ್ಕೆ ಪ್ರತಿಯೊಬ್ಬರು ತೃಪ್ತಿ ಪಡೆದುಕೊಳ್ಳಬೇಕು. ಈ ವಿಚಾರದ ಕಾಯಕ ತತ್ವ ಮೌಲ್ಯವನ್ನು ಪ್ರತಿಪಾದನೆ ಮಾಡಿದ ಶರಣ ಶರಣೆಯರೆಂದರೆ, ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು. ಇವರು 'ಕಾಯಕ' ಎಂಬ ಮೌಲ್ಯದ ಮಹತ್ವವನ್ನು ಎಲ್ಲೇಡೆ ಸಾರಿದವರು. 'ಕಾಯಕವೇ ಕೈಲಾಸ'ವೆಂದು ತನು–ಮನದೊಂದಿಗೆ ಅನುಸರಿಸಿದವರು. ನಮ್ಮ ಅವಶ್ಯಕತೆಗೆ ಮೀರಿದ್ದು ಬೇರೊಬ್ಬರ ಹಕ್ಕನ್ನು ಕಸಿದುಕೊಂಡಂತೆ ಎಂದು ಚಿಂತಿಸಿದ ದಂಪತಿಗಳು. ಇಂತಹ ದಂಪತಿಗಳಿಂದ ಕಾಯಕ ಮತ್ತು ಅವಶ್ಯಕತೆಗೆ ಮೀರಿದ ವಸ್ತುವನ್ನು ಕಸಿದುಕೊಳ್ಳಬಾರದು ಎಂಬ ಮೌಲ್ಯ ಸಂದೇಶವನ್ನು ತಿಳಿಸಿದರು. ಅಂತೆಯೇ ಬಸವಣ್ಣ ಹೇಳಿದ ಏಳು ಸೂತ್ರಗಳಲ್ಲಿ ಕಳಬೇಡ ಎಂಬ ಮೊದಲನೇ ಸೂತ್ರ ಪ್ರತಿಯೊಬ್ಬರು ಅನುಸರಿಸಬೇಕು.

ಕಳ್ಳತನ ಮಾಡುವುದು ಶಿಕ್ಷಾರ್ಹ ಅಪರಾದ. ಇದು ಅಪ ಮೌಲ್ಯದ ಸಂಕೇತ. ನನ್ನದಲ್ಲದ ವಸ್ತುವನ್ನು ಕದಿಯುವುದು, ಬೇರೆಯವರ ಸಂಪತ್ತಿಗೆ ಆಸೆಪಡುವುದು ತಪ್ಪು. ಶರಣರು ಕಾಯಕ ಪರಂಪರೆಯನ್ನು ಅನುಸರಿಸಿಕೊಂಡು ಬಂದವರು. ತಾನೂ ಕಷ್ಟಪಟ್ಟು ದುಡಿದು ದಾಸೋಹ ಮಾಡಿದವರು. ಜೊತೆಗೆ ಹಂಚಿ ಉಣ್ಣೋದೆ ಧರ್ಮ ಎಂದು ನಂಬಿದವರು. ಪರಸ್ಪರ ಸ್ನೇಹ ಸಹಕಾರದೊಂದಿಗೆ ಕೊಡು ಕೊಳ್ಳುವಿಕೆಯನ್ನು ಪ್ರತಿಪಾದಿಸಿದವರು. ಹಾಗಾಗಿ ಇವರಲ್ಲಿ ಪ್ರಾಮಾಣಿಕತೆ ಮತ್ತು ಕಾಯಕ ತತ್ವ ಎಂಬ ಮೌಲ್ಯವು ಪ್ರತಿಯೊಬ್ಬರಲ್ಲೂ ಅಂತರ್ಗತವಾಗಿತ್ತು ಈ ನೆಲೆಯಲ್ಲಿ ಯೋಚನೆ ಮಾಡಿದಾಗ, ಬಸವಣ್ಣ ಹೇಳಿದ ಏಳು ಮೌಲ್ಯಗಳಲ್ಲಿ ಕಳ್ಳತನ ಮಾಡದೇ ಇರುವುದು ಸಹ ಒಂದು ಉತ್ತಮ ಮೌಲ್ಯವಾಗಿದೆ. ನನ್ನದಲ್ಲದ್ದನ್ನು ಆಸೆಪಡುವುದು ತಪ್ಪು ಎಂಬ ಮನೋಭಾವನೆಯನ್ನು ಮೈಗೂಡಿಸಿಕೊಳ್ಳಬೇಕು. ಈ ಅಂಶವು ವರ್ತಮಾನದಲ್ಲಿ ಪ್ರತಿಯೊಬ್ಬರು ಅನುಸರಿಸಬೇಕಾದ ಮಹತ್ವದ ಮೌಲ್ಯವಾಗಿದೆ.

ಈ ಒಂದು ಮೌಲ್ಯವನ್ನು ಇಂದಿನ ರಾಜಕಾರಣಿಗಳು, ಬಂಡವಾಳಶಾಹಿಗಳು ಅರ್ಥ ಮಾಡಿಕೊಂಡಿದ್ದೇ ಆದರೆ, ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಬಹುದು. ಇದು ಸಾಧ್ಯವೆ?... ಅಧಿಕ ಸಂಪತ್ತು ಇರುವವರು ಸಮ–ಸಮಾಜದ ಕನಸು ಕಾಣುವತ್ತ ಚಿಂತಿಸಲು ಸಾಧ್ಯ. ಆದರೆ ಇಂತಹ ವ್ಯವಸ್ಥೆ ನಿರ್ಮಾಣವಾಗುತ್ತದೆಯೇ? ಎಂದರೆ ಇದು ಸಾಧ್ಯವಿಲ್ಲದ ಮಾತು. ಅಪ್ರಾಮಾಣಿಕ ರಾಜಕಾರಣಿಗಳ ನಡುವೆ ಕೆಲವೊಬ್ಬ ಪ್ರಾಮಾಣಿಕ ವ್ಯಕ್ತಿಗಳನ್ನು ನೋಡಬಹುದಾದರೂ! ಬದಲಾವಣೆಯಾದರೆ ಶರಣ ಮೌಲ್ಯಕ್ಕೊಂದು ಘನತೆ ಬರಲು ಸಾಧ್ಯವಾಗುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಬಸವಣ್ಣನವರು ಪ್ರತಿಪಾದಿಸಿದ ಎರಡನೇ ಮೌಲ್ಯ 'ಕೊಲಬೇಡ'. ಈ ಮೌಲ್ಯವು ಪ್ರಾಣಿ ಹಿಂಸೆ ಮಾಡುವುದು ಅಪರಾಧವೆಂದು ಹೇಳುತ್ತದೆ. ಅಂದರೆ ಮೂಕ ಪ್ರಾಣಿಗಳನ್ನು ಕೊಲ್ಲಬಾರದು. ಅವುಗಳಿಗೂ ಸಹ ಬದುಕುವ ಹಕ್ಕಿದೆ ಎಂಬ ಸತ್ಯವನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು. ಈ ಮೌಲ್ಯ ಆಂತರಿಕ ಮತ್ತು ಬಾಹ್ಯದ ಸಂಗತಿಗಳನ್ನು ಪ್ರತಿನಿಧಿಸುತ್ತದೆ. ಕೇವಲ ದೈಹಿಕವಾಗಿ ಹಿಂಸೆ ಕೊಡುವುದು ಮಾತ್ರವಲ್ಲ. ಮಾನಸಿಕವಾಗಿ ಹಿಂಸೆ ಕೊಡುವುದು ಸಹ ಒಬ್ಬ ವ್ಯಕ್ತಿಯನ್ನು ಜೀವಂತ ಶವ ಮಾಡಿದ ರೀತಿಯಲ್ಲೆ ಎಂದು ನಾವುಗಳು ಪರಿಭಾವಿಸಬೇಕಾಗುತ್ತದೆ. ನಮ್ಮೊಳಗಿನ ದುಷ್ಟ ಚಿಂತನೆಯನ್ನು ದೂರ ಮಾಡಿ ಅಹಿಂಸಾ ತತ್ವವನ್ನು ಪ್ರತಿಪಾದಿಸಬೇಕು ಎಂದು ಬಸವಣ್ಣ ಹೇಳಿದ್ದಾರೆ.

ಅಸತ್ಯದ ಮುಂದೆ ಸತ್ಯವೇ ಬೆಳಕು ಚೆಲ್ಲುತ್ತದೆಯೇ ಹೊರತು. ಸತ್ಯದ ಮುಂದೆ ಎಂದೂ ಅಸತ್ಯ ಪ್ರಜ್ವಲಿಸದು. ಕಾರ್ಯ ಕಾರಣದ ಸಂದರ್ಭದ ಅನಿಮಿತ್ತ ಕಾಲ ಘಟ್ಟದಲ್ಲಿ ಮಾತ್ರ ಸುಳ್ಳು ಸಂತೋಷ ನೀಡಿದ್ದರೂ ಸಹ ಸುಳ್ಳು ಸತ್ಯವಲ್ಲ. ಅದು ಅಸತ್ಯವಾಗಿ ಮೋಸವಾಗಿದೆ ಎಂದು ಗೊತ್ತಾದಾಗ, ಮಾನಸಿಕವಾದ ನೋವು ವೇದನೆ ಮತ್ತು ಹತಾಶೆ ವ್ಯಕ್ತಿಯನ್ನು ದೀರ್ಘಕಾಲ ಕಾಡದೆ ಬಿಡದು ಎಂಬ ಸತ್ಯವನ್ನು ನಾವು ಅರ್ಥಮಾಡಿಕೊಳ್ಳಬೇಕು. ಬಸವಣ್ಣ ಹೇಳಿದ ಹಾಗೆ ಎಂತಹ ಸಂದರ್ಭ ಬಂದರೂ ನಾವು 'ಹುಸಿಯನುಡಿಯಲು ಬೇಡ' ಎಂಬ ಸಲಹೆಯನ್ನು ಸ್ವೀಕರಿಸಬೇಕು. ಏಕೆಂದರೆ ಒಂದು ಸುಳ್ಳನ್ನು ಹೇಳಿ, ಆ ಸುಳ್ಳನ್ನು ಸತ್ಯವೆಂದು ಹೇಳಲು ಹಲವಾರು ಸುಳ್ಳಿನ ಕಂತೆಯನ್ನೇ ಕಟ್ಟಬೇಕಾಗುತ್ತದೆ ಈ ಹಿನ್ನೆಲೆಯಲ್ಲಿ ಒಂದು ಸತ್ಯ ಒಂದೇ ಆಗಿರುತ್ತದೆ. ಆದರೆ ಒಂದು ಹುಸಿಯ ಹಿಂದೆ ನೂರಾರು ಹುಸಿಗಳು ಸರಮಾಲೆಯಾಗಿ ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಧರಿಸಲು ಪ್ರಮುಖ ಕಾರಣವಾಗಿ ಬಿಡುತ್ತದೆ ಎಂಬ ಪ್ರಾಮಾಣಿಕ ಸತ್ಯವನ್ನು ನಾವುಗಳು ಅರ್ಥಮಾಡಿಕೊಂಡು ನಡೆಯಬೇಕು ಎಂದು ಹೇಳಿದ್ದಾನೆ.

ಪ್ರತಿಯೊಬ್ಬ ವ್ಯಕ್ತಿಯು ಸ್ನೇಹ, ಸಹಕಾರ, ತಾಳ್ಮೆ, ಸಂತೋಷ ಎಂಬ ಸಹಜ ಮೌಲ್ಯಗಳನ್ನು ಅರ್ಥಮಾಡಿಕೊಂಡು ಸುಂದರವಾದ ಜೀವನ ನಡೆಸಿದ್ದೇ ಆದರೆ, ಬೇರೆಯವರಲ್ಲಿ ಮುನಿಯುವ ಅವಶ್ಯಕತೆ ಕಂಡು ಬರುವುದಿಲ್ಲ. ಕೆಲವು ಕಾರ್ಯಕಾರಣ ಸಂದರ್ಭದಲ್ಲಿ ಮನಸ್ಸಿಗೆ ಆಘಾತ ಉಂಟಾದಗಲೂ ಸಹ ನಾವು ತಾಳ್ಮೆ ಮತ್ತು ಸಂಯಮದಿಂದ ಸಂದರ್ಭವನ್ನು ಅರ್ಥಮಾಡಿಕೊಂಡು ಸಮಾನಧಾನ ಚಿತ್ತದಿಂದ ವ್ಯವಹರಿಸಿದ್ದಲ್ಲಿ ಮುನಿಯುವ ಅವಶ್ಯಕತೆ ಬರುವುದಿಲ್ಲ ಎಂಬ ಸಂದೇಶವನ್ನು ಬಸವಣ್ಣ ಸಪ್ತ ಸೂತ್ರಗಳಲ್ಲೊಂದನ್ನು ತಿಳಿಸಿದ್ದಾನೆ. ಕೋಪಕ್ಕೆ ಮೂಗು ಕೊಯ್ದರೆ, ಮತ್ತೆ ಜೋಡಿಸಲಾಗದು. ಕೋಪ ಎಂಬುವುದು ಮನುಷ್ಯನ ಸಹಜ ಲಕ್ಷಣ. ಇದು ಸಂಚಾರಿ ಭಾವ. ಕೋಪ ಕ್ಷಣಿಕವಾದ ಲಕ್ಷಣವೂ ಆಗಿದೆ. ಇದು ಸಹಜ ಸ್ಥಿತಿಗೆ ಬಂದಾಗ ಆದ ಅನಾಹುತಕ್ಕೆ ಪರಿಹಾರವು ಮೊದಲಿನ ಹಾಗೆ ದೊರಕದು. ಹಾಗಾಗಿ ಯಾರೊಬ್ಬರು ಕೋಪಿಸಿಕೊಳ್ಳುವ ಅವಶ್ಯಕತೆಯಿಲ್ಲ ಎಂದು ಬಸವಣ್ಣ ತಿಳಿಸಿದ್ದಾರೆ.

ಈ ಮೇಲಿನ ಅಂಶಗಳನ್ನು ಕೇಂದ್ರವಾಗಿಟ್ಟುಕೊಂಡು ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಕಳ್ಳತನ ಮಾಡುವುದು, ಕೊಲೆ ಮಾಡುವುದು, ಸುಳ್ಳು ಹೇಳಿ ಅಪರಾಧ ಮಾಡುವುದು, ಬೇರೆಯವರನ್ನು ಹೀಯಾಳಿಸುವುದು, ಅಪಹಾಸ್ಯ ಮಾಡುವುದು ಇಂತಹ ಹಲವಾರು ಅಂಶಗಳಿಗೆ ಯಾರೊಬ್ಬರು ಈ ಕೃತ್ಯಗಳನ್ನು ಮಾಡಿದರೆ ಕಾನೂನಿನ

ಅನ್ವಯ ಶಿಕ್ಷಿಸುವ ವಿಧಿಗಳನ್ನು ಬರೆದಿದ್ದಾರೆ. ಅಂದರೆ ಶರಣರ ತತ್ವಗಳು ವರ್ತಮಾನದಲ್ಲಿ ಕಾನೂನು ಗಳಾಗಿರುವುದನ್ನು ಗಮನಿಸಬಹುದು.

ವಚನಕಾರರು ಮಾನವನ ಮುಕ್ತಿ ಸಾಧನೆಗೆ ಕಾಮಿನಿ, ಕಾಂಚನಗಳು ಅಡೆ ತಡೆಗಳೆಂದು ಬಗೆಯಲಿಲ್ಲ. ಅದಕ್ಕೆ ಕಾರಣ ವಸ್ತುಗಳು ತನ್ನಷ್ಟಕ್ಕೆ ಒಳ್ಳೆಯವೂ ಅಲ್ಲ ಕೆಟ್ಟವೂ ಅಲ್ಲ, ಅವು ನಾವು ಕಾಣುವ ಮನಸ್ಥಿತಿಯ ಮೇಲೆ ಹಾಗೂ ಉಪಯೋಗಿಸುವ ವಿಧಾನವನ್ನು ಅವಲಂಬಿಸಿರುತ್ತದೆ ಎಂಬುದನ್ನು ಅಲ್ಲಮ ಪ್ರಭು ಒಂದು ವಚನದಲ್ಲಿ ಹೇಳಿದ್ದಾರೆ.

'ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ,
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾಣಾ
ಗುಹೇಶ್ವರ'[2]

ಈ ಮಾತಿಗೆ ಪೂರಕವಾಗಿ ಉಳಿದ ಶರಣರು ಇದೇ ಮನೋಭಾವ ಹೊಂದಿದ್ದರು ಈ ಕಾರಣದಿಂದ ಅವರು 'ಕಾಯಕ' ಜೀವಿಗಳಾಗಿದ್ದರು.

ವಚನಕಾರರ ಆರ್ಥಿಕ ಚಿಂತನೆಯ ವಿಚಾರಗಳು ಕಾಯಕ ತತ್ವದಲ್ಲಿ ಅಡಗಿದೆ. ಸಮಾಜದಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ಅವಶ್ಯಕತೆಯನ್ನು ಪೂರೈಸಿಕೊಳ್ಳುವ ಕಾರಣದಿಂದ ಯಾವುದಾದರು ಒಂದು ಕಾಯಕವನ್ನು ಅವಲಂಬಿಸಿ ಕೊಳ್ಳಬೇಕೆಂದು ಹೇಳಿದ್ದಾರೆ. ಹೆಣ್ಣು, ಹೊನ್ನು, ಮಣ್ಣು, ಮಾಯೆಯಲ್ಲ, ನಮ್ಮ ಮನದ ಆಸೆಯೇ ಮಾಯೆ ಎಂದು ಹೇಳುವುದರ ಮೂಲಕ ಆಸೆಯೆ ದುಃಖಕ್ಕೆ ಮೂಲ ಕಾರಣ ಎಂಬ ಬುದ್ಧನ ಸಂದೇಶವನ್ನು ತಿಳಿಸುತ್ತದೆ. ಈ ವಚನವು ಪ್ರಸ್ತುತ ಸಂದರ್ಭಕ್ಕೆ ಬಹುಮುಖ್ಯವಾದ ಸಂಗತಿಯಾಗಿದೆ.

ಪ್ರತಿಯೊಬ್ಬ ವ್ಯಕ್ತಿಗಳು ತಾವು ಮಾಡುವ ಕೆಲಸದ ಬಗ್ಗೆ ಗೌರವವಿರಬೇಕು. ಯಾವ ಕೆಲಸವು ಮೇಲಲ್ಲ, ಯಾವ ಕೆಲಸವು ಕೀಳಲ್ಲ, ಅಡುಗೆ ಮಾಡುವುದು, ಕಸ ಗುಡಿಸುವುದು, ಅಕ್ಕಿಯನ್ನು ಆಯುವುದು, ಇವುಗಳಲ್ಲಿ ಕಾಯಕ ನಿಷ್ಠೆಯನ್ನು ಕಾಣಬೇಕು ಎಂದು ಹೇಳುತ್ತಾ ಕೆಲಸದಲ್ಲಿ ಮೋಸ, ವಂಚನೆ, ಲಂಚಗುಳಿತನ ಇರಬಾರದು ಎಂದು ಶರಣೆ ಸತ್ಯಕ್ಕ ಒಂದು ವಚನದಲ್ಲಿ ಹೇಳಿದ್ದಾಳೆ.

'ಲಂಚ ವಚನಕ್ಕೆ ಕೈಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದಡೆ
ಕೈಮುಟ್ಟಿ ಎತ್ತಿದನಾದಡೆ ಅಯ್ಯ ನಿಮ್ಮಾಣೆ
ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯ
ಶಂಭುಜಕ್ಕೇಶ್ವರ ದೇವಯ್ಯ ನಿಮ್ಮಾಣೆ'[3]

ಶರಣೆ ಸತ್ಯಕ್ಕ ಸತ್ಯ ಶುದ್ಧ ಕಾಯಕ ನಿಷ್ಠೆಯಿಂದ ಬದುಕಿದವಳು. ಕಸವನ್ನು ಗುಡಿಸುವ ಕಾಯಕದಲ್ಲೂ ಆಕೆ ನಿಷ್ಠೆಯನ್ನು ಹೊಂದಿದ್ದು, ಇದು ಸತ್ಯಕ್ಕನ ಪ್ರಾಮಾಣಿಕತೆಯನ್ನು ಸಾಕ್ಷೀಕರಿಸುತ್ತದೆ. ಕಾಯಕ ನಿಷ್ಠೆಯ ಎದುರು ಶರಣ ಶರಣೆಯರಿಗೆ ಬಂಗಾರ–ವಜ್ರ ದೊಡ್ಡದಾಗುವುದಿಲ್ಲ ಎಂಬುದು ಅವರು ಕಾಯಕಕ್ಕೆ ನೀಡಿದ ಮಹತ್ವವಾಗಿದೆ. ಈ ವಚನವು ವರ್ತಮಾನಕ್ಕೆ ಇಟ್ಟು ನೋಡಿದರೆ 'ಕಾಯಕವೇ ಕೈಲಾಸ' ಎಂಬ ವಾಕ್ಯವು ಸರ್ಕಾರಿ ಕಛೇರಿಗಳ ನಾಮ ಫಲಕದಲ್ಲಿ ಮಾತ್ರ ಇರುತ್ತದೆ. ಆದರೆ ಇಂದು ಭ್ರಷ್ಟಾಚಾರದ ಕೂಪದಲ್ಲಿ ಇಂದಿನ ಕಾಯಕ ಜೀವಿಗಳು ಮುಳುಗಿದ್ದರೆ. ಕಾಯಕ ನಿಷ್ಠೆ ಪ್ರಾಮಾಣಿಕತೆಯನ್ನು ಮರೆತಂತೆ ಇದೆ. ಸತ್ಯಕ್ಕನ ವಚನದ ಮಾತುಗಳು ಇಂದಿನ ಭ್ರಷ್ಟ ಅಧಿಕಾರಿಗಳಿಗೆ ದಾರಿ ದೀಪವಾಗಬೇಕಾಗಿದೆ.

ಸಮತೆ, ಶ್ರೇಷ್ಠ ಭಾವ ಹಾಗೂ ಆತ್ಮವಿಶ್ವಾಸದ ನಂಬಿಕೆಯನ್ನು ಗಮನದಲ್ಲಿಟ್ಟುಕೊಂಡು ಸ್ತ್ರೀಯರಿಗೆ ಧೈರ್ಯ ತುಂಬುವ ಕೆಲಸವನ್ನು ಅಕ್ಕನಾಗಮ್ಮ ಒಂದು ವಚನದಲ್ಲಿ ಹೇಳಿದ್ದಾಳೆ. ಇದು ಎಲ್ಲಾ ಮಹಿಳೆಯರು ತಿಳಿದುಕೊಳ್ಳಬೇಕಾದ ವಚನವಾಗಿದೆ.

'ವಂದನೆಗೆ ನಿಲ್ಲಬೇಡ, ನಿಂದೆಗಂಜಿ ಓಡಬೇಡ
ಹಿಂದು ಮುಂದು ಆಡಲು ಬೇಡ, ಸಂದೇಹಗೊಳ್ಳಬೇಡ
ದ್ವಂದ್ವ ಬುದ್ಧಿಯ ಕಳೆದು ನಿಂದು
ಬಸವ ಪ್ರೀಯಕೂಡಲುಚೆನ್ನ ಸಂಗಯ್ಯ'[4]

ಈ ವಚನದಲ್ಲಿ ಆತ್ಮವಿಶ್ವಾಸದ ಅಂಶಗಳು ಪ್ರತಿ ಧ್ವನಿಸುತ್ತವೆ. ಅಂತಯೇ ಯಾವುದೇ ಕೆಲಸವನ್ನು ಮಾಡಬೇಕಾದರೆ ಅದರಿಂದ ದೊರೆಯುವ ಪ್ರತಿಫಲವು

ಒಳ್ಳೆಯದಾಗಲಿ ಅದನ್ನು ಸಮ ಭಾವದಿಂದ ಸ್ವೀಕರಿಸಬೇಕು ಎಂದು ಅಕ್ಕನಾಗಮ್ಮ ತಿಳಿಸಿದ್ದಾಳೆ. ಇದರೊಂದಿಗೆ ಸಮಾನತೆಯ ತತ್ವ ಸಂದೇಶವನ್ನು ಒಂದು ವಚನದಲ್ಲಿ ಪ್ರಸ್ತಾಪಿಸಿದ್ದಾಳೆ.

'ಗುರು ಸಂಬಂಧಿ ಗುರಭಕ್ತಯ್ಯನು
ಲಿಂಗ ಸಂಬಂಧಿ ಪ್ರಭುದೇವರು
ಪ್ರಸಾದ ಸಂಬಂಧಿ ಅನಿಮಿಷ ದೇವರು
ಶರಣ ಸಂಬಂಧಿ ಘಟ್ಟಿವಾಳಯ್ಯ
ಸರ್ವಾಚಾರ ಸಂಬಂಧಿ ಚೆನ್ನಬಸವಣ್ಣ
ಇಂತಿಂಥವರ ಸಂಬಂಧ ಎನ್ನ ಸರ್ವಾಂಗದಲ್ಲಿ ನಿಂದು
ಬಸವಣ್ಣಪ್ರಿಯ ಚೆನ್ನಸಂಗಯ್ಯ
ಹೃದಯ ಕಮಲದಲ್ಲಿ ನಿಜ ನಿವಾಸಿಯಾಗಿದ್ದೆನು'[5]

ಈ ವಚನದಲ್ಲಿ ಅಕ್ಕನಾಗಮ್ಮ ಗುರು, ಲಿಂಗ ಜಂಗಮ ಎಂಬ ತತ್ವವನ್ನು ಒಬ್ಬೊಬ್ಬರಿಗೆ ಅನ್ವಯಿಸಿ ಎಲ್ಲರೂ ಒಂದೇ ಎಂಬ ಸಮತೆಯ ಸಂದೇಶವನ್ನು ತಿಳಿಸಿದ್ದಾಳೆ. ಶರಣರಲ್ಲಿ ಹಿರಿಯರು ಕಿರಿಯರು ಎಂಬ ಭೇದ ಭಾವವಿಲ್ಲ. ಎಲ್ಲರ ವಿಚಾರಗಳು ಸಮಾನತೆಯ ಸಂದೇಶವನ್ನು ಸಾರುತ್ತವೆ.

ಹೀಗಾಗಿ ಕನ್ನಡ ಸಾಹಿತ್ಯದ ಸಂದರ್ಭಕ್ಕೆ ವಚನ ಸಾಹಿತ್ಯದ ಕಾಲವೇ ಒಂದು ವಿಶಿಷ್ಟವಾದ ಮೈಲುಗಲ್ಲು. ಇಲ್ಲಿ ಯಾರು ಹಿರಿಯರಲ್ಲ ಯಾರು ಕಿರಿಯರಲ್ಲ. ಎಲ್ಲರೂ ಒಂದೇ ಎಂಬ ಮೌಲ್ಯವನ್ನು ಪ್ರತಿಪಾದಿಸುತ್ತಾ ಸಮಾನತೆಯ ಕಾಯಕ ತತ್ವದ ಪ್ರತಿಪಾದನೆ ಮಾಡಿದವರು ಶರಣರು. ಇವರು ನುಡಿದಂತೆ ನಡೆದು ಮೌಲ್ಯವನ್ನು ಜಗತ್ತಿಗೆ ಬಿತ್ತಿದವರು. ಸಾರ್ವಕಾಲಿಕವಾಗಿ ವರ್ತಮಾನದೊಂದಿಗೆ ಮುಖಮುಖಿಯಾದವರು. ಇದನ್ನರಿತ ಇಂದಿನ ಪ್ರತಿಯೊಬ್ಬ ನಾಗರಿಕನು ವರ್ತಮಾನದಲ್ಲಿ ಶರಣರ ಹಾದಿಯಲ್ಲಿ ಬದುಕಿದರೆ ಅದುವೇ ಸಮಾಜಕ್ಕೆ ನಾವು ನೀಡುವ ಕೊಡುಗೆ. ಆ ಮೂಲಕ ಒಂದು ಅತ್ಯುತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಸಾಧ್ಯವಾಗುತ್ತದೆ.

ಕೊನೆಯ ಟಿಪ್ಪಣಿ:

1. ಬಸವಕೇಂದ್ರ, 101 ಶರಣರ ವಚನಗಳು, ಜೀವನಮೌಲ್ಯ, ಪುಟ, 08
2. ಡಿ.ಬಿ.ನಾಯಕ, ವಚನಾಮೃತ, ಪುಟ ಸಂಖ್ಯೆ 26
3. ಡಾ.ನಿರಂಜನ ಪೂಜಾರಿ ಸಂ: ವಚನದರ್ಶನ, ಡಾ. ಹನುಮಂತಪ್ಪ ಸಂಜೀವಣ್ಣನವರ, ವಚನಕಾರರ ಕಾಯಕ ನಿಷ್ಠೆ, ಪುಟ ಸಂಖ್ಯೆ, 43
4. ಪ್ರೊ.ಎನ್.ಕೆ.ಲೋಲಾಕ್ಷಿ (ಸಂ) ವಚನ ವಿವೇಚನೆ, ಸುಮ ಹೆಚ್.ಪಿ, ಶರಣ ಸಾಹಿತ್ಯ ಸಂರಕ್ಷಕಿ ಧಾರ್ಮಿಕ ಹೋರಾಟಗಾರ್ತಿ ಅಕ್ಕನಾಗಮ್ಮ, ಪುಟ ಸಂಖ್ಯೆ, 253
5. ಅದೇ ಪುಟ ಸಂಖ್ಯೆ, 254

ಪರಾಮರ್ಶನ ಗ್ರಂಥಗಳು:

1. ಡಾ.ಪರಮೇಶ್ವರಿ ಮೃತ್ಯುಂಜಯ ಹಿರೇಮಠ, ಶಿವಾಗಮಗಳು ಮತ್ತು ವಚನಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–2015
2. ಡಿ.ಬಿ.ನಾಯಕ, ವಚನಾಮೃತ, ಬಂಜಾರ ಪ್ರಕಾಶನ ಗುಲಬರ್ಗ, 2004
3. ಡಾ.ಎನ್.ಎನ್.ಚಿಕ್ಕಮಾದು, ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳ ಸಮೀಕ್ಷೆ, ಪ್ರಸಾರಾಂಗ, ಕರಾಮುವಿ, ಮೈಸೂರು–2011
4. ಪ್ರೊ.ಎನ್.ಕೆ.ಲೋಲಾಕ್ಷಿ, ಡಾ. ಹೊಂಬಯ್ಯ (ಸಂ) ವಚನ ವಿವೇಚನೆ, ಉಷಾ ಪ್ರಕಾಶನ, ಮೈಸೂರು–2021
5. ಸದಾನಂದ ಕನವಳ್ಳಿ (ಸಂ), ವೀರಶೈವ ಸಾಹಿತ್ಯ ಸಮೀಕ್ಷೆ, ಮಹಾಕವಿ ಪಂಪ ಪ್ರಕಾಶನ, ಲಕ್ಷ್ಮೇಶ್ವರ, 1976
6. ಡಾ.ಹೊಂಬಯ್ಯ, ಕನ್ನಡ ದಲಿತ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು, ಕರ್ನಾಟಕ ಸಾಹಿತ್ಯ ಅಕಾದೆಮಿ ಬೆಂಗಳೂರು–2022.

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಕನ್ನಡದಲ್ಲಿ ಜೈನ ಕವಿಗಳ ಧರ್ಮ: ಒಂದು ಜಿಜ್ಞಾಸೆ

ರಾಮರೆಡ್ಡಿ. ಕೆ.
ಮುಖ್ಯಸ್ಥರು, ಕನ್ನಡ ವಿಭಾಗ
ಕೆ.ಎಲ್.ಇ.ಸಂಸ್ಥೆಯ, ಎಸ್.ವಿ.ಎಸ್.ಬೆಳ್ಳುಬ್ಬಿ ಮಹಾವಿದ್ಯಾಲಯ,
ಸವದತ್ತಿ –591126. ಜಿಲ್ಲೆ ಬೆಳಗಾವಿ.
Corresponding Author–ರಾಮರೆಡ್ಡಿ. ಕೆ.

DOI - 10.5281/zenodo.23528044

ಸಾರಲೇಖ:

ಭಾರತದಲ್ಲಿನ ಧರ್ಮಗಳಿಗೆ ನಾಲ್ಕು ಸಾವಿರ ವರ್ಷಗಳ ಇತಿಹಾಸವಿದೆ. ಇಲ್ಲಿ ಅನೇಕ ಧರ್ಮಗಳು ನೆಲೆಸಿವೆ. ವೈದಿಕ, ಶೈವ, ವೈಷ್ಣವ, ತಾಂತ್ರಿಕ, ಶಾಕ್ತೇಯ, ಜೈನ, ಬೌದ್ಧ ಮತ್ತು ಸಿಖ್ ಧರ್ಮಗಳು ಜನ್ಮತಾಳಿವೆ. ಅದಕ್ಕೆಂದೇ ಭಾರತವು ಧರ್ಮಗಳ ಮಹಾ ಸಾಗರವೆಂದು ಕರೆದಿದ್ದಾರೆ. ಭಾರತದಲ್ಲಿ ಹುಟ್ಟಿದ ಧರ್ಮಗಳಲ್ಲದೆ ಹೊರಗಿನಿಂದ ಕೆಲವು ಧರ್ಮಗಳು ಆಗಮಿಸಿವೆ. ಅವುಗಳಲ್ಲಿ ಕ್ರೈಸ್ತ, ಇಸ್ಲಾಂ, ಜರತುಷ್ಟ್ರ ಧರ್ಮಗಳು. ಈ ಎಲ್ಲ ಧರ್ಮಗಳನ್ನು ಕರ್ನಾಟಕವು ಸರ್ವಮತ ಸಹಿಷ್ಣುತೆಯ ಅಡಿಯಲ್ಲಿ ಪೋಷಿಸಿದೆ.

ಈ ಧರ್ಮಗಳು ತಮ್ಮದೇ ಆದ ಸ್ವಾಯತ್ತ ವಿಧಿಗಳನ್ನು ರೂಢಿಸಿಕೊಂಡು ಅಸ್ತಿತ್ವದಲ್ಲಿವೆ. ಒಂದೊಂದು ಧರ್ಮದಲ್ಲಿ ವಿವಿಧ ರೀತಿಯ ನಂಬಿಕೆಗಳು, ಸಂಪ್ರದಾಯಗಳು, ಆರಾಧನಾ ವಿಧಾನಗಳು, ಭಾಷೆ, ಸಂಸ್ಕೃತಿಯನ್ನು ಜೀವನ ವಿಧಾನದ ಜೊತೆ ತಳುಕು ಹಾಕಿಕೊಂಡಿವೆ.

'ಪ್ರಾಚೀನ ಕನ್ನಡ ಸಾಹಿತ್ಯ ಸೃಷ್ಟಿಯಾಗಿದ್ದೇ ಧರ್ಮಗಳ ಪ್ರತಿಪಾದಕರು ಮತ್ತು ಅದರ ಅನುಯಾಯಿಗಳಿಂದ. ಅವರು ತಮ್ಮ ಧಾರ್ಮಿಕ ವಿಚಾರಗಳನ್ನೇ ಮುಖ್ಯ ಧಾರೆಗೆ ತರಲು ಯತ್ನಿಸುತ್ತಿದ್ದಾಗ ಅದಕ್ಕೆ ವಿರುದ್ಧವಿರುವ ಲೋಕದ ಸಂಗತಿಗಳನ್ನು ತಮ್ಮ ಸಾಹಿತ್ಯದಲ್ಲಿ ನಮೂದಿಸಲು ಹಿಂದೆಗೆದಿರುವ ಸಾಧ್ಯತೆಗಳೇ ಹೆಚ್ಚು'. ಅಂದರೆ ಧರ್ಮ ರೂಪಿಸಿದ ವಿಧಿಗಳಲ್ಲಿ ಸಾಗುವ ಮತ್ತು ಅಂತಹ ಧರ್ಮಗಳ ಕಟ್ಟಾ ಅನುಯಾಯಿಗಳು ಧಾರ್ಮಿಕ ವಿಧಾನಗಳನ್ನೆ ಪ್ರತಿಪಾದಿಸಿದರು.

ಕನ್ನಡ ಸಾಹಿತ್ಯ ಲೋಕದಲ್ಲಿ ಧಾರ್ಮಿಕ ನೆಲೆಯಲ್ಲಿ ಸಾಹಿತ್ಯ ರಚಿಸಿದ ಕವಿಗಳ ದೊಡ್ಡ ಪಟ್ಟಿಯೇ ಕಂಡುಬರುತ್ತದೆ. ಈ ಲೇಖನದ ಮಿತಿಯಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದ ಕವಿಗಳ ಕುರಿತ ವಿಶ್ಲೇಷಣೆ ಚರ್ಚೆಯ ವಿಷಯವಾಗಿದೆ. 'ಗುಣಮಟ್ಟದಲ್ಲಿ ಕನ್ನಡ ಸಾಹಿತ್ಯದ ಅರ್ಧ ಭಾಗವನ್ನು ಜೈನ ಕವಿಗಳು ಆವರಿಸಿಕೊಂಡಿದ್ದಾರೆ. ಒಂದು ಅಂದಾಜಿನ ಪ್ರಕಾರ ಸುಮಾರು ನಾಲ್ಕುನೂರ ಐವತ್ತು ಕವಿಗಳು, ಐದು ನೂರ ಇಪ್ಪತ್ತಕ್ಕೂ ಹೆಚ್ಚು ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಪುರಾಣ, ಮಹಾಕಾವ್ಯ, ಜನಪದ ಕಥೆ, ಕಾವ್ಯಶಾಸ್ತ್ರ, ಛಂದಸ್ಸು, ವ್ಯಾಕರಣ, ಸೂಪಶಾಸ್ತ್ರ, ಗಣಿತಶಾಸ್ತ್ರ, ಚಂಪೂ, ಗದ್ಯ, ಸಾಂಗತ್ಯ, ಮುಕ್ತಕ ಹೀಗೆ ಹಲವು ಪ್ರಕಾರಗಳಲ್ಲಿ ಪ್ರಭೇದಗಳಲ್ಲಿ ಕನ್ನಡ ಜೈನ ಸಾಹಿತ್ಯದ ಹರಹು ಚಾಚಿಕೊಂಡಿದೆ'.[1] ಹೀಗೆ ಬೆಳೆದು ಬಂದ ಕನ್ನಡ ಸಾಹಿತ್ಯ ವಿಸ್ತಾರ ಮತ್ತು ಗುಣಮಟ್ಟದಲ್ಲಿ ಸಮೃದ್ಧತೆಯನ್ನು ಕಂಡುಕೊಂಡಿದೆ.

ಮುಖ್ಯ ಸೂಚಿ ಪದಗಳು: ಧರ್ಮ, ಜೈನ ಧರ್ಮದ ತತ್ವಗಳು, ಜೈನ ಸಾಹಿತ್ಯ, ಪಂಪ ಮತ್ತು ನಯಸೇನ.

ಕನ್ನಡ ಸಾಹಿತ್ಯದಲ್ಲಿ ಜೈನ ಮತಾವಲಂಬಿಗಳಾಗಿ ಕಂಡುಬರುವ ಕವಿಗಳೆಂದರೆ (ಹೊಸಗನ್ನಡದ ಕವಿಗಳನ್ನು ಹೊರತುಪಡಿಸಿ) ಸು.ಕ್ರಿ.ಶ. 600 – 1800ಕ್ಕೆ ಈ ಪರಂಪರೆ ಮುಕ್ತಾಯವಾಗುತ್ತದೆ. ದುರ್ವಿನೀತ, ತುಂಬಲೂರಾಚಾರ್ಯ, ಶ್ಯಾಮ ಕುಂದಾಚಾರ್ಯ, ಸೈಗೊಟ್ಟ ಶಿವಮಾರ, ಶ್ರೀವಿಜಯ, ಅಸಗ, ಗುಣಗಾಂಕಿಯ (ಇದರಕರ್ತೃ ತಿಳಿದಿಲ್ಲ), ಗುಣನಂದಿ, ಗುಣವರ್ಮ–1, ಶಿವಕೋಟ್ಯಾಚಾರ್ಯ, ಪಂಪ, ಪೊನ್ನ, ಚಾವುಂಡರಾಯ,

ರನ್ನ, ಶ್ರೀಧರಾಚಾರ್ಯ, ಶಾಂತಿನಾಥ, ನಾಗಚಂದ್ರ(ಅಭಿನವ ಪಂಪ), ಕಂತಿ, ನಯಸೇನ, ಬ್ರಹ್ಮಶಿವ, ಕರ್ಣಪಾರ್ಯ, ನಾಗವರ್ಮ–2, ಸುಮನೋಬಾಣ, ಜಗದ್ಧಳ ಸೋಮನಾಥ, ನೇಮಿಚಂದ್ರ, ಅಗ್ಗಳ, ಕವಿಕಾಮ, ಬಂಧುವರ್ಮ, ಪಾರ್ಶ್ವಪಂಡಿತ, ಜನ್ನ, 2ನೇಗುಣವರ್ಮ, ಕಮಲಭವ, ಆಂಡಯ್ಯ, ಮಲ್ಲಿಕಾರ್ಜುನ, ಮಹಾಬಲ ಕವಿ, ಕೇಶಿರಾಜ, ಕುಮುದೇಂದು, ರಟ್ಟಕವಿ, ಹಸ್ತಿಮಲ್ಲ, ನಾಗರಾಜ, ವೃತ್ತವಿಲಾಸ, ಮಂಗರಾಜ–1, ಮಧುರ, ಆಯತವರ್ಮ, ಭಾಸ್ಕರ, ಕಲ್ಯಾಣಕೀರ್ತಿ, ವಿಜಯಣ್ಣ, ತೆರಕಣಾಂಬಿ ಬೊಮ್ಮರಸ, ಶಿಶುಮಾಯಣ, 3ನೇಮಂಗರಸ, ಅಭಿನವಾದಿ ವಿದ್ಯಾನಂದ, ಸಾಳ್ವ, ರತ್ನಾಕರವರ್ಣಿ, ಭಟ್ಟಾಕಳಂಕ, ದೇವಚಂದ್ರನವರೆಗೆಜೈನ ಕವಿಗಳ ದೊಡ್ಡ ಪಟ್ಟಿ ಸಿಗುತ್ತದೆ. ಈ ಕವಿಗಳಲ್ಲಿ ಕೆಲವರು ಜನ್ಮತಃ ಜೈನರಲ್ಲ. ಜನ್ಮತಃ ಬೇರೆ ಧರ್ಮೀಯರಾಗಿದ್ದು ಜೈನಧರ್ಮಕ್ಕೆ ವಾಲಿದವರು. ಅವರುಗಳಲ್ಲಿ ಬ್ರಾಹ್ಮಣರಾಗಿದ್ದು ಜೈನರಾದ ಪಂಪ ಮತ್ತು ನಯಸೇನ ಕವಿಗಳನ್ನು ಗಮನಿಸೋಣ.

ಜೈನ ಧರ್ಮ ಉತ್ತರ ಭಾರತದಿಂದ ಬಂದು ಕರ್ನಾಟಕದ ಶ್ರವಣಬೆಳಗೊಳದಲ್ಲಿ ನೆಲೆಯೂರಿತು. ಹೀಗೆ ಬಂದಿರುವ ಧರ್ಮದಲ್ಲಿನ ತತ್ವಗಳು ಕರ್ನಾಟಕದಲ್ಲಿ ಮಾಡಿಕೊಂಡ ಅಳವಡಿಕೆಗಳು ಮತ್ತು ಸ್ವೀಕರಣಗಳು ಯಾವುವು? ಅವುಗಳ ಪರಿಣಾಮದಿಂದ ಕರ್ನಾಟಕದ ಜನರಲ್ಲಿ ಅದು ತೋರಿಸಿದ ಹೊಸ ದಾರಿ ಯಾವುದು? ಎಂಬುದನ್ನು ಪರಿಶೀಲಿಸುವದು ಮುಖ್ಯವಾಗಿದೆ.

ಜೈನಧರ್ಮದ ತತ್ವಗಳು:

ಜೈನಧರ್ಮದಲ್ಲಿ ಉತ್ತಮ ನಡವಳಿಕೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಇದೆ. ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಮತ್ತು ದಯೆ ಇವುಗಳ ಮೂಲ ಸೂತ್ರಗಳು. ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ, ಸಮ್ಯಕ್ ಚಾರಿತ್ರ್ಯವೆಂಬ ರತ್ನತ್ರಯಗಳನ್ನು ಜೈನಧರ್ಮ ಒಳಗೊಂಡಿವೆ. ಜೈನ ಎಂಬ ಪದವು 'ಜಿನ' ಎಂಬ ಪದದಿಂದ ಉತ್ಪತ್ತಿಯಾಗಿದೆ. 'ಜಿನ' ಎಂದರೆ ಇಂದ್ರಿಯಗಳನ್ನು ಗೆದ್ದವನು ಎಂದರ್ಥ. ಕರ್ಮದ ಕಟ್ಟನ್ನು ಮುರಿದು ಸಂಸಾರವನ್ನು ದಾಟಿ ಮುಕ್ತಿಯನ್ನು ಪಡೆದವರಿಗೆ ಜಿನರು ಎನ್ನುವರು. ಜಿನರಿಂದ ಉಪದೇಶಿಸಲ್ಪಟ್ಟ ಧರ್ಮವೇ ಜೈನಧರ್ಮ. ಪ್ರಕೃತಿಯಲ್ಲಿ ಜೀವಂತವಾಗಿರುವ ಎಲ್ಲಾ ಜೀವಿಗಳಲ್ಲಿ ಬಾಂಧವ್ಯ ಮತ್ತು ಪ್ರೀತಿಯನ್ನು ಹೊಂದಿರುವುದು ಜೈನರ ಬಹುಮುಖ್ಯ ಮೌಲ್ಯ.

ಧರ್ಮಕಾರಣ:

'ಮನುಷ್ಯ ಸಾಮಾನ್ಯವಾಗಿ ಹುಟ್ಟಿನಿಂದ ನಿರ್ದಿಷ್ಟ ಧರ್ಮದೊಂದಿಗೆ ಗುರುತಿಸಿಕೊಳ್ಳುತ್ತಾನೆ. ಅದಕ್ಕೆ ಮುಖ್ಯ ಕಾರಣ ಅವನು ವಾಸಿಸುವ ಸಂಘ, ಸಮಾಜ ಒಪ್ಪಿಕೊಂಡ ಸಂಪ್ರದಾಯ, ಆಚರಣೆಗಳು. ಎಲ್ಲಾ ಧರ್ಮಗಳು ದೇವರಿದ್ದಾನೆ ಎನ್ನುತ್ತವೆ. ಅಮೂರ್ತ ರೂಪದ ಆ ದೇವರನ್ನು ಮೂರ್ತರೂಪಕ್ಕೆ ಇಳಿಸಲು ತಮ್ಮದೇ ಕಾರಣಗಳನ್ನು ಪ್ರತಿಪಾದಿಸುತ್ತವೆ. ದೇವರ ಈ ಹುಡುಕಾಟದ ಜೊತೆಗೆ ಮಾನವೀಯತೆಯ, ಸಹಬಾಳ್ವೆಯ ಪಾಠವನ್ನೂ ಅವು ಮಾಡುತ್ತವೆ. ಜೊತೆಗೊಂದಿಷ್ಟು ನೀತಿಬೋಧೆಯನ್ನೂ ಮಾಡಿವೆ.

ಒಂದುಧರ್ಮ ಇರುವುದು ಒಬ್ಬನೇ ದೇವರು ಎಂದರೆ, ಇನ್ನೊಂದು ಮುಕ್ಕೋಟಿ ದೇವರ ಜಪ ಮಾಡುತ್ತದೆ. ಹಿಂಸೆಯೇ ಒಂದು ಧರ್ಮದ ಆದ್ಯತೆಯಾದರೆ, ಮತ್ತೊಂದು ಸಾಮಾಜಿಕ ಅಸಮಾನತೆಯ ಹತಾಶೆ ಜನರಿಗೆ ಆಸರೆ ಕೊಟ್ಟಿರುತ್ತದೆ[೨]. ಒಂದು ಧರ್ಮವನ್ನು ತ್ಯಜಿಸಿ ಇನ್ನೊಂದು ಧರ್ಮವನ್ನು ಅಪ್ಪಿಕೊಳ್ಳುವುದು ಸರಳವಾದ ಕಾರ್ಯವಲ್ಲ. 'ಹುಟ್ಟಿನಿಂದ ಸಿಗುವ ಮತ–ಧರ್ಮವನ್ನು ಮೀರಲು ಸಾಮಾಜಿಕ, ತಾತ್ವಿಕ, ಧಾರ್ಮಿಕ, ಸಾಂಸ್ಕೃತಿಕ ಹೀಗೆ ಯಾವುದೇ ಕಾರಣ ಇರಲೇಬೇಕು[೩]. ಇಂತಹ ಸನ್ನಿವೇಶಗಳೇ ಪಂಪ, ರನ್ನ ಮುಂತಾದ ಕವಿಗಳ ಕುಟುಂಬಗಳಿಗೆ ತಮ್ಮ ಮಾತೃ ಧರ್ಮವನ್ನು ಬಿಟ್ಟು ಜೈನ ಧರ್ಮಕ್ಕೆ ಮತಾಂತರವಾಗಲು ಜೈನ ಧರ್ಮದಲ್ಲಿರುವ ಸರಳ, ಸಾತ್ವಿಕ ಮತ್ತು ತಾತ್ವಿಕ ಮೌಲ್ಯಗಳು ಕಾರಣವಾಗಿರಬೇಕು.

ಕಾಲಕ್ಕೆ ತಕ್ಕಹಾಗೆ ಅಂದಂದಿನ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಸನ್ನಿವೇಶಗಳು ಮನುಷ್ಯನನ್ನು ಬೇರೆ ಬೇರೆ ಧರ್ಮವನ್ನು ಅವಲಂಬಿಸಲು ಅನಿವಾರ್ಯವಾಗಿರಬೇಕು. ಪಂಪ, ರನ್ನ ಮುಂತಾದ

ಕವಿಗಳು ಜೈನ ಮತಾವಲಂಬಿಯಾಗಿದ್ದು, ಹನ್ನೆರಡನೆಯ ಶತಮಾನದಲ್ಲಿ ಮೇಲುವರ್ಗದಿಂದ ಹಿಡಿದು ಕೆಳವರ್ಗದವರೆಗೆ ಬಸವಣ್ಣನ ನೇತೃತ್ವದಲ್ಲಿ ಇಷ್ಟಲಿಂಗ ಧಾರಣೆ ಮಾಡಿ ಶರಣ ಧರ್ಮವನ್ನು ಅಪ್ಪಿಕೊಂಡಿದ್ದು, ಪಾಶ್ಚಾತ್ಯರು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದು ಅಕ್ಷರ ಮತ್ತು ಆರೋಗ್ಯದ ಸೇವೆಯನ್ನು ಮಾಡುತ್ತಿರುವಾಗ ಅನೇಕ ಸಮುದಾಯಗಳು ಕ್ರೈಸ್ತ ಧರ್ಮವನ್ನು ಅವಲಂಬಿಸಿದ್ದು, 1956ರ ಅಕ್ಟೋಬರ್ 14ರಂದು ಡಾ.ಬಿ.ಆರ್. ಅಂಬೇಡ್ಕರ್ ಅವರು ಬೌದ್ಧ ಧರ್ಮಕ್ಕೆ ಮತಾಂತರವಾಗಿದ್ದಕ್ಕೆ ಸಾಮಾಜಿಕ, ತಾತ್ವಿಕ, ಧಾರ್ಮಿಕ, ಸಾಂಸ್ಕೃತಿಕದಂತಹ ಕಾರಣ ಇರಲೇಬೇಕು.

ಪಂಪ:

'ಯಾವುದೇ ಕವಿಯ ಕಾವ್ಯಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅದಕ್ಕೆ ಮೊದಲು ಆ ಕವಿಯ ಚರಿತ್ರೆ – ಚಾರಿತ್ರ್ಯಗಳನ್ನು ತಿಳಿದುಕೊಳ್ಳಬೇಕಾದುದು ಅತ್ಯಗತ್ಯ. ಈ ಅಂಶಗಳು ಕಾವ್ಯ ಕ್ರಿಯೆಗೆ ಹೊರಗಿನವೆಂಬುದು ನಿಜವಾದರೂ ಕಾವ್ಯಗಳ ಮೇಲೆ ಇವುಗಳ ಪ್ರಭಾವ ಇದ್ದೇ ಇರುತ್ತದೆ'[3]. ಪಂಪನು ಬದುಕಿದ್ದು ಹತ್ತನೇ ಶತಮಾನದಲ್ಲಿ ಅವನು ಅವಿಭಜಿತ ಧಾರವಾಡ ಜಿಲ್ಲೆಯ ಭಾಗವಾಗಿದ್ದ ಅಣ್ಣಿಗೇರಿಯ ಜೋಯಿಸಸಿಂಘನ ಮೊಮ್ಮಗಳಾದ ಅಬ್ಬಣಬ್ಬೆಯ ಮಗನು. ಇವನ ತಂದೆ ಭೀಮಪ್ಪಯ್ಯ. ಭೀಮಪ್ಪಯ್ಯನ ಮನೆತನದ ಪೂರ್ವಜರು ವೈದಿಕ ಪರಂಪರೆಯಿಂದ ಬಂದ ಬ್ರಾಹ್ಮಣರು. ಬ್ರಾಹ್ಮಣ ಧರ್ಮದಲ್ಲಿ ಅನುಸರಿಸಿಕೊಂಡು ಬರಬೇಕಾಗಿದ್ದ ಸಂಪ್ರದಾಯಗಳು, ಆಹಾರ ಪದ್ಧತಿಗಳು, ಹೋಮ ಹವನಗಳಲ್ಲಿ ನಡೆಯುತ್ತಿದ್ದ ಹಿಂಸೆಯನ್ನು ನೋಡಲಾಗದೆ ಭೀಮಪ್ಪಯ್ಯನಿಗೆ ತಡೆಯಲಾಗಿರಲಿಕ್ಕಿಲ್ಲ. 'ಅಲ್ಲದೆ ಆ ಮುಂಚೆ ಅನೇಕ ಹಿಂಸೆಗಳನ್ನೆಸಗಿದ ಮಾಧವ ಸೋಮಯಾಜಿ (ಪಂಪನ ಮುತ್ತಜ್ಜನ ಅಜ್ಜ) ದೆಸೆಯಿಂದ ಪಂಪನ ಪೂರ್ವಜರಿಗೆ ಕಲಂಕ ತಗುಲಿರಬಹುದು. ಅಂತೆಯೇ ಪಂಪ ಮಾಧವ ಸೋಮಯಾಜಿಯ ಕುರಿತು 'ತನ್ನಧ್ವರಧೂಮದೆ ಕರಿದು ಮಾಡಿದ ನಿಜಯಶಮಂ' ಎಂದು ನೊಂದು ಕೊಂಡಿದ್ದಾರೆ..... ಸೂಕ್ಷ್ಮವಾಗಿ ನೋಡಿದಲ್ಲಿ ಪಂಪ ಇಲ್ಲಿ ನಿಂದಿಸಿದುದು ಯಜ್ಞ ಕುಂಡದಿಂದ ಹೊರಬಿದ್ದ ಧೂಮದ ಹಿಂದಡಗಿದ ಹಿಂಸೆಯನ್ನೇ ವಿನಃ ಯಜ್ಞ ಕ್ರಿಯೆಯನ್ನಲ್ಲವೆಂಬುದು ಗೋಚರವಾಗುತ್ತದೆ'[4]. ಈ ವಿಚಾರವನ್ನು ಗಮನಿಸಿದಾಗ ಪಂಪನು ಜೈನ ಧರ್ಮದ ಬಹು ಮುಖ್ಯ ತತ್ವವಾದ 'ಅಹಿಂಸೆ'ಯನ್ನು ಪ್ರತಿಪಾದಿಸಿದ್ದಾನೆ ಎಂಬುದು ವಿದಿತವಾಗುತ್ತದೆ.

ಪಂಪನು ರಚಿಸಿದ ಎರಡು ಮಹತ್ವದ ಕೃತಿಗಳಲ್ಲಿ ಒಂದು ಆಗಮಿಕ ಮಾರ್ಗದ ಆದಿಪುರಾಣ ಕಾವ್ಯವಾದರೆ, ಮತ್ತೊಂದು ಲೌಕಿಕ ಮಾರ್ಗದ ವಿಕ್ರಮಾರ್ಜುನ ವಿಜಯ ಕಾವ್ಯ. ಆದಿಪುರಾಣದಲ್ಲಿ ಜೈನರ ಮೊದಲ ತೀರ್ಥಂಕರನಾದ ಆದಿನಾಥನ ಚರಿತ್ರೆಯನ್ನು ಆಧರಿಸಿ ಸಂಸಾರ ಸಾರವಾದ ಧರ್ಮವನ್ನು ಪ್ರತಿಪಾದಿಸಿದ್ದಾನೆ. ಮತ್ತೊಂದು ಕಾವ್ಯವಾದ ವಿಕ್ರಮಾರ್ಜುನ ವಿಜಯದಲ್ಲಿ ವ್ಯಾಸನ ಮಹಾಭಾರತವನ್ನು ಆಧರಿಸಿ ಬದುಕಿಗೆ ದಾರಿದೀಪವಾದ ಲೌಕಿಕವನ್ನು ಪ್ರತಿಪಾದಿಸಿದ್ದಾನೆ. ತನ್ನ ಕಾವ್ಯದಲ್ಲಿ ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮುಮಂ'[5] ಎಂದು ಹೇಳುತ್ತಾ, ಮತ್ತೊಂದೆಡೆ 'ಇದುವೆ ಸುಕವಿ ಪ್ರಮೋದಪ್ರದಮಿದುವೆ ಸಮಸ್ತ ಭವ್ಯಲೋಕ ಪ್ರಮುದ ಪ್ರದಮೆನೆ ನೆಗಳ್ದಾದಿ ಪುರಾಣದೊಳರಿವುದು ಕಾವ್ಯ ಧರ್ಮಮಂ ಧರ್ಮಮಂ'[6] ಎಂದಿದ್ದಾನೆ. ಜೈನ ಧರ್ಮದ ನಿಲುವನ್ನು ಪಂಪ ಕೆಳಗಿನ ಕಾವ್ಯದಲ್ಲಿ ಹೀಗೆ ವ್ಯಕ್ತಪಡಿಸಿದ್ದಾನೆ.

ಭವವಾರಾಶಿ ನಿಮಗ್ನರಂದಯೆದಮಂದಾನಂತಪಂ
ಶೀಲಮೆಂಬಿವೆ ಮೈಯಾಗಿರೆ ಸಂದ ಧರ್ಮಮೆವಲಂ
ಪೊತ್ತೆತ್ತುಗುಂ ಮುಕ್ತಿಪರ್ಯವಸನಂಬರಮಾನುಷಂಗಿಕಫಲಂ
ಭೂಪೇಂದ್ರರಾಜೇಂದ್ರಂರಾಜ್ಯವಿಳಾಸಂ ಪೆರತಲ್ತು
ನಂಬುಖಚರಕ್ಷ್ಮಾಪಾಲ ಚೂಡಾಮಣಿ॥ (ಆ.ಪು.2–7)

ಈ ಪದ್ಯದಲ್ಲಿ ದಯೆ–ದಮ, ದಾನ–ತಪ–ಶೀಲಗಳಂತಹ ತತ್ವಗಳನ್ನು ಹೇಳಲಾಗಿದೆ. ಪ್ರತಿಯೊಬ್ಬ ಮಾನವನು ಈ ತತ್ವಗಳನ್ನು ಪಾಲಿಸುವಂತಾದರೆ ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಸುವುದರಲ್ಲಿ ಸಂದೇಹವಿಲ್ಲ.

ಧರ್ಮಾರ್ಥಕಾಮವೆಂಬಿವು
ಧರ್ಮಾರ್ಥಿಜನಕ್ಕೆ ನೆರೆದನೆರ್ಮಂತವರೋಳ್

ಧರ್ಮಂಪ್ರಥಮಾರ್ಥಂ

ಧರ್ಮಾಂಘ್ರಿಪ ಫಳಂ ಆದರ್ಕೆರಸಮದು ಕಾಮಂ॥

(ಆ.ಪು.10–50)

ಮನುಷ್ಯನ ಬದುಕಿಗೆ ಹಣ ಮತ್ತು ಲೈಂಗಿಕತೆ ಮತ್ತಿತರೆ ಅನಿವಾರ್ಯವಾದರೂ ಅವುಗಳು ಒಂದು ಮಿತಿಯಲ್ಲಿರಬೇಕು. ಇದರಲ್ಲಿ ಧರ್ಮವು ಮೊದಲ ಸ್ಥಾನದಲ್ಲಿರಬೇಕು ಎಂದಿದ್ದಾನೆ ಪಂಪ. ಪಂಪನ ಈ ಆಲೋಚನೆ ಅವನ ವಿಚಾರ ಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಇಂದಿನ ದಿನಗಳಲ್ಲಿ ನಮ್ಮ ಸುತ್ತಮುತ್ತಲಿನ ಸನ್ನಿವೇಶಗಳನ್ನು ಗಮನಿಸಿದಾಗ ಕೆಲವರು ಹಣ ಮತ್ತು ಲೈಂಗಿಕತೆಗೆ ಪ್ರಾಧಾನ್ಯತೆ ಕೊಟ್ಟಿದ್ದಾರೆ. ಹೀಗಾದರೆ ಸಹಜವಾಗಿ ಅನಾರೋಗ್ಯಕರ, ಅಸಮಾನತೆಯ ಸಮಾಜ ನಿರ್ಮಾಣವಾಗುತ್ತದೆ.

ನಯಸೇನ:

ಅವಿಭಜಿತ ಧಾರವಾಡ ಜಿಲ್ಲೆಯ ಭಾಗವಾಗಿದ್ದ ಮುಳಗುಂದದವನು. ಈತ ಬದುಕಿದ್ದು ಹನ್ನೆರಡನೆಯ ಶತಮಾನದ ಮೊದಲ ಭಾಗದಲ್ಲಿ. ಈತನ ಸ್ವವಿವರಗಳು ಲಭ್ಯವಿಲ್ಲ. ಜೈನ ಸನ್ಯಾಸಿಯಾಗಿದ್ದ ಈತನು ಅಂದಿನ ದಿನಗಳಲ್ಲಿ ರಾಜ ಪೂಜ್ಯನೂ ಆಗಿದ್ದು ಬಹಳ ಪ್ರಭಾವಶಾಲಿ ವ್ಯಕ್ತಿಯೆನಿಸಿದ್ದನು. ಈತನು ಜೈನಧರ್ಮದ (ಹದಿನಾಲ್ಕು ತತ್ವಗಳಾದ) ದರ್ಶನ, ಅಂಗಗಳು ಮತ್ತು ಅಣುವ್ರತಗಳನ್ನು ಬಳಸಿಕೊಂಡು ಸ್ವಾರಸ್ಯಕರವಾದ ಮುತ್ತಿನಂತಹ ಕತೆಗಳನ್ನು ಒಳಗೊಂಡ ಧರ್ಮಾಮೃತ ಕಾವ್ಯವನ್ನು ಹೆಣೆದಿದ್ದಾನೆ.

ನಯಸೇನನು ಕತೆಯಲ್ಲಿ ಧರ್ಮದ ತಿರುಳನ್ನು ಹೇಳುವ ಈ ಮಾದರಿಯನ್ನು ಶಿವಕೋಟ್ಯಾಚಾರ್ಯನ (ಈತನನ್ನು ಬ್ರಾಜಿಷ್ಣು ಎಂದೂ ಕರೆಯಲಾಗುತ್ತದೆ) ವಡ್ಡಾರಾಧನೆಯಲ್ಲಿ ಕಾಣಬಹುದು. ಧರ್ಮಾಮೃತದಲ್ಲಿ ಸ್ವಮತ ಮಂಡನೆ ಪರಮತ ಖಂಡನೆ ಎನ್ನುವಂತಿದ್ದರೂ ಎಲ್ಲಿಯೂ ಗಡಿ ದಾಟದೆ ಸಹಿಷ್ಣುತೆಯನ್ನು ಮೆರೆದಿದ್ದಾನೆಂದು ಎಂ.ಎಸ್. ಸುಂಕಾಪುರ ಅವರು ಅಭಿಪ್ರಾಯಪಟ್ಟಿದ್ದಾರೆ.

ದಯಾಮಿತ್ರಶೆಟ್ಟಿ ಮತ್ತು ವಸುಭೂತಿಯ ಕತೆಯು ತುಂಬಾ ಸ್ವಾರಸ್ಯಕರವಾಗಿದೆ. ಈ ಕತೆಯಲ್ಲಿ ಜಿನ ಮತವನ್ನು ಹೀಗಳೆದ ವಸುಭೂತಿ ಎಂಬ ಬ್ರಾಹ್ಮಣನಿಗೆ ದಯಾಮಿತ್ರಶೆಟ್ಟಿ ಬುದ್ಧಿ ಕಲಿಸಿದ ಪ್ರಸಂಗ ನಯಸೇನನ ಕತೆಗಾರಿಕೆಯ ನೈಪುಣ್ಯ ಎದ್ದು ಕಾಣುತ್ತದೆ. 'ಹಣದ ಆಸೆಗಾಗಿ ವ್ರತವನ್ನು ಕೈಗೊಳ್ಳುವ ವಸುಭೂತಿ ಕೇಶಲೋಚನದ ಪ್ರಸಂಗದಲ್ಲಿ, ಊಟದ ಪ್ರಸಂಗದಲ್ಲಿ, ಬತ್ತಲೆಯಾಗಿದ್ದು ರಾತ್ರಿ ನೀರಡಿಕೆಯನ್ನು ಸಹಿಸುವ ಪ್ರಸಂಗದಲ್ಲಿ ನಗೆಯ ವಸ್ತುವಾಗಿಬಿಟ್ಟಿದ್ದಾನೆ. ಹಣದ ಮೇಲಿನ ಆಸೆಯಿಂದ ಮನಸ್ಸನ್ನು ಗಟ್ಟಿಮಾಡಿ ಕೂದಲು ಕೀಳಿಸಿಕೊಳ್ಳುತ್ತಾನೆ. ಆಮೇಲೆ ಸಕ್ಕರೆ ಮಿಶ್ರಿತ ಊಟ ಮಾಡಿ, ಹಾಲು ಕುಡಿದು, ತುಪ್ಪ, ಹೋಳಿಗೆ, ಮಂಡಿಗೆ, ಲಡ್ಡು, ಗಾರಿಗೆ ತಿಂದು ಬಾಯಿ ಚಪ್ಪರಿಸಬೇಕು. ಆದರೆ ನೀರು ಮಾತ್ರ ಸ್ವಲ್ಪವೂ ಕುಡಿಯುವ ಹಾಗಿಲ್ಲ. ನೀರಡಿಕೆ ಹೆಚ್ಚಾಯಿತು, ಗಂಟಲು ಒಣಗಿತು. ವಸುಭೂತಿಯ ಪರಿಸ್ಥಿತಿ ಹೇಗಿತ್ತೆಂದರೆ

'ಬಿಡುಗುಂ ಬಾಯಂ, ನೆಲದೊಳ್ ಪಡುಗುಂ,
ಪೂರಗಣ್ಗೆ ಪೋಗಿ ತಣ್ಪಪ್ಪೆಡೆಯೋಳ್ ಪಡುಗುಂ,
ತಂಪಿಲ್ಲದೊಡೆರ್ದೆಗಿಡುಗುಂ, ವಸುಭೂತಿಧೈರ್ಯವಿಲ್ಲದೆ
ಮನದೊಳ್'

ಎಂದು ಚಿತ್ರಿಸಿದ್ದಾನೆ. ರಾತ್ರಿ ಕಳೆಯುವುದೇ ಕಷ್ಟವಾಗಿ ಪಿಶಾಚಿ ಬಡಿದವನಂತೆ ತನ್ನೊಳಗೆ ತಾನೇ ಮಾತಾಡಿಕೊಂಡ. ನೀರಡಿಕೆ ಹೆಚ್ಚಾಗಿ ಗಾಳಿಗೆ ಬಾಯೊಡ್ಡಿದ, ಕಪ್ಪೆಯಂತೆ ತಂಪಾದ ಸ್ಥಳ ಹುಡುಕಿದ, ಹಲ್ಲಿಯಂತೆ ಗೋಡೆಯನ್ನು ಏರಲೆತ್ನಿಸಿದ. ಕೇವಲ ಎಂಟು ದಿನಗಳಲ್ಲಿಯೇ ಬೇಸತ್ತು 'ಸಿಂಹವನ್ನು ಹಿಡಿದು ಸವಾರಿ ಮಾಡಬಹುದು. ಈ ನೋಂಪಿ(ವ್ರತ) ನಡೆಸುವುದು ಅಸಾಧ್ಯವೆಂದು ಒಪ್ಪಿಕೊಳ್ಳುತ್ತಾನೆ. ಜೈನ ಮುನಿಯ ಧೈರ್ಯ ಯಾರಿಗೂ ಬಾರದೆಂದು ಮನದಟ್ಟಾಗುತ್ತದೆ. ಸೆಟ್ಟಿಯ ಧರ್ಮವೇ ಶ್ರೇಷ್ಠವೆಂದು ಬಗೆದು ಜೈನ ಧರ್ಮವನ್ನು ಸ್ವೀಕರಿಸುತ್ತಾನೆ[೫]. ಹೀಗೆ ನಯಸೇನನು ಜೈನ ಧರ್ಮದ ತತ್ವಗಳನ್ನು ಅರ್ಥ ಮಾಡಿಸಲು ಈ ರೀತಿಯ ವ್ರತವನ್ನು ವಸುಭೂತಿಗೆ ಮಾಡಿಸುತ್ತಾನೆ. ಜೀವನದ ಆಳವಾದ ಪರಿಜ್ಞಾನ, ಲೋಕಜ್ಞಾನ ಮತ್ತು ತಾತ್ವಿಕತೆಯನ್ನು

ಚೆನ್ನಾಗಿ ನಯಸೇನನು ಅರಿತವನಾಗಿರುವದರಿಂದ ಜೈನಧರ್ಮದ ತಿರುಳನ್ನು ಸಮರ್ಥವಾಗಿ ಧರ್ಮಾಮೃತ ಕೃತಿಯಲ್ಲಿ ಕಂಡರಿಸಿದ್ದಾನೆ. ಇದರಂತೆ ಇನ್ನುಳಿದ ಹದಿಮೂರು ಕತೆಗಳೂ ಜೈನ ಧರ್ಮದ ಸಾರವನ್ನು ಸೇರಿಸಿ ಹೋಲಿಕೆಗಳ ಸರಮಾಲೆಯನ್ನು ಹೆಣೆದು ಮೇಲುಗೈ ಸಾಧಿಸಿದ್ದಾನೆ.

'ಧರ್ಮವೆಂಬುದು ಮಾನವನ ಜೀವನದ ವಿಕಾಸಕ್ಕೆ ಸಹಕಾರಿಯಾಗಬಲ್ಲ ರೀತಿ, ನೀತಿ, ನಿಯಮಗಳ ಸಂವಿಧಾನ. ಇದನ್ನು ಅರಿತು ಆಚರಿಸುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕನ ಮೇಲಿದೆ..... ಆದ್ದರಿಂದ ಜಗತ್ತಿನಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಧರ್ಮಗಳಿರಲಿ' ಎಂದಿದ್ದಾರೆ ಕುವೆಂಪು.[೫] ಧರ್ಮದ ಕುರಿತು ಅನೇಕ ವಿಧದಲ್ಲಿ ವ್ಯಾಖ್ಯಾನಿಸುತ್ತಾರೆ. ಜರ್ಮನಿಯ ತತ್ವಜ್ಞಾನಿಯಾದ ಕಾರ್ಲಮಾರ್ಕ್ಸನು 'ಜನರಿಗೆ ಧರ್ಮವೆಂಬುದು ಅಫೀಮು ಇದ್ದಂತೆ'[೬] ಎಂದಿದ್ದಾನೆ. ಇನ್ನು ಕೆಲವರಿಗೆ ಧರ್ಮವೆಂಬುದು ಶೋಷಣೆಯ ಆಯುಧವಾಗಿ ಬಳಕೆಯಾಗುತ್ತಿದೆ. ಇದೇ ಸಂದರ್ಭದಲ್ಲಿ ದುರ್ಬಲರಿಗೆ ಧರ್ಮವೆಂಬುದು ದುರಂತದ ದಾರಿಯಾಗಿ ಪರಿಣಮಿಸಿದೆ. ಕ್ರಿ.ಪೂ ಮೂರನೇ ಶತಮಾನದಿಂದ ಇಲ್ಲಿಯವರೆಗೆ ಧರ್ಮದ ಹೆಸರಿನಲ್ಲಿ ದಬ್ಬಾಳಿಕೆ, ಶೋಷಣೆ, ಮತಾಂತರಗಳು ಒಂದೆಡೆಯಾದರೆ, ಇನ್ನು ಶೋಷಿತರಿಗೆ ಮತ್ತೊಂದೆಡೆ ಮತಾಂತರವೆಂಬುದು ನೆಮ್ಮದಿಯ ತಾಣವಾಗಿ ಪರಿಣಮಿಸಿದೆ. ಹೀಗಾಗಿ ಹಿಂದುಳಿದ ಮತ್ತು ದಲಿತ ಸಮುದಾಯಗಳು ತಮ್ಮ ಧರ್ಮವನ್ನು ತೊರೆದು ತಮಗೆ ಎಲ್ಲಿ ಒಂದಿಷ್ಟು ಶಾಂತಿ, ನೆಮ್ಮದಿ ಹಾಗೂ ಸುಖ ದೊರೆಯುವ ಸಾಧ್ಯತೆಯಿದೆಯೋ ಆ ಧರ್ಮವನ್ನು ಆಶ್ರಯಿಸಿದ ಉದಾಹರಣೆಗಳು ಭಾರತದಾದ್ಯಂತ ದೊರೆಯುತ್ತವೆ.

ಪ್ರಸ್ತುತ ದಿನಗಳಲ್ಲಿ ಧರ್ಮದ ಹೆಸರಿನಲ್ಲಿ ಜಾರಿಯಲ್ಲಿರುವ ಕಾನೂನುಗಳು ಮಾನವನ ಅಸ್ತಿತ್ವವನ್ನೇ ನಾಶ ಮಾಡುವ ಪರಿಸ್ಥಿತಿಗೆ ತಲುಪಿವೆ. ಇನ್ನರಿತ ಪ್ರಭುತ್ವಗಳು ಜನರಿಗೆ ಪೂರಕವಾದ ಯೋಜನೆಗಳನ್ನು ಜಾರಿ ಮಾಡುವುದನ್ನು ಬಿಟ್ಟು, ಜನರಿಗೆ ಮಾರಕವಾಗಿರುವ ಧಾರ್ಮಿಕ ಹಿನ್ನೆಲೆಯ ನಿಯಮಗಳನ್ನು ಜಾರಿಗೆ ತರುವ ಆತುರದಲ್ಲಿವೆ. ಇಂದಿನ ಪ್ರತಿಕೂಲ ಸನ್ನಿವೇಶದಲ್ಲಿ ಮಾನವೀಯತೆಯನ್ನು ಎತ್ತಿ ಹಿಡಿಯುವ, ಜೀವ ಸಂಕುಲವನ್ನು ಪೊರೆಯುವ ಧರ್ಮವನ್ನು ಅನುಸರಿಸಿದಲ್ಲಿ ಮಾತ್ರ ಸದೃಢ, ಸಮಾನತೆಯ ರಾಷ್ಟ್ರವನ್ನು ಕಟ್ಟಬಹುದು.

ಆಕರ ಸಾಮಗ್ರಿ:

1. ಡಾ.ಶಾಂತಿನಾಥ ದಿಬ್ಬದ–ಪಂಪಭಾರತ ಒಂದು ಸಾಂಸ್ಕೃತಿಕ ಅಧ್ಯಯನ, ಸಿದ್ಧಲಿಂಗೇಶ್ವರ ಬುಕ್ ಡಿಪೋ–ಪ್ರಕಾಶನ, ಕಲಬುರಗಿ,
2. ಬಿ.ಬಿ.ಮಹೀಶವಾಡಿ, ಎಸ್.ಪಿ.ಪಾಟೀಲ–ನಯಸೇನ ವಿರಚಿತ ಧರ್ಮಾಮೃತ, ಕನ್ನಡ ಅಧ್ಯಯನ ಪೀಠ, ಕ.ವಿ.ವಿ.ಧಾರವಾಡ.
3. ಬಿ.ಎ.ವಿವೇಕರೈ– ಕನ್ನಡ ಜೈನಕವಿಗಳಲ್ಲಿ ಲೌಕಿಕದ ಬಹುರೂಪಗಳು: ಪಂಪನಿಂದ ಜನ್ನನವರೆಗೆ, https://bavivekrai.wordpress.com
4. ಎಸ್.ವಿ.ರಂಗಣ್ಣ–ಪಂಪಭಾರತ, ಕ.ಸಾ.ಪರಿಷತ್ತು, ಬೆಂಗಳೂರು
5. ಎಲ್.ಗುಂಡಪ್ಪ– ಆದಿಪುರಾಣ ಸಂಗ್ರಹ, ಪ್ರಸಾರಾಂಗ, ಮೈ.ವಿ.ವಿ.ಮೈಸೂರು.1969
6. ಜಾತಿ ಸಂವಾದ–ವಿವಿಧ ಲೇಖಕರು ಪ್ರಜಾವಾಣಿ ಪ್ರಕಾಶನ, ಬೆಂಗಳೂರು,2014.
7. ಎನ್.ವಿಶಾಖ– ಈ ಭಾನುವಾರ ಪ್ರಜಾವಾಣಿ: 06–03–2011
8. ವಿಕಿಪೀಡಿಯ– ಒಪಿಯಮ್ ಆಫ್ ದಿ ಪೀಪಲ್
9. ಎಂ.ಎಸ್.ಸುಂಕಾಪುರ–ನಗೆಗಾರ ನಯಸೇನ.1969

ಕೊನೆ ಟಿಪ್ಪಣಿ:

1. ರಂಗನಾಥ ಕಂಟನಕುಂಟೆ– ಜಾತಿ ಸಂವಾದ, ಪ್ರಜಾವಾಣಿ ಪ್ರಕಾಶನ, ಬೆಂಗಳೂರು,2014. ಪುಟ. 126
2. ಬಿ.ಎ.ವಿವೇಕರೈ– ಕನ್ನಡ ಜೈನ ಕವಿಗಳಲ್ಲಿ ಲೌಕಿಕದ ಬಹುರೂಪಗಳು: ಪಂಪನಿಂದ ಜನ್ನನವರೆಗೆ, https://bavivekrai.wordpress.com
3. ಎನ್.ವಿಶಾಖ– ಈ ಭಾನುವಾರ ಪ್ರಜಾವಾಣಿ: 06–03–2011
4. –ಅದೇ –
5. ಡಾ.ಶಾಂತಿನಾಥ ದಿಬ್ಬದ–ಪಂಪ ಭಾರತ ಒಂದು ಸಾಂಸ್ಕೃತಿಕ ಅಧ್ಯಯನ, ಸಿದ್ಧಲಿಂಗೇಶ್ವರ ಬುಕ್ ಡಿಪೋ– ಪ್ರಕಾಶನ, ಕಲಬುರಗಿ, ಪುಟ.17.
6. –ಅದೇ– ಪುಟ. 19.
7. ಪಂಪಭಾರತ – 14–60.
8. ಆದಿಪುರಾಣ – 1–38
9. ಬಿ.ಬಿ.ಮಹೀಶವಾಡಿ, ಎಸ್.ಪಿ.ಪಾಟೀಲ– ನಯಸೇನ ವಿರಚಿತ ಧರ್ಮಾಮೃತ, ಕನ್ನಡ ಅಧ್ಯಯನ ಪೀಠ, ಕ.ವಿ.ವಿ.ಧಾರವಾಡ. ಪುಟ.25.
10. ಕೆ.ಜಿ.ಭದ್ರಣ್ಣವರ– ಜನಗಳಿದ್ದಷ್ಟು ಧರ್ಮಗಳಿರಲಿ, ಜಾತಿ ಸಂವಾದ, ಪ್ರಜಾವಾಣಿ ಪ್ರಕಾಶನ, ಬೆಂಗಳೂರು,2014. ಪುಟ. 46
11. ವಿಕಿಪೀಡಿಯ– ಒಪಿಯಮ್ ಆಫ್ ದಿ ಪೀಪಲ್.

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಲಿಂಗ ತಾರತಮ್ಯ ಮಹಿಳಾ ಸಂವೇದನೆ: ಕನ್ನಡ ಸಾಹಿತ್ಯ

ಡಾ. ಎಚ್. ಎ. ಭೋಗಲೆ
ಸಹಾಯಕ ಪ್ರಾಧ್ಯಾಪಕರು,
ಸಿ.ಟಿ.ಇ. ಸಂಸ್ಥೆಯ ಶ್ರೀಮತಿ ಎ. ಎ. ಪಾಟೀಲ ಕಲಾ
ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ಚಿಕ್ಕೋಡಿ–591201
Corresponding Author–ಡಾ. ಎಚ್. ಎ. ಭೋಗಲೆ
DOI - 10.5281/zenodo.23528099

ಸಾರಾಂಶ:

ಕನ್ನಡ ಸಾಹಿತ್ಯವು ಕನ್ನಡಿಗರ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಮಾನವೀಯ ಬದುಕಿನ ವಿವಿಧ ಆಯಾಮಗಳನ್ನು ದಾಖಲಿಸಿಕೊಂಡು ಬಂದಿರುವ ಸಮೃದ್ಧ ಸಾಹಿತ್ಯ ಪರಂಪರೆಯಾಗಿದೆ. ಈ ಸಾಹಿತ್ಯದಲ್ಲಿ ಮಹಿಳೆಯ ಸ್ಥಾನಮಾನ, ಆಕೆಯ ಬದುಕಿನ ಅನುಭವಗಳು, ನೋವು–ನಲಿವುಗಳು, ಶೋಷಣೆ, ಅಸಮಾನತೆ, ಆತ್ಮಗೌರವ, ಸ್ವಾತಂತ್ರ್ಯದ ಹಂಬಲ ಹಾಗೂ ಪ್ರತಿರೋಧದ ಧ್ವನಿಗಳು ವಿಭಿನ್ನ ಕಾಲಘಟ್ಟಗಳಲ್ಲಿ ವಿಭಿನ್ನ ರೀತಿಯಲ್ಲಿ ಅಭಿವ್ಯಕ್ತಗೊಂಡಿವೆ. ಪ್ರಾಚೀನ ಹಾಗೂ ಮಧ್ಯಕಾಲೀನ ಸಾಹಿತ್ಯದಲ್ಲಿ ಮಹಿಳೆಯು ಬಹುಪಾಲು ಪುರುಷ ಕೇಂದ್ರಿತ ದೃಷ್ಟಿಕೋನದಿಂದ ನಿರೂಪಿತಳಾಗಿದ್ದರೆ, ವಚನ ಚಳುವಳಿಯ ಸಂದರ್ಭದಲ್ಲಿ ಅಕ್ಕಮಹಾದೇವಿಯಂತಹ ಶರಣೆಯರು ಮಹಿಳೆಯ ಸ್ವತಂತ್ರ ಅಸ್ತಿತ್ವದ ಪ್ರಶ್ನೆಯನ್ನು ಪ್ರಬಲವಾಗಿ ಮುಂದಿಟ್ಟರು. ಆಧುನಿಕ ಕಾಲದಲ್ಲಿ ಶಿಕ್ಷಣ, ಮುದ್ರಣ, ಸಾಮಾಜಿಕ ಸುಧಾರಣಾ ಚಳುವಳಿಗಳು ಹಾಗೂ ಸ್ತ್ರೀವಾದಿ ಚಿಂತನೆಗಳ ಪ್ರಭಾವದಿಂದ ಮಹಿಳೆ ಸಾಹಿತ್ಯದ ವಸ್ತುವಿನಿಂದ ಸಾಹಿತ್ಯದ ಕರ್ತೃವಾಗಿ ರೂಪುಗೊಂಡಳು. ತ್ರಿವೇಣಿ, ಗೀತಾ ನಾಗಭೂಷಣ, ಸಾರಾ ಅಬೂಬಕರ್, ವೈದೇಹಿ, ಬಾನು ಮುಷ್ತಾಕ್ ಮೊದಲಾದ ಲೇಖಕಿಯರ ಕೃತಿಗಳಲ್ಲಿ ಮಹಿಳೆಯ ಅಂತರಂಗ, ಕೌಟುಂಬಿಕ ಸಂಕಟ, ಸಾಮಾಜಿಕ ನಿಯಂತ್ರಣ, ಲೈಂಗಿಕ ರಾಜಕಾರಣ, ಜಾತಿ–ವರ್ಗದ ಶೋಷಣೆ, ಆತ್ಮಗೌರವ ಮತ್ತು ಸ್ವಾತಂತ್ರ್ಯದ ಪ್ರಶ್ನೆಗಳು ಗಂಭೀರವಾಗಿ ಮೂಡಿಬಂದಿವೆ. ಹೀಗಾಗಿ ಕನ್ನಡ ಸಾಹಿತ್ಯದಲ್ಲಿನ ಮಹಿಳಾ ಸಂವೇದನೆ ಕೇವಲ ಮಹಿಳೆಯ ನೋವಿನ ದಾಖಲೆಯಲ್ಲ; ಅದು ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯ ಅಧಿಕಾರ ಸಂಬಂಧಗಳನ್ನು ಪ್ರಶ್ನಿಸುವ, ಪ್ರತಿರೋಧಿಸುವ ಮತ್ತು ಪರ್ಯಾಯ ಅಸ್ತಿತ್ವವನ್ನು ನಿರ್ಮಿಸುವ ಚಿಂತನಾತ್ಮಕ ಪ್ರಕ್ರಿಯೆಯಾಗಿದೆ.

ಕೀಲಿ ಪದಗಳು: ಮಹಿಳಾ ಸಾಹಿತ್ಯ, ಲಿಂಗ ತಾರತಮ್ಯ, ಮಹಿಳಾ ಸಂವೇದನೆ, ಪಿತೃಪ್ರಧಾನ ವ್ಯವಸ್ಥೆ, ಸ್ತ್ರೀವಾದ, ವಚನ ಸಾಹಿತ್ಯ, ದಲಿತ ಮಹಿಳೆ, ಪ್ರತಿರೋಧ, ಅಸ್ಮಿತೆ.

ಪೀಠಿಕೆ:

"ಪತಿಯರಿಗೆ ನೆರವಾಗಿ, ಸುತರ ನಿರಿವಂತಿಕೆಯೆ
ಪರಮ ವೈಭವವೆಂದು ಮೆರೆದತಾಯಿಯರು
ರಾಜ್ಯವಾಳಿದರಿಹರು ಕಾವ್ಯ ಬರೆದಿಹರು
ತ್ಯಾಗಮೂರ್ತಿಗಳೆಮ್ಮ ಪೂರ್ವನಾರಿಯರು"

ಎಂಬ ಆಶಯವು ಭಾರತೀಯ ಹಾಗೂ ಕರ್ನಾಟಕದ ಮಹಿಳೆಯ ಬಹುಮುಖ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. ಕರ್ನಾಟಕದ ಇತಿಹಾಸದಲ್ಲಿ ಮಹಿಳೆ ಕೇವಲ ಕುಟುಂಬದೊಳಗಿನ ಮಮತಾ ಮಯಿ ತಾಯಿ ಅಥವಾ ಪತಿ ಸೇವೆಯಲ್ಲಿ ನಿರತಳಾದ ಪತ್ನಿ ಮಾತ್ರವಾಗಿರಲಿಲ್ಲ. ಸಂದರ್ಭಾನುಸಾರ ಆಡಳಿತ ನಡೆಸಿದಳು, ಯುದ್ಧ ಭೂಮಿಯಲ್ಲಿ ಧೈರ್ಯ ಪ್ರದರ್ಶಿಸಿದಳು, ಕಲೆ–ಸಾಹಿತ್ಯಗಳನ್ನು ಪೋಷಿಸಿದಳು, ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ಪಾಲ್ಗೊಂಡಳು ಮತ್ತು ಜನಹಿತದ ಕಾರ್ಯಗಳನ್ನು ಕೈಗೊಂಡಳು. ಆದರೆ ಇಂತಹ ಅಪರೂಪದ ಸಾಧನೆಗಳ

ನಡುವೆಯೂ ಸಾಮಾನ್ಯ ಮಹಿಳೆಯ ಬದುಕಿನ ವಾಸ್ತವಿಕತೆಯನ್ನು ಗಮನಿಸಿದಾಗ ಲಿಂಗ ಅಸಮಾನತೆ, ಸಾಮಾಜಿಕ ನಿಯಂತ್ರಣ, ಶಿಕ್ಷಣದ ನಿರಾಕರಣೆ, ಆಸ್ತಿ ಹಕ್ಕಿನ ಕೊರತೆ, ಬಾಲ್ಯವಿವಾಹ, ವಿಧವಾ ಜೀವನ, ಕೌಟುಂಬಿಕ ಹಿಂಸೆ ಹಾಗೂ ಪುರುಷ ಪ್ರಧಾನ ನೈತಿಕ ನಿಯಮಗಳಂತಹ ಅನೇಕ ಸಮಸ್ಯೆಗಳು ಕಾಣಿಸುತ್ತವೆ. ಆದ್ದರಿಂದ ಕನ್ನಡ ಸಾಹಿತ್ಯದ ಇತಿಹಾಸವನ್ನು ಅಧ್ಯಯನ ಮಾಡುವಾಗ ಮಹಿಳೆಯ ಬದುಕು ಮತ್ತು ಸಾಹಿತ್ಯದಲ್ಲಿ ಆಕೆಯ ಪ್ರತಿನಿಧಿತ್ವವನ್ನು ಪ್ರತ್ಯೇಕವಾಗಿ ಪರಿಶೀಲಿಸುವುದು ಅಗತ್ಯ. ಸಾಹಿತ್ಯವು ಸಮಾಜದ ಕೇವಲ ಪ್ರತಿಬಿಂಬವಲ್ಲ; ಅದು ಸಮಾಜದಲ್ಲಿರುವ ಅಧಿಕಾರ ಸಂಬಂಧಗಳನ್ನು ಪ್ರಶ್ನಿಸುವ ಮತ್ತು ಅವುಗಳನ್ನು ಮರು ರೂಪಿಸುವ ಸೃಜನಶೀಲ ಮಾಧ್ಯಮವೂ ಹೌದು. ಈ ದೃಷ್ಟಿಯಿಂದ ಕನ್ನಡ ಸಾಹಿತ್ಯದಲ್ಲಿನ ಮಹಿಳಾ ಸಂವೇದನೆಯ ಬೆಳವಣಿಗೆ ಮಹತ್ವದ ಅಧ್ಯಯನ ಕ್ಷೇತ್ರವಾಗಿದೆ.

ಲಿಂಗ ತಾರತಮ್ಯವೆಂದರೆ ವ್ಯಕ್ತಿಯ ಲಿಂಗದ ಆಧಾರದ ಮೇಲೆ ಅವಕಾಶ, ಅಧಿಕಾರ, ಸ್ವಾತಂತ್ರ್ಯ, ಗೌರವ ಮತ್ತು ಸಂಪನ್ಮೂಲಗಳ ಹಂಚಿಕೆಯಲ್ಲಿ ಅಸಮಾನತೆ ತೋರುವ ಸಾಮಾಜಿಕ ಪ್ರಕ್ರಿಯೆ. ಇದು ಕೇವಲ ಪುರುಷ ಮತ್ತು ಮಹಿಳೆಯ ನಡುವಿನ ದೈಹಿಕ ವ್ಯತ್ಯಾಸದ ಪರಿಣಾಮವಲ್ಲ. ಸಮಾಜ ನಿರ್ಮಿಸಿರುವ ರೂಢಿಗತ ಕಲ್ಪನೆಗಳು, ಮೌಲ್ಯಗಳು, ನಂಬಿಕೆಗಳು ಹಾಗೂ ಅಧಿಕಾರ ಸಂಬಂಧಗಳು ಲಿಂಗ ಅಸಮಾನತೆಯನ್ನು ರೂಪಿಸುತ್ತವೆ. 'ಗಂಡು ಮೇಲು, ಹೆಣ್ಣು ಕೀಳು' ಎಂಬ ಮನೋಭಾವವು ಪಿತೃಪ್ರಧಾನ ಸಮಾಜದ ಪ್ರಮುಖ ಲಕ್ಷಣವಾಗಿದೆ. ಹುಟ್ಟಿನಿಂದಲೇ ಹೆಣ್ಣು ಮಗುವಿಗೆ ವಿಧಿಸಲಾಗುವ ನಿಯಮಗಳು, ಶಿಕ್ಷಣದ ಅವಕಾಶಗಳಲ್ಲಿ ಕಂಡು ಬರುವ ವ್ಯತ್ಯಾಸ, ಉದ್ಯೋಗದ ಆಯ್ಕೆಯ ಮೇಲಿನ ನಿರ್ಬಂಧ, ವಿವಾಹದ ನಿರ್ಧಾರಗಳಲ್ಲಿ ಸ್ವಾತಂತ್ರ್ಯದ ಕೊರತೆ, ಆಸ್ತಿ ಹಕ್ಕಿನ ಸಮಸ್ಯೆ, ದೇಹ ಮತ್ತು ಲೈಂಗಿಕತೆಯ ಮೇಲಿನ ಸಾಮಾಜಿಕ ನಿಯಂತ್ರಣ ಇವೆಲ್ಲವೂ ಲಿಂಗ ತಾರತಮ್ಯದ ವಿವಿಧ ರೂಪಗಳಾಗಿವೆ. ಪ್ರಕೃತಿ ಪುರುಷ ಮತ್ತು ಮಹಿಳೆಯ ನಡುವೆ ಜೀವಶಾಸ್ತ್ರೀಯ ವ್ಯತ್ಯಾಸಗಳನ್ನು ಹೊಂದಿದ್ದರೂ, ಸಾಮಾಜಿಕ ಮೌಲ್ಯ ಮತ್ತು ಮಾನವೀಯ ಗೌರವದ ವಿಚಾರದಲ್ಲಿ ಯಾವುದೇ ಅಸಮಾನತೆಯನ್ನು ನಿರ್ದೇಶಿಸುವುದಿಲ್ಲ. ಆದರೆ ಸಾಮಾಜಿಕ ವ್ಯವಸ್ಥೆಗಳು ಮಹಿಳೆಗೆ ನಿರ್ದಿಷ್ಟ ಪಾತ್ರಗಳನ್ನು ವಿಧಿಸಿ, ಆಕೆಯ ಸ್ವತಂತ್ರ ವ್ಯಕ್ತಿತ್ವವನ್ನು ನಿರ್ಬಂಧಿಸುತ್ತ ಬಂದಿವೆ.

ಭಾರತೀಯ ಸಂಸ್ಕೃತಿಯಲ್ಲಿ "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾ:" ಎಂಬ ಮಾತಿನ ಮೂಲಕ ಮಹಿಳೆಗೆ ಉನ್ನತ ಸ್ಥಾನವನ್ನು ಕಲ್ಪಿಸಲಾಗಿದೆ. ಆದರೆ ಪೂಜ್ಯ ಸ್ಥಾನ ಮತ್ತು ವಾಸ್ತವಿಕ ಜೀವನದ ಸ್ಥಾನಮಾನಗಳ ನಡುವೆ ಅನೇಕ ಸಂದರ್ಭಗಳಲ್ಲಿ ದೊಡ್ಡ ಅಂತರವಿದೆ. ಮಹಿಳೆಯನ್ನು ಪತ್ನಿಯಾಗಿ, ತಾಯಿಯಾಗಿ, ಸೊಸೆಯಾಗಿ, ಕುಟುಂಬದ ಪಾಲಕಿಯಾಗಿ ನೋಡುವ ಸಾಮಾಜಿಕ ದೃಷ್ಟಿಕೋನವು ಆಕೆಯ ವೈಯಕ್ತಿಕ ಆಸೆ–ಆಕಾಂಕ್ಷೆಗಳಿಗೆ ಹೆಚ್ಚಿನ ಅವಕಾಶ ನೀಡಲಿಲ್ಲ. ಪತಿಯ ಸೇವೆ, ಕುಟುಂಬದ ನಿರ್ವಹಣೆ, ಮಕ್ಕಳ ಪೋಷಣೆ ಮತ್ತು ತ್ಯಾಗಶೀಲತೆ ಮಹಿಳೆಯ ಆದರ್ಶ ಗುಣಗಳೆಂದು ನಿರ್ಧರಿಸಲಾಯಿತು. ಹೀಗಾಗಿ ಮಹಿಳೆಯ ಬದುಕು ಬಹುಪಾಲು ಮನೆ–ಮದುವೆ–ಮಾತೃತ್ವ–ತ್ಯಾಗ ಎಂಬ ಚೌಕಟ್ಟಿನಲ್ಲಿ ಸೀಮಿತಗೊಂಡಿತು. ಪುರುಷನನ್ನು ಸಾರ್ವಜನಿಕ ಕೇಂದ್ರವಾಗಿಯೂ ಮಹಿಳೆಯನ್ನು ಖಾಸಗಿ ಬದುಕಿನ ಕೇಂದ್ರವಾಗಿಯೂ ರೂಪಿಸಿದ ಈ ವಿಭಜನೆಯ ಪರಿಣಾಮವಾಗಿ ಜ್ಞಾನ, ಅಧಿಕಾರ, ಆಸ್ತಿ, ಶಿಕ್ಷಣ ಮತ್ತು ನಿರ್ಧಾರ ಕೈಗೊಳ್ಳುವ ಅವಕಾಶಗಳು ಪುರುಷನಿಗೆ ಹೆಚ್ಚಿನ ಪ್ರಮಾಣದಲ್ಲಿ ದೊರಕಿದವು.

ಪ್ರಾಚೀನ ಕರ್ನಾಟಕದ ಸಾಮಾಜಿಕ ಇತಿಹಾಸವನ್ನು ಶಾಸನಗಳು, ಕಾವ್ಯಗಳು ಹಾಗೂ ಇತರ

ಸಾಹಿತ್ಯಿಕ–ಐತಿಹಾಸಿಕ ದಾಖಲೆಗಳ ಮೂಲಕ ಗಮನಿಸಿದಾಗ ಮಹಿಳೆಯ ಬದುಕಿನ ಹಲವು ಮುಖಗಳು ಗೋಚರಿಸುತ್ತವೆ. ಸಾಮಾನ್ಯ ಮಹಿಳೆಯ ಬದುಕಿನ ಮೇಲೆ ಅನೇಕ ನಿರ್ಬಂಧಗಳಿದ್ದರೂ, ಕೆಲವು ಮಹಿಳೆಯರು ತಮ್ಮ ಕಾಲದಲ್ಲಿ ದೊರೆತ ಅವಕಾಶಗಳನ್ನು ಬಳಸಿಕೊಂಡು ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಶಾಸನಗಳಲ್ಲಿ ಮಹಿಳೆಯರು ಕೆರೆ, ಬಾವಿ, ದೇವಾಲಯ, ಅನ್ನಛತ್ರ ಮೊದಲಾದ ಜನೋಪಯೋಗಿ ಕಾರ್ಯಗಳಿಗೆ ದಾನ ನೀಡಿದ ಉಲ್ಲೇಖಗಳು ಕಂಡು ಬರುತ್ತವೆ. ಅರಮನೆಗಳಲ್ಲಿ ಮಹಿಳೆಯರು ವಿದ್ಯಾಭ್ಯಾಸ, ನೃತ್ಯ, ಸಂಗೀತ, ಲಲಿತಕಲೆ ಮುಂತಾದ ಕ್ಷೇತ್ರಗಳಲ್ಲಿ ಪರಿಣತಿ ಪಡೆದಿರುವುದರ ಜೊತೆಗೆ ಕೆಲವು ಸಂದರ್ಭಗಳಲ್ಲಿ ಅಶ್ವಾರೋಹಣ, ಕತ್ತಿವರಸೆ ಹಾಗೂ ಯುದ್ಧ ಕೌಶಲ್ಯಗಳಲ್ಲಿಯೂ ತರಬೇತಿ ಪಡೆದಿದ್ದರು. ಇಂತಹ ಮಹಿಳೆಯರು ತಮ್ಮ ಕಾಲದ ರೂಢಿಗತ ಮಿತಿಗಳನ್ನು ಮೀರಿ ಕಾರ್ಯ ನಿರ್ವಹಿಸಿದರೂ, ಅವರ ಉದಾಹರಣೆಗಳು ಸಾರ್ವತ್ರಿಕ ಸಾಮಾಜಿಕ ಸ್ಥಿತಿಯನ್ನು ಪ್ರತಿನಿಧಿಸುವುದಿಲ್ಲ. ಅವು ಪಿತೃಪ್ರಧಾನ ವ್ಯವಸ್ಥೆಯೊಳಗೆ ದೊರೆತ ವಿಶೇಷ ಅವಕಾಶಗಳ ಫಲವಾಗಿದ್ದವು ಎಂಬುದನ್ನು ಗಮನಿಸಬೇಕು.

ಕರ್ನಾಟಕದ ಇತಿಹಾಸದಲ್ಲಿ ಕೆಲವು ರಾಣಿಯರು ಆಡಳಿತ, ರಾಜಕೀಯ ಹಾಗೂ ಯುದ್ಧ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿದ್ದಾರೆ. ಅವರು ಪ್ರಜಾಹಿತ, ರಾಜ್ಯರಕ್ಷಣೆ ಮತ್ತು ಸ್ವಾಭಿಮಾನಕ್ಕಾಗಿ ಹೋರಾಡಿದ ಉದಾಹರಣೆಗಳು ಮಹಿಳೆಯ ಸಾಮರ್ಥ್ಯದ ಮಹತ್ವವನ್ನು ಸಾರುತ್ತವೆ. ರಾಣಿಅಬ್ಬಕ್ಕ, ಕಿತ್ತೂರುರಾಣಿ ಚೆನ್ನಮ್ಮ, ಕೆಳದಿ ಚೆನ್ನಮ್ಮ ಮೊದಲಾದ ಮಹಿಳಾ ನಾಯಕಿಯರ ಬದುಕು ಮಹಿಳೆ ಕೇವಲ ಮನೆಯೊಳಗಿನ ಪಾತ್ರಕ್ಕೆ ಸೀಮಿತಳಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅವರುಅಗತ್ಯ ಸಂದರ್ಭಗಳಲ್ಲಿ ರಣಚಂಡಿಯ ರೂಪ ತಾಳಿ, ತಮ್ಮ ನಾಡು, ಜನತೆ ಮತ್ತು ಸ್ವಾಭಿಮಾನಕ್ಕಾಗಿ ಹೋರಾಡಿದರು. ಆದರೂ ಕೂಡ ಇಂತಹ ಇತಿಹಾಸ ಪ್ರಸಿದ್ಧ ಮಹಿಳೆಯರ ಜೊತೆಗೆ ಸಾಮಾನ್ಯ ಮಹಿಳೆಯರ ಮೌನ ಬದುಕಿನ ಇತಿಹಾಸವೂ ಅಧ್ಯಯನಕ್ಕೆ ಒಳಪಡಬೇಕು. ಏಕೆಂದರೆ ಇತಿಹಾಸವು ಬಹುಪಾಲು ರಾಜರು, ಯುದ್ಧಗಳು ಮತ್ತು ರಾಜಕೀಯ ಘಟನೆಗಳನ್ನು ದಾಖಲಿಸಿದರೆ, ಮಹಿಳೆಯ ದೈನಂದಿನ ಅನುಭವ, ಶ್ರಮ, ನೋವು ಮತ್ತು ಪ್ರತಿರೋಧಗಳು ಅನೇಕ ಬಾರಿ ದಾಖಲಾಗದೆ ಉಳಿದಿವೆ.

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಅಸ್ತಿತ್ವದ ಪ್ರಶ್ನೆಗೆ ಹೊಸ ಆಯಾಮ ನೀಡಿದ ಪ್ರಮುಖ ಘಟ್ಟವೆಂದರೆ ವಚನ ಚಳುವಳಿ. ಶರಣ ಚಳುವಳಿಯು ಜಾತಿ, ವರ್ಗ ಮತ್ತು ಲಿಂಗ ಆಧಾರಿತ ಅನೇಕ ಸಾಮಾಜಿಕ ಅಸಮಾನತೆಗಳನ್ನು ಪ್ರಶ್ನಿಸಿತು. ಈ ಹಿನ್ನೆಲೆಯಲ್ಲಿ ಅಕ್ಕಮಹಾದೇವಿಯ ವಚನಗಳು ಅತ್ಯಂತ ಮಹತ್ವದ್ದಾಗಿವೆ. ಅಕ್ಕಮಹಾದೇವಿ ತನ್ನ ಕಾಲದ ಸಾಂಪ್ರದಾಯಿಕ ಮಹಿಳಾ ಪಾತ್ರಗಳನ್ನು ನಿರಾಕರಿಸಿ, ಆತ್ಮ ಸ್ವಾತಂತ್ರ್ಯ ಮತ್ತು ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದಳು. ದೇಹದ ಮೇಲೆ ಸಮಾಜ ವಿಧಿಸುವ ನಿಯಂತ್ರಣ, ವಿವಾಹದ ಬಂಧನ ಮತ್ತು ಮಹಿಳೆಯ ಅಸ್ತಿತ್ವವನ್ನು ಪುರುಷನೊಂದಿಗೆ ಮಾತ್ರಗುರುತಿಸುವ ಮನೋಭಾವಗಳಿಗೆ ಆಕೆಯ ಬದುಕು ಹಾಗೂ ವಚನಗಳು ಸವಾಲಾಗಿ ನಿಂತವು.

ಕನ್ನಡದ ಆರಂಭಿಕ ಸಾಹಿತ್ಯದಲ್ಲಿ ಮಹಿಳೆ ಬಹುಪಾಲು ಪುರುಷನ ದೃಷ್ಟಿಕೋನದಿಂದ ನಿರೂಪಿತಳಾಗಿದ್ದಾಳೆ. ಪತ್ನಿ, ತಾಯಿ, ಪ್ರೇಯಸಿ, ಪತಿವ್ರತೆ, ತ್ಯಾಗಮೂರ್ತಿ, ಸೌಂದರ್ಯದ ಪ್ರತಿರೂಪ ಅಥವಾ ಕುಟುಂಬದ ಗೌರವವನ್ನು ಕಾಪಾಡುವ ವ್ಯಕ್ತಿಯಾಗಿ ಮಹಿಳೆಯ ಚಿತ್ರಣ ಹೆಚ್ಚಾಗಿ ಕಂಡು ಬರುತ್ತದೆ. ಇಂತಹ ಚಿತ್ರಣಗಳಲ್ಲಿ ಮಹಿಳೆಯ ಸ್ವಂತ ಮನಸ್ಸು, ಆಸೆ, ನಿರ್ಧಾರ ಮತ್ತು ಅನುಭವಗಳಿಗೆ ಸೀಮಿತ ಅವಕಾಶ ದೊರಕುತ್ತದೆ.

ಪುರುಷನ ಅನುಭವವೇ ಸಾರ್ವತ್ರಿಕ ಅನುಭವವೆಂಬಂತೆ ಸಾಹಿತ್ಯದಲ್ಲಿ ಪ್ರತಿಷ್ಠಿತವಾಗಿದ್ದ ಪರಿಣಾಮ ಮಹಿಳೆಯರ ಸ್ವಂತ ಧ್ವನಿ ಬಹುಮಟ್ಟಿಗೆ ಮೌನಗೊಂಡಿತು. ಆದರೆ ಜನಪದ ಸಾಹಿತ್ಯದಲ್ಲಿ ಮಹಿಳೆಯ ದೈನಂದಿನ ಬದುಕಿನ ಅನುಭವಗಳು ಹೆಚ್ಚು ಸಹಜವಾಗಿ ಅಭಿವ್ಯಕ್ತವಾಗಿರುವುದನ್ನು ಕಾಣಬಹುದು. ಜಾನಪದ ಗೀತೆಗಳು, ಲಾವಣಿಗಳು, ತ್ರಿಪದಿಗಳು, ಸೋಬಾನೆ ಪದಗಳು ಮೊದಲಾದವುಗಳಲ್ಲಿ ಮಹಿಳೆಯ ನೋವು, ಗಂಡನ ನಿರ್ಲಕ್ಷ್ಯ, ಅತ್ತೆ–ಸೊಸೆಯ ಸಂಬಂಧ, ತವರುಮನೆಯ ನೆನಪು, ವಿಧವಾ ಬದುಕು, ಬಡತನ ಹಾಗೂ ಕೌಟುಂಬಿಕ ಸಂಕಟಗಳು ಜೀವಂತವಾಗಿ ವ್ಯಕ್ತವಾಗಿವೆ.

ಆಧುನಿಕ ಶಿಕ್ಷಣ, ಮುದ್ರಣ ಮಾಧ್ಯಮ, ಸಾಮಾಜಿಕ ಸುಧಾರಣಾ ಚಳುವಳಿಗಳು ಹಾಗೂ ಸ್ತ್ರೀವಾದಿ ಚಿಂತನೆಗಳ ಬೆಳವಣಿಗೆಯಿಂದ ಮಹಿಳೆಯ ಸಾಮಾಜಿಕ ಸ್ಥಾನಮಾನದಲ್ಲಿ ಕ್ರಮೇಣ ಬದಲಾವಣೆ ಉಂಟಾಯಿತು. ಮಹಿಳೆ ಶಿಕ್ಷಣ ಪಡೆದು ತನ್ನ ಅನುಭವವನ್ನು ಸ್ವತ: ಬರೆಯಲು ಪ್ರಾರಂಭಿಸಿದಾಗ ಸಾಹಿತ್ಯದ ದೃಷ್ಟಿಕೋನವು ಬದಲಾಗತೊಡಗಿತು. ಇಲ್ಲಿ ಮಹಿಳೆ ಕೇವಲ ಸಾಹಿತ್ಯದ ವಸ್ತುವಾಗಿರದೆ ಸಾಹಿತ್ಯದ ಕರ್ತೃವಾಗಿ ಹೊರ ಹೊಮ್ಮಿದಳು. ತನ್ನದೇ ಬದುಕಿನ ಅನುಭವಗಳನ್ನು, ಅಂತರಂಗದ ಸಂಘರ್ಷಗಳನ್ನು, ಕೌಟುಂಬಿಕ ಒತ್ತಡಗಳನ್ನು, ಸಾಮಾಜಿಕ ಅನ್ಯಾಯಗಳನ್ನು ಹಾಗೂ ತನ್ನ ಸ್ವಾತಂತ್ರ್ಯದ ಹಂಬಲವನ್ನು ಸ್ವತ: ಅಭಿವ್ಯಕ್ತಿಸಲು ಆರಂಭಿಸಿದಳು. ಈ ಹಂತದಲ್ಲಿ ಮಹಿಳಾ ಸಾಹಿತ್ಯವು ಕೇವಲ ಕೌಟುಂಬಿಕ ಭಾವನೆಗಳಿಗೆ ಸೀಮಿತವಾಗದೆ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಲೈಂಗಿಕ ಪ್ರಶ್ನೆಗಳನ್ನೂ ತನ್ನ ಚರ್ಚೆಯ ವ್ಯಾಪ್ತಿಗೆ ತಂದಿತು. ಕನ್ನಡ ಮಹಿಳಾ ಸಾಹಿತ್ಯದ ಬೆಳವಣಿಗೆಯನ್ನು ವಿಶಾಲವಾಗಿ ಮೂರು ಪ್ರಮುಖ ಹಂತಗಳಲ್ಲಿ ಗುರುತಿಸಬಹುದು.

ಮೊದಲ ಹಂತ–ನೋವಿನ ಅಭಿವ್ಯಕ್ತಿ:

ಮಹಿಳೆ ತನ್ನ ಬದುಕಿನ ನೋವು, ದೌರ್ಜನ್ಯ, ನಿರ್ಲಕ್ಷ್ಯ, ಅಸಮಾನತೆ ಮತ್ತು ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾಳೆ. ಕುಟುಂಬದೊಳಗಿನ ಆಕೆಯ ಸ್ಥಾನ, ಪತಿಯ ಅಧಿಕಾರ, ಅತ್ತೆ ಮನೆಯ ಒತ್ತಡ, ವಿವಾಹದ ಸಮಸ್ಯೆ, ಮಾತೃತ್ವದ ಹೊರೆ ಮುಂತಾದವು ಸಾಹಿತ್ಯದ ಪ್ರಮುಖ ವಸ್ತುಗಳಾಗುತ್ತವೆ.

ಎರಡನೆಯ ಹಂತ–ಪ್ರಶ್ನಿಸುವ ಹಂತ:

ಇದರಲ್ಲಿ ಮಹಿಳೆ ತನ್ನ ನೋವಿನ ಮೂಲವನ್ನು ಪ್ರಶ್ನಿಸಲು ಆರಂಭಿಸುತ್ತಾಳೆ. 'ಈ ನಿಯಮ ಯಾರಿಗಾಗಿ?' 'ಮಹಿಳೆಗೆ ಮಾತ್ರ ಈ ನೈತಿಕತೆ ಏಕೆ?' 'ವಿವಾಹದ ಆಯ್ಕೆಯಲ್ಲಿ ಮಹಿಳೆಗೆ ಸ್ವಾತಂತ್ರ್ಯ ಎಲ್ಲಿದೆ?' 'ಪುರುಷನಿಗೆ ಇರುವ ಹಕ್ಕು ಮಹಿಳೆಗೆ ಏಕೆ ಇಲ್ಲ?' ಎಂಬ ಪ್ರಶ್ನೆಗಳು ಮಹಿಳಾ ಸಾಹಿತ್ಯದ ಕೇಂದ್ರವಾಗುತ್ತವೆ. ಈ ಹಂತದಲ್ಲಿ ಮಹಿಳೆ ಕೇವಲ ತನ್ನ ವೈಯಕ್ತಿಕ ನೋವನ್ನು ಹೇಳಿಕೊಳ್ಳುವುದಿಲ್ಲ; ಆ ನೋವಿಗೆ ಕಾರಣವಾಗಿರುವ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುತ್ತಾಳೆ.

ಮೂರನೆಯ ಹಂತ–ಪ್ರತಿರೋಧ ಮತ್ತು ಅಸ್ಮಿತೆಯ ಹಂತ:

ಇಲ್ಲಿ ಮಹಿಳೆ ಅನ್ಯಾಯವನ್ನು ದಾಖಲಿಸುವುದಕ್ಕಿಂತ ಮುಂದೆ ಹೋಗಿ ತನ್ನ ಅಸ್ತಿತ್ವವನ್ನು ಘೋಷಿಸುತ್ತಾಳೆ. ಸ್ವಾತಂತ್ರ್ಯ, ಆತ್ಮಗೌರವ, ದೇಹದ ಮೇಲಿನ ಹಕ್ಕು, ಸ್ವಂತ ನಿರ್ಧಾರ, ಶಿಕ್ಷಣ, ಉದ್ಯೋಗ, ಪ್ರೀತಿ ಮತ್ತು ಬದುಕಿನ ಆಯ್ಕೆಯ ಹಕ್ಕುಗಳು ಪ್ರಮುಖವಾಗುತ್ತವೆ. ಇದು ಮಹಿಳಾ ಸಂವೇದನೆಯ

ಅತ್ಯಂತ ಮಹತ್ವದ ಪರಿವರ್ತನೆಯಾಗಿದೆ. 'ನನ್ನ ಬದುಕಿನ ಕುರಿತು ನಿರ್ಧರಿಸುವ ಹಕ್ಕು ನನಗಿದೆ' ಎಂಬ ಆತ್ಮಪ್ರಜ್ಞೆ ಈ ಹಂತದ ಮೂಲಧ್ವನಿಯಾಗಿದೆ.

ಕನ್ನಡ ಮಹಿಳಾ ಸಾಹಿತ್ಯದ ಬೆಳವಣಿಗೆಯಲ್ಲಿ ತ್ರಿವೇಣಿ, ಗೀತಾ ನಾಗಭೂಷಣ, ಸಾರಾ ಅಬೂಬಕರ್, ವೈದೇಹಿ, ಬಾನು ಮುಷ್ತಾಕ್ ಮೊದಲಾದ ಲೇಖಕಿಯ ಕೊಡುಗೆ ಮಹತ್ವದ್ದಾಗಿದೆ. ತ್ರಿವೇಣಿಯ 'ಶರಪಂಜರ' ಕಾದಂಬರಿಯಂತಹ ಕೃತಿಗಳು ಮಹಿಳೆಯ ಮನೋಲೋಕ, ಕೌಟುಂಬಿಕ ಸಂಬಂಧಗಳು ಮತ್ತು ಮಾನಸಿಕ ಸಂಘರ್ಷಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತವೆ. ಸಾರಾ ಅಬೂಬಕರ್ ಅವರ 'ಚಂದ್ರಗಿರಿಯ ತೀರದಲ್ಲಿ' ಮಹಿಳೆಯ ಬದುಕಿನ ಮೇಲೆ ಧರ್ಮ, ಸಂಸ್ಕೃತಿ ಮತ್ತು ಕುಟುಂಬ ವ್ಯವಸ್ಥೆಗಳು ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಕಾಣಬಹುದು. ವೈದೇಹಿಯ ಕಥನ ಲೋಕದಲ್ಲಿ ಮಹಿಳೆಯ ಅಂತರಂಗ, ಸಾಮಾಜಿಕ ಸಂಬಂಧಗಳು ಮತ್ತು ದಿನನಿತ್ಯದ ಬದುಕಿನ ಸೂಕ್ಷ್ಮ ಅನುಭವಗಳು ವಿಶಿಷ್ಟವಾಗಿ ಮೂಡಿಬರುತ್ತವೆ. ಈ ಲೇಖಕಿಯರ ಬರಹಗಳಲ್ಲಿ ಮಹಿಳೆ ಕೇವಲ ಕರುಣೆಗೆ ಅರ್ಹಳಾದ ವ್ಯಕ್ತಿಯಲ್ಲ. ಆಕೆ ಯೋಚಿಸುವವಳು, ಪ್ರಶ್ನಿಸುವವಳು, ನಿರ್ಧರಿಸುವವಳು, ವಿರೋಧಿಸುವವಳು ಮತ್ತುತನ್ನ ಅಸ್ತಿತ್ವವನ್ನು ಕಟ್ಟಿಕೊಳ್ಳುವವಳಾಗಿದ್ದಾಳೆ.

ಈ ಮಹಿಳಾ ಅನುಭವವನ್ನು ಒಂದೇ ಮಾದರಿಯಲ್ಲಿ ಅರ್ಥೈಸಲು ಸಾಧ್ಯವಿಲ್ಲ. ಮೇಲ್ವರ್ಗದ ಮಹಿಳೆಯ ಅನುಭವ ಮತ್ತು ದಲಿತ ಮಹಿಳೆಯ ಅನುಭವ ಒಂದೇ ಆಗಿರುವುದಿಲ್ಲ. ದಲಿತ ಮಹಿಳೆ ಲಿಂಗ ತಾರತಮ್ಯದ ಜೊತೆಗೆ ಜಾತಿ ಮತ್ತು ಆರ್ಥಿಕ ಶೋಷಣೆಯನ್ನು ಎದುರಿಸುತ್ತಾಳೆ. ಹೀಗಾಗಿ ದಲಿತ ಮಹಿಳಾ ಸಂವೇದನೆಯು 'ಲಿಂಗ–ಜಾತಿ–ವರ್ಗ' ಎಂಬ ಪರಸ್ಪರ ಸಂಬಂಧಿತ ಶೋಷಣಾ ವ್ಯವಸ್ಥೆಗಳನ್ನು ವಿಶ್ಲೇಷಿಸುತ್ತದೆ. ದುಡಿಮೆ, ಬಡತನ, ಸಾಮಾಜಿಕ ಅವಮಾನ, ಅಸ್ಪೃಶ್ಯತೆ, ಲೈಂಗಿಕ ಶೋಷಣೆ ಮತ್ತು ಅವಕಾಶಗಳ ಕೊರತೆ ಇವು ದಲಿತ ಮಹಿಳೆಯ ಅನುಭವದ ವಿಶಿಷ್ಟ ಆಯಾಮಗಳಾಗಿವೆ. ಈ ಕಾರಣದಿಂದ ಸಮಕಾಲೀನ ಕನ್ನಡ ಮಹಿಳಾ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ವರ್ಗ, ಜಾತಿ, ಧರ್ಮ, ಪ್ರದೇಶ ಮತ್ತು ಆರ್ಥಿಕ ಸ್ಥಿತಿಗಳ ವೈವಿಧ್ಯವನ್ನು ಪರಿಗಣಿಸುವುದು ಅಗತ್ಯವಾಗಿದೆ.

ಮಹಿಳೆಯ ದೇಹದ ಮೇಲೆ ಸಮಾಜ ವಿಧಿಸುವ ನಿಯಂತ್ರಣವು ಲಿಂಗ ತಾರತಮ್ಯದ ಪ್ರಮುಖ ಆಯಾಮವಾಗಿದೆ. ಉಡುಗೆ, ಚಲನವಲನ, ವಿವಾಹ, ಮಾತೃತ್ವ, ಲೈಂಗಿಕತೆ, ಸೌಂದರ್ಯದ ಮಾನದಂಡಗಳು ಮುಂತಾದವುಗಳ ಮೂಲಕ ಮಹಿಳೆಯ ದೇಹವನ್ನು ನಿಯಂತ್ರಿಸುವ ಸಾಮಾಜಿಕ ಪ್ರಯತ್ನಗಳು ಕಂಡು ಬರುತ್ತವೆ. ಸಮಕಾಲೀನ ಮಹಿಳಾ ಬರಹಗಳು ಈ ದೇಹ ರಾಜಕಾರಣವನ್ನು ಪ್ರಶ್ನಿಸುತ್ತವೆ. ಮಹಿಳೆಯ ದೇಹದ ಕುರಿತು ಮಾತನಾಡುವ ಹಕ್ಕು ಮಹಿಳೆಗೆ ಇಲ್ಲ ಎಂಬ ಸಾಂಪ್ರದಾಯಿಕ ಮನೋಭಾವವನ್ನು ಅವು ತಿರಸ್ಕರಿಸುತ್ತವೆ. ಮಹಿಳೆಯ ದೇಹವು ಕೇವಲ ಕುಟುಂಬದ ಗೌರವದ ಸಂಕೇತವಲ್ಲ; ಅದು ಆಕೆಯ ಸ್ವಂತ ಅಸ್ತಿತ್ವದ ಭಾಗವಾಗಿದೆ ಎಂಬ ಅರಿವು ಸಾಹಿತ್ಯದಲ್ಲಿ ಬಲಗೊಳ್ಳುತ್ತಿದೆ.

ಮಹಿಳಾ ಮುಕ್ತಿಯ ಪ್ರಮುಖ ಸಾಧನಗಳಲ್ಲಿ ಶಿಕ್ಷಣ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕೆ ವಿಶೇಷ ಸ್ಥಾನವಿದೆ. ಶಿಕ್ಷಣದಿಂದ ಮಹಿಳೆಯಲ್ಲಿ ಪ್ರಶ್ನಿಸುವ ಸಾಮರ್ಥ್ಯ ಮತ್ತು ಆತ್ಮವಿಶ್ವಾಸ ಬೆಳೆಯುತ್ತದೆ. ಉದ್ಯೋಗ ಮತ್ತು ಆರ್ಥಿಕ ಸ್ವಾವಲಂಬನೆಯಿಂದ ಆಕೆ ತನ್ನ ಬದುಕಿನ ಕುರಿತು ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಪಡೆಯುತ್ತಾಳೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳ ಕೊರತೆ, ಸಾಮಾಜಿಕ ಪೂರ್ವಗ್ರಹಗಳು, ಕುಟುಂಬದ ನಿರ್ಬಂಧಗಳು ಮತ್ತು ಮೂಲ ಸೌಕರ್ಯಗಳ ಕೊರತೆ ಮಹಿಳೆಯ ಪ್ರಗತಿಗೆ

ಅಡ್ಡಿಯಾಗುತ್ತವೆ. ಆದ್ದರಿಂದ ಮಹಿಳಾ ಮುಕ್ತಿಯ ಪ್ರಶ್ನೆಯನ್ನು ಕೇವಲ ಸಾಹಿತ್ಯಿಕ ಅಥವಾ ಸಾಂಸ್ಕೃತಿಕ ಸಮಸ್ಯೆಯಾಗಿ ನೋಡದೆ ಆರ್ಥಿಕ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಯಾಗಿ ಪರಿಗಣಿಸಬೇಕಾಗಿದೆ.

ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಅನುಭವದ ವ್ಯಾಪ್ತಿ ಬಹಳಷ್ಟು ವಿಸ್ತರಿಸಿದೆ. ಶಿಕ್ಷಣ ಮತ್ತು ಉದ್ಯೋಗದ ಜೊತೆಗೆ ನಗರೀಕರಣ, ಜಾಗತೀಕರಣ, ವಲಸೆ, ಸಾಮಾಜಿಕ ಮಾಧ್ಯಮ, ಲೈಂಗಿಕ ಕಿರುಕುಳ, ಕೌಟುಂಬಿಕ ಹಿಂಸೆ, ಒಂಟಿತನ, ವಿಚ್ಛೇದನ, ವೃದ್ಧಾಪ್ಯ, ಏಕಾಂಗಿತನ, ಮಾನಸಿಕ ಒತ್ತಡ, ದೇಹ ರಾಜಕಾರಣ ಮತ್ತು ವೈಯಕ್ತಿಕ ಸ್ವಾತಂತ್ಯದಂತಹ ಹೊಸ ಪ್ರಶ್ನೆಗಳು ಮಹಿಳಾ ಬರಹದ ಭಾಗವಾಗಿವೆ. ಮಹಿಳೆಯು ಈಗ ಯಾರಾದರೊಬ್ಬರ ಪತ್ನಿ ಅಥವಾ ತಾಯಿ ಎಂಬ ಗುರುತಿಗಿಂತ ತನ್ನದೇ ಆದ ವ್ಯಕ್ತಿತ್ವವನ್ನು ಹುಡುಕಿಕೊಳ್ಳುತ್ತಿದ್ದಾಳೆ. ಈ ಆತ್ಮಶೋಧನೆಯೇ ಸಮಕಾಲೀನ ಮಹಿಳಾ ಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಮಹಿಳಾ ಸಂವೇದನೆಯನ್ನು ಕೇವಲ ಮಹಿಳೆಯ ದು:ಖದ ಸಾಹಿತ್ಯವೆಂದು ಪರಿಗಣಿಸುವುದು ಅದರ ವ್ಯಾಪ್ತಿಯನ್ನು ಕುಗ್ಗಿಸುವಂತಾಗುತ್ತದೆ. ಮಹಿಳಾ ಸಾಹಿತ್ಯವು ವಾಸ್ತವವಾಗಿ ಸಮಾಜದಲ್ಲಿರುವ ಅಧಿಕಾರ ಸಂಬಂಧಗಳ ವಿಮರ್ಶೆಯಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಾಮಾನ್ಯವೆಂದು ಪರಿಗಣಿಸಲಾದ ಅನೇಕ ನಿಯಮಗಳನ್ನು ಮಹಿಳಾ ಸಾಹಿತ್ಯ ಪ್ರಶ್ನಿಸುತ್ತದೆ. 'ಸಹನೆ ಮಹಿಳೆಯ ಆಭರಣ', 'ತ್ಯಾಗವೇ ಮಹಿಳೆಯ ಧರ್ಮ', 'ಕುಟುಂಬಕ್ಕಾಗಿ ತನ್ನ ಆಸೆಗಳನ್ನು ತ್ಯಜಿಸಬೇಕು' ಎಂಬ ಕಲ್ಪನೆಗಳನ್ನು ಮರು ಪರಿಶೀಲಿಸುತ್ತದೆ. ಹೀಗಾಗಿ ಮಹಿಳಾ ಸಾಹಿತ್ಯವು ಕುಟುಂಬವನ್ನು ಧ್ವಂಸಗೊಳಿಸುವ ಚಿಂತನೆಯಲ್ಲ; ಬದಲಾಗಿ ಸಮಾನತೆ, ಗೌರವ, ಪರಸ್ಪರ ಜವಾಬ್ದಾರಿ ಮತ್ತು ಮಾನವೀಯತೆಯ ಆಧಾರದ ಮೇಲೆ ಕುಟುಂಬ ಮತ್ತು ಸಮಾಜವನ್ನು ಮರು ರೂಪಿಸುವ ಚಿಂತನೆಯಾಗಿದೆ.

ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಧ್ವನಿ ಬಲಗೊಂಡಿರುವುದು ಮಹತ್ವದ ಬೆಳವಣಿಗೆಯಾದರೂ, ಮಹಿಳಾ ಸಾಹಿತ್ಯವನ್ನು ಕೇವಲ ಮಹಿಳೆಯರು ಬರೆದ ಸಾಹಿತ್ಯ ಎಂಬ ಸರಳ ವರ್ಗೀಕರಣಕ್ಕೆ ಸೀಮಿತಗೊಳಿಸುವುದು ಸೂಕ್ತವಲ್ಲ. ಮಹಿಳೆಯ ಅನುಭವವನ್ನು ಅದರ ಸಾಮಾಜಿಕ, ಐತಿಹಾಸಿಕ, ಆರ್ಥಿಕ, ಜಾತಿ ಮತ್ತು ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ಅರ್ಥೈಸಬೇಕು. ಮಹಿಳೆಯ ನೋವನ್ನು ದಾಖಲಿಸುವುದರಿಂದ ಮಾತ್ರ ಸಾಹಿತ್ಯದ ಜವಾಬ್ದಾರಿ ಮುಗಿಯುವುದಿಲ್ಲ. ಆ ನೋವಿಗೆ ಕಾರಣವಾಗಿರುವ ಸಾಮಾಜಿಕ ರಚನೆಗಳನ್ನು ಪ್ರಶ್ನಿಸುವುದು, ಪರ್ಯಾಯ ಮೌಲ್ಯಗಳನ್ನು ಸೂಚಿಸುವುದು ಮತ್ತು ಮಹಿಳೆಯ ಸ್ವತಂತ್ರ ಅಸ್ತಿತ್ವವನ್ನು ಪ್ರತಿಷ್ಠಾಪಿಸುವುದು ಮಹಿಳಾ ಸಾಹಿತ್ಯದ ದೊಡ್ಡ ಕೊಡುಗೆಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಲಿಂಗತ್ವ ಸಮನ್ಯಾಯದ ಪರಿಕಲ್ಪನೆ ಬೆಳೆಯತೊಡಗಿದೆ. ಇದು ಸ್ತ್ರೀ–ಪುರುಷರಿಬ್ಬರಿಗೂ ಸಮಾನ ಸ್ವಾತಂತ್ರ್ಯ, ಸ್ಥಾನಮಾನ, ಅವಕಾಶ, ಅಧಿಕಾರ ಮುಂತಾದವುಗಳ ಹಂಚುವಿಕೆಯನ್ನು ಮೌಲ್ಯವೆಂದು ಒಪ್ಪಿಕೊಳ್ಳುತ್ತದೆ. ಈಗಾಗಲೇ ಇದನ್ನು ಸಂವಿಧಾನದಲ್ಲಿ ಒಪ್ಪಿಕೊಂಡು ಆಗಿದೆ. ಆದರೆ ಇದನ್ನು ನಮ್ಮ ಆಚಾರ ವಿಚಾರಗಳಲ್ಲಿ, ನಡೆ ನುಡಿಗಳಲ್ಲಿ, ಮನಸ್ಸಿನಲ್ಲಿ ಒಟ್ಟಾರೆ ನಮ್ಮ ಜೀವನ ಕ್ರಮದಲ್ಲಿ ಅಳವಡಿಸಿಕೊಂಡು ಚಲಾವಣೆಗೆ ತರಲಾಗಿಲ್ಲದಿರುವುದೇ ಮಹಿಳೆಯ ಸ್ಥಾನ ಸಮಾಜದಲ್ಲಿ ಎರಡನೆಯ ದರ್ಜೆಯಲ್ಲುಳಿಯುವುದಕ್ಕೆ ಮುಖ್ಯ ಕಾರಣವಾಗಿದೆ. ಮಹಿಳೆ ಎಂಬ ಗೌರವವನ್ನು ಕೊಡುವುದು ಹಾಗೂ ಸಮಾನ ಸ್ಥಾನಮಾನವನ್ನು ನೀಡುವುದು ಎರಡು ಬೇರೆ ಬೇರೆ ವಿಚಾರಗಳು. ಏಕೆಂದರೆ ಎಷ್ಟೋ ಬಾರಿ ಮಹಿಳೆ

ಎಂಬ ಗೌರವ ನೀಡುತ್ತಿದ್ದಾಗಲೂ ಸಹಜವೆಂಬಂತೆ ಅಸಮಾನತೆಯಿಂದ ನಡೆಸಿಕೊಳ್ಳುವುದನ್ನು ಕಾಣುತ್ತೇವೆ. ಅದಕ್ಕೆ ಕಾರಣ ನಮ್ಮ ಪುರುಷ ಪ್ರಧಾನ ಸಮಾಜ ಎಂದೂ ಸ್ಥೂಲವಾಗಿ ಹೇಳಿದರೂ ಅದರ ಒಳ ನೋಟಗಳಲ್ಲಿ ಈ ಸಮಸ್ಯೆಗೆ ಆಳವಾಗಿ ಬೇರು ಬಿಟ್ಟಿರುವ ಹಲವಾರು ಆಯಾಮಗಳಿವೆ ಎಂಬುದನ್ನು ಗಮನಿಸಬೇಕಾಗಿದೆ.

ಹೀಗೆ ಕನ್ನಡ ಸಾಹಿತ್ಯದ ಇತಿಹಾಸವನ್ನು ಅವಲೋಕಿಸಿದಾಗ ಮಹಿಳೆಯ ಚಿತ್ರಣವು ಸ್ಥಿರವಾಗಿರದೆ ಕಾಲಾನುಕಾಲಕ್ಕೆ ಬದಲಾಗುತ್ತ ಬಂದಿರುವುದು ಸ್ಪಷ್ಟವಾಗುತ್ತದೆ. ಆರಂಭಿಕ ಸಾಹಿತ್ಯದಲ್ಲಿ ಮಹಿಳೆ ಬಹುಪಾಲು ಪುರುಷನ ದೃಷ್ಟಿಯಿಂದ ನಿರೂಪಿತಳಾಗಿದ್ದರೆ, ವಚನ ಚಳುವಳಿಯ ಸಂದರ್ಭದಲ್ಲಿ ಅಕ್ಕಮಹಾದೇವಿಯಂತಹ ಶರಣೆಯರು ಮಹಿಳೆಯ ಆತ್ಮಸ್ವಾತಂತ್ರ್ಯದ ಪ್ರಶ್ನೆಯನ್ನು ಮುಂದಿಟ್ಟರು. ಆಧುನಿಕ ಕಾಲದಲ್ಲಿ ಶಿಕ್ಷಣ, ಸಾಮಾಜಿಕ ಸುಧಾರಣೆ ಮತ್ತು ಸ್ತ್ರೀವಾದಿ ಚಿಂತನೆಗಳ ಪ್ರಭಾವದಿಂದ ಮಹಿಳೆ ತನ್ನ ಅನುಭವವನ್ನು ತಾನೇ ಬರೆಯುವ ಸೃಜನಶೀಲ ವ್ಯಕ್ತಿತ್ವವಾಗಿ ರೂಪುಗೊಂಡಳು. ಮಹಿಳೆ ಒಮ್ಮೆ ಪಂಜರದ ಪಕ್ಷಿಯಂತೆ, ಪತಿಸೇವೆಯ ಪರಿಚಾರಿಕೆಯಂತೆ, ತ್ಯಾಗಮೂರ್ತಿಯಂತೆ ಚಿತ್ರಿಸಲ್ಪಟ್ಟಿದ್ದರೂ, ಆಧುನಿಕ ಮತ್ತು ಸಮಕಾಲೀನ ಸಾಹಿತ್ಯದಲ್ಲಿ ಆಕೆ ಪ್ರಶ್ನಿಸುವ, ನಿರಾಕರಿಸುವ, ಪ್ರತಿರೋಧಿಸುವ ಹಾಗೂ ತನ್ನ ಅಸ್ತಿತ್ವವನ್ನು ಘೋಷಿಸುವ ವ್ಯಕ್ತಿಯಾಗಿ ರೂಪುಗೊಂಡಿದ್ದಾಳೆ. ಇದೇ ಕನ್ನಡ ಮಹಿಳಾ ಸಂವೇದನೆಯ ಪ್ರಮುಖ ಪರಿವರ್ತನೆ.

ಒಟ್ಟಿನಲ್ಲಿ ಲಿಂಗ ತಾರತಮ್ಯವು ಕೇವಲ ಮಹಿಳೆಯ ಸಮಸ್ಯೆಯಲ್ಲ; ಅದು ಇಡೀ ಸಮಾಜದ ಮಾನವೀಯ ಪ್ರಗತಿಗೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಆದ್ದರಿಂದ ಕನ್ನಡ ಸಾಹಿತ್ಯದಲ್ಲಿನ ಮಹಿಳಾ ಸಂವೇದನೆಯನ್ನು ಮಹಿಳೆಯ ನೋವಿನ ದಾಖಲೆಯಾಗಿ ಮಾತ್ರ ನೋಡದೆ, ಸಮಾನತೆ, ಸ್ವಾತಂತ್ರ್ಯ, ಅಸ್ಮಿತೆ, ನ್ಯಾಯ ಮತ್ತು ಮಾನವೀಯ ಗೌರವಕ್ಕಾಗಿ ನಡೆಯುತ್ತಿರುವ ನಿರಂತರ ಸಾಮಾಜಿಕ–ಸಾಂಸ್ಕೃತಿಕ ಚಳುವಳಿಯ ಸಾಹಿತ್ಯಿಕ ಅಭಿವ್ಯಕ್ತಿ ಎಂದು ಪರಿಗಣಿಸಬೇಕು. 'ಮಹಿಳೆ ಅಬಲೆಯಲ್ಲ; ಅವಕಾಶ ದೊರೆತಾಗ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸುವ ಸಮರ್ಥ ವ್ಯಕ್ತಿ' ಎಂಬ ಸತ್ಯವನ್ನು ಕರ್ನಾಟಕದ ಇತಿಹಾಸವೂ ಸಾರುತ್ತದೆ. ಈ ಧ್ವನಿ ಸಾಮಾಜಿಕ ಮಾನ್ಯತೆ ನೀಡುವ ಕಾರ್ಯವನ್ನು ಮಾಡಿದೆ. ಹೀಗಾಗಿ ಕನ್ನಡ ಸಾಹಿತ್ಯದಲ್ಲಿ ಲಿಂಗ ತಾರತಮ್ಯದ ವಿರುದ್ಧ ಮೂಡಿಬಂದ ಮಹಿಳಾ ಸಂವೇದನೆ ಭವಿಷ್ಯದ ಸಮಾನತೆಯ ಮೂಲಕ ಸುಂದರ ಸಮಾಜ ನಿರ್ಮಾಣಕ್ಕೆ ದಾರಿ ದೀಪವಾಗುತ್ತದೆ.

ಪರಾಮರ್ಶನ ಗ್ರಂಥಗಳು:

1. ಎಚ್.ಚನ್ನಪ್ಪ (ಸಂ.), ಕವಿಗಳು ಕಂಡ ಕರ್ನಾಟಕ, 1968, ಹಂಸಧ್ವನಿ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು
2. ಎಸ್.ಗಾಯತ್ರಿ, ಮಹಿಳೆ ಬಿಡುಗಡೆಯ ಹಾದಿಯಲ್ಲಿ, 1985, ನವಕರ್ನಾಟಕ ಪ್ರಕಾಶನ, ಬೆಂಗಳೂರು
3. ಎಸ್.ಕೃಷ್ಣಮೂರ್ತಿ, ಭಾರತೀಯ ನಾರಿ ಮತ್ತು ಸಮಾನತೆ, 1984, ಐಬಿಎಚ್ ಪ್ರಕಾಶನ, ಬೆಂಗಳೂರು
4. ಸರೋಜಿನಿ ಶಿಂತ್ರಿ ಡಾ., ಮಹಿಳೆ ನಡೆದು ಬಂದದಾರಿ, 1977, ಕನ್ನಡ ಅಧ್ಯಯನ ಪೀಠ, ಪಠ್ಯ ಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
5. ಪುಷ್ಪ ಬಸನಗೌಡರ, ಡಾ., ಮಹಿಳಾ ಸಬಲೀಕರಣ, 2015, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

6. ಸಾರಾ ಅಬೂಬಕರ್, ಚಂದ್ರಗಿರಿಯತೀರದಲ್ಲಿ, 1984, ಚಂದ್ರಗಿರಿ ಪ್ರಕಾಶನ, ಮಂಗಳೂರು

7. ಗೀತಾ ನಾಗಭೂಷಣ, ಬದುಕು, 2001, ಲೋಹಿಯಾ ಪ್ರಕಾಶನ, ಬಳ್ಳಾರಿ

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಪ್ರತಿರೋಧದ ಸಾಹಿತ್ಯ: ಕನ್ನಡದಲಿತ–ಬಂಡಾಯಬರಹಗಳಲ್ಲಿಸಾಮಾಜಿಕನ್ಯಾಯ

ಡಾ.ಶ್ರೀನಿವಾಸ್ ಎಸ್. ಜಿ.
ಅಧ್ಯಾಪಕರು, ಕನ್ನಡ ವಿಭಾಗ,
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ,
ಸುವರ್ಣ ಗಂಗೆ ಕ್ಯಾಂಪಸ್, ಮಂಗಸಂದ್ರ, ಕೋಲಾರ.
Corresponding Author–ಡಾ.ಶ್ರೀನಿವಾಸ್ ಎಸ್. ಜಿ.

DOI - 10.5281/zenodo.23528137

ಸಾರಲೇಖ:

ಕನ್ನಡ ಸಾಹಿತ್ಯದ ಆಧುನಿಕ ಬೆಳವಣಿಗೆಯಲ್ಲಿ ದಲಿತ ಮತ್ತು ಬಂಡಾಯ ಸಾಹಿತ್ಯ ಚಳವಳಿಗಳು ಮಹತ್ವದ ತಿರುವನ್ನು ಉಂಟು ಮಾಡಿವೆ. ಸಾಹಿತ್ಯವು ಕೇವಲ ಸೌಂದರ್ಯಾನುಭವದ ಅಭಿವ್ಯಕ್ತಿಯಲ್ಲ; ಅದು ಸಮಾಜದ ಅಸಮಾನತೆ, ಶೋಷಣೆ, ತಾರತಮ್ಯ ಮತ್ತು ಅನ್ಯಾಯಗಳನ್ನು ಪ್ರಶ್ನಿಸುವ ಸಾಮಾಜಿಕ–ಸಾಂಸ್ಕೃತಿಕ ಮಾಧ್ಯಮವೂ ಹೌದು ಎಂಬ ನಿಲುವನ್ನು ದಲಿತ–ಬಂಡಾಯ ಸಾಹಿತ್ಯ ಗಟ್ಟಿಗೊಳಿಸಿತು. ವಿಶೇಷವಾಗಿ 1970 ರ ದಶಕದಿಂದ ಕನ್ನಡದಲ್ಲಿ ಪ್ರಬಲಗೊಂಡ ದಲಿತ ಸಾಹಿತ್ಯವು ಜಾತಿ ವ್ಯವಸ್ಥೆಯಿಂದ ಹೊರಗುಳಿಸಲ್ಪಟ್ಟ ಸಮುದಾಯಗಳ ಬದುಕು, ನೋವು, ಅವಮಾನ, ಆತ್ಮಗೌರವ ಮತ್ತು ಪ್ರತಿರೋಧಕ್ಕೆ ಸಾಹಿತ್ಯಿಕ ಅಭಿವ್ಯಕ್ತಿಯನ್ನು ನೀಡಿತು. ಇದರೊಂದಿಗೆ ಬೆಸೆದುಕೊಂಡ ಬಂಡಾಯ ಸಾಹಿತ್ಯವು ಜಾತಿಯ ಜೊತೆಗೆ ವರ್ಗ, ಅಧಿಕಾರ, ಶೋಷಣೆ, ಸಾಂಸ್ಕೃತಿಕ ಯಜಮಾನಿಕೆ ಮತ್ತು ಸಾಮಾಜಿಕ ಅಸಮಾನತೆಗಳನ್ನು ಪ್ರಶ್ನಿಸಿತು.

ಈ ಲೇಖನವು ಕನ್ನಡ ದಲಿತ–ಬಂಡಾಯ ಬರಹಗಳಲ್ಲಿ ವ್ಯಕ್ತವಾಗುವ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ವಿಶ್ಲೇಷಿಸುತ್ತದೆ. ಸಿದ್ಧಲಿಂಗಯ್ಯ, ದೇವನೂರ ಮಹಾದೇವ, ಅರವಿಂದ ಮಾಲಗತ್ತಿ, ಮೂಡ್ನಾಕೂಡು ಚಿನ್ನಸ್ವಾಮಿ ಮೊದಲಾದ ಪ್ರಮುಖ ಬರಹಗಾರರ ಕೃತಿಗಳ ನೆಲೆಯಲ್ಲಿ ಜಾತಿ ಅನುಭವ, ಆತ್ಮಗೌರವ, ಪ್ರತಿರೋಧ, ಮಾನವೀಯತೆ, ಸಮಾನತೆ ಮತ್ತು ಅಸ್ತಿತ್ವದ ಪ್ರಶ್ನೆಗಳನ್ನು ಪರಿಶೀಲಿಸಲಾಗಿದೆ. ದಲಿತ–ಬಂಡಾಯ ಸಾಹಿತ್ಯವು ಕೇವಲ ಶೋಷಿತ ಬದುಕಿನ ಬರಹವಲ್ಲ; ಅದು ಅಸಮಾನ ಸಾಮಾಜಿಕ ವ್ಯವಸ್ಥೆಯ ವಿರುದ್ಧದ ಜ್ಞಾನಾತ್ಮಕ ಮತ್ತು ಸಾಂಸ್ಕೃತಿಕ ಪ್ರತಿರೋಧವೂ ಹೌದು ಎಂಬುದು ಈ ಅಧ್ಯಯನದ ಮುಖ್ಯ ಪ್ರತಿಪಾದನೆ. ಸಮಕಾಲೀನ ಸಂದರ್ಭದಲ್ಲಿ ಜಾತಿಯ ಸ್ವರೂಪಗಳು ಬದಲಾಗುತ್ತಿದ್ದರೂ ಅದರ ಸಾಮಾಜಿಕ ಪರಿಣಾಮಗಳು ಸಂಪೂರ್ಣವಾಗಿ ಅಂತ್ಯಗೊಂಡಿಲ್ಲ. ಆದ್ದರಿಂದ ಈ ಸಾಹಿತ್ಯದ ಸಾಮಾಜಿಕ ನ್ಯಾಯದ ಆಶಯವು ಇಂದಿಗೂ ಪ್ರಸ್ತುತವಾಗಿದೆ.

ಮುಖ್ಯ ಪದಗಳು: ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯ, ಸಾಮಾಜಿಕ ನ್ಯಾಯ, ಜಾತಿ&ಅಸಮಾನತೆ, ಪ್ರತಿರೋಧ.

ಪೀಠಿಕೆ:

ಸಾಹಿತ್ಯವು ಸಮಾಜದ ಕನ್ನಡಿಯೆಂಬ ಸಾಮಾನ್ಯ ಮಾತಿನ ಆಚೆಗೆ ಹೋದಾಗ ಅದು ಸಮಾಜದ ಅಂತರಂಗವನ್ನು ಪ್ರಶ್ನಿಸುವ ಶಕ್ತಿಯಾಗುತ್ತದೆ. ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಅಧಿಕಾರ ಸಂಬಂಧಗಳು, ವರ್ಗ ಭೇದಗಳು, ಜಾತಿ ವ್ಯವಸ್ಥೆ, ಲಿಂಗ ಅಸಮಾನತೆ, ಆರ್ಥಿಕ ಶೋಷಣೆ ಮತ್ತು ಸಾಂಸ್ಕೃತಿಕ ಯಜಮಾನಿಕೆಗಳು ಸಾಹಿತ್ಯದೊಳಗೆ ಪ್ರತಿಫಲಿಸುತ್ತವೆ. ಆದರೆ ಕೆಲವು ಸಂದರ್ಭಗಳಲ್ಲಿ ಸಾಹಿತ್ಯವು ಕೇವಲ ಪ್ರತಿಬಿಂಬಿಸುವುದಕ್ಕೆ ಸೀಮಿತವಾಗದೆ, ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನೇ ಪ್ರಶ್ನಿಸುವ ಪ್ರತಿರೋಧದ ಧ್ವನಿಯಾಗಿ ರೂಪುಗೊಳ್ಳುತ್ತದೆ.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ದಲಿತ ಮತ್ತು ಬಂಡಾಯ ಸಾಹಿತ್ಯ ಈ ಬದಲಾವಣೆಯ ಪ್ರಮುಖ ಘಟ್ಟವಾಗಿದೆ. ಇವುಗಳು ಮುಖ್ಯವಾಹಿನಿಯ ಸಾಹಿತ್ಯದಲ್ಲಿ

ಸಾಕಷ್ಟು ಪ್ರತಿನಿಧಿತ್ವ ಪಡೆಯದ ಬದುಕುಗಳನ್ನು ಸಾಹಿತ್ಯದ ಕೇಂದ್ರಕ್ಕೆ ತಂದವು. ಜಾತಿ ಆಧಾರಿತ ಅವಮಾನ, ಅಸ್ಪೃಶ್ಯತೆ, ಸಾಮಾಜಿಕ ಬಹಿಷ್ಕಾರ, ಬಡತನ, ದುಡಿಮೆ, ಹಸಿವು, ಶಿಕ್ಷಣದಿಂದ ವಂಚನೆ ಮತ್ತು ಆತ್ಮಗೌರವದ ಹೋರಾಟ ಮುಂತಾದ ಅನುಭವಗಳು ದಲಿತ ಬರಹಗಳಲ್ಲಿ ಪ್ರಬಲವಾಗಿ ಕಾಣಿಸಿಕೊಂಡವು.

ದಲಿತ ಸಾಹಿತ್ಯವನ್ನು ಕೇವಲ "ದುಃಖದ ಸಾಹಿತ್ಯ" ಎಂದು ಪರಿಗಣಿಸುವುದು ಅದರ ವ್ಯಾಪ್ತಿಯನ್ನು ಕುಗ್ಗಿಸಿದಂತಾಗುತ್ತದೆ. ಅದು ನೋವಿನ ದಾಖಲೆಯ ಜೊತೆಗೆ ಸ್ವಾಭಿಮಾನವನ್ನು ಘೋಷಿಸುವ ಸಾಹಿತ್ಯವೂ ಆಗಿದೆ. ಮಾನವ ಘನತೆ, ಸಮಾನ ಹಕ್ಕು, ಸಾಮಾಜಿಕ ನ್ಯಾಯ ಮತ್ತು ಅಸ್ತಿತ್ವದ ಅರಿವನ್ನು ಸ್ಥಾಪಿಸುವ ಪ್ರಯತ್ನಅದರ ಪ್ರಮುಖ ಲಕ್ಷಣವಾಗಿದೆ. ದಲಿತ ಸಾಹಿತ್ಯವು ವ್ಯಕ್ತಿ ಮತ್ತು ಸಮುದಾಯದ ಗುರುತಿನೊಂದಿಗೆ ಮಾನವ ಹಕ್ಕು ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳನ್ನು ಜೋಡಿಸುತ್ತದೆ ಎಂಬುದನ್ನು ಸಾಹಿತ್ಯ ವಿಮರ್ಶೆಯೂ ಗುರುತಿಸಿದೆ. ಕನ್ನಡದಲ್ಲಿ 1970ರ ದಶಕದಲ್ಲಿದಲಿತ ಸಾಹಿತ್ಯದ ಪ್ರಬಲ ಅಭಿವ್ಯಕ್ತಿ ಕಾಣಿಸಿಕೊಂಡಿತು. ನಂತರದಲಿತ ಮತ್ತು ಬಂಡಾಯ ಸಾಹಿತ್ಯದ ಚಳವಳಿಗಳು ಪರಸ್ಪರ ಸಂಬಂಧ ಹೊಂದಿ ಕನ್ನಡ ಸಾಹಿತ್ಯದ ವಿಷಯ, ಭಾಷೆ, ಅನುಭವ ಮತ್ತು ಸೌಂದರ್ಯ ಪ್ರಜ್ಞೆಗಳಲ್ಲಿ ಗಮನಾರ್ಹ ಬದಲಾವಣೆ ತಂದವು. ಕರ್ನಾಟಕದ ಬೂಸಾ ಚಳವಳಿಯ ಸಾಹಿತ್ಯವೂ ಜಾತಿ ಆಧಾರಿತ ಅವಮಾನ ಮತ್ತು ದಲಿತ ಅಸ್ತಿತ್ವದ ಪ್ರಶ್ನೆಗಳನ್ನು ಹೊಸ ಕನ್ನಡೀಯ ಆಧುನಿಕತೆಯೊಂದಿಗೆ ಜೋಡಿಸಿತು.

ಹೀಗಾಗಿ ದಲಿತ–ಬಂಡಾಯ ಸಾಹಿತ್ಯವನ್ನು ಕೇವಲ ಒಂದು ಸಾಹಿತ್ಯ ಚಳವಳಿಯೆಂದು ನೋಡುವುದಕ್ಕಿಂತ, ಸಾಮಾಜಿಕ ನ್ಯಾಯದ ಪರ್ಯಾಯ ಭಾಷೆಯನ್ನು ನಿರ್ಮಿಸಿದ ಸಾಂಸ್ಕೃತಿಕ ಚಳವಳಿಯಾಗಿ ಅಧ್ಯಯನ ಮಾಡುವುದು ಅಗತ್ಯವಾಗಿದೆ.

ಕನ್ನಡ ದಲಿತ ಮತ್ತು ಬಂಡಾಯ ಸಾಹಿತ್ಯದ ಸಾಮಾಜಿಕ ಹಿನ್ನೆಲೆಯನ್ನು ಗುರುತಿಸುವ ಮೂಲಕ ಈ ಲೇಖನವು ಮುಖ್ಯವಾಗಿ;

- ದಲಿತ–ಬಂಡಾಯ ಬರಹಗಳಲ್ಲಿ ವ್ಯಕ್ತವಾಗುವ ಜಾತಿ ಮತ್ತು ಅಸಮಾನತೆಯ ಸ್ವರೂಪವನ್ನು ವಿಶ್ಲೇಷಿಸುವುದು.
- ಈ ಸಾಹಿತ್ಯದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆ ಹೇಗೆ ರೂಪುಗೊಂಡಿದೆ ಎಂಬುದನ್ನು ಪರಿಶೀಲಿಸುವುದು.
- ದಲಿತ ಸಾಹಿತ್ಯದಲ್ಲಿ ಆತ್ಮಗೌರವ, ಅಸ್ತಿತ್ವ ಮತ್ತು ಪ್ರತಿರೋಧದ ನೆಲೆಗಳನ್ನು ಗುರುತಿಸುವುದು.
- ಬಂಡಾಯ ಸಾಹಿತ್ಯವು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧಿಕಾರಗಳನ್ನು ಹೇಗೆ ಪ್ರಶ್ನಿಸುತ್ತದೆ ಎಂಬುದನ್ನು ವಿಶ್ಲೇಷಿಸುವುದು.
- ದಲಿತ ಮತ್ತು ಬಂಡಾಯ ಸಾಹಿತ್ಯದ ಭಾಷೆ ಹಾಗೂ ಅಭಿವ್ಯಕ್ತಿ ವಿಧಾನಗಳ ವೈಶಿಷ್ಟ್ಯವನ್ನು ಗುರುತಿಸುವುದು.
- ಸಮಕಾಲೀನ ಸಮಾಜದಲ್ಲಿ ಈ ಸಾಹಿತ್ಯದ ಪ್ರಸ್ತುತತೆಯನ್ನು ಪರಿಶೀಲಿಸುವುದು ಇಂತಹ ಮುಖ್ಯ ಉದ್ದೇಶಗಳನ್ನು ಹೊಂದಿದೆ.

ಕನ್ನಡದಲಿತ ಸಾಹಿತ್ಯ: ಅನುಭವದಿಂದ ಪ್ರತಿರೋಧದವರೆಗೆ:

1. ಸಿದ್ಧಲಿಂಗಯ್ಯನವರ ಬರಹಗಳಲ್ಲಿ ಪ್ರತಿರೋಧ
2. ದೇವನೂರ ಮಹಾದೇವ: ಅಂಚಿನ ಬದುಕಿನ ಸಂಕೀರ್ಣತೆ
3. ಅರವಿಂದ ಮಾಲಗತ್ತಿ: ಆತ್ಮಕಥನ ಮತ್ತು ಸಾಮಾಜಿಕ ಸ್ಮೃತಿ

ಕನ್ನಡ ದಲಿತ ಸಾಹಿತ್ಯದ ಮುಖ್ಯ ವೈಶಿಷ್ಟ್ಯವೆಂದರೆ ಅನುಭವದ ಪ್ರಾಮಾಣಿಕತೆ. ಶತಮಾನಗಳಿಂದ ಸಾಮಾಜಿಕವಾಗಿ ಕೆಳಹಂತದಲ್ಲಿ ಇರಿಸಲ್ಪಟ್ಟ ಸಮುದಾಯಗಳ ಬದುಕಿನ ಅನುಭವಗಳು ಸಾಹಿತ್ಯದ ವಸ್ತುವಾದವು. ಆದರೆ ಈ ಅನುಭವ ಕೇವಲ ಕರುಣೆ ಹುಟ್ಟಿಸುವ ಉದ್ದೇಶದಿಂದ ಬರೆಯುವುದಲ್ಲ. ಅದು ಪ್ರಶ್ನಿಸುತ್ತದೆ, ವಿರೋಧಿಸುತ್ತದೆ ಮತ್ತು ತನ್ನ ಅಸ್ತಿತ್ವವನ್ನು ಘೋಷಿಸುತ್ತದೆ.

ದಲಿತ ಸಾಹಿತ್ಯದ ಬೆಳವಣಿಗೆಗೆ ಮಾರ್ಕ್ಸ್‌ವಾದ, ಅಂಬೇಡ್ಕರ್ ಚಿಂತನೆ, ಸಾಮಾಜಿಕ ಸಮಾನತೆಯ ಆಶಯ, ಶಿಕ್ಷಣದ ಮಹತ್ವ, ಸಂಘಟಿತ ಹೋರಾಟ ಮತ್ತು ಆತ್ಮಗೌರವದ ಪರಿಕಲ್ಪನೆಗಳು ಮಹತ್ವದ ಹಿನ್ನೆಲೆಯನ್ನು ಒದಗಿಸಿವೆ. ಕರ್ನಾಟಕದಲ್ಲಿ ದಲಿತ ಚಳವಳಿ ಮತ್ತು ಸಾಹಿತ್ಯಿಕ ಚಟುವಟಿಕೆಗಳು ಪರಸ್ಪರ ಪ್ರಭಾವ ಬೀರುತ್ತಾ ಬೆಳೆದವು. 1970ರ ದಶಕದ ಕನ್ನಡ ದಲಿತ ಬರಹಗಳು ಸಾಂಪ್ರದಾಯಿಕ ಸಾಹಿತ್ಯದ ವಿಷಯ ವ್ಯಾಪ್ತಿಗೆ ಹೊಸ ಬದುಕಿನ ಅನುಭವಗಳನ್ನು ತಂದವು.

1. ಸಿದ್ಧಲಿಂಗಯ್ಯನವರ ಬರಹಗಳಲ್ಲಿ ಪ್ರತಿರೋಧ:

ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ಆತ್ಮಕಥನಾತ್ಮಕ ಬರಹಗಳು ಕನ್ನಡ ದಲಿತ ಸಾಹಿತ್ಯದ ಪ್ರಮುಖ ಧ್ವನಿಗಳಾಗಿವೆ. ಅವರ ಬರಹಗಳಲ್ಲಿ ಬಡತನ, ಜಾತಿ ಅವಮಾನ, ಶ್ರಮಜೀವಿಗಳ ಬದುಕು, ಶಿಕ್ಷಣದ ಹಂಬಲ, ಸಾಮಾಜಿಕ ತಾರತಮ್ಯ ಮತ್ತು ಪ್ರತಿರೋಧದ ಮನೋಭಾವಗಳು ಕಾಣಿಸಿಕೊಳ್ಳುತ್ತವೆ.

ಅವರ 'ಊರುಕೇರಿ' ಆತ್ಮಕಥನವನ್ನು ಕೇವಲ ವೈಯಕ್ತಿಕ ಬದುಕಿನ ಕಥೆಯಾಗಿ ನೋಡಲಾಗುವುದಿಲ್ಲ. ಅದು ಒಂದು ಸಾಮಾಜಿಕ ವರ್ಗದ ಅನುಭವದ ದಾಖಲೆಯಾಗಿ ಓದಬಹುದಾದ ಕೃತಿ. ವ್ಯಕ್ತಿಯ ಬದುಕಿನ ಮೂಲಕ ಒಂದು ಸಮುದಾಯದ ಸಾಮಾಜಿಕ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಸಾಧ್ಯತೆಯನ್ನು ಅದು ಒದಗಿಸುತ್ತದೆ. ಸಿದ್ಧಲಿಂಗಯ್ಯನವರ ಬರಹದಲ್ಲಿ "ನಾನು" ಎನ್ನುವುದು ಕೇವಲ ವೈಯಕ್ತಿಕ ನಾನು ಅಲ್ಲ; ಅದು ಸಾಮಾಜಿಕ ಅನುಭವದಿಂದ ರೂಪುಗೊಂಡ "ನಾವು" ಆಗುತ್ತದೆ. ಈ ಕಾರಣದಿಂದ ಅವರ ಸಾಹಿತ್ಯದಲ್ಲಿ ಆತ್ಮಕಥನವು ಸಾಮಾಜಿಕ ದಾಖಲೆಯಾಗಿ ಮತ್ತು ಪ್ರತಿರೋಧದ ಸಾಧನವಾಗಿ ರೂಪಾಂತರಗೊಳ್ಳುತ್ತದೆ. ಅವರ ಸಾಹಿತ್ಯದ ಪ್ರಮುಖ ನೆಲೆಗಳಲ್ಲಿ ಹೋರಾಟ, ಪ್ರತಿಭಟನೆ, ಮಾನವೀಯತೆ ಮತ್ತು ವೈಚಾರಿಕತೆಗಳನ್ನು ಗುರುತಿಸಲಾಗಿದೆ.

2. ದೇವನೂರ ಮಹಾದೇವ: ಅಂಚಿನ ಬದುಕಿನ ಸಂಕೀರ್ಣತೆ:

ಕನ್ನಡ ದಲಿತ ಸಾಹಿತ್ಯದಲಿ ದೇವನೂರ ಮಹಾದೇವರ ಸ್ಥಾನ ವಿಶಿಷ್ಟವಾಗಿದೆ. ಅವರ ಬರಹಗಳಲ್ಲಿ ದಲಿತ ಬದುಕನ್ನು ಕೇವಲ ನೇರ ಘೋಷಣೆಗಳ ಮೂಲಕವಲ್ಲದೆ, ಸಂಕೇತ, ರೂಪಕ, ಭಾಷಾ ಪ್ರಯೋಗ ಮತ್ತು ಕಥನದ ವಿಭಿನ್ನ ತಂತ್ರಗಳ ಮೂಲಕ ಕಟ್ಟಿಕೊಡಲಾಗಿದೆ.

'ಒಡಲಾಳ' ಮತ್ತು 'ಕುಸುಮಬಾಲೆ' ಮೊದಲಾದ ಕೃತಿಗಳಲ್ಲಿ ಅಂಚಿನ ಸಮುದಾಯಗಳ ಬದುಕು, ಜಾತಿ ಸಂಬಂಧಗಳು, ಸಾಮಾಜಿಕ ಅಧಿಕಾರ ಮತ್ತು ಮನುಷ್ಯನ ಅಸ್ತಿತ್ವದ ಸಂಕೀರ್ಣತೆಗಳನ್ನು ಕಾಣಬಹುದು. ಇಲ್ಲಿ ಪ್ರತಿರೋಧವು ಯಾವಾಗಲೂ ಘೋಷಣೆಯ ರೂಪದಲ್ಲೇ ಕಾಣಿಸುವುದಿಲ್ಲ. ಕೆಲವೊಮ್ಮೆ ಅದು ಮೌನದೊಳಗಿನ ಪ್ರತಿರೋಧ, ಕೆಲವೊಮ್ಮೆ ಭಾಷೆಯೊಳಗಿನ ಪ್ರತಿರೋಧ, ಮತ್ತೊಮ್ಮೆ ಅಸ್ತಿತ್ವದ ನಿರಾಕರಣೆಗೆ ವಿರುದ್ಧವಾದ ಬದುಕಿನ ಹಕ್ಕು ಆಗಿ ಕಾಣಿಸುತ್ತದೆ. ಇದು ದಲಿತ ಸಾಹಿತ್ಯದ ಸೌಂದರ್ಯ ಶಾಸ್ತ್ರವನ್ನು ವಿಶಾಲಗೊಳಿಸಿದ ಪ್ರಮುಖ ಅಂಶವಾಗಿದೆ.

3. ಅರವಿಂದ ಮಾಲಗತ್ತಿ: ಆತ್ಮಕಥನ ಮತ್ತು ಸಾಮಾಜಿಕ ಸ್ಮೃತಿ:

ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ' ಕನ್ನಡ ದಲಿತ ಆತ್ಮಕಥನ ಪರಂಪರೆಯಲ್ಲಿ ಗಮನಾರ್ಹ ಕೃತಿಯಾಗಿದೆ. ಈ ಕೃತಿ ವೈಯಕ್ತಿಕ ಅನುಭವವನ್ನು ಸಾಮಾಜಿಕ ಸ್ಮೃತಿಯೊಂದಿಗೆ ಜೋಡಿಸುತ್ತದೆ. ಮಾಲಗತ್ತಿಯವರ ಬರಹದಲ್ಲಿ ಶಿಕ್ಷಣ, ಸಾಮಾಜಿಕ ಚಲನೆ, ಜಾತಿಯ ಗುರುತು, ಆತ್ಮಗೌರವ ಮತ್ತು ವ್ಯವಸ್ಥೆಯೊಂದಿಗೆ ವ್ಯಕ್ತಿಯ ಸಂಘರ್ಷಗಳು ಪ್ರಮುಖವಾಗುತ್ತವೆ. ಅವರ ಆತ್ಮಕಥನವು ಜಾತಿ ವ್ಯವಸ್ಥೆಯು ವ್ಯಕ್ತಿಯ ಬದುಕಿನ ಮೇಲೆ ಬೀರುವ ಪ್ರಭಾವವನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. 'ಗೌರ್ಮೆಂಟ್ ಬ್ರಾಹ್ಮಣ'ವನ್ನು ಕನ್ನಡದ ಮೊದಲ ದಲಿತ ಆತ್ಮಕಥನವೆಂದು ಹಲವಾರು ಅಧ್ಯಯನಗಳು ಗುರುತಿಸಿವೆ. ಇಲ್ಲಿ ಶಿಕ್ಷಣವು ಕೇವಲ ಉದ್ಯೋಗ ಪಡೆಯುವ ಸಾಧನವಲ್ಲ; ಅದು ಸಾಮಾಜಿಕ ಚಲನಶೀಲತೆಯ ದಾರಿಯಾಗುತ್ತದೆ. ಆದರೆ ಶಿಕ್ಷಣ ಮತ್ತು ಉದ್ಯೋಗದ

ಅವಕಾಶ ದೊರೆತರೂ ಜಾತಿಯ ಸಾಮಾಜಿಕ ಗುರುತು ಸಂಪೂರ್ಣವಾಗಿ ಅಳಿದು ಹೋಗುವುದಿಲ್ಲ ಎಂಬ ಸಂಕೀರ್ಣ ವಾಸ್ತವವೂ ಇಲ್ಲಿ ಎದುರಾಗುತ್ತದೆ.

ಬಂಡಾಯ ಸಾಹಿತ್ಯ: ಪ್ರತಿಭಟನೆಯಿಂದ ಪರಿವರ್ತನೆಯವರೆಗೆ:

ದಲಿತ ಸಾಹಿತ್ಯದೊಂದಿಗೆ ನಿಕಟವಾಗಿ ಬೆಳೆದ ಬಂಡಾಯ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ಪ್ರತಿರೋಧದ ಮತ್ತೊಂದು ವಿಶಾಲ ನೆಲೆಯನ್ನು ರೂಪಿಸಿತು. ಬಂಡಾಯ ಸಾಹಿತ್ಯದ ಮೂಲದಲ್ಲಿ ಸ್ಥಾಪಿತ ವ್ಯವಸ್ಥೆಯ ವಿರುದ್ಧದ ಪ್ರಶ್ನೆ ಇದೆ. ಜಾತಿ ಮಾತ್ರವಲ್ಲದೆ ವರ್ಗ, ಆರ್ಥಿಕ ಶೋಷಣೆ, ರಾಜಕೀಯ ಅಧಿಕಾರ, ಸಾಂಸ್ಕೃತಿಕ ಯಜಮಾನಿಕೆ ಮತ್ತು ಸಾಮಾಜಿಕ ಅಸಮಾನತೆಗಳನ್ನೂ ಇದು ಪ್ರಶ್ನಿಸುತ್ತದೆ. ಕರ್ನಾಟಕದಲ್ಲಿ 1979ರ ಬಂಡಾಯ ಸಾಹಿತ್ಯ ಸಂಘಟನೆಯ ರೂಪುಗೊಳ್ಳುವಿಕೆ ಈ ಚಳವಳಿಗೆ ಸಂಘಟಿತ ಸ್ವರೂಪ ನೀಡಿದ ಪ್ರಮುಖ ಘಟ್ಟವಾಗಿದೆ. ಕನ್ನಡ ವಿಶ್ವಕೋಶದ ದಾಖಲೆಯೂ ಬಂಡಾಯ ಸಾಹಿತ್ಯವನ್ನು ಸ್ಥಾಪಿತ ಮೌಲ್ಯಗಳು ಜಡ ಮತ್ತು ಪ್ರತಿಗಾಮಿಯಾದಾಗ ಅವುಗಳ ವಿರುದ್ಧದ ಹೋರಾಟದ ಸಾಹಿತ್ಯವೆಂದು ವಿವರಿಸುತ್ತದೆ. ಬಂಡಾಯ ಸಾಹಿತ್ಯದ ಒಂದು ಪ್ರಮುಖ ಲಕ್ಷಣವೆಂದರೆ ಸಾಹಿತ್ಯವನ್ನು ಸಾಮಾಜಿಕ ಬದುಕಿನಿಂದ ಬೇರ್ಪಡಿಸದಿರುವುದು. ಬದುಕಿನ ಸಮಸ್ಯೆಗಳನ್ನು ನೇರವಾಗಿ ಸಾಹಿತ್ಯದ ವಸ್ತುವಾಗಿಸುವ ಮೂಲಕ ಅದು ಸಾಹಿತ್ಯದ ಸಾಮಾಜಿಕ ಹೊಣೆಗಾರಿಕೆಯನ್ನು ಒತ್ತಿಹೇಳಿತು. ದಲಿತ ಮತ್ತು ಎಡಪಂಥೀಯ ಪ್ರಗತಿಶೀಲ ಬರಹಗಾರರ ನಡುವಿನ ಸಂವಾದವೂ ಬಂಡಾಯ ಸಾಹಿತ್ಯದ ವಿಸ್ತಾರಕ್ಕೆ ಕಾರಣವಾಯಿತು. ಜಾತಿ ಮತ್ತು ವರ್ಗದ ಸಂಬಂಧದ ಕುರಿತು ನಡೆದ ಚರ್ಚೆಗಳು ಕನ್ನಡ ಸಾಹಿತ್ಯದ ಸಾಮಾಜಿಕ ಆಯಾಮವನ್ನು ಮತ್ತಷ್ಟು ಗಟ್ಟಿಗೊಳಿಸಿದವು.

ಸಾಮಾಜಿಕ ನ್ಯಾಯ: ದಲಿತ–ಬಂಡಾಯ ಸಾಹಿತ್ಯದ ಕೇಂದ್ರ ಆಶಯ:

"ಸಾಮಾಜಿಕ ನ್ಯಾಯ" ಎಂಬುದು ಕೇವಲ ಕಾನೂನು ಅಥವಾ ರಾಜಕೀಯ ಪದವಾಗಿ ನೋಡದೇ, ಅದು ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಸಮಾನ ಗೌರವ, ಸಮಾನ ಅವಕಾಶ, ಸಮಾನ ಹಕ್ಕು ಮತ್ತು ಮಾನವ ಘನತೆಯಿಂದ ಬದುಕುವ ಹಕ್ಕು ದೊರಕಬೇಕೆಂಬ ಮೌಲ್ಯವನ್ನು ಒಳಗೊಂಡಿದೆ. ದಲಿತ–ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಸಾಮಾಜಿಕ ನ್ಯಾಯವನ್ನು ಐದು ಪ್ರಮುಖ ನೆಲೆಗಳಲ್ಲಿ ಗುರುತಿಸಬಹುದು:

1. ಸಮಾನತೆಯ ಹಕ್ಕು: ಜಾತಿಯಆಧಾರದ ಮೇಲೆ ವ್ಯಕ್ತಿಯ ಸ್ಥಾನವನ್ನು ನಿರ್ಧರಿಸುವ ವ್ಯವಸ್ಥೆಯನ್ನು ದಲಿತ ಸಾಹಿತ್ಯ ಪ್ರಶ್ನಿಸುತ್ತದೆ. ಜನ್ಮವು ವ್ಯಕ್ತಿಯ ಸಾಮಾಜಿಕ ಮೌಲ್ಯವನ್ನು ನಿರ್ಧರಿಸಬಾರದು ಎಂಬ ಸಮಾನತೆಯ ಆಶಯ ಅದರ ಮೂಲದಲ್ಲಿದೆ.

2. ಮಾನವ ಘನತೆ: ದಲಿತ ಸಾಹಿತ್ಯದ ಅತ್ಯಂತ ಪ್ರಬಲ ಆಶಯಗಳಲ್ಲಿ ಒಂದು ಗೌರವದಿಂದ ಬದುಕುವ ಹಕ್ಕು. ಸಾಮಾಜಿಕ ಅವಮಾನವನ್ನು ಸಹಜವೆಂದು ಸ್ವೀಕರಿಸದೆ ಅದನ್ನು ಪ್ರಶ್ನಿಸುವುದು ಪ್ರತಿರೋಧದ ಪ್ರಮುಖ ರೂಪ.

3.ಆತ್ಮಗೌರವ: ದಲಿತ ಸಾಹಿತ್ಯ ಶೋಷಿತ ವ್ಯಕ್ತಿಯನ್ನು ಕೇವಲ ಬಲಿಪಶುವಾಗಿ ಚಿತ್ರಿಸುವುದಿಲ್ಲ. ಆತನು ತನ್ನ ಅಸ್ತಿತ್ವವನ್ನು ಅರಿತುಕೊಂಡು ಪ್ರಶ್ನಿಸುವ ವ್ಯಕ್ತಿಯಾಗುತ್ತಾನೆ. ಹೀಗಾಗಿ ಆತ್ಮಗೌರವವು ಪ್ರತಿರೋಧದ ಆಂತರಿಕ ಶಕ್ತಿಯಾಗುತ್ತದೆ.

4. ಪ್ರತಿನಿಧೀಕರಣ:ಯಾರು ಮಾತನಾಡುತ್ತಾರೆ? ಯಾರ ಬದುಕು ಸಾಹಿತ್ಯವಾಗುತ್ತದೆ? ಯಾರ ಅನುಭವಕ್ಕೆ ಜ್ಞಾನವೆಂಬ ಮಾನ್ಯತೆ ದೊರಕುತ್ತದೆ? ಇಂತಹ ಪ್ರಶ್ನೆಗಳನ್ನು ದಲಿತ ಸಾಹಿತ್ಯ ಮುಂದಿಡುತ್ತದೆ.

5.ಅವಕಾಶದ ಸಮಾನತೆ: ಶಿಕ್ಷಣ, ಉದ್ಯೋಗ, ರಾಜಕೀಯ ಭಾಗವಹಿಸುವಿಕೆ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಯಲ್ಲಿ ಸಮಾನ ಅವಕಾಶದ ಪ್ರಶ್ನೆಯೂ ಈ ಸಾಹಿತ್ಯದ ಸಾಮಾಜಿಕ ನ್ಯಾಯದ ಚಿಂತನೆಯ ಭಾಗವಾಗಿದೆ.

ಜಾತಿ ಮತ್ತು ಅಸಮಾನತೆ: ಸಾಹಿತ್ಯದೊಳಗಿನ ಸಾಮಾಜಿಕ ವಾಸ್ತವ:

ಭಾರತೀಯ ಸಮಾಜದ ಜಾತಿ ವ್ಯವಸ್ಥೆ ಕೇವಲ ಧಾರ್ಮಿಕ ಅಥವಾ ಸಾಮಾಜಿಕ ವರ್ಗೀಕರಣವಲ್ಲ; ಅದು ವ್ಯಕ್ತಿಯ ಸಾಮಾಜಿಕ ಅವಕಾಶಗಳು, ಸಂಬಂಧಗಳು ಮತ್ತು

ಗುರುತಿನ ಮೇಲೂ ಪರಿಣಾಮ ಬೀರುವ ಸಂಕೀರ್ಣ ವ್ಯವಸ್ಥೆಯಾಗಿದೆ. ದಲಿತ–ಬಂಡಾಯ ಸಾಹಿತ್ಯವು ಜಾತಿಯನ್ನು ಒಂದು ಅಮೂರ್ತ ಪರಿಕಲ್ಪನೆಯಾಗಿ ಮಾತ್ರ ನೋಡದೆ, ದೈನಂದಿನ ಬದುಕಿನ ಅನುಭವವಾಗಿ ದಾಖಲಿಸುತ್ತದೆ. ಮನೆ, ಶಾಲೆ, ಊರು, ಕೆಲಸದ ಸ್ಥಳ, ಸಾರ್ವಜನಿಕ ಸ್ಥಳ, ಧಾರ್ಮಿಕ ಆಚರಣೆ, ಆಹಾರ, ಸಂಬಂಧಗಳು—ಜೀವನದ ಹಲವು ಕ್ಷೇತ್ರಗಳಲ್ಲಿ ಜಾತಿಯ ಪರಿಣಾಮ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಸಾಹಿತ್ಯದ ಪಾತ್ರಗಳು ಮತ್ತು ಅನುಭವಗಳು ತೋರಿಸುತ್ತವೆ. ಇಲ್ಲಿ ಸಾಹಿತ್ಯದ ಮಹತ್ವವೇನೆಂದರೆ, ಅಂಕಿಅಂಶಗಳು ಅಥವಾ ಕಾನೂನು ದಾಖಲೆಗಳು ಹೇಳಲಾಗದ ಅನುಭವದ ಸತ್ಯವನ್ನು ಸಾಹಿತ್ಯ ಹೇಳಬಲ್ಲದು. ಜಾತಿ ವ್ಯವಸ್ಥೆಯ ವಿರುದ್ಧದ ಹೋರಾಟವು ಕೇವಲ ಕಾನೂನು ಬದಲಾವಣೆಯಿಂದ ಪೂರ್ಣಗೊಳ್ಳುವುದಿಲ್ಲ. ಸಾಮಾಜಿಕ ಮನೋಭಾವ, ಸಾಂಸ್ಕೃತಿಕ ಮೌಲ್ಯಗಳು ಮತ್ತು ಮಾನವ ಸಂಬಂಧಗಳಲ್ಲೂ ಬದಲಾವಣೆ ಅಗತ್ಯ. ಈ ಬದಲಾವಣೆಯ ಅಗತ್ಯವನ್ನು ದಲಿತ–ಬಂಡಾಯ ಸಾಹಿತ್ಯ ನಿರಂತರವಾಗಿ ನೆನಪಿಸುತ್ತದೆ.

ಭಾಷೆಯ ಪ್ರತಿರೋಧ ಮತ್ತುದಲಿತ–ಬಂಡಾಯಸಾಹಿತ್ಯ:

ದಲಿತ–ಬಂಡಾಯ ಸಾಹಿತ್ಯದ ಮಹತ್ವವನ್ನು ಕೇವಲ ಅದರ ವಿಷಯದಲ್ಲಿ ಹುಡುಕಲಾಗುವುದಿಲ್ಲ. ಅದರ ಭಾಷೆಯಲ್ಲಿಯೂ ಪ್ರತಿರೋಧವಿದೆ. ಶಿಷ್ಟ, ಸಂಸ್ಕೃತೀಕೃತ ಅಥವಾ ಪ್ರಭುತ್ವದ ಭಾಷೆಯ ಬದಲಿಗೆ ಜನರ ದೈನಂದಿನ ಮಾತು, ಪ್ರಾದೇಶಿಕ ಪದ ಪ್ರಯೋಗ, ಜನಪದ ಭಾಷೆ ಮತ್ತು ಬದುಕಿನ ಸಹಜ ಅಭಿವ್ಯಕ್ತಿಗಳು ಸಾಹಿತ್ಯಕ್ಕೆ ಪ್ರವೇಶಿಸಿದವು. ಇದು ಕೇವಲ ಶೈಲಿಯ ಬದಲಾವಣೆಯಾಗಿರಲಿಲ್ಲ. ಯಾವ ಭಾಷೆ ಸಾಹಿತ್ಯಕ್ಕೆ ಯೋಗ್ಯ? ಯಾರ ಮಾತು ಸಾಹಿತ್ಯದ ಭಾಷೆಯಾಗಬೇಕು? ಎಂಬ ಪ್ರಶ್ನೆಯನ್ನೂ ಅದು ಎತ್ತಿತು. ಬೂಸಾ ಚಳವಳಿಯ ಅಧ್ಯಯನವು ದಲಿತ ಬರಹಗಳು ಜಾತಿ ಅನುಭವವನ್ನು ಕನ್ನಡದ ಸ್ಥಳೀಯ/ಜನಭಾಷಾ ಅಭಿವ್ಯಕ್ತಿಯೊಂದಿಗೆ ಜೋಡಿಸಿ ವಿಶಿಷ್ಟ ಅಸ್ತಿತ್ವವನ್ನು ರೂಪಿಸಿದುದನ್ನು ಸೂಚಿಸುತ್ತದೆ. ಹೀಗಾಗಿ ಭಾಷೆಯ ಪ್ರಜಾ ಪ್ರಭುತ್ವೀಕರಣವೂ ದಲಿತ–ಬಂಡಾಯ ಸಾಹಿತ್ಯದ ಸಾಮಾಜಿಕ ನ್ಯಾಯದ ಒಂದು ಆಯಾಮವಾಗಿದೆ.

ಅನುಭವ ಮತ್ತು ಸಾಹಿತ್ಯದ ಸಂಬಂಧ:

ದಲಿತ ಸಾಹಿತ್ಯದ ಕುರಿತು ಚರ್ಚಿಸುವಾಗ "ಅನುಭವ ಯಾರದು?" ಎಂಬ ಪ್ರಶ್ನೆ ಬಹಳ ಮುಖ್ಯ. ದಲಿತ ಬರಹವು ತನ್ನ ಬದುಕಿನ ನೇರ ಅನುಭವದಿಂದ ಮಾತನಾಡುತ್ತದೆ. ಹೀಗಾಗಿ ಅದರ ಸಾಹಿತ್ಯಿಕ ಪ್ರಾಮಾಣಿಕತೆ ಅನುಭವದೊಂದಿಗೆ ಸಂಬಂಧ ಹೊಂದಿದೆ. ಆದರೆ ಅದನ್ನು ಕೇವಲ ಆತ್ಮಾನುಭವಕ್ಕೆ ಸೀಮಿತಗೊಳಿಸುವುದು ಸರಿಯಲ್ಲ. ವೈಯಕ್ತಿಕ ಅನುಭವವು ಸಾಮಾಜಿಕ ರಚನೆಯೊಂದಿಗೆ ಸಂಬಂಧ ಹೊಂದಿದಾಗ ಅದು ಸಾಹಿತ್ಯದಲ್ಲಿ ಸಾಮಾಜಿಕ ಜ್ಞಾನವಾಗಿ ಪರಿವರ್ತಿತವಾಗುತ್ತದೆ. ಒಬ್ಬ ವ್ಯಕ್ತಿಯ ಅವಮಾನವು ಕೇವಲ ಅವನ ವೈಯಕ್ತಿಕ ಸಮಸ್ಯೆಯಲ್ಲ; ಅದು ಒಂದು ವ್ಯವಸ್ಥೆಯ ಲಕ್ಷಣವಾಗಿರಬಹುದು. ಒಬ್ಬರ ಶಿಕ್ಷಣದ ಹೋರಾಟವು ಕೇವಲ ವೈಯಕ್ತಿಕ ಯಶೋಗಾಥೆಯಲ್ಲ; ಅದು ಸಾಮಾಜಿಕ ಚಲನಶೀಲತೆಯ ಪ್ರಶ್ನೆಯಾಗಿರಬಹುದು. ಈ ಪರಿವರ್ತನೆಯಲ್ಲಿಯೇ ದಲಿತ ಸಾಹಿತ್ಯದ ಸಾಮಾಜಿಕ ಶಕ್ತಿ ಅಡಗಿದೆ ಎನ್ನಬಹುದು.

ಪ್ರತಿರೋಧದ ವಿವಿಧ ರೂಪಗಳು:

ಕನ್ನಡ ದಲಿತ–ಬಂಡಾಯ ಸಾಹಿತ್ಯದಲ್ಲಿನ ಪ್ರತಿರೋಧವನ್ನು ಒಂದೇ ರೀತಿಯಲ್ಲಿ ವ್ಯಾಖ್ಯಾನಿಸಲು ಸಾಧ್ಯವಿಲ್ಲ.

- ನೇರ ಪ್ರತಿಭಟನೆ: ಅನ್ಯಾಯದ ವಿರುದ್ಧ ನೇರವಾಗಿ ಧ್ವನಿ ಎತ್ತುವುದು.
- ಆತ್ಮಕಥನ: ಸ್ವಂತ ಬದುಕನ್ನು ಬರೆಯುವ ಮೂಲಕ ಮೌನಗೊಳಿಸಲ್ಪಟ್ಟ ಇತಿಹಾಸವನ್ನು ದಾಖಲಿಸುವುದು.
- ಭಾಷೆಯ ಪ್ರತಿರೋಧ: ಪ್ರಭುತ್ವದ ಭಾಷಾ ಮಾದರಿಯನ್ನು ಪ್ರಶ್ನಿಸಿ ಜನರ ಭಾಷೆಗೆ ಸಾಹಿತ್ಯಿಕ ಸ್ಥಾನ ನೀಡುವುದು.
- ಸಾಂಸ್ಕೃತಿಕ ಪ್ರತಿರೋಧ: ದಲಿತ ಸಂಸ್ಕೃತಿ, ಆಚರಣೆ, ದುಡಿಮೆ ಮತ್ತು ಬದುಕಿನ

ವಿಧಾನಗಳನ್ನು ಕೀಳಾಗಿ ನೋಡುವ ದೃಷ್ಟಿಯನ್ನು ನಿರಾಕರಿಸುವುದು.

- ಸ್ಮೃತಿಯ ಪ್ರತಿರೋಧ: ಅಧಿಕೃತ ಇತಿಹಾಸದಲ್ಲಿ ಕಾಣಿಸದ ಬದುಕುಗಳನ್ನು ಸಾಹಿತ್ಯದ ಮೂಲಕ ನೆನಪಿನ ಭಾಗವಾಗಿಸುವುದು.
- ಆತ್ಮಗೌರವದ ಪ್ರತಿರೋಧ: "ನಾವು ಕೂಡ ಮನುಷ್ಯರು" ಎಂಬ ಮೂಲಭೂತ ಮಾನವೀಯ ಘೋಷಣೆಯನ್ನು ಸಾಮಾಜಿಕ – ಸಾಂಸ್ಕೃತಿಕ ಹಕ್ಕಾಗಿ ಪರಿವರ್ತಿಸುವುದು.

ಸಮಕಾಲೀನ ವಾಸ್ತವಿಕತೆ:

ಇಂದಿನ ಸಮಾಜದಲ್ಲಿ ಕಾನೂನು ಬದ್ಧವಾಗಿ ಸಮಾನತೆಯ ಮೌಲ್ಯ ಅಂಗೀಕರಿಸಲ್ಪಟ್ಟಿದ್ದರೂ ಸಾಮಾಜಿಕ ಅಸಮಾನತೆಯ ಪ್ರಶ್ನೆಗಳು ಸಂಪೂರ್ಣವಾಗಿ ಅಂತ್ಯಗೊಂಡಿವೆ ಎಂದು ಹೇಳಲಾಗುವುದಿಲ್ಲ. ಜಾತಿಯ ಸ್ವರೂಪಗಳು ಬದಲಾಗಬಹುದು. ಅದರ ಅಭಿವ್ಯಕ್ತಿ ಹಿಂದಿನಂತೆಯೇ ಇರಬೇಕೆಂಬುದಿಲ್ಲ. ಆದರೆ ಸಾಮಾಜಿಕ ಸಂಬಂಧಗಳು, ವಿವಾಹ, ಶಿಕ್ಷಣ, ಉದ್ಯೋಗ, ರಾಜಕೀಯ ಪ್ರತಿನಿಧಿತ್ವ, ಗ್ರಾಮೀಣ–ನಗರ ಬದುಕು ಮತ್ತು ಸಾಂಸ್ಕೃತಿಕ ಪ್ರತಿನಿಧಿತ್ವಗಳಲ್ಲಿ ಜಾತಿಯ ಪರಿಣಾಮಗಳ ಕುರಿತು ಚರ್ಚೆಗಳು ಇನ್ನೂ ಮುಂದುವರಿಯುತ್ತಿವೆ. ಇತ್ತೀಚಿನ ಅಧ್ಯಯನಗಳೂ ದಲಿತ ಸಾಹಿತ್ಯವನ್ನು ಕೇವಲ ಐತಿಹಾಸಿಕ ಚಳವಳಿಯೆಂದು ನೋಡುವುದಕ್ಕಿಂತ, ಇಂದಿನ ಸಾಮಾಜಿಕ ನ್ಯಾಯ, ಗುರುತು ಮತ್ತುಅಂಚಿನ ಧ್ವನಿಗಳ ಚರ್ಚೆಯೊಂದಿಗೆ ಸಂಬಂಧಿಸಿದ ಜೀವಂತ ಕ್ಷೇತ್ರವೆಂದು ಪರಿಗಣಿಸುತ್ತಿವೆ.

ಇಲ್ಲಿ ಮತ್ತೊಂದು ಹೊಸ ಪ್ರಶ್ನೆಯೂ ಉದ್ಭವಿಸುತ್ತದೆ: ಡಿಜಿಟಲ್ ಯುಗದಲ್ಲಿ ದಲಿತ–ಬಂಡಾಯ ಸಾಹಿತ್ಯದ ಪ್ರತಿರೋಧ ಯಾವ ರೂಪ ಪಡೆಯುತ್ತಿದೆ? ಮುದ್ರಿತ ಪುಸ್ತಕ, ಪತ್ರಿಕೆ ಮತ್ತು ಸಾಹಿತ್ಯ ಸಂಘಟನೆಗಳ ಜೊತೆಗೆ ಸಾಮಾಜಿಕ ಮಾಧ್ಯಮ, ಡಿಜಿಟಲ್ ಪ್ರಕಟಣೆ, ಆನ್‌ಲೈನ್ ಚರ್ಚೆಗಳು ಮತ್ತು ಹೊಸ ಮಾಧ್ಯಮಗಳು ಅಂಚಿನ ಧ್ವನಿಗಳಿಗೆ ಹೊಸ ವೇದಿಕೆಗಳನ್ನು ಒದಗಿಸಿವೆ. ಆದರೆ ಡಿಜಿಟಲ್ ಜಗತ್ತಿನಲ್ಲಿಯೂ ಪ್ರತಿನಿಧಿತ್ವ, ಪ್ರವೇಶ ಮತ್ತು ಧ್ವನಿಯ ಗೋಚರತೆ ಸಮಾನವಾಗಿದೆಯೇ ಎಂಬ ಪ್ರಶ್ನೆ ಮುಂದುವರಿಯುತ್ತದೆ. ಇದರಿಂದ ದಲಿತ–ಬಂಡಾಯ ಸಾಹಿತ್ಯದ ಮೂಲ ಪ್ರಶ್ನೆಗಳು ಹೊಸ ಮಾಧ್ಯಮಗಳಲ್ಲಿಯೂ ಹೊಸ ರೂಪದಲ್ಲಿ ಮುಂದುವರಿಯುತ್ತವೆ.

ದಲಿತ–ಬಂಡಾಯ ಸಾಹಿತ್ಯ ಮತ್ತು ಹೊಸ ತಲೆಮಾರು:

ಹೊಸ ತಲೆಮಾರಿನ ಓದುಗರಿಗೆ ದಲಿತ–ಬಂಡಾಯ ಸಾಹಿತ್ಯದ ಪ್ರಸ್ತುತತೆಯನ್ನು ಕೇವಲ ಜಾತಿ ವಿರೋಧಿ ಸಾಹಿತ್ಯವೆಂದು ವಿವರಿಸುವುದಕ್ಕಿಂತ ವಿಶಾಲವಾಗಿ ನೋಡಬೇಕಾಗಿದೆ.

ಈ ಸಾಹಿತ್ಯ ಯುವ ಜನರಿಗೆ ಶಿಕ್ಷಣದ ಮೂಲಕ ಪಡೆದ ಕೆಲವು ಮುಖ್ಯ ಮೌಲ್ಯಗಳನ್ನು ನೀಡುತ್ತದೆ:

- ಪ್ರಶ್ನಿಸುವ ಮನೋಭಾವ: ಯಾವುದೇ ಸಾಮಾಜಿಕ ವ್ಯವಸ್ಥೆಯನ್ನು ಅದು ಹಳೆಯದು ಎಂಬ ಕಾರಣಕ್ಕೆ ಒಪ್ಪಿಕೊಳ್ಳಬಾರದು.
- ಮಾನವ ಘನತೆ: ವ್ಯಕ್ತಿಯ ಮೌಲ್ಯವನ್ನು ಅವನ ಜನ್ಮ, ಜಾತಿ ಅಥವಾ ಸಾಮಾಜಿಕ ಹಿನ್ನೆಲೆಯಿಂದ ನಿರ್ಧರಿಸಬಾರದು.
- ಸಮಾನತೆಯ ಅರಿವು: ಸ್ವಾತಂತ್ರ್ಯವು ವೈಯಕ್ತಿಕ ಹಕ್ಕಿನಷ್ಟೇ ಅಲ್ಲ; ಎಲ್ಲರಿಗೂ ಸಮಾನ ಅವಕಾಶ ದೊರಕಿದಾಗ ಮಾತ್ರ ಅದರ ಸಾಮಾಜಿಕ ಅರ್ಥಪೂರ್ಣಗೊಳ್ಳುತ್ತದೆ ಎಂಬುದು.

ಈ ದೃಷ್ಟಿಯಿಂದ ದಲಿತ–ಬಂಡಾಯ ಸಾಹಿತ್ಯವು ಕೇವಲ ಒಂದು ಕಾಲ ಘಟ್ಟದ ಸಾಹಿತ್ಯವಲ್ಲ. ಅದು ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಿರಂತರವಾಗಿ ಪರೀಕ್ಷಿಸುವ ಸಾಹಿತ್ಯವಾಗಿದೆ.

ಸಮಾರೋಪ:

ಕನ್ನಡ ದಲಿತ–ಬಂಡಾಯ ಸಾಹಿತ್ಯವು ಕನ್ನಡ ಸಾಹಿತ್ಯದ ವಿಷಯ, ಭಾಷೆ, ಪಾತ್ರ, ಅನುಭವ ಮತ್ತು ಸೌಂದರ್ಯ ಪ್ರಜ್ಞೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಅದು ಶೋಷಿತ ಬದುಕನ್ನು ಕೇವಲ ಕರುಣೆಯ ವಸ್ತುವಾಗಿ ನೋಡದೆ, ಪ್ರತಿರೋಧಿಸುವ, ಪ್ರಶ್ನಿಸುವ ಮತ್ತು ತನ್ನ ಅಸ್ತಿತ್ವವನ್ನು ಘೋಷಿಸುವ ಬದುಕಾಗಿ ರೂಪಿಸಿದೆ.

ದಲಿತ ಸಾಹಿತ್ಯವು ಜಾತಿ ವ್ಯವಸ್ಥೆಯಿಂದ ಉಂಟಾದ ಅವಮಾನ ಮತ್ತು ಅಸಮಾನತೆಯನ್ನು ಅನುಭವದ ನೆಲೆಯಲ್ಲಿ ದಾಖಲಿಸಿದರೆ, ಬಂಡಾಯ ಸಾಹಿತ್ಯವು ಆ ಅನುಭವವನ್ನು ವಿಶಾಲವಾದ ಸಾಮಾಜಿಕ–ರಾಜಕೀಯ ಪ್ರಶ್ನೆಗಳೊಂದಿಗೆ ಜೋಡಿಸಿತು. ಎರಡೂ ಸಾಹಿತ್ಯ ಧಾರೆಗಳಲ್ಲಿಯೂ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವ ಘನತೆಯ ಆಶಯಗಳು ಕೇಂದ್ರ ಸ್ಥಾನ ಪಡೆದಿವೆ. ಸಿದ್ಧಲಿಂಗಯ್ಯನವರ ಆತ್ಮಕಥನಾತ್ಮಕ ಬರಹಗಳಲ್ಲಿ ಕಾಣುವ ಸಾಮಾಜಿಕ ಅನುಭವ, ದೇವನೂರ ಮಹಾದೇವರ ಕಥನಗಳಲ್ಲಿ ಕಾಣುವಅಂಚಿನ ಬದುಕಿನ ಸಂಕೀರ್ಣತೆ, ಅರವಿಂದ ಮಾಲಗತ್ತಿಯವರ ಆತ್ಮಕಥನದಲ್ಲಿ ಕಾಣುವ ಜಾತಿ ಮತ್ತು ಸಾಮಾಜಿಕ ಚಲನೆಯ ಅನುಭವ— ಇವೆಲ್ಲವೂ ದಲಿತ ಬದುಕಿನ ವಿಭಿನ್ನ ಮುಖಗಳನ್ನು ಅನಾವರಣಗೊಳಿಸುತ್ತವೆ.

ಈ ಸಾಹಿತ್ಯದ ಅತ್ಯಂತ ದೊಡ್ಡ ಕೊಡುಗೆ ಎಂದರೆ "ಯಾರ ಬದುಕು ಸಾಹಿತ್ಯಕ್ಕೆ ಅರ್ಹ?" ಎಂಬ ಪ್ರಶ್ನೆಗೆ ಹೊಸ ಉತ್ತರ ನೀಡಿರುವುದು. ದಲಿತ–ಬಂಡಾಯ ಸಾಹಿತ್ಯವು ಸಾಹಿತ್ಯದ ಬಾಗಿಲನ್ನು ವಿಸ್ತರಿಸಿತು. ಅಂಚಿನಲ್ಲಿದ್ದ ಧ್ವನಿಗಳನ್ನು ಕೇಂದ್ರಕ್ಕೆ ತಂದಿತು. ಮೌನವನ್ನು ಭಾಷೆಯಾಗಿ ಪರಿವರ್ತಿಸಿತು. ಅನುಭವವನ್ನು ಜ್ಞಾನವನ್ನಾಗಿ ರೂಪಿಸಿತು. ನೋವನ್ನು ಪ್ರತಿರೋಧವಾಗಿ ಪರಿವರ್ತಿಸಿತು. ಪ್ರತಿರೋಧವನ್ನು ಸಾಮಾಜಿಕ ನ್ಯಾಯದ ಆಶಯದೊಂದಿಗೆ ಜೋಡಿಸಿತು.

ಆದ್ದರಿಂದ ದಲಿತ–ಬಂಡಾಯ ಸಾಹಿತ್ಯವನ್ನು ಕೇವಲ 1970–80ರ ದಶಕಗಳ ಸಾಹಿತ್ಯ ಚಳವಳಿಯಾಗಿ ನೋಡುವುದು ಅದರ ಜೀವಂತಿಕೆಯನ್ನು ನಿರಾಕರಿಸಿದಂತಾಗುತ್ತದೆ. ಜಾತಿ, ಅಸಮಾನತೆ, ಸಾಮಾಜಿಕ ಬಹಿಷ್ಕಾರ, ಪ್ರತಿನಿಧಿತ್ವ ಮತ್ತು ಮಾನವ ಘನತೆಯ ಪ್ರಶ್ನೆಗಳು ಇರುವವರೆಗೆ ಅದರ ಸಾಹಿತ್ಯಿಕ ಮತ್ತು ಸಾಮಾಜಿಕ ಪ್ರಸ್ತುತತೆಯೂ ಮುಂದುವರಿಯುತ್ತದೆ. ಪ್ರತಿರೋಧದ ಸಾಹಿತ್ಯದ ಅಂತಿಮ ಗುರಿ ಕೇವಲ ವ್ಯವಸ್ಥೆಯ ವಿರುದ್ಧ ನಿಲ್ಲುವುದಲ್ಲ; ಅನ್ಯಾಯವಿಲ್ಲದ, ಅವಮಾನವಿಲ್ಲದ, ಸಮಾನತೆಯ ಮತ್ತು ಮಾನವ ಘನತೆಯ ಸಮಾಜವನ್ನು ಕಲ್ಪಿಸುವುದಾಗಿದೆ. ಈ ಅರ್ಥದಲ್ಲಿ ಕನ್ನಡ ದಲಿತ–ಬಂಡಾಯ ಸಾಹಿತ್ಯವು ಸಾಮಾಜಿಕ ನ್ಯಾಯದ ಸಾಹಿತ್ಯ ಮಾತ್ರವಲ್ಲ; ಅದು ಹೆಚ್ಚು ಮಾನವೀಯ ಸಮಾಜದ ಕನಸನ್ನು ಕಟ್ಟುವ ಸಾಹಿತ್ಯವೂ ಹೌದು.

ಪರಾಮರ್ಶನ ಗ್ರಂಥಗಳು:

1. ಸಿದ್ಧಲಿಂಗಯ್ಯ. ಊರು ಕೇರಿ: ಅಂಕಿತ ಪ್ರಕಾಶನ. ಬೆಂಗಳೂರು
2. ಸಿದ್ಧಲಿಂಗಯ್ಯ. ಹೊಲೆ ಮಾದಿಗರ ಹಾಡು. ಜನಸ್ನೇಹ ಪ್ರಕಾಶನ, ಬೆಂಗಳೂರು.
3. ದೇವನೂರ ಮಹಾದೇವ. ಒಡಲಾಳ. ಪುಸ್ತಕ ಪ್ರಕಾಶನ. ಬೆಂಗಳೂರು
4. ದೇವನೂರ ಮಹಾದೇವ. ಕುಸುಮಬಾಲೆ: ನವಕರ್ನಾಟಕ ಪ್ರಕಾಶನ. ಬೆಂಗಳೂರು
5. ಅರವಿಂದ ಮಾಲಗತ್ತಿ. ಗೌರ್ಮೆಂಟ್ ಬ್ರಾಹ್ಮಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು
6. ಬರಗೂರು ರಾಮಚಂದ್ರಪ್ಪ. ಸಂಸ್ಕೃತಿ ಶ್ರಮ ಮತ್ತು ಸೃಜನಶೀಲತೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
7. ಡಾ.ಬಿಆರ್‌ಅಂಬೇಡ್ಕರ್. ಜಾತಿ ನಿರ್ಮೂಲನೆ (ಸಂ.) ಡಾ.ಸಿಚಂದ್ರಪ್ಪ , ಸಪ್ನ ಬುಕ್ ಹೌಸ್ ಬೆಂಗಳೂರು.
8. ಡಿ. ಆರ್. ನಾಗರಾಜ, ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ. ಬೆಂಗಳೂರು: ನವ ಕರ್ನಾಟಕ ಪ್ರಕಾಶನ, ಬೆಂಗಳೂರು.
9. **DR Nagaraj: The Flaming Feet and Other Essays: The Dalit Movement in India South Forum Press in Bangalore**
10. **Gail. Omvedt, Dalits and the Democratic Revolution. Sage Publications in New Delhi**

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಪ್ರಸಕ್ತ ಸಮಾಜಕ್ಕೆ ವೀರಶೈವ ಸಾಹಿತ್ಯದಕೊಡುಗೆ

ಶ್ರೀಮತಿ ಶೋಭಾ ಸುರೇಶ್
ಕನ್ನಡ ಪ್ರಾಧ್ಯಾಪಕರು,
ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್, ಚಿಕ್ಕಬಳ್ಳಾಪುರ
Corresponding Author–ಶ್ರೀಮತಿ ಶೋಭಾ ಸುರೇಶ್

DOI - 10.5281/zenodo.23528189

ಸಾರಲೇಖ:

ಪಂಪ ಯುಗದಿಂದ ಕುವೆಂಪು ಯುಗದ ಕಾಲಘಟ್ಟದವರೆಗಿನ ಕನ್ನಡ ಸಾಹಿತ್ಯವನ್ನು ಆಯಾ ಯುಗದಲ್ಲಿ ಪ್ರಾಮುಖ್ಯತೆಯನ್ನು ಹೊಂದಿದ್ದ ಧರ್ಮಗಳು, ಕವಿಗಳ ಹೆಸರಿನಲ್ಲಿ ವಿಭಾಗೀಕರಿಸಿ ಜೈನ ಸಾಹಿತ್ಯ, ವೀರಶೈವ ಸಾಹಿತ್ಯ ಹೀಗೆ ಅನೇಕ ಕವಲುಗಳಾಗಿ ಒಡೆದ ಕನ್ನಡ ಸಾಹಿತ್ಯ ಚರಿತ್ರೆ ಶ್ರೀಮಂತವಾಗಿ ಬೆಳೆಯುತ್ತಲೇ ಹೋಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಸಮಾಜಕ್ಕೆ ಕನ್ನಡ ಸಾಹಿತ್ಯದ ಕೊಡುಗೆ ಕುರಿತಂತೆ ಪ್ರಬಂಧ ಮಂಡನೆ ಮಾಡುವ ಉದ್ದೇಶದಿಂದ ಸುಮಾರು 9ನೇ ಶತಮಾನದಿಂದ ಈವರೆಗಿನ ಬೆಳವಣಿಗೆ ಮತ್ತು ಕೊಡುಗೆಗಳನ್ನು ವಿಶ್ಲೇಷಿಸಬೇಕಾದಲ್ಲಿ ವಿಷಯದ ವ್ಯಾಪ್ತಿ ಹೆಚ್ಚಾಗಿರುವುದರಿಂದ ಕನ್ನಡ ಸಾಹಿತ್ಯಕ್ಕೆ ವೀರಶೈವ ಸಾಹಿತ್ಯದ ಕೊಡುಗೆ ಬಗ್ಗೆ ಸಿಂಹಾವಲೋಕನ ಮಾಡಲಾಗಿದೆ. 12ನೇ ಶತಮಾನದಲ್ಲಿ ಬಸವ ಯುಗದಲ್ಲಿ ಪ್ರಾರಂಭವಾದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಚಳುವಳಿ ಕನ್ನಡ ಸಂಸ್ಕೃತಿಯನ್ನೇ ಬದಲಾಯಿಸಿತು ಎಂದರೆ ತಪ್ಪಾಗಲಾರದು. 12ನೇ ಶತಮಾನದ ಈ ಚಳುವಳಿಗೆ ಮುಖ್ಯ ಕಾರಣ ಬಸವಣ್ಣನವರ ಸಾಮಾಜಿಕ ಮತ್ತು ಧಾರ್ಮಿಕ ಚಳುವಳಿ. ಕರ್ನಾಟಕದಲ್ಲಿ ವೈದಿಕ, ಜೈನ, ಶಾಕ್ತ ಮುಂತಾದ ಧರ್ಮಗಳ ಆಚಾರ ವಿಚಾರಗಳಲ್ಲಿ ಶಿಥಿಲತೆ ಉಂಟಾಗಿ ಜನತೆಯಲ್ಲಿ ಆದರ್ಶಗಳ ಸಂಘರ್ಷಣೆ ಉಂಟಾದಾಗ ವೀರಶೈವ ಶರಣರು ನೂತನ ದರ್ಶನವನ್ನು, ವಿನೂತನ ಆಚಾರ ವಿಚಾರಗಳನ್ನು ನುಡಿದು ನಡೆದು ತೋರಿದರು. ಪರಂಪರೆಯು ಸಂಸ್ಕೃತಿ ಮೂಲಗಳನ್ನು ಪರಿಷ್ಕರಿಸಿ ನೂತನ ಜೀವನ ಮಾರ್ಗವನ್ನು ಬೋಧಿಸಿದರು. ಭಾರತೀಯ ಧರ್ಮ, ತತ್ವಶಾಸ್ತ್ರಗಳನ್ನು ಒರೆಗೆ ಹಚ್ಚಿ ಶುದ್ಧ ಚಿನ್ನದ ನಾಣ್ಯಗಳನ್ನು ಟಂಕಿಸಿ ತಮ್ಮ ಅನುಭಾವದ ಮುದ್ರೆಯನ್ನೊತ್ತಿ ಚಲಾವಣೆಗೆ ಬಿಟ್ಟರು. ಸಮಾಜದ ಕ್ಷೇಮಕ್ಕೂ ಈ ನೂತನ ಜೀವನ ಮೌಲ್ಯಗಳು ಸಮಾಜಕ್ಕೆ ವಜ್ರ ಕವಚಗಳಂತಿವೆ. ವಚನಕಾರರು ಏರ್ಪಡಿಸಿರುವ ಸಮಾಜದಲ್ಲಿ ಸ್ವಾತಂತ್ರ್ಯ, ಸಮಾನತೆ, ಪರಸ್ಪರ ಭ್ರಾತೃತ್ವ ಭಾವ ಮೂಲಸ್ಥಂಭವಾಗಿವೆ ಎಂದ ಎಂ.ಆರ್. ಶ್ರೀನಿವಾಸಮೂರ್ತಿಯವರ ಮಾತುಗಳಲ್ಲಿ ಪೂರ್ಣ ಸತ್ಯವಿದೆ.

ಕೀಲಿ ಪದ: ಸಾಮಾಜಿಕ, ಧಾರ್ಮಿಕ ಚಳುವಳಿ, ಸಮಾನತೆ, ವಿಶ್ವಕಲ್ಯಾಣ, ಸ್ತ್ರೀ ಸ್ವಾತಂತ್ರ್ಯ, ವಚನ ಸಾಹಿತ್ಯ,

ಆತ್ಮಾನುಸಂಧಾನ:

ಕನ್ನಡ ನಾಡಿನ ಸಾಹಿತ್ಯ ಚರಿತ್ರೆಯೆಂದರೆ ಧರ್ಮದ ಚರಿತ್ರೆಯೇ ಆಗಿದೆ. ಆಯಾ ಕಾಲದ ಮತದ ಅಧ್ಯಯನ ನಡೆಸದೆ ಆಯಾ ಕಾಲದ ಕನ್ನಡ ಸಾಹಿತ್ಯದ ಅರಿವು ಅಸಾಧ್ಯ ಸಾಹಿತ್ಯ ಮತ್ತು ಧರ್ಮದ ಸಂಬಂಧದ ಎಳೆ ಅತ್ಯಂತ ಸೂಕ್ಷ್ಮವಾದದ್ದು. ಲಿಖಿತ ರೂಪದಲ್ಲಿ ಜೈನ, ವೀರಶೈವ, ವೈಷ್ಣವ ಮತ್ತು ಆಧುನಿಕ ಪಾಶ್ಚಾತ್ಯ ಸಾಹಿತ್ಯಗಳು ಹೊರಹೊಮ್ಮಿ ಅನುಕ್ರಮವಾಗಿ ಒಂದೊಂದು ಕಾಲಕ್ಕೆ ಒಂದೊಂದು ಮೆರೆದು ಅನಂತರ ಜೊತೆ ಜೊತೆಯಾಗಿ ಬದುಕುತ್ತಿವೆ. ಅಂದು ಧರ್ಮದಿಂದ ಸಾಹಿತ್ಯದ ಮೌಲ್ಯಮಾಪನವಾದರೆ ಇಂದು ಸಾಹಿತ್ಯದಿಂದ ಧರ್ಮದ ಮೌಲ್ಯಮಾಪನವಾಗುತ್ತಿದೆ.

ಹನ್ನೆರಡನೇ ಶತಮಾನಕ್ಕಿಂತ ಪೂರ್ವದಲ್ಲಿ ಹುಟ್ಟಿದ ವಿಶಿಷ್ಟ ವಚನ ಸಾಹಿತ್ಯ ಪ್ರಕಾರದ ಸೃಷ್ಟಿಗೆ ಕಾರಣವಾಗಿ ಅಧಿಕ ಸಂಖ್ಯೆಯ ಅನುಯಾಯಿಗಳನ್ನು

ವೀರಶೈವ ಧರ್ಮ ಕನ್ನಡ ನಾಡಿನಲ್ಲಿ ಹೊಂದಿದೆ. ಶಿವಭಕ್ತಿಯೇ ಅದರ ಪ್ರಧಾನ ವಸ್ತುವಾಗಿದ್ದರೂ ವೀರಶೈವೇತರರಲ್ಲಿಯೂ ಶಿವಭಕ್ತಿಯನ್ನು ಕುರಿತಾಗಿ ಸಾಹಿತ್ಯ ಸೃಷ್ಟಿಯಾಗಿದೆ. ಆದ್ದರಿಂದ ವೀರಶೈವ ತತ್ವಗಳಲ್ಲಿ ವ್ಯಕ್ತವಾಗಿರುವ ಸಾಹಿತ್ಯ ಲಿಂಗಾಯತ ಸಾಹಿತ್ಯ, ಶರಣ ಸಾಹಿತ್ಯ, ವಚನ ಸಾಹಿತ್ಯ ಎಂದು ಜನಪ್ರಿಯವಾಗಿದೆ. ವೀರಶೈವ ಸಾಹಿತ್ಯ ಸಮೃದ್ಧವಾಗಿ ಬೆಳೆದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬಸವಯುಗ ಎಂದೇ ವಿಶೇಷ ಸ್ಥಾನವನ್ನು ಗಳಿಸಿಕೊಂಡಿದೆ.

ವಚನ ಪ್ರಕಾರವು ಕನ್ನಡ ಸಾಹಿತ್ಯದಲ್ಲಿ ಇದ್ದಕ್ಕಿದ್ದ ಹಾಗೆ ಅವತರಿಸಿರುವುದಿಲ್ಲ. ಪಂಪ ಪೂರ್ವ ಯುಗ, ಪಂಪಯುಗದಲ್ಲಾಗಲೀ ಕನ್ನಡ ಸಾಹಿತ್ಯ ಅಗಾಧ ಬೆಳವಣಿಗೆಯನ್ನು ಕಂಡಿತ್ತು. ಕನ್ನಡದ ಕಾವ್ಯಗಳ ಪ್ರೇರಣೆಯಾಗಿರುವುದನ್ನು ತೌಲನಿಕವಾಗಿ ಗಮನಿಸಿದರೆ ಕನ್ನಡ ಕಾವ್ಯಗಳಲ್ಲಿನ ಮೂಲ ಪ್ರೇರಣೆಯನ್ನು ಗಮನಿಸಬಹುದು. ವಸ್ತು, ಕಾವ್ಯ ಶಿಲ್ಪ ಮತ್ತು ಬಂಧದೃಷ್ಟಿಯಿಂದ ಗಮನಿಸಿದರೆ ಕುತೂಹಲ ಮೂಡಿಸುತ್ತದೆ.

ನಯಸೇನ: ಧರ್ಮಾವೃತ–ಕ್ರಿ.ಶ. 1112

ಅಂಬರದೊಳ್ ಶಶಿ ದಿನಕರ
ಬಿಂಬಮನಾರ್ತಾಳ್ದಿಪೊತ್ತುಕೊಂಡಿರ್ದರ್ ಪೇ
ಳಿಂಬಿಲ್ಲದ ಲೋಕತ್ರಯ
ಬಿಂಬಂ ತನ್ನ ಸ್ವಭಾವದಿಂ ನೆಲಸಿರ್ಕುಂ॥

ದೇವರದಾಸಿಮಯ್ಯ: ಕ್ರಿ.ಶ. 1140

ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ
ಅಂಬರಕ್ಕೆಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ
ಎಲೆ ಮೃಡನೆ ನೀನಲ್ಲದೆ
ಉಳಿದ ದೈವಂಗಳಿಗಹುದೆ ರಾಮನಾಥ

ನಯಸೇನ: ಧರ್ಮಾಮೃತ

ಬೇವಿನ ಗಿಡದಂತಂದಿ
ಟ್ಯಾವಿನ ನೊರೆವಾಲನೆರೆದು ನಡುಪಿದೊಡಂ ಕೇಳ್
ಬೇವಿಂಗೆ ಕೈಪೆ ಪಿಂಗದು
ಭೂವಳಯದೊಳೆಂಬ ತೆರೆದಿನಾ ಪುರದವರುಂ ॥

ಬಸವಣ್ಣ: ಕ್ರಿ.ಶ. 1160

ಬೇವಿನ ಬೀಜವ ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ
ಆಕಳ ಹಾಲನೆರೆದು ಜೇನು ತುಪ್ಪವ ಹೊಯ್ದಡೆ
ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ
ಶಿವ ಭಕ್ತರಲ್ಲದವರ ಕೂಡೆ ನುಡಿಯಲಾಗದು
ಕೂಡಲ ಸಂಗಮದೇವಾ॥

ವಚನ ಸಾಹಿತ್ಯದ ಮೂಲ ಆತ್ಮ ಪ್ರೇರಣೆಯಿಂದ ಬಂದವುಗಳಾದರೂ ಆರಂಭದ ಕಾಲದಲ್ಲಿ ಹಳೆಗನ್ನಡ ಕಾವ್ಯಗಳ ಪ್ರೇರಣೆಯನ್ನು ಗಮನಿಸಬಹುದು.

ವೀರಶೈವ ಸಾಹಿತ್ಯ ಕನ್ನಡ ಸಂಸ್ಕೃತಿಯನ್ನು ಬದಲಾಯಿಸಿದವು:

ವೈದಿಕ, ಜೈನ, ಶಾಕ್ತ ಮುಂತಾದ ಧರ್ಮಗಳಲ್ಲಿ ಆಚಾರ ವಿಚಾರಗಳ ಶಿಥಿಲತೆ ಉಂಟಾಗಿ ಜನತೆಯಲ್ಲಿ ಆದರ್ಶಗಳ ಸಂಘರ್ಷಣೆಯುಂಟಾದಾಗ ವೀರಶೈವ ಶರಣರು ನೂತನ ದರ್ಶನವನ್ನು ವಿನೂತನ ಆಚಾರ ವಿಚಾರಗಳನ್ನು ನುಡಿದು ನಡೆದು ತೋರಿಸಿದರು. ಪರಂಪರೆಯ ಸಾಂಸ್ಕೃತಿಕ ಮೌಲ್ಯಗಳನ್ನು ಪರಿಷ್ಕರಿಸಿ ನೂತನ ಜೀವನ ದರ್ಶನವನ್ನು ಬೋಧಿಸಿದರು. ಭಾರತೀಯ ಧರ್ಮ ಶಾಸ್ತ್ರವನ್ನು ಒರೆಗೆ ಹಚ್ಚಿ ಶುದ್ಧ ಚಿನ್ನದ ನಾಣ್ಯಗಳನ್ನು ಟಂಕಿಸಿ ತಮ್ಮ ಅನುಭಾವದ ಮುದ್ರೆಯನ್ನೊತ್ತಿ ಚಲಾವಣೆಗೆ ಬಿಟ್ಟರು. ಸಮಾಜ ಕ್ಷೇಮಕ್ಕೂ, ದೇಶದ ಕ್ಷೇಮಕ್ಕೂ ಈ ನೂತನ ಜೀವನ ಮೌಲ್ಯಗಳು ವಜ್ರ ಕವಚಗಳಂತಿವೆ. ವಚನಕಾರರು

ಏರ್ಪಡಿಸಿರುವ ಸಮಾಜದಲ್ಲಿ ಸ್ವತಂತ್ರ ಸರ್ವ ಸಮಾನತೆ, ಪರಸ್ಪರ ಭ್ರಾತೃಭಾವ ಇವು ಮೂಲ ಸ್ಥಂಭಗಳಾಗಿವೆ ಎಂಬ ಎಂ.ಆರ್. ಶ್ರೀನಿವಾಸ್‌ರವರ ಮಾತುಗಳಲ್ಲಿ ಪೂರ್ಣ ಸತ್ಯವಿದೆ.

ಬಸವಣ್ಣ ಅಲ್ಲಮಪ್ರಭುಗಳು, ಷಟ್ಸ್ಥಲ ಸಿದ್ಧಾಂತದ ಸಾಕಾರ ಮೂರ್ತಿ ಚನ್ನಬಸವಣ್ಣ ಮುಂತಾದ ಶರಣರು ನೂತನ ಮೌಲ್ಯಗಳನ್ನು ರೂಪಿಸಿದರು. ಶರಣರು ಮಾನವ ಜನ್ಮದ ನೆಲೆಬೆಲೆಗಳನ್ನು ಇತ್ಯರ್ಥ ಮಾಡಿದರು. ಸೃಷ್ಟಿ ಸತ್ಯವಾದುದು, ಹುಸಿಯಲ್ಲ, ಬಂಧನಕಾರಿಯಲ್ಲ, ಕರ್ಮೋದ್ಯೋಗದಿಂದಲೇ ಮೋಕ್ಷ ಸಾಧ್ಯ. ಜನ್ಮ ಜನ್ಮಾಂತರಗಳಲ್ಲಿ ತೊಳಲಬೇಕಿಲ್ಲ, ನುಡಿದಂತೆ ನಡೆ, ಸಂಸಾರ ಜೀವನ ಮಾನ್ಯವಾದುದು, ಕಾಯಕವೇ ಕೈಲಾಸ, ಧರ್ಮ ಸಮಷ್ಟಿ ಮಾನವರ ಹಕ್ಕು, ಸಾಮಾಜಿಕ ಸಮಾನತೆ ಸ್ವತಂತ್ರ ಸರ್ವರ ಭಾದ್ಯತೆ. ಗಂಡು ಹೆಣ್ಣಿನ ಸಮಾನತೆ ಮಾನ್ಯವಾಗಿತ್ತು ದೇಹದಂಡನೆ, ವ್ರತೋಪಾಸನೆಗಳು, ತೀರ್ಥಕ್ಷೇತ್ರ ದರ್ಶನ, ಯಜ್ಞ ಯಾಗಾದಿಗಳು ವ್ಯರ್ಥ ಕರ್ಮಗಳು. ತನ್ನ ತಾನರಿಯುವುದು ಮಾನವನಗುರಿ ಮುಂತಾದ ವಿಚಾರಗಳು ಭಾರತೀಯ ಸಂಸ್ಕೃತಿಯಲ್ಲಿ ವಿಪ್ಲವಗಳಾದವು. ಅಚ್ಚ ಕನ್ನಡದ ಶಿವಶರಣರ ಕ್ರಾಂತಿ, ಅದರ ಕಾರ್ಯರಂಗ ಕಿರಿದಾಗಿದ್ದರೂ ಗುರಿ ಹಿರಿದಾಗಿದೆ. ಕರ್ನಾಟಕದ ಸಂಸ್ಕೃತಿಗೆ ವೀರಶೈವ ಧರ್ಮದ ಮೂಲಕವಾಗಿ ಅತ್ಯಂತ ವಿನೂತನತೆಯನ್ನು ನೀಡಿದವರು ಬಸವಣ್ಣ, ಅಲ್ಲಮಪ್ರಭು ಇತ್ಯಾದಿ ಶರಣರು ಅವರು ನೀಡಿದ ವಚನ ವಾಙ್ಮಯವನ್ನು ಕನ್ನಡ ಉಪನಿಷತ್ತುಗಳೆಂದು ಕರೆದರು. ಅಲ್ಲಮಪ್ರಭುವಿನ ವ್ಯಕ್ತಿತ್ವವನ್ನು ಕನ್ನಡ ಸಾಹಿತ್ಯದಲ್ಲಿ ಕರಿಯು (ಆನೆ) ಕನ್ನಡಿಯೊಳಗಿದ್ದಂತೆ ಎಂಬ ಪ್ರತೀತಿಯಿದೆ.

ವೀರಶೈವಧರ್ಮ, ಅನುಭವ ಮಂಟಪ, ಬಸವಣ್ಣ ಮತ್ತು ಅಲ್ಲಮಪ್ರಭುಗಳು:

ವೀರಶೈವ ಧರ್ಮ, ಶೈವ ಧರ್ಮದ ಸಾಕಷ್ಟು ಪರಿಷ್ಕರಣಗೊಂಡ ಮುಂದುವರೆದ ಭಾಗವೆನ್ನಬಹುದು. ಹೀಗೆ ಪರಿಷ್ಕರಣೆಗೊಳಪಟ್ಟ ಕಾಲಘಟ್ಟ 12ನೇ ಶತಮಾನದ ಮಧ್ಯ ಭಾಗವೆನ್ನಬಹುದು. ವಿಶೇಷವಾಗಿ ಅನುಭವ ಮಂಟಪದ ಸ್ಥಾಪನೆಯ ನಂತರವೇ ಎನ್ನಬಹುದು.

ಬಸವಣ್ಣನವರು ಬಿಜ್ಜಳ ದೊರೆಯ ಮಂತ್ರಿಯಾಗಿ, ಸಂಬಂಧಿಯಾಗಿ ಮುಖ್ಯಮಂತ್ರಿ ಬಲದೇವ ದಂಡನಾಯಕನ ಮಗಳು ಗಂಗಾಂಬಿಕೆಯನ್ನು ಮದುವೆಯಾದರು. ಬಾಲ್ಯದಿಂದಲೂ ದೀನ ದಲಿತರ ಬಗ್ಗೆ ಅಪಾರ ಕಾಳಜಿ ಹೊಂದಿ ಬಸವಣ್ಣನವರಿಗೆ ರಾಜಾಶ್ರಯ ದೊರೆಯಿತು. ಅವರ ಉದ್ಧಾರವೇನಿದ್ದರೂ ಧರ್ಮದ ಮೂಲಕವೇ ಜನರನ್ನು ಸಾಮಾಜಿಕ ನೆಲೆಯಲ್ಲಿ ಒಂದು ಮಾಡುವ ಉದ್ದೇಶವಿತ್ತು. ರಾಜಾಶ್ರಯ ಬಸವಣ್ಣನವರ ಲಿಂಗಧಾರಣೆ ಅನ್ನದಾಸೋಹ ಕಾರ್ಯಕ್ರಮಗಳಿಗೆ ಬೆನ್ನೆಲುಬಾಗಿದ್ದಿತು. ಹೀಗಾಗಿ ಬೇಗ ಜನ ಮನ್ನಣೆ ಸಿಕ್ಕಿತು. ಪಂಕ್ತಿ ಸಹಭೋಜನಗಳು ಮಹಾಮನೆಯಲ್ಲಿ ನಡೆಯುತ್ತಿದ್ದು ಸತ್ಸಂಗಗಳು ಜನ ಸಾಮಾನ್ಯರ ಆಕರ್ಷಣೆ ಗೊಳಗಾಗಿದ್ದರೂ ಆರಂಭದಲ್ಲಿ ಅಧಿಕಾರ, ಯಶಸ್ಸು, ಜನ ಮನ್ನಣೆಗಳು ಯಶಸ್ಸು ಕಾಣುವುದರ ಜೊತೆಯಲ್ಲಿಯೇ ಬಸವಣ್ಣನವರಿಗೆ ಶತ್ರುಕೂಟವು ಹುಟ್ಟಿಕೊಂಡಿತು.

ಅನುಭವ ಮಂಟಪದಲ್ಲಿ ಹಮ್ಮಿಕೊಂಡಿದ್ದ ಧರ್ಮಜಾಗೃತಿಯ ಕಾರ್ಯಕ್ರಮ, ಲಿಂಗಧಾರಣೆ (ಯಾರಾದರೂ ಸರಿ) ಕಾರ್ಯ ಬಸವಣ್ಣನವರ ಅಳಿಯ ಚನ್ನಬಸವಣ್ಣನವರ ನೇತೃತ್ವದಲ್ಲಿ ನಡೆಯುತ್ತಿತ್ತು. ಚನ್ನಬಸವಣ್ಣನವರು ಬರೆದ ಕರ್ಣ ಹಸಿಗೆ ಗ್ರಂಥ ವೀರಶೈವ ಧರ್ಮದ ನೀತಿ ನಿಯಮ ರೂಪಿಸುವ ಪ್ರಮುಖ ಗ್ರಂಥವಾಯಿತು. ಲಿಂಗಧಾರಣೆ, ಅಷ್ಟಾವರಣ, ಕಾರ್ಯ ಸಿದ್ಧಾಂತ, ದಾಸೋಹಗಳೇ ಧರ್ಮದ ಮೂಲ ಮಂತ್ರವಾಗಿದ್ದವು. ಈ ಸಂದರ್ಭದಲ್ಲಿ ಅನುಭವ

ಮಂಟಪದ ಅಧ್ಯಕ್ಷರಾಗಿದ್ದ ಅಲ್ಲಮಪ್ರಭುಗಳು ಬಸವಣ್ಣನವರು ರೂಢಿಗೆ ತಂದಿದ್ದ ಅಂಗದ ಮೇಲೆ ಲಿಂಗವಿರುವವರನ್ನು ಸಂಗಮನಾಥನೆಂಬೆ ಎಂಬ ಘೋಷವಾಕ್ಯ ಅನುಭವ ಮಂಟಪದ ಸುತ್ತ ದಾಸೋಹ ಜಾತ್ರೆಯ ಸ್ವರೂಪ ಪಡೆದುಕೊಂಡಿತ್ತು ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದರು. ಅದರಲ್ಲೂ ಡಾಂಭಿಕರ ಸಂಖ್ಯೆಯೂ ಇತ್ತು. ಇದನ್ನು ಗಮನಿಸಿದ ಪ್ರಭುಗಳು ಲಿಂಗವಿದ್ದವರೆಲ್ಲ ಸಂಗಮನಾಥರಲ್ಲ ಲಿಂಗಗುಣಗಳಿದ್ದವರು ಮಾತ್ರ ಸಂಗಮನಾಥರು ಎಂಬುದನ್ನು ನಿರ್ದಾಕ್ಷಿಣ್ಯವಾಗಿ ಶರಣ ಗಣಕ್ಕೆ ಮನ ಮುಟ್ಟುವಂತೆ ಹೇಳಿದರು.

ಪರಿಷ್ಕೃತಗೊಂಡ ವೀರಶೈವ ಧರ್ಮದ ಬಗ್ಗೆ ಅಲ್ಲಮರ ನಿಲುವು:

ಮಹಾ ಮನೆಯಲ್ಲಿ ಅನಿವಾರ್ಯವಾಗಿ ನಡೆಸಿಕೊಂಡು ಬಂದಿದ್ದ ಕೆಲವು ಪದ್ಧತಿಗಳಿಗೆ ಪೂರ್ಣ ವಿರಾಮ ಹಾಕಿದರು. ಅನುಭವ ಮಂಟಪಕ್ಕೆ ಶಕ್ತಿ ತುಂಬಿದ ಬಸವಣ್ಣನವರು ರೂಢಿಗೆ ತಂದಿದ್ದ ಷಟ್ಸ್ಥಲ ಪಂಚಾಚಾರ ಇವುಗಳ ಬಗ್ಗೆಯೂ ಭಿನ್ನ ನಿಲುವು ಹೊಂದಿದ್ದರು. ಅವರ ವಚನ ಹೀಗಿದೆ:

ಇಷ್ಟಲಿಂಗಕ್ಕೆ ತೋರಿ ಮೃಷ್ಟಾನ್ನ ಹೊಡೆದವರಿಗೆ
ನಿಮಗೆಲ್ಲಿಯದೋ ಇಷ್ಟಾರ್ಥ ಸಿದ್ಧಿ?

ಅದೆಲ್ಲಿಹುದೋ ಲಿಂಗ ಅದೆಲ್ಲಿಹುದೋ ಪ್ರಸಾದ ಪಾದೋದಕ? ಅದೆಲ್ಲಿಹುದೋ ಜಂಗಮ? ಅಲ್ಲದ ಆಟವಾಡಿ ಎಲ್ಲರೂ ಮಂದಗೆಟ್ಟರು ಗುಹೇಶ್ವರಾ... ನಿಮ್ಮಾಣೆ ಎಂದು ಕಠೋರ ಸಂದೇಶ ನೀಡಿದರು.

'ಹೊನ್ನ, ಹೆಣ್ಣು, ಮಣ್ಣೆನಾಸೆಯ ಬಿಟ್ಟು, ಕೋಪ ತಾಪವ ಬಿಟ್ಟು
ಭ್ರಾಂತಿ ಭ್ರಮೆಯ ಬಿಟ್ಟು ಜಂಗಮರಾಗಬೇಕು ಕಾಣಿರೋ ಮರುಳಗಳಿರಾ
ಇಂತಿ ಆರು ಷಡುಲೋಭದ ರುಚಿಯ ಹಿಂಗಿ
ಜಂಗಮವಾದುದಲ್ಲದೇ
ಭವ ಹಿಂಗದುಕಾಣಾಗುಹೇಶ್ವರಾ...

ಎಂಬ ದೃಷ್ಟಾಂತಗಳೊಂದಿಗೆ ಅಲ್ಲಮರು ತಿಳಿವು ನೀಡಿದರು. ಇದು ಅಲ್ಲಮರು ನೀಡಿದ ವಚನಸಾರ. ಜಂಗಮ ಎಂಬುದು ಜಾತಿವಾಚಕವಲ್ಲ ಅದು ಜ್ಞಾನದ ಸಂಕೇತ, ವೈರಾಗ್ಯದ ಶಿಖರ. ಸಾಧಿಸಿದವರು ಲಿಂಗವಂತರಲ್ಲದಿದ್ದರೂ ಜಂಗಮರು. ಸಾಧಿಸದವರು ಲಿಂಗವಂತರಾದರೂ ಜಂಗಮರಲ್ಲ. ಜ್ಞಾನ ಯುಕ್ತವಾದ ಭಕ್ತಿ, ಜ್ಞಾನಯುಕ್ತವಾದ ಕ್ರಿಯೆ ಇವು ಮುಖ್ಯ. ಜ್ಞಾನ ಮತ್ತು ಭಕ್ತಿ ಕ್ರಿಯೆಗಳು ಶಿಷ್ಯನಲ್ಲಿ ಉದಯವಾಗಬೇಕಲ್ಲದೇ ಹೊರಗಿನಿಂದ ಯಾರೂ ಕೊಡಲಾರರು ಎಂಬುದು ಪ್ರಭುಗಳ ಸಂದೇಶ.

ಪ್ರಭುಗಳ ದೃಷ್ಟಿಯಲ್ಲಿ ಬಸವಣ್ಣನವರು ವೀರಶೈವ ಧರ್ಮದಲ್ಲಿ ರೂಢಿಗೆ ತಂದಿದ್ದ ಷಟ್ಸ್ಥಲ ಪಂಚಾಚಾರಗಳ ಜೊತೆಯಲ್ಲಿಯೇ ಧಾರ್ಮಿಕ ನೆಲೆಗಳಲ್ಲಿ ರೂಪುಗೊಳ್ಳುತ್ತಿದ್ದ ಆಚರಣಾಂಶಗಳು ಕೇವಲ ಆಚರಣೆಗೆ ಮಾತ್ರ ಸೀಮಿತವಾಗಿ ಬಿಡುವ ಅಪಾಯವನ್ನು ಅಲ್ಲಮರು ತಮ್ಮ ವಚನಗಳಲ್ಲಿ ಹೇಳಿದ್ದಾರೆ.

ಪ್ರಸಾದಿ ಸ್ಥಲ, ಪ್ರಾಣಲಿಂಗ ಸ್ಥಲ, ಶರಣಸ್ಥಲ:

ಈ ಪ್ರತಿಯೊಂದು ಸ್ಥಲದ ಅನುಭಾವಿ ಆಶಯದ ಲಕ್ಷಣಗಳು ಕೇವಲ ಹೊರಗಿನ ಆಚರಣೆಯಾಗಿ ಬಿಡುವ ಅಪಾಯವನ್ನು ಹೇಳುತ್ತವೆ.

ಪ್ರಭುಗಳ ವಚನ:
ಒಳಗೆ ಹೊಲೆಯರಿಯದೇ
ಹೊರಗೆ ತೊಳೆದು ಕುಡಿಯುತ್ತಿದ್ದರಯ್ಯ
ಪಾದೋದಕ ಪ್ರಸಾದವರಿಯದೆ ಬರೀ ಬಟ್ಟೆಯಲ್ಲಿ
ಮುಳುಗುತ್ತಾರೆ ಗುಹೇಶ್ವರಾ

ವೀರಶೈವ ಧರ್ಮದ ಲಕ್ಷಣಗಳೆನ್ನಬಹುದಾದ ಎಲ್ಲ ಕ್ರಿಯೆಗಳನ್ನು ಒಂದಲ್ಲ ಒಂದು ಸ್ವರೂಪದಲ್ಲಿ ಬಾಹ್ಯ ತೋರಿಕೆಯ ಅಂಶಗಳಾಗಿರುವುದನ್ನು ಅಲ್ಲಮರು ಗುರುತಿಸುತ್ತಾರೆ. ಅಲ್ಲಮರು ತನ್ನೊಳಗಿನ ಬೆಳಕನ್ನು ಅರಿಯಲು ಯತ್ನಿಸುವ ವ್ಯಕ್ತಿಯ ಬೆಳವಣಿಗೆಗಾಗಿ ಹಂಬಲಿಸಿದ್ದಾರೆ. ಅವರ ನೇರ ವಿರೋಧ ಲಿಂಗದ ಬಗ್ಗೆ, ಗುರು–ಶಿಷ್ಯರ ಬಗ್ಗೆ ಅಲ್ಲಿನ ವೈಚಾರಾರದ ಬಗ್ಗೆ. ಕಾಯದ ಬಗ್ಗೆ ಷಟ್ಸ್ಥಲದ ಬಗ್ಗೆ ಇವೆಲ್ಲ ಆಚರಣೆಗಳೇ ವಿನಃ ನಿಜವಾದ ಭಕ್ತಿಯಲ್ಲ. ಹಾಗಾಗಿ ಶುಷ್ಕ ಆಚರಣೆಗಳನ್ನು ಅಲ್ಲಮರು ವಿರೋಧಿಸುತ್ತಾರೆ. ಹೀಗೆ ಬಾಹ್ಯ ತೋರಿಕೆಯ ಆಚರಣೆಗಳು ಮನುಷ್ಯನ ಆತ್ಮೋನ್ನತಿಗೆ ಸಹಾಯಕವಾಗುವ ಅಂಶಗಳಲ್ಲ ವೆಂಬುದನ್ನು ಗುರುತಿಸುತ್ತಾರೆ. ಪ್ರಭುಗಳ ದೃಷ್ಟಿಯಲ್ಲಿ ಲಿಂಗ ಎಂದರೆ ಲಿಂಗವನ್ನರಿಯದೆ ಏನನ್ನು ಅರಿದರೂ ಫಲವಿಲ್ಲ. ತಮ್ಮ ವಚನಗಳಲ್ಲಿ ತಿಳಿಸುವಂತೆ ಲಿಂಗವೆಂದರೆ "ಸದ್ವಿದ್ಯ, ಸುಜ್ಞಾನ, ಸತ್ಯ, ಪರಬ್ರಹ್ಮ, ಪರಶಿವ ಎಂಬ ಅರ್ಥ ಹೊರ ಹೊಮ್ಮುತ್ತದೆ. ತನ್ನ ತಾನರಿದವರಿಗೆ ಅರಿವೇ ಗುರು ಎಂಬ ಮುಕ್ತಾಯಕ್ಕನ ಮಾತು ಅದನ್ನೇ ಹೇಳುತ್ತದೆ. ಸಿದ್ದರಾಮರ ಪ್ರಕಾರ ಆತ್ಮಾನುಸಂಧಾನ ಅರ್ಥಾತ್ ಲಿಂಗಾಂಗ ಸಾಮರಸ್ಯ ಕೇವಲ ತೋರಿಕೆಯ ಆಚಾರ ಸಂಪ್ರದಾಯಗಳಿಂದ ಪ್ರಾಪ್ತವಾಗದೆಂದು ಹೇಳುತ್ತಾರೆ. ಅಕ್ಕಮಹಾದೇವಿ ಹೇಳಿರುವಂತೆ ತನ್ನ ತಾನರಿದರೆ ತಾನಾದರೆ ಚನ್ನಮಲ್ಲಿಕಾರ್ಜುನ ಲಿಂಗ ತಾನೇ ಬೇರಲ್ಲ.

12ನೇ ಶತಮಾನದ ಶರಣರ ಕ್ರಾಂತಿ:

ಶರಣರು ತಮ್ಮ ಕಾಲಕ್ಕಿಂತ ಮುಂದೆ ಹೋಗಿ ಆಲೋಚಿಸಿದ್ದರಿಂದ ಮತ್ತು ಅನುಷ್ಠಾನಕ್ಕೆ ಇಳಿಸಿದ್ದರಿಂದ ಅದಕ್ಕೆಲ್ಲ ಆ ಯುಗ ಇನ್ನೂ ಪಕ್ವವಾಗಿಲ್ಲವಾಗಿದ್ದರಿಂದ ಆ ಕ್ರಾಂತಿಯ ಯಶಸ್ಸು ಅಲ್ಪಾವಧಿಯಾಗಿರುವುದು ಅನಿವಾರ್ಯವಾಯಿತು.

ವಚನ ಸಾಹಿತ್ಯದ ಮೌಲ್ಯಗಳು:

ಒಂದು ಕಡೆ ಪುರೋಹಿತಶಾಹಿಯನ್ನು ಪ್ರತಿಭಟಿಸಿ ಇನ್ನೊಂದು ಕಡೆ ರಾಜಾಶ್ರಯವನ್ನು ವಿರೋಧಿಸಿ ಅನಿಷ್ಟ ಜಡ ವ್ಯವಸ್ಥೆಯನ್ನು ಛಿದ್ರಗೊಳಿಸುವ ಈ ಮೂಲಕ ಜಗತ್ ಶೋಷಣೆ ಸರ್ವಸ್ವ ಪ್ರಕಾರಗಳಿಗೂ ಪೂರ್ಣವಿರಾಮ ಹಾಕಿ ಸಕಲ ಜೀವಾತ್ಮರಿಗೆ ಲೇಸನ್ನು, ಸರ್ವೋದಯವನ್ನು ಸಾಧಿಸುವ ಆಶಯ ವಚನಕಾರರಿಗಿತ್ತು. ಸಮಾನತೆಯ ಅಡಿಪಾಯದ ಮೇಲೆ ನಿಂತ ನವ ಸಮಾಜವೊಂದರ ನಿರ್ಮಾಣದ ಗುರಿ ಅವರದ್ದಾಗಿತ್ತು. ದಯವೇ ಧರ್ಮದ ಮೂಲವಯ್ಯ ಸಂಸಾರದಲ್ಲಿ ಇದ್ದುಕೊಂಡೇ ಧರ್ಮವ ನ್ಯಾಚರಿಸಿ ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು, ದೇಹವೇ ದೇಗುಲ ಎಂದು ದೇವಾಲಯಗಳ ನಿರ್ಮಾಣ ಇವರ ಕಾಲದಲ್ಲಿ ಕ್ಷೀಣವಾಗಿತ್ತು. ಮೊದಲಿಗೆ ಅವರು ಮಾಡಿದ್ದು ಧರ್ಮದ ಶುದ್ಧೀಕರಣ, ಅನಂತರ ವ್ಯಕ್ತಿ, ಅನಂತರ ಸಮಾಜದ ಶುದ್ಧೀಕರಣ. ಶರಣರು ಜಾತಿಗೆ ಎಂದೂ ಪ್ರಾತಿನಿಧ್ಯತೆ ನೀಡದೇ ನೀತಿಗೆ ನೀಡಿದರು.

ವಚನ ಚಳುವಳಿ: ಶರಣರು ಜನ ಜಾಗೃತಿಗಾಗಿ ಸಮಾಜ ಪರಿವರ್ತನೆಗಾಗಿ ಹೊಸ ಮಾಧ್ಯಮವನ್ನು ಕಂಡು ಕೊಂಡರು. ಅದೇ ವಚನ ಸಾಹಿತ್ಯ. ಗದ್ಯ ಪದ್ಯಗಳ ಸಮನ್ವಯ ಎನ್ನಬಹುದಾದ ಅಪರೂಪದ ಮಾರ್ಗ. ಕನ್ನಡ ಭಾಷೆಯ ಸಮಸ್ತ ಸೂಕ್ತ ಶಕ್ತಿಯನ್ನು ಸರಳ ರೂಪದಲ್ಲಿ ವಚನಗಳ ಗಾಯನ ಮಾಡುವುದರ ಮೂಲಕ ಬಳಸಿಕೊಂಡರು. ಅತೀಂದ್ರಿಯವಾದ ಆಧ್ಯಾತ್ಮವನ್ನು ಇಂದಿನ ಜನಕ್ಕೆ ಉಣಬಡಿಸಿದ್ದಾರೆ. ಪ್ರತಿಯೊಂದು ವಚನದ ಅಂತ್ಯದಲ್ಲಿ ಆಯಾ ವಚನಕಾರರ ಅಂಕಿತವಿರುವುದು ವಿಶೇಷ. ಇಷ್ಟ ದೈವದ ಆಣೆಯಾಗಿ ನಾವು ಹೇಳುತ್ತಿರುವುದು ಸತ್ಯ ಎಂದು ಪ್ರಾಮಾಣೀಕರಿಸಿರುವುದು ಅವರ ನೇರವಂತಿಕೆಗೆ ಸಾಕ್ಷಿಯಾಗಿದೆ. ವಚನಗಳಲ್ಲಿ ತಾತ್ವಿಕ ಜೀವನದ ಚಿಂತನೆಗಳಿವೆ ಸಾಮಾಜಿಕ ಜೀವನದ

ಇತಿಹಾಸವಿದೆ. ವಿಶ್ವಮಾನವ ದರ್ಶನವಿದೆ. ಹೀಗೇ ವಚನಗಳಲ್ಲಿ ಮೌಲ್ಯಗಳು ವೃದ್ಧಿಯಾಗುತ್ತಲೇ ಹೋಗುತ್ತದೆ.

ವೀರಶೈವಧರ್ಮ ಸಿದ್ಧಾಂತರ ಹೊಳಹುಗಳು:

ಆಸರೆ ಕೊಡುವ ಮನೆಯನ್ನು ಹಸನಾಗಿಟ್ಟು ಕೊಳ್ಳಬೇಕಾದದ್ದು ಆಸರೆಯನ್ನು ಅನುಭವಿಸುವವನ ಧರ್ಮ ಅಂತೆಯೇ ತನ್ನನ್ನು ಸಾಕುವ ನಿಸರ್ಗವನ್ನು ಹಿಂಸಿಸದೆ, ಹಾಳುಗೆಡವದೆ, ಅತಿಕ್ರಮಿಸದೆ ಸುರಕ್ಷಿತವಾಗಿಟ್ಟುಕೊಳ್ಳಬೇಕಾದುದು ಮಾನವನ ನೈತಿಕ ಕರ್ತವ್ಯವಾಗಿದೆ. ತನ್ನ ಬದುಕಿಗೆ ನೆರವಾಗುವ ಸಮಾಜಕ್ಕೆ ಸಮರ್ಪಿಸಿಕೊಳ್ಳಬೇಕಾದದ್ದು ಕೃತಜ್ಞನ ಲಕ್ಷಣ, ಕಾಯಕ, ದಾಸೋಹಗಳು ಮಾನವನ ಸಕಲ ಅಗತ್ಯಗಳನ್ನು ಮಾತ್ರವಲ್ಲ ಅವನ ಋಣ ಹೊಣೆಗಾರಿಕೆಯನ್ನು ಪೂರೈಸುತ್ತವೆ.

ಭಾಷಾಕ್ರಾಂತಿ: ಕ್ರಾಂತಿಯ ಮುನ್ನಡೆಯಲ್ಲಿ ಸಮರ್ಥ ಭಾಷಾ ಮಾಧ್ಯಮವನ್ನು ಚಾಲ್ತಿಗೆ ತಂದವರು ಬಸವಣ್ಣನವರು. ಕನ್ನಡ ಬುದ್ಧಿಯ ಭಾಷೆಯಾಗುತ್ತದೆ, ಧರ್ಮದ ಭಾಷೆಯಾಗುತ್ತದೆ. ಅದರ ಪೂರ್ಣ ಪ್ರಯೋಗದಿಂದ ಮನುಷ್ಯರಿಗೆ ಮಾತು ಬರುತ್ತದೆ. ಹೆಳವನಿಗೆ ಕಾಲು ಬರುತ್ತದೆ ದೀನ ದಲಿತರು ಆತ್ಮ ಶ್ರೀಮಂತರಾಗುತ್ತಾರೆ.

ವಚನ ಸಾಹಿತ್ಯ ಕನ್ನಡದ ಅಮೂಲ್ಯ ಅಪೂರ್ವ ಆಸ್ತಿ. ಸಾಮಾಜಿಕ ಶ್ರೇಯಸ್ಸು ಧರ್ಮದ ಗುರಿಯಾಗಬೇಕು. ಸಾಮಾಜಿಕ ಬದ್ಧತೆ ಸಾಹಿತ್ಯದ ಬದುಕಾಗಬೇಕು ಎನ್ನುವ ಆಶಯ ವಚನಕಾರರದ್ದು. ಬದುಕಿನಿಂದ ಬದುಕಿಗಾಗಿ ಉದ್ಭವಿಸಿದ ವಾಸ್ತವ ಸಾಹಿತ್ಯದ ಹಸನಾದ ಬದುಕೇ ಅದರ ಗುರಿ. ಪಾಪ–ಪುಣ್ಯಗಳ ಕಲ್ಪನೆಗಳಿಂದ ಬದುಕನ್ನು ಪಾರು ಮಾಡಿದ ಮಣ್ಣಿನ ಸಾಹಿತ್ಯ.

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರು ಹಳಿಯಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ

ಎಂಬ ವಚನ ಬಸವಣ್ಣನವರ ವಿಚಾರ ಮತಿಯ ಈ ಸಪ್ತ ಸೂತ್ರ ಅಶಾಂತಿಯ ಜಗತ್ತಿನ ದಿವ್ಯ ಮಂತ್ರವಾಗಬೇಕಿದೆ.

ಬಸವಾದಿ ಶಿವ ಶರಣರಿಂದ ಪರಿಷ್ಕರಿಸಲ್ಪಟ್ಟ ಆದಿ ವೀರಶೈವ ಧರ್ಮ ವಿಶ್ವ ಧರ್ಮಾಭಿದಾನಕ್ಕೆ ಸರ್ವ ಯೋಗ್ಯವಾಗಿ ಜಗತ್ತಿನ ಹಲವು ಧರ್ಮಗಳ ಆದರ್ಶಪ್ರಾಯವಾಗಿ ವಿಶ್ವ ಸಂಸ್ಕೃತಿಗೆ ಅವರು ನೀಡಿರುವ ಕಾಣಿಕೆ ಚಿರಸ್ಮರಣೀಯವಾಗಿದೆ. ವೀರಶೈವ ಧರ್ಮಜಾತಿ ವರ್ಗ ಭೇದಗಳನ್ನು ಮಾತ್ರವಲ್ಲ ಲಿಂಗಭೇದವನ್ನು ಸಹ ತೊಲಗಿಸಿ ಸರ್ವ ಸಮಾನತಾ ಸಮಾಜವನ್ನು ನಿರ್ಮಿಸಲು ಪ್ರಯತ್ನಿಸುತ್ತಿದೆ. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲ ಒಂದೇ ಎಂಬುದು ಬಸವಣ್ಣನವರ ಸಂಕಲ್ಪ. ಆವ ಕುಲವಾದೊಡೇನು ಶಿವಲಿಂಗವಿದ್ದವನು ಕುಲಜನು, ಕಾರ್ಯ ಯಾವುದೇ ಆಗಲಿ ಎಲ್ಲರೂ ಸಮ ಎಂದು ಘೋಷಿಸಿ ಅವರ ಕುಲಭೇದವನ್ನು ತೊಡೆಯುತ್ತಾ ಹೊಲೆಯುಂಟೆ ಲಿಂಗವಿದ್ದಡೆ ಎಲ್ಲ ಎಂದವರು 12ನೇ ಶತಮಾನದಲ್ಲಿಯೇ ಅಸ್ಪೃಶ್ಯತಾ ನಿರ್ಮೂಲನಕ್ಕೆ ಸಂಕಲ್ಪ ಮಾಡಿದ್ದು ಅದ್ಭುತವೆಂದೇ ಹೇಳಬೇಕು. ಮಾನವೀಯತೆಗೆ ಅಗ್ರಪಟ್ಟ ದೊರೆಯಬೇಕೆಂಬುದೇ ವೀರಶೈವ ಧರ್ಮದ ಪ್ರಧಾನ ಧ್ಯೇಯ. ಮಾನವನ ಸಕಲ ಕರ್ಮಗಳಲ್ಲಿ ಮಾನವೀಯತೆ ತಲೆದೋರಿದಾಗ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲೆಸಿದಂತಾಗುತ್ತದೆ ಎಂಬುದು ಶರಣರ ಆಶಯ.

ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಜಗತ್ತಿನಲ್ಲೇ ಮೊಟ್ಟ ಮೊದಲು ಹೋರಾಟ ನಡೆಸಿದ ಯಶಸ್ಸು ಬಸವಾದಿ ಶರಣರಿಗೆ ಸಲ್ಲಬೇಕು. ಹೆಣ್ಣು–ಗಂಡು ಪರಸ್ಪರ ಸಮಾನರು. ಅವಳಿಗೂ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ವೈಚಾರಿಕ ಸ್ವಾತಂತ್ರ್ಯ ಮಾತ್ರವಲ್ಲ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದ ಗೌರವ ವೀರಶೈವ ಧರ್ಮಕ್ಕೆ ಸೇರಬೇಕು.

ಮಹಿಳೆಯರು ಲಿಂಗಧರಿಸಿ ಅನುಭವ ಮಂಟಪದ ಚರ್ಚೆಯಲ್ಲಿ ಭಾಗವಹಿಸಿ ಅಕ್ಕಮಹಾದೇವಿ, ಮುಕ್ತಾಯಕ್ಕ ಹೀಗೇ ಸುಮಾರು 40ಕ್ಕೂ ಅಧಿಕ ಮಹಿಳಾ ವಚನಕಾರ್ತಿಯರನ್ನು ವಿಶೇಷವಾಗಿ ಸತ್ಯಕ್ಕ, ಮುಕ್ತಾಯಕ್ಕರನ್ನು ಉದಾಹರಿಸಬಹುದು.

ಹನ್ನೆರಡನೇ ಶತಮಾನದ ಶರಣರ ನೀತಿ (ನುಡಿ ಶರಣ, ನಡೆ ಶರಣ):

ಪಂಚೇಂದ್ರಿಯಗಳ ಹತೋಟಿ, ಅರಿಷಡ್ವರ್ಗ ಗಳನ್ನು ಗೆದ್ದು ಅರಿವಿನ ಗುರುವಾಗಿ ನನ್ನ ಆತ್ಮಸಾಕ್ಷಿ ಧ್ಯೇಯ ನಿಷ್ಠೆ ಪರವಾಗಿ ನಡೆದುಕೊಂಡರೆ ಆತನಲ್ಲಿ ಸ್ವದೈವತ್ವವಿದೆಯೆಂದು ಕರೆಯುವುದು ಇಂತಹ ಸ್ವಭಾವ ಉಳ್ಳವರಿಂದ ನೀತಿ ಬದುಕಲು ಸಾಧ್ಯ. ಸತ್ಯವ ನುಡಿದರೆದೇವಲೋಕ ಮಿಥ್ಯವ ನುಡಿದರೆ ನರಕ, ದಯವೇ ಸಕಲ ಪ್ರಾಣಿಗಳಿಗೂ, ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ. ಲಿಂಗ ಗಂಭೀರದಿಂದ ಬಂದ ಸತ್ಯ ಪ್ರೇಮ, ಶಾಂತಿ, ದಯೆ, ಸಹಾಯ ಉಪಕಾರ ನಡೆ ನುಡಿ ನಿರ್ಮಲ ನಿರಹಂಭಾವ. ಸದ್ವಿನಯ, ಸದಾಚಾರ ಸದ್ವರ್ತನೆಗಳು ಮಾನವ ಲಿಂಗವನ್ನು ಮಹಾಲಿಂಗಕ್ಕೆ ಒಯ್ದು ಮುಟ್ಟಿಸುವ ಶಿವಪೂಜೆ. ಪ್ರಭುಗಳ ಒಂದು ವಚನ ಹೀಗೆ ಹೇಳಿದೆ. 'ತಮ್ಮ ಹೃದಯ ಕಮಲದಲ್ಲಿ ಮೂರ್ತಿಗೊಂಡಿದ್ದ ಪ್ರಾಣೇಶ್ವರನ ಪೂಜೆ ಮಾಡುವಾಗ ಅವರ ಪೂಜಾ ಸಾಮಗ್ರಿಯಲ್ಲಿ ಕ್ಷಮೆಯೇ ಅಭಿಷೇಕ ಜಲ, ವೈರಾಗ್ಯದ ಹೂಮಾಲೆ, ಸಮಾಧಿ ಸಂಪತ್ತಿನ ಗಂಧ, ವಿವೇಕದ ವಸ್ತ್ರ, ವಿಶ್ವಾಸದ ರೂಪ, ಸತ್ಯದ ಆಭರಣ ನಿರಹಂಕಾರದ ಅಕ್ಷತೆ ಇವು ಇಲ್ಲದಿದ್ದಲ್ಲಿ ಹೂವು ಲಿಂಗವಾಗದು.'– ಸ್ವರ್ಗ ನರಕದ ಪರಿಕಲ್ಪನೆ, ಸಮಾಜದ ಹಿತಚಿಂತನೆ ಧರ್ಮದಲ್ಲಿ ಒಂದು ಮುಖ್ಯ ಭಾಗ. ಹೀಗಾಗಿ ಸಮಾಜ ತನ್ನ ಸದಸ್ಯರ ನಡವಳಿಕೆಗೆ ಒಂದು ಕಟ್ಟುಪಾಡನ್ನು ವಿಧಿಸುತ್ತದೆ. ಮೀರಿದರೆ ಬಹಿಷ್ಕಾರದ ದಂಡ ವಿಧಿಸುತ್ತಿತ್ತು. ಆಕಸ್ಮಿಕವಾಗಿ ದಂಡವೇ ಇಹಲೋಕದಲ್ಲಿ ಆಗದಿದ್ದರೆ ಪರಲೋಕದಲ್ಲಿ ಆಗುತ್ತದೆ ಎಂಬ ನಂಬಿಕೆ ಇದೆ. ಆದುದರಿಂದ ಎಲ್ಲರೂ ಸದಾಚಾರ, ಸದ್ವರ್ತನೆಗಳಿಂದ ಇರತಕ್ಕದ್ದು. ಅಂತರಂಗ ಶುದ್ಧಿಯನ್ನು ಪಡೆಯತಕ್ಕದ್ದು ಎಂಬುದು ವಚನಕಾರರ ಮಾತು. ಯಾವುದನ್ನು ಉಪನಿಷತ್ತುಗಳು ವಿಶ್ವ ಕಲ್ಯಾಣಕ್ಕಾಗಿ ಉದ್ಘೋಷಿಸಿದವೋ ಆ ಸತ್ಯಂ ವಧ, ಧರ್ಮಂಚರ ಎಂಬುದನ್ನು ವಚನ ಧರ್ಮ ಸಾರುತ್ತದೆ. ಪ್ರತಿಯೊಬ್ಬರೂ ತಮ್ಮ ಡೊಂಕನ್ನು ಸರಿಪಡಿಸಿಕೊಂಡರೆ ಲೋಕಕ್ಕೆ ಎಲ್ಲಿಯದು ಡೊಂಕು?.

ಹೀಗೆ 12ನೇ ಶತಮಾನದಲ್ಲಿ ವೀರಶೈವ ಧರ್ಮ ಸಮೃದ್ಧಿಯಾಗಿ ಬೆಳೆದು ಕನ್ನಡ ಸಾಹಿತ್ಯ ಚರಿತ್ರೆಗೆ ಅಪಾರ ಕೊಡುಗೆಯನ್ನು ನೀಡಿತು. ಆದರೆ 12ನೇ ಶತಮಾನದ ಕೊನೆಯ ಭಾಗದಲ್ಲಿ ಬಸವಣ್ಣನವರು ನಡೆಸಿದ ಸಾಮಾಜಿಕ ಧಾರ್ಮಿಕ ಕ್ರಾಂತಿ ನಡೆದು ಕೊನೆಯಲ್ಲಿ ರಕ್ತಕ್ರಾಂತಿಯೂ ನಡೆದು ಬಿಜ್ಜಳನ ಕೊಲೆ, ಶರಣರ ಸಾಮೂಹಿಕ ಕಗ್ಗೊಲೆಗಳಾದವು. ಅನುಭವ ಮಂಟಪ ಅಂತ್ಯ ಕಂಡಿತು.

ಕ್ರಾಂತಿಯ ನಂತರ ರಾಜ್ಯದ ಮೂಲೆ ಮೂಲೆಗಳಿಗೆ ಚದುರಿದ ಶರಣರು ಮಠ ಮಾನ್ಯಗಳನ್ನು ಕಟ್ಟಿಕೊಂಡು ಅಳಿದುಳಿದ ಕೈಗೆ ಸಿಕ್ಕ ತಾಳೆಗರಿಗಳನ್ನು ಮೂಟೆ ಕಟ್ಟಿಕೊಂಡು ನಡೆದರು.

ಸುಮಾರು 16ನೇ ಶತಮಾನದಲ್ಲಿ ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಸಮಗ್ರ ವೀರಶೈವ ಸಾಹಿತ್ಯದ ಪರಿಷ್ಕರಣೆ ಯುದ್ಧೋಪಾದಿಯಲ್ಲಿ ನಡೆಯಿತು. ಶೂನ್ಯ ಸಂಪಾದನೆಗಳು, ಹರಿಹರ ರಾಘವಾಂಕ ಮುಂತಾದ ಕವಿಗಳಿಂದಾಗಿ ಕನ್ನಡ ಸಾಹಿತ್ಯ ಚರಿತ್ರೆಗೆ ಹೊಸ ಆಯಾಮ ದೊರಕಿತು.

ಆಕರಕೃತಿ:

1. ಶತಮಾನದ ಸಾಹಿತ್ಯ ವಿಮರ್ಶೆ
ಸಂಪಾದಕರು :ಎಚ್.ಎಸ್. ರಾಘವೇಂದ್ರರಾವ್

2. ಅಲ್ಲಮಪ್ರಭುಗಳ ವಚನಗಳು– ಡಾ. ಎಲ್. ಬಸವರಾಜ್

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಗ್ರಾಮೀಣ ಮಹಿಳೆಯ ಬದುಕು ಮತ್ತು ಸಾಹಿತ್ಯ

ಡಾ. ಆನಂದಕುಮಾರ ಎಂ ಜಕ್ಕಣ್ಣವರ
ಸಹಾಯಕ ಪ್ರಾಧ್ಯಾಪಕರು,
ಶಿವಾನಂದ ಮಹಾವಿದ್ಯಾಲಯ, ಕಾಗವಾಡ
Corresponding Author –ಡಾ. ಆನಂದಕುಮಾರ ಎಂ ಜಕ್ಕಣ್ಣವರ

DOI - 10.5281/zenodo.23528260

ಸಾರಾಂಶ:

ಗ್ರಾಮೀಣ ಸಮಾಜದ ರಚನೆ, ಕುಟುಂಬ ವ್ಯವಸ್ಥೆ, ಕೃಷಿ ಆಧಾರಿತ ಆರ್ಥಿಕತೆ, ಜಾತಿ–ವರ್ಗ ವ್ಯವಸ್ಥೆ, ಸಂಪ್ರದಾಯ, ಸಂಸ್ಕೃತಿ ಹಾಗೂ ಲಿಂಗಾಧಾರಿತ ಸಾಮಾಜಿಕ ನಿರೀಕ್ಷೆಗಳು ಗ್ರಾಮೀಣ ಮಹಿಳೆಯ ಬದುಕಿನ ಮೇಲೆ ಆಳವಾದ ಪ್ರಭಾವವನ್ನು ಬೀರುತ್ತವೆ. ಮಹಿಳೆ ಕುಟುಂಬದ ಆಂತರಿಕ ಜವಾಬ್ದಾರಿಗಳನ್ನು ನಿರ್ವಹಿಸುವುದರ ಜೊತೆಗೆ ಕೃಷಿ, ಪಶುಪಾಲನೆ, ಕೂಲಿ, ಸಣ್ಣ ಉದ್ಯೋಗಗಳು ಹಾಗೂ ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರೂ, ಆಕೆಯ ಶ್ರಮಕ್ಕೆ ಅನೇಕ ಸಂದರ್ಭಗಳಲ್ಲಿ ಸಮರ್ಪಕವಾದ ಸಾಮಾಜಿಕ ಮತ್ತು ಆರ್ಥಿಕ ಮೌಲ್ಯ ದೊರೆಯುವುದಿಲ್ಲ. ಶಿಕ್ಷಣದ ಕೊರತೆ, ಆರ್ಥಿಕ ಅವಲಂಬನೆ, ಆರೋಗ್ಯ ಸಮಸ್ಯೆಗಳು, ಬಾಲ್ಯವಿವಾಹ, ಕೌಟುಂಬಿಕ ಹಿಂಸೆ, ಆಸ್ತಿಯ ಹಕ್ಕಿನ ಕೊರತೆ, ಜಾತಿ–ವರ್ಗದ ಅಸಮಾನತೆ ಮುಂತಾದವು ಗ್ರಾಮೀಣ ಮಹಿಳೆಯ ಬದುಕಿನ ಪ್ರಮುಖ ಸವಾಲುಗಳಾಗಿವೆ.

ಕನ್ನಡ ಸಾಹಿತ್ಯವು ಗ್ರಾಮೀಣ ಮಹಿಳೆಯ ಬದುಕಿನ ಈ ಸಂಕೀರ್ಣ ಆಯಾಮಗಳನ್ನು ವಿವಿಧ ಸಾಹಿತ್ಯ ಪ್ರಕಾರಗಳ ಮೂಲಕ ದಾಖಲಿಸಿದೆ. ಜನಪದ ಗೀತೆಗಳಿಂದ ಹಿಡಿದು ವಚನ ಸಾಹಿತ್ಯ, ಕಾವ್ಯ, ಸಣ್ಣಕಥೆ, ಕಾದಂಬರಿ ಹಾಗೂ ಸಮಕಾಲೀನ ಮಹಿಳಾ ಸಾಹಿತ್ಯದವರೆಗೆ ಗ್ರಾಮೀಣ ಮಹಿಳೆಯ ದುಃಖ, ಶ್ರಮ, ತ್ಯಾಗ, ಪ್ರತಿಭಟನೆ, ಆತ್ಮಗೌರವ ಮತ್ತು ಬದುಕಿನ ಕನಸುಗಳು ಅಭಿವ್ಯಕ್ತಗೊಂಡಿವೆ. ಆರಂಭಿಕ ಸಾಹಿತ್ಯದಲ್ಲಿ ಮಹಿಳೆಯನ್ನು ಮುಖ್ಯವಾಗಿ ಕುಟುಂಬ ಮತ್ತು ಸಾಮಾಜಿಕ ಸಂಬಂಧಗಳ ಹಿನ್ನೆಲೆಯಲ್ಲಿ ಚಿತ್ರಿಸಿದರೆ, ಆಧುನಿಕ ಮತ್ತು ಸಮಕಾಲೀನ ಸಾಹಿತ್ಯದಲ್ಲಿ ಮಹಿಳೆಯೇ ತನ್ನ ಬದುಕಿನ ಅನುಭವವನ್ನು ಹೇಳುವ ಸಕ್ರಿಯ ಧ್ವನಿಯಾಗಿ ಕಾಣಿಸಿಕೊಳ್ಳುತ್ತಾಳೆ. ಹೀಗಾಗಿ ಗ್ರಾಮೀಣ ಮಹಿಳೆಯ ಸಾಹಿತ್ಯಿಕ ಚಿತ್ರಣವು ಕೇವಲ ದುಃಖದ ದಾಖಲೆಯಲ್ಲ; ಅದು ಅಸ್ತಿತ್ವ, ಸ್ವಾಭಿಮಾನ, ಸಮಾನತೆ ಮತ್ತು ಸಾಮಾಜಿಕ ಪರಿವರ್ತನೆಯ ಆಶಯಗಳನ್ನು ಒಳಗೊಂಡಿರುವ ಪ್ರತಿರೋಧದ ದಾಖಲೆಯಾಗಿದೆ.

ಪ್ರಮುಖ ಪದಗಳು:ಗ್ರಾಮೀಣ ಮಹಿಳೆ, ಲಿಂಗ ತಾರತಮ್ಯ, ಮಹಿಳಾ ಸಂವೇದನೆ, ಕನ್ನಡ ಸಾಹಿತ್ಯ, ಜನಪದ ಸಾಹಿತ್ಯ, ಸ್ತ್ರೀವಾದ, ಪಿತೃಪ್ರಧಾನ ವ್ಯವಸ್ಥೆ, ಕೃಷಿ, ಮಹಿಳಾ ಅಸ್ಮಿತೆ, ಸಾಮಾಜಿಕ ಪರಿವರ್ತನೆ.

ಪ್ರಸ್ತಾವನೆ:

ಭಾರತೀಯ ಸಮಾಜದ ಬಹುಮುಖ್ಯ ಭಾಗವು ಗ್ರಾಮೀಣ ಬದುಕಿನೊಂದಿಗೆ ಸಂಬಂಧ ಹೊಂದಿದೆ. ಗ್ರಾಮೀಣ ಜೀವನವು ಕೃಷಿ, ಪ್ರಕೃತಿ, ಕುಟುಂಬ, ಸಮುದಾಯ ಮತ್ತು ಸಂಪ್ರದಾಯಗಳೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದೆ. ಈ ವ್ಯವಸ್ಥೆಯಲ್ಲಿ ಮಹಿಳೆಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮನೆಯ ನಿರ್ವಹಣೆಯಿಂದ ಹಿಡಿದು ಕೃಷಿ ಚಟುವಟಿಕೆಗಳವರೆಗೆ ಆಕೆ ನಿರಂತರವಾಗಿ ದುಡಿಯುತ್ತಾಳೆ. ಆದರೆ ಮಹಿಳೆಯ ಈ ಶ್ರಮವು ಬಹುತೇಕ 'ಕುಟುಂಬದ ಕರ್ತವ್ಯ' ಅಥವಾ 'ಸ್ವಾಭಾವಿಕ ಜವಾಬ್ದಾರಿ' ಎಂದು ಪರಿಗಣಿಸಲ್ಪಡುವುದರಿಂದ ಅದರ ಆರ್ಥಿಕ ಹಾಗೂ ಸಾಮಾಜಿಕ ಮೌಲ್ಯ ಗುರುತಿಸಲ್ಪಡುವುದು ಕಡಿಮೆ. ಹೀಗಾಗಿ ಗ್ರಾಮೀಣ ಮಹಿಳೆಯ ಬದುಕನ್ನು ಕೇವಲ ಮನೆಯೊಳಗಿನ ಬದುಕು ಎಂದು ಅರ್ಥೈಸಲು ಸಾಧ್ಯವಿಲ್ಲ. ಆಕೆ ಹೊಲದಲ್ಲಿ

ದುಡಿಯುತ್ತಾಳೆ, ಜಾನುವಾರುಗಳನ್ನು ಸಾಕುತ್ತಾಳೆ, ನೀರು ಮತ್ತು ಉರುವಲು ಸಂಗ್ರಹಿಸುತ್ತಾಳೆ, ಮಕ್ಕಳನ್ನು ಬೆಳೆಸುತ್ತಾಳೆ, ವೃದ್ಧರನ್ನು ನೋಡಿಕೊಳ್ಳುತ್ತಾಳೆ ಮತ್ತು ಅನೇಕ ಸಂದರ್ಭಗಳಲ್ಲಿ ಕುಟುಂಬದ ಆರ್ಥಿಕ ವ್ಯವಸ್ಥೆಯನ್ನೂ ನಿರ್ವಹಿಸುತ್ತಾಳೆ. ಆದರೂ ನಿರ್ಧಾರ ತೆಗೆದುಕೊಳ್ಳುವ ಹಕ್ಕು, ಆಸ್ತಿ ಮೇಲಿನ ಹಕ್ಕು, ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಸ್ವಾತಂತ್ರ್ಯದ ವಿಷಯಗಳಲ್ಲಿ ಅಸಮಾನತೆಯನ್ನು ಎದುರಿಸುತ್ತಾಳೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವು ಗ್ರಾಮೀಣ ಮಹಿಳೆಯ ಬದುಕನ್ನು ಹೇಗೆ ದಾಖಲಿಸಿದೆ? ಆಕೆಯ ನೋವು, ಶ್ರಮ, ಕನಸು ಮತ್ತು ಪ್ರತಿರೋಧಗಳು ಸಾಹಿತ್ಯದಲ್ಲಿ ಯಾವ ರೀತಿಯಲ್ಲಿ ವ್ಯಕ್ತವಾಗಿವೆ? ಮಹಿಳಾ ಬರಹಗಾರ್ತಿಯರ ಪ್ರವೇಶದಿಂದ ಗ್ರಾಮೀಣ ಮಹಿಳೆಯ ಚಿತ್ರಣದಲ್ಲಿ ಯಾವ ಬದಲಾವಣೆಗಳು ಸಂಭವಿಸಿವೆ? ಎಂಬ ಪ್ರಶ್ನೆಗಳು ಸಂಶೋಧನೆಗೆ ಮಹತ್ವದ್ದಾಗಿವೆ.

ಗ್ರಾಮೀಣ ಮಹಿಳೆಯ ಬದುಕಿನ ಸಾಮಾಜಿಕ ಹಿನ್ನೆಲೆ:

ಗ್ರಾಮೀಣ ಮಹಿಳೆಯ ಬದುಕು ಕುಟುಂಬ ಮತ್ತು ಸಮುದಾಯದ ರಚನೆಯೊಂದಿಗೆ ನಿಕಟವಾಗಿ ಸಂಬಂಧಿಸಿದೆ. ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬದ ಪ್ರಮುಖ ನಿರ್ಧಾರಗಳಲ್ಲಿ ಪುರುಷನ ಪ್ರಾಬಲ್ಯ ಹೆಚ್ಚಾಗಿರುವುದು ಸಾಮಾನ್ಯ. ಮಹಿಳೆಯ ಪಾತ್ರವನ್ನು ಹೆಂಡತಿ, ತಾಯಿ, ಸೊಸೆ ಅಥವಾ ಮಗಳ ಸಂಬಂಧಗಳ ಮೂಲಕ ವ್ಯಾಖ್ಯಾನಿಸುವ ಪ್ರವೃತ್ತಿಯೂ ಕಂಡುಬರುತ್ತದೆ. ಮಹಿಳೆಯ ವೈಯಕ್ತಿಕ ಆಸೆ–ಆಕಾಂಕ್ಷೆಗಳಿಗಿಂತ ಕುಟುಂಬದ ಗೌರವ, ಸಂಪ್ರದಾಯ ಮತ್ತು ಸಾಮಾಜಿಕ ನಿರೀಕ್ಷೆಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ವಿವಾಹ, ಮಾತೃತ್ವ, ಕುಟುಂಬದ ಜವಾಬ್ದಾರಿ, ಮನೆಯ ಕೆಲಸ ಮುಂತಾದವು ಮಹಿಳೆಯ ಜೀವನದ ಪ್ರಮುಖ ಅಂಶಗಳಾಗಿ ರೂಪುಗೊಳ್ಳುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಕೃಷಿ ಕಾರ್ಮಿಕರಾಗಿ, ಸ್ವಸಹಾಯ ಸಂಘಗಳ ಸದಸ್ಯರಾಗಿ, ಸಣ್ಣ ಉದ್ಯಮಿಗಳಾಗಿ ಮತ್ತು ವಿವಿಧ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆದಾಗ್ಯೂ, ವೇತನದ ಕೆಲಸ ಮತ್ತು ವೇತನವಿಲ್ಲದ ಮನೆಯ ಕೆಲಸಗಳ ನಡುವೆ ಸ್ಪಷ್ಟವಾದ ಅಸಮಾನತೆ ಇದೆ. ಮಹಿಳೆಯ ಶ್ರಮ ಕುಟುಂಬದ ಆರ್ಥಿಕತೆಯನ್ನು ಬೆಂಬಲಿಸಿದರೂ, ಆಕೆಯ ನಿರ್ಧಾರಾಧಿಕಾರ ಮತ್ತು ಸ್ವತಂತ್ರ ಆದಾಯದ ಅವಕಾಶಗಳು ಎಲ್ಲ ಸಂದರ್ಭಗಳಲ್ಲಿಯೂ ಸಮಾನವಾಗಿರುವುದಿಲ್ಲ.

ಉದಾ: ಕಂಬಾರರ– ಸಿಂಗಾರೆವ್ವ

ಕೃಷಿ ಮತ್ತುಗ್ರಾಮೀಣ ಮಹಿಳೆ:

ಗ್ರಾಮೀಣ ಮಹಿಳೆಯ ಬದುಕಿನೊಂದಿಗೆ ಕೃಷಿ ಅವಿಭಾಜ್ಯವಾಗಿ ಬೆಸೆದುಕೊಂಡಿದೆ. ಬಿತ್ತನೆ, ನಾಟಿ, ಕಳೆ ತೆಗೆಯುವುದು, ಕೊಯ್ಲು, ಧಾನ್ಯ ಸಂಸ್ಕರಣೆ, ಪಶುಪಾಲನೆ ಮುಂತಾದ ಅನೇಕ ಚಟುವಟಿಕೆಗಳಲ್ಲಿ ಮಹಿಳೆಯರು ಭಾಗವಹಿಸುತ್ತಾರೆ. ಕೃಷಿ ಚಟುವಟಿಕೆಗಳ ಜೊತೆಗೆ ಮನೆಯ ಕೆಲಸವೂ ಅವರ ಮೇಲೆಯೇ ಇರುತ್ತದೆ. ಹೀಗಾಗಿ ಗ್ರಾಮೀಣ ಮಹಿಳೆಯ ದಿನಚರಿಯಲ್ಲಿ ಕೆಲಸದಎರಡು ಕ್ಷೇತ್ರಗಳು ಕಂಡುಬರುತ್ತವೆ ಮನೆಯ ಕೆಲಸ ಮತ್ತು ಉತ್ಪಾದನಾ ಕೆಲಸ. ಈ ಎರಡೂ ಕ್ಷೇತ್ರಗಳಲ್ಲಿನ ಶ್ರಮಕ್ಕೆ ಸಮಾನ ಮಾನ್ಯತೆ ದೊರೆಯುವುದು ಒಂದು ಪ್ರಮುಖ ಸಾಮಾಜಿಕ ಪ್ರಶ್ನೆಯಾಗಿದೆ. ಕನ್ನಡ ಸಾಹಿತ್ಯವು ಅದರಲ್ಲಿಯೂ ನವೋದಯ, ಪ್ರಗತಿಶೀಲ ಹಾಗೂ ದಲಿತ–ಬಂಡಾಯ ಸಾಹಿತ್ಯದಲ್ಲಿ ಗ್ರಾಮೀಣ ಮಹಿಳೆಯರ ಕಷ್ಟಗಳು, ಕೃಷಿ ಕೂಲಿ ಕಾರ್ಮಿಕರ ಸಮಸ್ಯೆಗಳು ಮತ್ತುಅವರ ಪರಿಶ್ರಮವನ್ನು ಅವರ ಈ ಶ್ರಮಶೀಲ ಬದುಕನ್ನು ಹಲವು ರೀತಿಯಲ್ಲಿ ಚಿತ್ರಿಸಿದೆ. ಹೊಲದಲ್ಲಿ ದುಡಿಯುವ ಮಹಿಳೆ, ಬಿಸಿಲು–ಮಳೆಯನ್ನು ಎದುರಿಸುವ ಮಹಿಳೆ, ಕುಟುಂಬದ ಆರ್ಥಿಕ ಸಂಕಷ್ಟವನ್ನು ನಿಭಾಯಿಸುವ ತಾಯಿ, ಸಾಲದ ಒತ್ತಡವನ್ನು ಎದುರಿಸುವ ರೈತ ಕುಟುಂಬದ ಮಹಿಳೆ ಮುಂತಾದ ಚಿತ್ರಗಳು ಗ್ರಾಮೀಣ ಬದುಕಿನ ವಾಸ್ತವಿಕತೆಯನ್ನು ಪ್ರತಿಬಿಂಬಿಸುತ್ತವೆ.

ಉದಾ: ಲಂಕೇಶರ–ಅವ್ವ

ಜನಪದ ಸಾಹಿತ್ಯದಲ್ಲಿಗ್ರಾಮೀಣ ಮಹಿಳೆ:

ಗ್ರಾಮೀಣ ಮಹಿಳೆಯ ಬದುಕಿನ ಅತ್ಯಂತ ಪ್ರಾಮಾಣಿಕ ದಾಖಲೆಗಳಲ್ಲಿ ಜನಪದ ಸಾಹಿತ್ಯವೂ ಒಂದು. ಜನಪದ ಹಾಡುಗಳು, ಜೋಗುಳಗಳು, ಮದುವೆ

ಹಾಡುಗಳು, ಕೆಲಸದ ಹಾಡುಗಳು, ಹಬ್ಬದ ಹಾಡುಗಳು ಹಾಗೂ ವಿವಿಧ ಆಚರಣೆಗಳಿಗೆ ಸಂಬಂಧಿಸಿದ ಹಾಡುಗಳಲ್ಲಿ ಮಹಿಳೆಯ ಭಾವನೆಗಳು ವ್ಯಕ್ತವಾಗಿವೆ. ಜನಪದ ಸಾಹಿತ್ಯದಲ್ಲಿ ಮಹಿಳೆ ಕೇವಲ ಕುಟುಂಬದ ಸದಸ್ಯೆಯಾಗಿ ಕಾಣಿಸಿಕೊಳ್ಳುವುದಿಲ್ಲ. ಆಕೆ ತನ್ನ ನೋವು, ಪ್ರೀತಿ, ನಿರೀಕ್ಷೆ, ಅಸಮಾಧಾನ ಮತ್ತು ಕನಸುಗಳನ್ನು ಹಾಡಿನ ಮೂಲಕ ವ್ಯಕ್ತಪಡಿಸುತ್ತಾಳೆ. ಮಾತಿನಲ್ಲಿ ಹೇಳಲಾಗದ ಅನೇಕ ಅನುಭವಗಳು ಹಾಡಿನ ಮೂಲಕ ಹೊರಹೊಮ್ಮುತ್ತವೆ.

'ಆಡಿ ಬಾ ನನ ಕಂದ ಅಂಗಾಲ ತೊಳದೇನ
ತಂಗಿನ ಕಾಯಿ ತಿಳಿನೀರ ತಕ್ಕೊಂಡು
ಬಂಗಾರ ಮಾರಿ ತೊಳೆದೇನ'

ಮಗುವಿನ ಲಾಲನೆ–ಪಾಲನೆಯನ್ನು ಎಂತಹ ಕೆಲಸ ಕಾರ್ಯಗಳಲ್ಲಿಯೂ ತಾಯಿ ಚಾಚೂ ತಪ್ಪದೇ ಮಾಡುತ್ತಿದ್ದಳು. ಅಷ್ಟೇ ಅಲ್ಲದೇ, ವಿವಾಹದ ನಂತರ ತವರು ಮನೆಯನ್ನು ಬಿಟ್ಟು ಗಂಡನ ಮನೆಗೆ ಹೋಗುವ ಹೆಣ್ಣಿನ ಭಾವನೆ, ಗಂಡನ ಮನೆಯಲ್ಲಿನ ಜವಾಬ್ದಾರಿಗಳು, ತಾಯಿಯ ಮೇಲಿನ ಪ್ರೀತಿ, ಮಕ್ಕಳ ಕುರಿತ ಕಾಳಜಿ, ಕೃಷಿ ಕೆಲಸದ ಆಯಾಸ ಮುಂತಾದವು ಜನಪದ ಹಾಡುಗಳಲ್ಲಿ ಕಾಣಿಸಿಕೊಳ್ಳುತ್ತವೆ.

'ಬ್ಯಾಸಗಿ ದಿವಸಕ್ಕ ಬೇವಿನ ಮರತಂಪ
ಭೀಮಾರತಿ ಎಂಬ ಹೊಳೆ ತಂಪ–ಹಡೆದವ್ವ
ನೀ ತಂಪ ನನ್ನತವರೀಗ'

ತನ್ನ ನೋವು ಸಂಕಟಗಳ ಬೇಗುದಿಗೆ ಬಂದಾಗ ಅವಳಿಗೆ ಇದರಿಂದ ಮುಕ್ತಿ ಹೊಂದಲು ಹಡೆದ ತಾಯಿಯ ನೆರಳು ಪರಿಪರಿಯಾಗಿ ಬಯಸುತ್ತಾಳೆ. ಹೀಗಾಗಿ ಜನಪದ ಸಾಹಿತ್ಯವು ಗ್ರಾಮೀಣ ಮಹಿಳೆಯ ಮೌಖಿಕ ಆತ್ಮಚರಿತ್ರೆಯ ಒಂದು ರೂಪವೆಂದು ಪರಿಗಣಿಸಬಹುದು. ಇದು ಲಿಖಿತ ಸಾಹಿತ್ಯದ ಹೊರಗಿರುವ ಮಹಿಳಾ ಅನುಭವಗಳನ್ನು ಸಂರಕ್ಷಿಸುವ ಮಹತ್ವದ ಸಾಂಸ್ಕೃತಿಕ ಮಾಧ್ಯಮವಾಗಿದೆ.

ಕನ್ನಡ ಸಾಹಿತ್ಯದಲ್ಲಿಗ್ರಾಮೀಣ ಮಹಿಳೆಯ ಚಿತ್ರಣ:

ಕನ್ನಡ ಸಾಹಿತ್ಯದ ವಿವಿಧ ಹಂತಗಳಲ್ಲಿ ಗ್ರಾಮೀಣ ಮಹಿಳೆಯ ಚಿತ್ರಣ ವಿಭಿನ್ನ ರೂಪಗಳಲ್ಲಿ ಕಂಡುಬರುತ್ತದೆ. ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯದಲ್ಲಿ ಮಹಿಳೆಯ ಚಿತ್ರಣವು ಹೆಚ್ಚಾಗಿ ಧಾರ್ಮಿಕ, ನೈತಿಕ ಹಾಗೂ ಕುಟುಂಬ ಕೇಂದ್ರಿತ ಮೌಲ್ಯಗಳೊಂದಿಗೆ ಸಂಬಂಧಿಸಿಕೊಂಡಿದ್ದರೆ, ಆಧುನಿಕ ಸಾಹಿತ್ಯದಲ್ಲಿ ಆಕೆಯ ಸಾಮಾಜಿಕ ವಾಸ್ತವಿಕತೆಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯಿತು. ವಚನ ಸಾಹಿತ್ಯದಲ್ಲಿ ಮಹಿಳೆಯ ವ್ಯಕ್ತಿತ್ವ, ಆತ್ಮಗೌರವ ಮತ್ತು ಆಧ್ಯಾತ್ಮಿಕ ಸ್ವಾತಂತ್ರ್ಯದ ಪ್ರಶ್ನೆಗಳು ಮಹತ್ವ ಪಡೆದವು. ವಿಶೇಷವಾಗಿ ಅಕ್ಕಮಹಾದೇವಿಯ ವಚನಗಳು ಸಾಂಪ್ರದಾಯಿಕ ಸಾಮಾಜಿಕ ಬಂಧನಗಳ ವಿರುದ್ಧ ವ್ಯಕ್ತಿಯ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತವೆ. ಇದು ಮಹಿಳೆಯ ಅಸ್ಮಿತೆಯ ಕುರಿತ ಚಿಂತನೆಗೆ ಮಹತ್ವದ ಹಿನ್ನೆಲೆಯನ್ನು ಒದಗಿಸುತ್ತದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಗ್ರಾಮೀಣ ಬದುಕಿನ ವಾಸ್ತವಿಕ ಚಿತ್ರಣ ಹೆಚ್ಚು ಗಟ್ಟಿಯಾಗಿ ಮೂಡಿಬಂತು. ರೈತ, ಕೂಲಿ ಕಾರ್ಮಿಕ, ಬಡಕುಟುಂಬ, ಜಾತಿ ವ್ಯವಸ್ಥೆ, ಭೂಮಿಯ ಸಂಬಂಧ, ಗ್ರಾಮೀಣ ರಾಜಕೀಯ ಮುಂತಾದ ಸಾಮಾಜಿಕ ಅಂಶಗಳ ಜೊತೆಗೆ ಮಹಿಳೆಯ ಬದುಕು ಸಾಹಿತ್ಯದ ಕೇಂದ್ರಕ್ಕೆ ಬಂದಿತು. ಕಾದಂಬರಿ ಮತ್ತು ಸಣ್ಣಕಥೆಗಳಲ್ಲಿ ಗ್ರಾಮೀಣ ಮಹಿಳೆ ಕುಟುಂಬದ ಸಂಕಷ್ಟಗಳನ್ನು ಎದುರಿಸುವ ವ್ಯಕ್ತಿಯಾಗಿ, ಸಾಮಾಜಿಕ ಅನ್ಯಾಯವನ್ನು ಸಹಿಸುವ ವ್ಯಕ್ತಿಯಾಗಿ ಹಾಗೂ ಕೆಲವೊಮ್ಮೆ ಅದರ ವಿರುದ್ಧ ಧ್ವನಿ ಎತ್ತುವ ವ್ಯಕ್ತಿಯಾಗಿ ಚಿತ್ರಿಸಲ್ಪಟ್ಟಿದ್ದಾಳೆ. ಉದಾ: ಒಡಲಾಳದ –ಸಾಕವ್ವ,

ಮಹಿಳಾ ಬರಹಗಾರ್ತಿಯರು ಮತು ಗ್ರಾಮೀಣ ಮಹಿಳೆಯ ಧ್ವನಿ:

ಮಹಿಳಾ ಬರಹಗಾರ್ತಿಯರ ಸಾಹಿತ್ಯ ಪ್ರವೇಶವು ಮಹಿಳಾ ಅನುಭವಗಳ ಅಭಿವ್ಯಕ್ತಿಯಲ್ಲಿ ಮಹತ್ವದ ಬದಲಾವಣೆಯನ್ನು ತಂದಿತು. ಮಹಿಳೆಯ ಬದುಕನ್ನು ಹೊರಗಿನಿಂದ ನೋಡುವ ದೃಷ್ಟಿಯ ಬದಲಿಗೆ, ಮಹಿಳೆಯೇ ತನ್ನ ಅನುಭವದ ಒಳಗಿನಿಂದ ಮಾತನಾಡುವ ಅವಕಾಶ ಹೆಚ್ಚಾಯಿತು. ಮಹಿಳಾ ಬರಹಗಾರ್ತಿಯರ ಕೃತಿಗಳಲ್ಲಿ ಕುಟುಂಬ, ವಿವಾಹ,

ಮಾತೃತ್ವ, ದೇಹ, ಶ್ರಮ, ಆರ್ಥಿಕ ಅವಲಂಬನೆ, ಲಿಂಗ ಅಸಮಾನತೆ, ಶಿಕ್ಷಣ ಮತ್ತು ಸ್ವಾತಂತ್ರ್ಯದ ಪ್ರಶ್ನೆಗಳು ಪ್ರಸ್ತಾಪವಾಗುತ್ತವೆ. ಗ್ರಾಮೀಣ ಹಿನ್ನೆಲೆಯ ಮಹಿಳೆಯ ಬದುಕನ್ನು ಚಿತ್ರಿಸುವಾಗ ಸಾಮಾಜಿಕ ಮತ್ತುಆರ್ಥಿಕ ಅಂಶಗಳ ಜೊತೆಗೆ ಆಕೆಯ ಆಂತರಿಕ ಮನೋಲೋಕಕ್ಕೂ ಮಹತ್ವ ನೀಡಲಾಗಿದೆ. ಗ್ರಾಮೀಣ ಮಹಿಳೆ ಕೇವಲ 'ತ್ಯಾಗಮಯಿ' ಅಥವಾ 'ದುಃಖಿತೆ' ಎಂಬ ಏಕಮುಖ ಚಿತ್ರಣದಿಂದ ಹೊರಬಂದು, ತನ್ನ ನಿರ್ಧಾರಗಳನ್ನು ತೆಗೆದುಕೊಳ್ಳುವ, ಪ್ರಶ್ನಿಸುವ ಮತ್ತು ಪ್ರತಿರೋಧಿಸುವ ವ್ಯಕ್ತಿಯಾಗಿ ರೂಪುಗೊಳ್ಳುವುದು ಸಮಕಾಲೀನ ಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಜಾತಿ, ವರ್ಗ ಮತ್ತು ಲಿಂಗ ತಾರತಮ್ಯ:

ಗ್ರಾಮೀಣ ಮಹಿಳೆಯ ಸಮಸ್ಯೆಗಳನ್ನು ಕೇವಲ ಲಿಂಗದ ದೃಷ್ಟಿಯಿಂದ ಅರ್ಥೈಸುವುದು ಸಾಕಾಗುವುದಿಲ್ಲ. ಜಾತಿ, ವರ್ಗ ಮತ್ತು ಆರ್ಥಿಕ ಸ್ಥಿತಿಯೂ ಆಕೆಯ ಬದುಕಿನ ಮೇಲೆ ಪರಿಣಾಮ ಬೀರುತ್ತವೆ. ಬಡ ವರ್ಗದ ಮಹಿಳೆ ಆರ್ಥಿಕ ಸಂಕಷ್ಟದ ಜೊತೆಗೆ ಲಿಂಗ ತಾರತಮ್ಯವನ್ನುಎದುರಿಸಬೇಕಾಗಬಹುದು. ದಲಿತ ಮತ್ತು ಹಿಂದುಳಿದ ವರ್ಗಗಳ ಮಹಿಳೆಯರು ಸಾಮಾಜಿಕ ಬಹಿಷ್ಕಾರ, ಆರ್ಥಿಕ ಅಸಮಾನತೆ ಮತ್ತು ಲಿಂಗಾಧಾರಿತ ಸಮಸ್ಯೆಗಳನ್ನು ಏಕಕಾಲದಲ್ಲಿ ಎದುರಿಸುವ ಸಾಧ್ಯತೆ ಇದೆ. ಇಂತಹ ಬಹುಮುಖ ಅಸಮಾನತೆಗಳು ಸಾಹಿತ್ಯದಲ್ಲಿ ವಿವಿಧ ರೂಪಗಳಲ್ಲಿ ವ್ಯಕ್ತವಾಗಿವೆ. ದಲಿತ ಸಾಹಿತ್ಯ ಮತ್ತು ಮಹಿಳಾ ಸಾಹಿತ್ಯದ ಬೆಳವಣಿಗೆಯೊಂದಿಗೆ ಮಹಿಳೆಯ ಅನುಭವವನ್ನು ಜಾತಿ ಮತ್ತು ವರ್ಗದ ಹಿನ್ನೆಲೆಯಲ್ಲಿ ನೋಡುವ ದೃಷ್ಟಿಕೋನ ಬಲಗೊಂಡಿದೆ.

ಶಿಕ್ಷಣ ಮತ್ತುಗ್ರಾಮೀಣ ಮಹಿಳೆಯ ಪರಿವರ್ತನೆ:

ಶಿಕ್ಷಣವು ಗ್ರಾಮೀಣ ಮಹಿಳೆಯ ಬದುಕಿನಲ್ಲಿ ಪರಿವರ್ತನೆಯ ಪ್ರಮುಖ ಸಾಧನವಾಗಿದೆ. ಶಿಕ್ಷಣದ ಮೂಲಕ ಮಹಿಳೆಗೆ ತನ್ನ ಹಕ್ಕುಗಳ ಅರಿವು, ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ಆತ್ಮವಿಶ್ವಾಸ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹೆಚ್ಚಾಗುತ್ತದೆ. ಕನ್ನಡ ಸಾಹಿತ್ಯದಲ್ಲಿಯೂ ಶಿಕ್ಷಣ ಪಡೆದ ಗ್ರಾಮೀಣ ಮಹಿಳೆಯ ಹೊಸ ರೂಪ ಕಾಣಿಸಿಕೊಳ್ಳುತ್ತದೆ. ಆಕೆ ಕುಟುಂಬದ ಮಿತಿಗಳನ್ನು ಮೀರಿ ಉದ್ಯೋಗ, ಸಾರ್ವಜನಿಕ ಜೀವನ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ವ್ಯಕ್ತಿಯಾಗಿ ರೂಪುಗೊಳ್ಳುತ್ತಾಳೆ. ಆದರೆ ಶಿಕ್ಷಣದ ಅವಕಾಶಗಳು ಹೆಚ್ಚಾದರೂ, ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣದ ನಿರಂತರತೆ, ಉನ್ನತ ಶಿಕ್ಷಣಕ್ಕೆ ಪ್ರವೇಶ, ಉದ್ಯೋಗಾವಕಾಶ ಮತ್ತು ಸುರಕ್ಷಿತ ಸಾಮಾಜಿಕ ಪರಿಸರದಂತಹ ಸಮಸ್ಯೆಗಳು ಇನ್ನೂಚರ್ಚೆಗೆ ಒಳಪಟ್ಟಿವೆ.

ಗ್ರಾಮೀಣ ಮಹಿಳೆ ಮತ್ತುಕೌಟುಂಬಿಕ ಹಿಂಸೆ:

ಕೌಟುಂಬಿಕ ಹಿಂಸೆ ಗ್ರಾಮೀಣ ಮಹಿಳೆಯ ಬದುಕಿನ ಗಂಭೀರ ಸಾಮಾಜಿಕ ಸಮಸ್ಯೆಗಳಲ್ಲಿ ಒಂದಾಗಿದೆ. ದೈಹಿಕ ಹಿಂಸೆಯ ಜೊತೆಗೆ ಮಾನಸಿಕ ಹಿಂಸೆ, ಆರ್ಥಿಕ ನಿಯಂತ್ರಣ, ಸಾಮಾಜಿಕ ನಿರ್ಬಂಧ ಮತ್ತು ನಿರ್ಧಾರ ಸ್ವಾತಂತ್ರ್ಯದ ಕೊರತೆಯೂ ಮಹಿಳೆಯ ಬದುಕನ್ನು ಪ್ರಭಾವಿಸುತ್ತವೆ. ಸಾಹಿತ್ಯವು ಇಂತಹ ಅನುಭವಗಳನ್ನು ಕೇವಲ ಘಟನೆಗಳಾಗಿ ದಾಖಲಿಸುವುದಿಲ್ಲ; ಅವುಗಳ ಹಿಂದೆ ಇರುವ ಸಾಮಾಜಿಕ ಮನೋಭಾವಗಳನ್ನು ಪ್ರಶ್ನಿಸುತ್ತದೆ. ಮಹಿಳೆಯ ಮೌನ, ಭಯ, ಸಹನೆ ಮತ್ತು ಅಂತಿಮವಾಗಿ ಪ್ರತಿರೋಧದ ಧ್ವನಿ ಸಾಹಿತ್ಯದಲ್ಲಿ ಗಮನಾರ್ಹವಾಗಿ ವ್ಯಕ್ತವಾಗುತ್ತದೆ. ಇಲ್ಲಿ ಸಾಹಿತ್ಯವು ಸಾಮಾಜಿಕ ಅರಿವಿನ ಮಾಧ್ಯಮವಾಗುತ್ತದೆ. ಮಹಿಳೆಯ ನೋವನ್ನು ಓದುಗರ ಮುಂದೆ ತರುವ ಮೂಲಕ ಸಮಾಜದ ಮೌಲ್ಯ ವ್ಯವಸ್ಥೆಯನ್ನು ಮರು ಪರಿಶೀಲಿಸುವ ಅವಕಾಶವನ್ನು ಅದು ಒದಗಿಸುತ್ತದೆ.

ಗ್ರಾಮೀಣ ಮಹಿಳೆಯ ಸ್ವಾವಲಂಬನೆ ಮತ್ತು ಹೊಸ ಬದುಕು:

ಸಮಕಾಲೀನ ಗ್ರಾಮೀಣ ಸಮಾಜದಲ್ಲಿ ಮಹಿಳೆಯ ಬದುಕಿನಲ್ಲಿ ಹಲವು ಬದಲಾವಣೆಗಳು ಸಂಭವಿಸುತ್ತಿವೆ. ಸ್ವಸಹಾಯ ಸಂಘಗಳು, ಸಣ್ಣ ಉದ್ದಿಮೆಗಳು, ಹೈನುಗಾರಿಕೆ, ಕೈಗಾರಿಕೆ, ಶಿಕ್ಷಣ, ಉದ್ಯೋಗ ಮತ್ತು ಸ್ಥಳೀಯ ಆಡಳಿತದಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚುತ್ತಿದೆ.

ಇದರಿಂದ ಮಹಿಳೆ ಕೇವಲ ಕುಟುಂಬದ ಅವಲಂಬಿತ ಸದಸ್ಯೆಯಾಗಿರದೆ, ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ನಿರ್ಧಾರಗಳಲ್ಲಿ ಪಾಲ್ಗೊಳ್ಳುವ ವ್ಯಕ್ತಿಯಾಗಿ ರೂಪುಗೊಳ್ಳುತ್ತಿದ್ದಾಳೆ. ಸಮಕಾಲೀನ ಕನ್ನಡ ಸಾಹಿತ್ಯವೂ ಈ ಬದಲಾವಣೆಯನ್ನು ದಾಖಲಿಸುತ್ತಿದೆ. ಹೊಸ ಸಾಹಿತ್ಯದಲ್ಲಿ ಗ್ರಾಮೀಣ ಮಹಿಳೆ ದುಃಖದ ಪ್ರತೀಕ ಮಾತ್ರವಲ್ಲ; ಬದಲಾವಣೆಯ ಶಕ್ತಿಯಾಗಿ ಕಾಣಿಸಿಕೊಳ್ಳುತ್ತಾಳೆ. ಆಕೆ ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳುವ ಹಕ್ಕನ್ನು ಪ್ರತಿಪಾದಿಸುತ್ತಾಳೆ.

ಸಾಹಿತ್ಯದಾಖಲಾತಿಯಿಂದ ಪ್ರತಿರೋಧದವರೆಗೆ:

ಗ್ರಾಮೀಣ ಮಹಿಳೆಯ ಸಾಹಿತ್ಯಿಕ ಚಿತ್ರಣದ ಬೆಳವಣಿಗೆಯನ್ನು ಮೂರು ಹಂತಗಳಲ್ಲಿ ಗಮನಿಸಬಹುದು. ಮೊದಲನೆಯದು – ಪ್ರತಿನಿಧಿತ್ವ: ಮಹಿಳೆಯ ಬದುಕನ್ನು ಪುರುಷ ಲೇಖಕರು ಅಥವಾ ಹೊರಗಿನ ವೀಕ್ಷಕರು ಚಿತ್ರಿಸುವ ಹಂತ. ಎರಡನೆಯದು – ಅನುಭವದ ಅಭಿವ್ಯಕ್ತಿ: ಮಹಿಳಾ ಬರಹಗಾರ್ತಿಯರು ತಮ್ಮದೇ ಬದುಕಿನ ಅನುಭವಗಳು ಮತ್ತು ಮಹಿಳಾ ಸಮುದಾಯದ ಅನುಭವಗಳನ್ನು ಸಾಹಿತ್ಯದಲ್ಲಿ ದಾಖಲಿಸುವ ಹಂತ. ಮೂರನೆಯದು– ಪ್ರತಿರೋಧ ಮತ್ತು ಅಸ್ಮಿತೆ: ಮಹಿಳೆ ತನ್ನ ಅಸ್ತಿತ್ವ, ಹಕ್ಕು, ಸ್ವಾತಂತ್ರ್ಯ ಮತ್ತು ಸಮಾನತೆಯ ಕುರಿತು ಪ್ರಶ್ನಿಸುವ ಹಾಗೂ ಪ್ರತಿರೋಧಿಸುವ ಹಂತ. ಈ ಬೆಳವಣಿಗೆಯಿಂದ ಸಾಹಿತ್ಯದಲ್ಲಿ ಗ್ರಾಮೀಣ ಮಹಿಳೆಯ ಪಾತ್ರ ಹೆಚ್ಚು ಸಂಕೀರ್ಣ ಮತ್ತು ಜೀವಂತವಾಗುತ್ತದೆ.

ಸಮಕಾಲೀನ ಸಂದರ್ಭದಲ್ಲಿ ಗ್ರಾಮೀಣ ಮಹಿಳೆ:

ತಂತ್ರಜ್ಞಾನ, ಶಿಕ್ಷಣ, ಜಾಗತೀಕರಣ ಮತ್ತು ನಗರೀಕರಣ ಗ್ರಾಮೀಣ ಸಮಾಜದ ಸ್ವರೂಪವನ್ನು ಬದಲಾಯಿಸುತ್ತಿವೆ. ಮೊಬೈಲ್, ಸಾಮಾಜಿಕ ಮಾಧ್ಯಮ ಮತ್ತು ಡಿಜಿಟಲ್ ಮಾಧ್ಯಮಗಳ ಪ್ರವೇಶದಿಂದ ಗ್ರಾಮೀಣ ಮಹಿಳೆಯರಿಗೆ ಮಾಹಿತಿಯ ಹೊಸ ಜಗತ್ತುತೆರೆದಿದೆ. ಆದರೆ ಅಭಿವೃದ್ಧಿಯ ಜೊತೆಗೆ ಹೊಸ ಸವಾಲುಗಳೂ ಎದುರಾಗಿವೆ. ಕೃಷಿಯ ಅನಿಶ್ಚಿತತೆ, ಉದ್ಯೋಗದಕೊರತೆ, ವಲಸೆ, ಕುಟುಂಬದ ಬದಲಾವಣೆ, ಪರಿಸರ ಸಮಸ್ಯೆಗಳು ಮತ್ತು ಆರ್ಥಿಕ ಒತ್ತಡಗಳು ಮಹಿಳೆಯ ಬದುಕಿನ ಮೇಲೆ ಪರಿಣಾಮ ಬೀರುತ್ತವೆ. ಸಮಕಾಲೀನ ಕನ್ನಡ ಸಾಹಿತ್ಯವು ಈ ಹೊಸ ಗ್ರಾಮೀಣ ವಾಸ್ತವಿಕತೆಗಳನ್ನು ದಾಖಲಿಸುವ ಅಗತ್ಯವಿದೆ. ವಿಶೇಷವಾಗಿ ಗ್ರಾಮೀಣ ಮಹಿಳೆಯ ಸ್ವಂತಧ್ವನಿ, ಆಕೆಯ ಭಾಷೆ, ಅನುಭವ, ಶ್ರಮ ಮತ್ತು ಸಾಮಾಜಿಕ ಹೋರಾಟಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸುವುದು ಅಗತ್ಯವಾಗಿದೆ.

ಉಪಸಂಹಾರ:

ಗ್ರಾಮೀಣ ಮಹಿಳೆ ಭಾರತೀಯ ಗ್ರಾಮೀಣ ಜೀವನದ ಅವಿಭಾಜ್ಯ ಅಂಗ. ಕುಟುಂಬ, ಕೃಷಿ ಮತ್ತು ಸಮುದಾಯದ ಬದುಕನ್ನು ನಿರ್ವಹಿಸುವಲ್ಲಿ ಆಕೆಯ ಪಾತ್ರ ಮಹತ್ವದ್ದಾದರೂ, ಆಕೆಯ ಶ್ರಮ ಮತ್ತು ಅಸ್ತಿತ್ವಕ್ಕೆ ಸಮರ್ಪಕವಾದ ಮಾನ್ಯತೆ ದೊರೆಯದ ಸಂದರ್ಭಗಳು ಇನ್ನೂ ಇವೆ.

ಕನ್ನಡ ಸಾಹಿತ್ಯವು ಗ್ರಾಮೀಣ ಮಹಿಳೆಯ ಬದುಕಿನ ವಿವಿಧ ಮುಖಗಳನ್ನು ದಾಖಲಿಸುತ್ತಾ ಬಂದಿದೆ. ಜನಪದ ಸಾಹಿತ್ಯವು ಆಕೆಯ ಮೌಖಿಕ ಅನುಭವಗಳನ್ನು ಸಂರಕ್ಷಿಸಿದರೆ, ಆಧುನಿಕ ಸಾಹಿತ್ಯವು ಆಕೆಯ ಸಾಮಾಜಿಕ ವಾಸ್ತವಿಕತೆಯನ್ನು ದಾಖಲಿಸಿತು. ಮಹಿಳಾ ಸಾಹಿತ್ಯ ಮತ್ತುದಲಿತ ಮಹಿಳಾ ಸಾಹಿತ್ಯವು ಆಕೆಯ ಧ್ವನಿಗೆ ಮತ್ತಷ್ಟು ಬಲ ನೀಡಿತು.

ಗ್ರಾಮೀಣ ಮಹಿಳೆಯನ್ನು ಕೇವಲ ತ್ಯಾಗ, ನೋವು ಮತ್ತು ಸಂಕಷ್ಟಗಳ ಪ್ರತೀಕವಾಗಿ ನೋಡುವ ದೃಷ್ಟಿಕೋನವನ್ನು ಮೀರಿ, ಆಕೆಯನ್ನು ಶ್ರಮಶೀಲ, ಚಿಂತನಶೀಲ, ಸ್ವಾಭಿಮಾನಿ, ಪ್ರತಿರೋಧಶೀಲ ಮತ್ತು ಪರಿವರ್ತನೆಯ ಶಕ್ತಿಯಾಗಿ ನೋಡುವ ಅಗತ್ಯವಿದೆ.

ಹೀಗಾಗಿ "ಗ್ರಾಮೀಣ ಮಹಿಳೆಯ ಬದುಕು ಮತ್ತು ಸಾಹಿತ್ಯ" ಎಂಬ ಅಧ್ಯಯನವು ಕೇವಲ ಸಾಹಿತ್ಯಿಕ ಅಧ್ಯಯನವಲ್ಲ. ಅದು ಗ್ರಾಮೀಣ ಸಮಾಜದ ಸಾಮಾಜಿಕ ರಚನೆ, ಲಿಂಗ ಸಂಬಂಧ, ಆರ್ಥಿಕ ವ್ಯವಸ್ಥೆ, ಸಂಸ್ಕೃತಿ ಮತ್ತು ಬದಲಾವಣೆಯ ಪ್ರಕ್ರಿಯೆಯನ್ನು ಅರ್ಥಮಾಡಿ ಕೊಳ್ಳುವ ಪ್ರಮುಖ ಅಧ್ಯಯನ ಕ್ಷೇತ್ರವಾಗಿದೆ. ಕನ್ನಡ

ಸಾಹಿತ್ಯದಲ್ಲಿ ಗ್ರಾಮೀಣ ಮಹಿಳೆಯ ಧ್ವನಿಗೆ ಇನ್ನಷ್ಟು ವಿಶಾಲವಾದ ಅವಕಾಶ ದೊರೆತಾಗ ಮಾತ್ರ ಮಹಿಳಾ ಸಂವೇದನೆಯ ಸಮಗ್ರ ಚಿತ್ರಣ ಸಾಧ್ಯವಾಗುತ್ತದೆ.

ಉಲ್ಲೇಖ ಗ್ರಂಥಗಳು:

1. ಅಕ್ಕಮಹಾದೇವಿ – ಅಕ್ಕನ ವಚನಗಳು.
2. ಕನ್ನಡ ಸಾಹಿತ್ಯಚರಿತ್ರೆ– ವಿವಿಧ ಸಂಪಾದಿತ ಸಂಪುಟಗಳು.
3. ಮಹಿಳಾ ಸಾಹಿತ್ಯ–ಕನ್ನಡದ ವಿವಿಧ ಲೇಖಕಿಯರ ಕೃತಿಗಳು.
4. ದಲಿತ ಸಾಹಿತ್ಯ ಮತ್ತು ಮಹಿಳಾ ಸಾಹಿತ್ಯಕ್ಕೆ ಸಂಬಂಧಿಸಿದ ವಿಮರ್ಶಾ ಕೃತಿಗಳು.
5. ಕನ್ನಡ ಜನಪದ ಸಾಹಿತ್ಯ–ಜನಪದ ಗೀತೆಗಳು ಮತ್ತು ಮಹಿಳಾ ಜನಪದ ಪರಂಪರೆಕುರಿತ ಅಧ್ಯಯನಗಳು.
6. ಸ್ತ್ರೀವಾದಿ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ ಕನ್ನಡ ವಿಮರ್ಶಾ ಕೃತಿಗಳು.
7. ಗ್ರಾಮೀಣ ಸಮಾಜ, ಮಹಿಳೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಸಮಾಜಶಾಸ್ತ್ರೀಯ ಅಧ್ಯಯನಗಳು.
8. ಗ್ರಾಮೀಣ ಮಹಿಳೆಯರು – ಎ. ಮಾಲತಿ

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಪ್ರಸ್ತುತ ಸಮಾಜಕ್ಕೆ ದಲಿತ–ಬಂಡಾಯ ಸಾಹಿತ್ಯದ ಅವಶ್ಯಕತೆ

ಡಾ. ಚಂದ್ರಪ್ಪ ಮ. ತಳವಾರ
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಶ್ಚಾಪೂರ
ತಾ–ಹುಕ್ಕೇರಿ, ಜಿಲ್ಲೆ–ಬೆಳಗಾವಿ
Corresponding Author–ಡಾ. ಚಂದ್ರಪ್ಪ ಮ. ತಳವಾರ
DOI - 10.5281/zenodo.23528435

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಲಿತ–ಬಂಡಾಯ ಸಾಹಿತ್ಯ ಪ್ರಕಾರವು ಅತ್ಯಂತ ಪ್ರಮುಖವಾದದ್ದು. ದಲಿತ ಸಾಹಿತ್ಯವು 70 ಮತ್ತು 80ರ ದಶಕಗಳಲ್ಲಿ ನಮ್ಮ ಸಮಾಜದ ಹೊಸ ಧ್ವನಿಯಾಗಿದೆ ಮತ್ತು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಚಳುವಳಿಗಳಿಂದ ಪ್ರಭಾವಿತವಾಗಿದೆ. ದಲಿತ ಸಾಹಿತ್ಯದ ಬೆಳವಣಿಗೆ ಅವರು ಸ್ಫೂರ್ತಿಯ ಮೂಲವಾಗಿದ್ದರು, ಸ್ವಾಭಿಮಾನ, ಸ್ವಾತಂತ್ರ್ಯ, ಸಮಾನತೆ ಭ್ರಾತೃತ್ವ ಇತ್ಯಾದಿಗಳು ದಲಿತ ಸಾಹಿತ್ಯದ ತತ್ವಗಳಾಗಿವೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ದಲಿತ ಚಿಂತನೆಗಳು, ದಲಿತ ಪ್ರಜ್ಞೆ ದಲಿತ ಪರವಾದ ಸಂವೇದನೆಗಳು ಮೂಡಿ ಬಂದವು. ದಲಿತ ಸಾಹಿತ್ಯಕ್ಕೆ ತನ್ನದೇ ಆದ ಸಾಮಾಜಿಕ ಹೊಣೆಗಾರಿಕೆ ಇದೆ. ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ಜೀವನ ಚಕ್ರವಿದೆ. ಇಲ್ಲಿ ಜೀವವಿರೋಧಿ ವೈದಿಕ ಧರ್ಮವನ್ನು ಬಿಟ್ಟು ಮಾನವಧರ್ಮವನ್ನು ಅಪ್ಪಿಕೊಳ್ಳುವ ಮತ್ತು ಸ್ವೀಕರಿಸುವ ಆದರ್ಶಗಳು ಮತ್ತು ಚಿಂತನೆಗಳು ಮುಖ್ಯವಾಗುತ್ತವೆ. ಮಹಾರಾಷ್ಟ್ರದಲ್ಲಿ ದಲಿತ ಸಾಹಿತ್ಯದ ಹುಟ್ಟು ಸುದೀರ್ಘ ಪರಂಪರೆಯನ್ನು ಹೊಂದಿದೆ. ನಂತರ ಇದನ್ನು ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಪ್ರಾರಂಭಿಸಲಾಯಿತು. ಈ ಸಂದರ್ಭದಲ್ಲಿ ಕೆಳ ಸಮುದಾಯದ ಲೇಖಕರು ಬರೆದ ಸಾಹಿತ್ಯ ದಲಿತ ಸಾಹಿತ್ಯವಾಯಿತು.

1973ರಲ್ಲಿ ರೂಪುಗೊಂಡ ದಲಿತ ಪ್ಯಾಂಥರ್ಸ್ (ದಲಿತ ಚಿಂತನೆಗಳು), ದೀನ–ದಲಿತರು, ಬುಡಕಟ್ಟುಗಳು, ಕಾರ್ಮಿಕರು, ರೈತರು, ಅಲೆಮಾರಿಗಳು ಇತ್ಯಾದಿ ಹತ್ತಾರು ಗುಂಪುಗಳನ್ನು 'ದಲಿತ' ಪದದ ಅರ್ಥದಲ್ಲಿ ಗುರುತಿಸಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಮಹಾರಾಷ್ಟ್ರ, ಕರ್ನಾಟಕದಂತಹ ರಾಜ್ಯದಲ್ಲಿ ಶೋಷಣೆಗೆ ಒಳಗಾದ ನಿರ್ದಿಷ್ಟ ಸಮುದಾಯ ದಲಿತಎಂದು ಗುರುತಿಸಿಕೊಂಡಿರುವುದು ಕಂಡುಬರುತ್ತದೆ. ಚರ್ಚೆಗಳ ಹೊರತಾಗಿಯೂ, ಮಹಾರಾಷ್ಟ್ರದಲ್ಲಿ ಅಂಗೀಕರಿಸಲ್ಪಟ್ಟ ದಲಿತ ಸಾಹಿತ್ಯವನ್ನು ತಮಿಳುನಾಡಿನ ದಲಿತ ಸಾಹಿತ್ಯ (ದಲಿತಇಲಕ್ಕಿಯಾನ್) ಕರ್ನಾಟಕದ ದಲಿತ ಸಾಹಿತ್ಯದಂತೆಯೇ ಅದೇ ಹೆಸರಿನಿಂದ ಗುರುತಿಸಲಾಯಿತು. ಈ ಹಿನ್ನೆಲೆಯಲ್ಲಿ ಹಲವಾರು ವಿದ್ವಾಂಸರ ವಿವಿಧ ಚರ್ಚೆಗಳು ಮತ್ತು ಚಿಂತನೆಗಳ ಆಧಾರದ ಮೇಲೆ ದಲಿತ ಪದದ ಅರ್ಥ ಮತ್ತು ವಿಶ್ಲೇಷಣೆಯನ್ನು ನಿರಂತರವಾಗಿ ನಡೆಸಲಾಗಿದೆ. ಕನ್ನಡ ಸಾಹಿತ್ಯದಲ್ಲಿ ದಲಿತ ಸಾಹಿತ್ಯ ವಿಶಿಷ್ಟ ಅಸ್ತಿತ್ವವನ್ನು ಪಡೆದುಕೊಂಡಿದೆ. ಅನೇಕ ಚಿಂತಕರು ದಲಿತ ಪದದ ವ್ಯಾಖ್ಯಾನವನ್ನು ಚರ್ಚಿಸಿದ್ದಾರೆ ಮತ್ತು ಪ್ರಸ್ತುತದಲಿತ ಸಾಹಿತ್ಯ ಎಂದರೇನು? ಅದರ ಮೂಲ, ವಿಕಾಸ ಮತ್ತು ವಿಸ್ತರಣೆಯನ್ನು ತಿಳಿದುಕೊಳ್ಳುವುದು ಅಷ್ಟೇ ಮುಖ್ಯ. ಕನ್ನಡ ಸಾಹಿತ್ಯದ ಇತಿಹಾಸವನ್ನು ಅವಲೋಕಿಸಿದಾಗ, ಸಾಹಿತ್ಯವು ಸುಮಾರು ಹದಿನೈದು ನೂರು ವರ್ಷಗಳ ಕಾಲ

ಅವಿರತವಾಗಿ ಬೆಳೆದು, ಅನೇಕ ಶಾಸನಗಳಿಂದ ಪ್ರಾರಂಭವಾಗಿ 21ನೇ ಶತಮಾದಲ್ಲಿ ಕೊನೆಗೊಳ್ಳುತ್ತದೆ ಎಂಬುದು ವಿಶಿಷ್ಟವಾಗಿದೆ. ಕನ್ನಡ ಸಾಹಿತ್ಯವು ಈ ಸಂಪ್ರದಾಯದಲ್ಲಿ ಅಸ್ತಿತ್ವಕ್ಕೆ ಬಂದಿದೆ. ಅದರಲ್ಲಿ ವಿವಿಧ ಧಾರ್ಮಿಕ ತತ್ವಗಳು ಅಂತರ್ಗತವಾಗಿವೆ. ಪ್ರಾಚೀನ ಕನ್ನಡ ಮತ್ತು ಇತರ ಸಂಪ್ರದಾಯಗಳಲ್ಲಿ ಜೈನ, ಬೌದ್ಧ ಮತ್ತು ಶೈವ ಮತ್ತು ವೀರಶೈವಧರ್ಮದ ವಿಭಿನ್ನ ತತ್ವಚಿಂತನೆಗಳ ವಿಭಿನ್ನ ಸಂವೇದನೆಗಳನ್ನು ಕಾಣಬಹುದು. ಇದಕ್ಕೆ ವ್ಯತಿರಿಕ್ತವಾಗಿ, ನವೋದಯ, ಪ್ರಗತಿಶೀಲ ಮತ್ತು ಆಧುನಿಕತೆಯ ವಿಭಿನ್ನವಾದ ಜನಪರಚಿಂತನೆಯ ಆಧುನಿಕ ಯುಗವು ಕಾಣಿಸಿಕೊಂಡಿದೆ. ನವೋದಯ ಸಾಹಿತ್ಯ ದೇಶಭಕ್ತಿಯಲ್ಲಿ, ದಲಿತ–ಬಂಡಾಯವು ಪ್ರಾಮುಖ್ಯತೆಯನ್ನು ಪಡೆಯಿತು. ಈ ಪ್ರಣಯ ಚಿಂತನೆಗಳನ್ನು ಹೊರತುಪಡಿಸಿ, ದೇಶೀಯ ಮತ್ತು ವಿದೇಶಿ ಚಿಂತನೆಗಳು, ಪ್ರಾಚೀನ ಕನ್ನಡ ಸಾಹಿತ್ಯದಿಂದ ಆಧುನಿಕ ಕನ್ನಡ ದಲಿತ ಸಾಹಿತ್ಯದವರೆಗೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ದಲಿತ ಸಂವೇದನೆಗಳನ್ನು ಗುರುತಿಸಬಹುದು. ದಲಿತ ಸಂವೇದನೆ ಎಂದರೆ "ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಶೋಷಣೆಗೊಳಗಾದ ಪಂಚಮರು, ಅಸ್ಪೃಶ್ಯರು ಎಂದು ಕರೆಯಲ್ಪಡುವ ಅಸ್ಪೃಶ್ಯರು ಅಸ್ಪೃಶ್ಯತೆಯ ನೋವು ಅನುಭವಿಸದಿದ್ದರೂ ಅಸ್ಪಶ್ಯರಂತೆ ಆರ್ಥಿಕ–ಸಾಮಾಜಿಕ–ರಾಜಕೀಯ ರಂಗದಲ್ಲಿ ಶೋಷಣೆಗೆ ಒಳಗಾಗುತ್ತಾರೆ. ವೈದಿಕ ಉಪನಿಷತ್ತುಗಳಲ್ಲಿ ಆರ್ಯರು ತ್ಯಾಗದ ನೆಪದಲ್ಲಿ ಕುದುರೆಗಳನ್ನು ತ್ಯಾಗ ಮಾಡುತ್ತಿದ್ದರು ಎಂದು ಕಂಡುಬರುತ್ತದೆ. ಅವರು ಬೌದ್ಧಧರ್ಮದ ಪ್ರಭಾವವನ್ನು ತಡೆಯಲು ಮಾಂಸಾಹಾರವನ್ನು ತ್ಯಜಿಸಿದರು.

ಲಿಂಗ ತಾರತಮ್ಯತೆಯು ಪ್ರಮುಖವಾಗಿ ಪುರುಷ ಪ್ರಧಾನತೆಯಿಂದ ಮಹಿಳೆಯ ಮೇಲೆ ತನ್ನ ಹಿಡಿತವನ್ನು ಸಾಧಿಸುವ ಉದ್ದೇಶದಿಂದಲೇ ರೂಪಿತವಾಗಿದೆ. ಗಂಡು ಮಗುವಿನ ಮೇಲಿನ ತಂದೆಯ ಜವಾಬ್ದಾರಿ ತಾತ್ಕಾಲಿಕವಾಗಿರುತ್ತದೆ. ಮಗನು ಮನೆಯ ಯಜಮಾನನಾಗುವ ತನಕ ತಂದೆಯ ನಿಯಂತ್ರಣದಲ್ಲಿರುತ್ತಾನೆ. ಆದರೆ ಹೆಣ್ಣು ಮಕ್ಕಳು ಮತ್ತು ಹೆಂಡತಿಯರ ಜೀವನ ಪೂರ್ತಿ ಪುರುಷನ ಅಧೀನದಲ್ಲಿರಬೇಕು. ಹೆಣ್ಣು ಮಕ್ಕಳು ಮದುವೆಯಾದ

ನಂತರ ಮತ್ತೊಬ್ಬ ಪುರುಷನ ಆಳ್ವಿಕೆಯ ಮತ್ತು ರಕ್ಷಣೆಗೆ ಒಳಗಾಗುತ್ತಾಳೆ. ಈ ರೀತಿಯರಕ್ಷಣೆ ಮತ್ತು ಆರ್ಥಿಕ ಬೆಂಬಲಕ್ಕೆ ಪ್ರತಿಯಾಗಿ ಮಹಿಳೆಯರು ಪುರುಷರಿಗೆ ಲೈಂಗಿಕ ಸೇವೆ ಮತ್ತು ವೇತನವಿಲ್ಲದೆ ಮನೆ ಕೆಲಸವನ್ನು ಮಾಡಬೇಕಾಗುತ್ತದೆ.[2] ಹೀಗೆ ಲಿಂಗ ತಾರತಮ್ಯತೆಯಿಂದ ಹೆಣ್ಣನ್ನು ನಿರಂತರವಾಗಿ ಶೋಷಣೆಗೆ ಒಳಪಡಿಸಿ, ಎರಡನೇ ದರ್ಜೆಯಲ್ಲಿ ನೋಡುವ ಹುನ್ನಾರಗಳು ನಿಜಕ್ಕೂ ಹಿಂಸಾತ್ಮಕವಾದದ್ದಾಗಿದೆ.

ಮನುಷ್ಯ ಮನುಷ್ಯನ ನಡುವಿನ ಅಸಮಾನತೆಯ ಪ್ರಶ್ನೆಯಲ್ಲಿ ಲಿಂಗಾಧರಿತ ಅಸಮಾನತೆ ಅತ್ಯಂತ ಸಂಕೀರ್ಣವಾದದು ಮತ್ತು ಸೂಕ್ಷ್ಮವಾದುದು. ಈ ಅಸಮಾನತೆ ಜೈವಿಕ ಮೂಲವಾದ ತಾತ್ವಿಕತೆಯ ಹಿನ್ನಲೆಯನ್ನು ಹೊಂದಿರುವಂತಹದು. ಪ್ರಜಾಪ್ರಭುತ್ವ ಮತ್ತು ಅಧಿಕಾರಿಯ ವ್ಯವಸ್ಥೆಯನ್ನು ಸ್ಥಾಪಿಸುವ ಈ ತರದ ಮೌಲ್ಯಗಳು ಗಂಡು–ಹೆಣ್ಣಿನ ಇಬ್ಬರಲೂ ಇರಬಹುದಾಗಿದೆ. ಒಂದು ಕುಟುಂಬದಲ್ಲಿ ಹೆಣ್ಣು ಎಷ್ಟು ದಮನಕಾರಿಯಾಗಿ ತುಳಿತಕ್ಕೆ ಒಳಗಾಗಿರುತ್ತಾಳೆ ಎಂಬ ಸೂಕ್ಷ್ಮವಾದ ವಿಚಾರ ಗಮನಿಸಿದಾಗ ಆರಾಧನೆ, ಪೂಜೆ–ಪುನಸ್ಕಾರ, ಸಂಸ್ಕಾರ, ಮೊದಲಾದ ವಿಷಯಗಳಲ್ಲಿ ಹೆಣ್ಣನ್ನು ನಿಯಂತ್ರಿಸುತ್ತಾ ಬರಲಾಗುತ್ತಿದೆ.

ಮಹಿಳೆಯು ನಿಶ್ಚಲವಾಗಿ ತನ್ನ ಮನಸ್ಸನ್ನು ದಿವ್ಯತೆಯ ಭಾವದಿಂದ ಸರ್ವ ಸಂಪನ್ನಗೊಳಿಸಲು ಪ್ರಯತ್ನಿಸುತ್ತಾಳೆ. ಸರ್ವರಿಗೂ ಒಳಿತಾಗಬೇಕೆಂಬ ಭಾವವನ್ನು ಹೊಂದಿದವಳಾಗಿ ತೋರುತ್ತಾಳೆ. ಹೀಗಾಗಿ ಲಿಂಗ ತಾರತಮ್ಯದ ವಿರುದ್ಧ ಕಾಲ ಕಾಲಕ್ಕೆ ಎಲ್ಲ ಹೋರಾಟಗಳು, ವಿರೋಧಗಳು ನಡೆಯುತ್ತಲೇ ಬಂದಿವೆ. ಮಹಿಳೆಯ ಸಂವೇದನೆಯು ಮುಖ್ಯವಾಗಿ ಶಾಂತಿಯುಕ್ತ ಜೀವನವನ್ನು ನಡೆಸುವುದಾಗಿದೆ. ಸಮಾಜ ಮುಖಿಯಾದ ಹೆಣ್ಣು ಹೆಚ್ಚು ಪರಿಣಾಮಕಾರಿಯಾಗಿ ಜವಾಬ್ದಾರಿಯುತ ಸಮಾಜವನ್ನು ಪ್ರತಿನಿಧಿಸುತ್ತಾಳೆ. ಆದ್ದರಿಂದ ಸಂಸ್ಕಾರಯುಕ್ತವಾದ ಜೀವನವೇ ಭವ್ಯ ಭಾರತದ ಮಹಿಳಾ ಸಶಕ್ತಿಕರಣಕ್ಕೆ ಮೂಲ ಬುನಾದಿಯಾಗಬೇಕು.

ಸಂಪ್ರದಾಯದ ಬದ್ಧ ಮೌಢ್ಯತೆ:

ಭಾರತವು ಸಂಸ್ಕೃತಿ ಮತ್ತು ಪರಂಪರೆಯು ಮೊದಲಿನಿಂದಲೂ ಸ್ತ್ರೀಯರನ್ನು ತನ್ನ ಸಂಪ್ರದಾಯ ಬದ್ಧಧಾರ್ಮಿಕ ಆಚರಣೆಗಳಿಂದ ಬಾಹು ಬಂಧನಕ್ಕೆ ಒಳಪಡಿಸಿದೆ. ಆಳ–ಅಗಲವಿಲ್ಲದಷ್ಟು ವಿಶಾಲವಾದ ಭಾರತೀಯ ಸಂಸ್ಕೃತಿಯ ಮೂಲ ನೆಲೆ 'ಹೆಣ್ಣೆ' ಆಗಿದ್ದಾಳೆ. ಆದರೆ ನಮ್ಮ ಸಮಾಜದಲ್ಲಿ ಇರುವ ಅನಿಷ್ಠ ಸಂಪ್ರದಾಯಗಳು ಮೌಢ್ಯತೆ, ಕಂದಾಚಾರಗಳ ಜೊತೆಗೆ ಧಾರ್ಮಿಕ ಚೌಕಟ್ಟುಗಳು ಹೆಣ್ಣನ್ನು ಹೀನಾಯವಾಗಿ ನಡೆಸಿಕೊಳ್ಳುತ್ತ ಬಂದಿವೆ. "ಧರ್ಮವು ಇವತ್ತಿನವರೆಗೂ ಮಹಿಳೆಯರಿಗೆ, ಅವರ ದುಃಖ ದುಮ್ಮಾನಗಳಿಗೆ ಸುಳ್ಳು ಸಮಾಧಾನ ನೀಡುವ ಸಾಧನವಾಗಿದೆ. ದಿನನಿತ್ಯದ ಒತ್ತಡಗಳನ್ನು ನಿರಾಸೆಗಳನ್ನು ನಿಭಾಯಿಸಲಾಗದ್ದರಿಂದಲೇ ಅವರು ಧರ್ಮದ ಮೊರೆ ಹೋಗಬೇಕಾಗುತ್ತದೆ."[3] ಹೀಗೆ ಧರ್ಮದ ಮೊರೆ ಹೋಗುವುದರೊಂದಿಗೆ ಸ್ತ್ರೀ ಸಂಕುಲವು ಸಂಪ್ರದಾಯದ ಮೌಢ್ಯ ಕಂದಾಚಾರಗಳಿಗೆ ಬಲಿಯಾಗುತ್ತಿದ್ದಾಳೆ. ಧರ್ಮ ಮತ್ತು ಆಧ್ಯಾತ್ಮಿಕತೆಯ ಸ್ವರೂಪವನ್ನು ಅರಿಯದೇ ಮಹಿಳೆಯರು ಮೂಢ ನಂಬಿಕೆಗಳ ಸಂಚಿಗೆ ಒಳಗಾಗುತ್ತಲೆ ಬಂದಿರುವುದು ಚಾರಿತ್ರಿಕ ಸತ್ಯವಾಗಿದೆ.

"ಯತ್ರ ನಾರ್ಯಸ್ತು ಪೂಜ್ಯೆಂತೇ ರಮಂತೇ ತತ್ರದೇವತಾ" ಎಂದು 'ಮನುಸ್ಮೃತಿ'ಯಲ್ಲಿ ಹೇಳಿದಂತೆಯೇ ಭಾರತೀಯ ಸಂಸ್ಕೃತಿಯು ಹೆಣ್ಣನ್ನು ದೇವತೆ ಎಂದು ಪೂಜಿಸುತ್ತಲೆ ಬಂದಿದೆ. ಆದರೆ ಸ್ತ್ರೀ ಸಂಕುಲ ತನ್ನ ವ್ಯಕ್ತಿತ್ವವನ್ನು ಬಿಟ್ಟುಗಂಡಿನ ನೆರಳಾಗಿ ನಡೆದದ್ದು ನಿಜಕ್ಕೂ ವಿಪರ್ಯಾಸದ ಸಂಗತಿಯಾಗಿದೆ. "ಧರ್ಮದ ಹೆಸರಿನಲ್ಲಿ ಅಧರ್ಮವೇ ತಲೆಯೆತ್ತಿ ಅನೇಕ ವಿಕೃತಿ ವಿಚಾರಗಳೊಂದಿಗೆ ಸಾಮಾಜಿಕ ಪಾತ್ರಗಳು ವಿಕೃತಗೊಂಡು ಸ್ತ್ರೀಯರ ಬಗೆಗೆ ಇಬ್ಬಗೆಯ ವಿಚಾರಗಳು ಬೆಳೆದು ಬಂದವು. ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲವೆಂಬುದು ವ್ಯಾಪಕವಾಗಿ ಸ್ವೀಕೃತಿಗೊಂಡು ಕಾಲಾಂತರದಲ್ಲಿ ಅವಳು ಮನದಲ್ಲಿ ಬಲವಾಗಿ ಬೇರೂರಿತು. ಗೃಹ ಕೃತ್ಯಗಳು ಆಕೆಗೆ ಮೀಸಲು. ಅಡುಗೆ ಮನೆಯೇ ಆಕೆಗೆ ಯೋಗ್ಯವಾದ ಸ್ಥಾನ,

ಪತಿ ಹಾಗೂ ಮಕ್ಕಳ ಸೇವೆಯನ್ನು ಮಾಡಿಕೊಂಡಿರುವುದೇ ಆಕೆಯ ಧರ್ಮವೆಂದು ಪರಿಗಣಿಸಲಾಯಿತು."[4] ಹೀಗೆ ಸಂಪ್ರದಾಯ ಬದ್ಧ ಮೌಢ್ಯತೆಯಲ್ಲಿ ಪುರುಷ ನಿರ್ಮಿತಿಯು ಹೆಣ್ಣನ್ನು ಧಾರ್ಮಿಕತೆಯ ಸಂಕೋಲೆಯೊಳಗೆ ಬಂಧಿಸಲಾಯಿತು.

ಈ ರೀತಿಯ ಅನಿಷ್ಠ, ಅವೈಜ್ಞಾನಿಕ ಧಾರ್ಮಿಕ ಸಂಪ್ರದಾಯಗಳಿಗೆ ಬಹು ಬೇಗನೆ ಒಳಗಾಗುವ ಮಹಿಳೆಯರ ಮನೋ ದೌರ್ಬಲ್ಯವನ್ನೇ ಆಧಾರ ವಾಗಿಟ್ಟುಕೊಂಡು, ಅವಳ ಪ್ರಕೃತಿ ದತ್ತವಾದ ಸ್ವಾತಂತ್ರ್ಯಯುಕ್ತ ಜೀವನದಿಂದ ವಂಚಿತರನ್ನಾಗಿಸುತ್ತ ಬರಲಾಗಿದೆ. ಸಂವಿಧಾನದ ಕಾನೂನುಗಳ ಮೂಲಕ ಪಡೆಯುವ ಮೂಲಭೂತ ಹಕ್ಕುಗಳು ಒಮ್ಮೊಮ್ಮೆ ಧಾರ್ಮಿಕ ಸಂಪ್ರದಾಯಗಳು ವಿಧಿಸುವ ಮೌಢ್ಯಗಳ ಮುಂದೆ ಕಮರಿ ಹೋಗುತ್ತವೆ. ಇಂತಹ ಸಂಪ್ರದಾಯಗಳು ಹೆಣ್ಣಿನ ಬದುಕನ್ನು ಮತ್ತಷ್ಟು ಕರಾಳತೆಯತ್ತ ಮುಖ ಮಾಡಿ ನಿಲ್ಲಿಸುತ್ತವೆ. ಹೆಣ್ಣಿನ ದೈಹಿಕತೆಯ ಸಂರಚನೆಯಿಂದ ಅವಳು ಅಪವಿತ್ರ ಎಂಬ ಭಾವನೆಯನ್ನು ಅವಳಲ್ಲಿ ಶಾಸ್ತ್ರ, ಶಕುನಗಳ ಮೂಲಕ ತುಂಬಲಾಯಿತು. ಇದರಿಂದಾಗಿ ಹೆಣ್ಣು ಋತುಮತಿಯಾದಾಗ ಅವಳನ್ನು ಮುಟ್ಟಿಸಿಕೊಳ್ಳದೇ, ಮಡಿ–ಮೈಲಿಗೆ ಎಂದು ಮಠ–ಮಂದಿರಗಳಿಗೆ ಹೋಗುವುದನ್ನು ನಿರ್ಬಂಧಿಸುತ್ತಾರೆ. ಇದನ್ನು ಸಂವಿಧಾನದ ಕಾನೂನುಗಳು ವಿರೋಧಿಸಿದರೂ, ಸಮಾಜದ ಕಾನೂನುಗಳು ಅವಳ ಧಾರ್ಮಿಕ ಹಕ್ಕನ್ನು ಕಸೆದುಕೊಂಡಿದೆ. ಅಲ್ಲದೆ ಇಂತಹ ಪದ್ಧತಿಗಳಿಂದ ಬಾಲ್ಯ ವಿವಾಹ, ಸತಿ ಸಹಗಮನ, ವೈಧ್ಯವ್ಯದಂತಹ ಅನಿಷ್ಠ ಪದ್ಧತಿಗಳು ಹರಡಿಕೊಂಡವು. ಕೇಶ ಮುಂಡನ, ಬಿಳಿವಸ್ತ್ರ ಧರಿಸುವುದರ ಜೊತೆಗೆ ಯಾರ ಜೊತೆಯು ಬೇರೆಯದೇ ಕತ್ತಲಕೋಣೆಯ ವಾಸ, ಮದುವೆಗೂ ಮೊದಲು ವರದಕ್ಷಿಣೆ ಪಿಡುಗು, ಕೆಳವರ್ಗದ ಮಹಿಳೆಗೆ ಮಾತ್ರ ಸೀಮಿತವಾಗಿದ್ದ 'ದೇವದಾಸಿ ಪದ್ಧತಿ' ಇವೆಲ್ಲವೂ ಧರ್ಮದ ಹೆಸರಿನಲ್ಲಿರುವ ಅನಿಷ್ಠ ಸಂಪ್ರದಾಯಗಳು. ಹೆಣ್ಣು ನಲುಗಲು ಈ ಧಾರ್ಮಿಕ ಕಟ್ಟು ಪಾಡುಗಳೇ ಪ್ರಮುಖ ಕಾರಣವಾದವು.

ಈ ರೀತಿಯಾಗಿ ಅನಿಷ್ಠ ಸಂಪ್ರದಾಯಗಳು ಸ್ತ್ರೀಯನ್ನು ಸಮಾಜದಲ್ಲಿ ಒಂದು ಹೊರೆಯಂತೆ ರೂಪಿಸಿ ಪುರುಷನ ಕೈಬೊಂಬೆಯನ್ನಾಗಿ ಮಾಡುವುದರ ಜೊತೆಗೆ "ಧಾರ್ಮಿಕ ನೆಲೆಯಿಂದ ಬಂದ ಮೌಲ್ಯಗಳು ಸ್ತ್ರೀಯನ್ನು ಬದುಕಿನ ಎಲ್ಲ ಹಂತಗಳಲ್ಲೂ ಪುರುಷನ ಅಧೀನವಾಗಿರಿಸಿ, ಆಕೆಯ ಸ್ವಾತಂತ್ರ್ಯ, ಅಸ್ತಿತ್ವವನ್ನು, ಸ್ವತಂತ್ರ ಜೀವನೋಪಾಯವನ್ನು ನಿರಾಕರಿಸಿದವು. ಧರ್ಮ, ಅರ್ಥ ಕಾಮಗಳೆಂಬ ಪುರುಷಾರ್ಥಗಳ ಸಾಧನೆಗೆ ಪುರುಷನ ಲೌಕಿಕ ಬದುಕಿನ ಅಗತ್ಯಗಳಿಗೆ ಪೂರಕವಾಗುವಂತೆ ಪರಮ ವಿಧೇಯತೆ ಸೇವೆ, ತ್ಯಾಗ, ಸಹಿಷ್ಣತೆಗಳಿಂದ ಆತನನ್ನು ಆಶ್ರಯಿಸಿ ಅನುಸರಿಸಿ ಬದುಕುವುದು ಸ್ತ್ರೀಯ ಬದುಕಿನ ಗುರಿಯೆಂದು ಅವು ಸಾರುತ್ತದೆ."[5] ಹೀಗೆ ಪಟ್ಟಭದ್ರ ಹಿತಾಸಕ್ತಿಯ ಧಾರ್ಮಿಕ ಕಂದಾಚಾರಗಳಿಂದ ಸ್ತ್ರೀ ಸಂವೇದನೆಗಳು ತೀವ್ರತರವಾಗಿ ಬೆಳೆದುಕೊಂಡವು. ಅವು ಎಂದಿಗೂ ಸರಿಪಡಿಸಲಾಗದಂತೆ ಬಲಿತುಕೊಂಡವು.

ಸಂಪ್ರದಾಯಬದ್ಧ ಮೌಢ್ಯತೆಯುದೇವರು ಮತ್ತು ಮನುಜನ ನಡುವಿನ ಆಂತರಿಕ ಸಂಬಂಧದ ಸ್ವರೂಪದ ಮೇಲೆಯೇ ಸಂಪೂರ್ಣವಾಗಿ ಅವಲಂಬಿತವಾಗಿದೆ. ಸಂಪ್ರದಾಯದ ಸಿದ್ಧಾಂತಗಳು ಧರ್ಮ–ದೇವರ ಹೆಸರಿನಲ್ಲಿ ರಚನೆಗೊಂಡಿವೆ. ಸಂಸ್ಕಾರ, ಪೂಜೆ–ಪುನಸ್ಕಾರ, ಪಾಪ–ಪುಣ್ಯ ಎಂಬ ಗೊಡ್ಡ ನಂಬಿಕೆಗಳಲ್ಲಿ ಸಂಪ್ರದಾಯವನ್ನು ಬಂಧಿಸಲಾಗಿದೆ. ಸಂಪ್ರದಾಯಗಳಲ್ಲಿ ಭಕ್ತಿಯ ಭಾವಗಳು ಹೆಚ್ಚು ಗಹನವಾಗಿರುತ್ತವೆ. ನಿರ್ವ್ಯಾಜವಾದ ಪೂಜೆಯು ಭಕ್ತಿ ಭಾವದಿಂದ ಸರ್ವ ರೀತಿಯಲ್ಲಿ ತಲ್ಲೀನರಾದರೆ, ದೇವರು ಒಲಿಯುತ್ತಾನೆಂಬ ನಂಬಿಕೆಯನ್ನು ಅಧಿಕೃತವಾಗಿ ಬಿಂಬಿಸಲಾಗಿರುತ್ತದೆ. ಇಂತಹ ಗೊಡ್ಡು ಸಂಪ್ರದಾಯಗಳಿಗೆ ಪುರುಷರಿಗಿಂತ ಮಹಿಳೆಯರೇ ಹೆಚ್ಚು ಬಲಿಯಾಗುತ್ತಾರೆ. ಸಂಪ್ರದಾಯಗಳ ಆಚರಣೆಯ ಫಲದಿಂದ ತಮ್ಮ ಸಮಸ್ಯೆಗಳು ಬಗೆಹರಿಯುತ್ತವೆಂಬ ನಂಬಿಕೆ, ತಮ್ಮಧರ್ಮ ಸಂಪ್ರದಾಯವೇ ತಮ್ಮನ್ನು ಕಾಪಾಡುವುದು ಎಂಬ ನಿಲುವು ಸ್ತ್ರೀಯರಲ್ಲಿ ಬೇರೂರುವಂತೆ ಧರ್ಮ ಗ್ರಂಥಗಳು ಅನೇಕ ದಂತಕತೆಗಳನ್ನು ಹೇಳಿ ನಂಬಿಸಿವೆ. ಮಹಿಳೆಯರು

[4]ಅಕ್ಕ ಕೇಳವ್ವಾ (ಡಾ. ಸರೋಜಿನಿ ಶಿಂತ್ರಿ, ಅಭಿನಂದನಾಗ್ರಂಥ), ವೀಣಾ ಶಾಂತೇಶ್ವರ, ಸಾಹಿತ್ಯ ಪ್ರಕಾಶನ, ಪುಟ–81

[5]ಸಹೃದಯ ಸಂವಾದ, ಎಸ್.ವಿದ್ಯಾಶಂಕರ ಮತ್ತುಡಾ. ಜಿ.ಎಂ.ಹೆಗಡೆ, ಪ್ರಿಯದರ್ಶಿನಿ ಪ್ರಕಾಶನ, ಪುಟ–422

ಸಂಪ್ರದಾಯ–ಸಂಸ್ಕೃತಿ ಎಂಬ ಮೌಢ್ಯತೆಗೆ ತಮ್ಮ ಸಂವೇದನಾತ್ಮಕ ವಿಚಾರಗಳನ್ನು ಬಲಿ ಕೊಟ್ಟಿರುವುದು ಸೋಜಿಗವೆನಿಸುತ್ತದೆ.

ಸ್ತ್ರೀ ಪೂಜೆ, ಆರಾಧನೆಯ ಮೊದಲಾದ ಸಂಪ್ರದಾಯಗಳ ಮೂಲಕ ಧರ್ಮ ಮಾರ್ಗದಿಂದ ನಡೆದು ಎಲ್ಲ ರೀತಿಯ ಕರ್ಮವನ್ನು ತನ್ನದೆಯಾದ ರೀತಿಯಲ್ಲಿ ಕ್ಷಯವಾಗಿಸಿಕೊಂಡು ಸದ್ಗತಿಯನ್ನು ಹೊಂದಲು, ಸುಖ–ಶಾಂತಿಯ ಬದುಕನ್ನು ನಡೆಸಲು ಬಯಸುತ್ತಾಳೆ. ಈ ಸಂಪ್ರದಾಯಗಳ ಆಚರಣೆಯ ಫಲವಾಗಿ ಮಹಿಳೆಯರು ಸದ್ಗತಿಗೆ ಹೊಂದುವುದರ ಜೊತೆಗೆ ಮೋಕ್ಷಾತ್ಮರಾಗಬೇಕೆನ್ನುವ ನಂಬಿಕೆಯು ಕೂಡಾ ಇರುವುದನ್ನು ಕಾಣುತ್ತೇವೆ. ಮರು ಜನ್ಮದಲ್ಲಿ ಸಕಲ ಸಂಪತ್ತು ಮತ್ತು ಸುಖ, ಶಾಂತಿಯ ಜೀವನವನ್ನು ನಡೆಸುವುದು ಎಂಬ ವಿಚಾರ ಸ್ತ್ರೀ ಕುಲದ ಮೌಢ್ಯ ಸಂಪ್ರದಾಯದ ನಂಬಿಕೆಯಾಗಿರುತ್ತದೆ. ಸ್ತ್ರೀಯರು ಸಾಂಪ್ರದಾಯಿಕ ಲೌಕಿಕ ಉನ್ನತಿಯ ಬಗೆಗೆ ತೋರಿದ ಕಾಳಜಿಯು ಅಪಾರವಾದುದು. ಇಂಥ ಒಂದು ಅಪೂರ್ವವಾದ ಕಾಳಜಿಯು ಫಲದಾಯಕವಾಗಬೇಕಾದರೆ, ಪೂಜಾ ವಿಧಾನವು ಸದ್ಭಕ್ತಿಯಿಂದ ಕೂಡಿಕೊಂಡಾಗ, ಮಾತ್ರವೇ ಸಾಧ್ಯ ಎಂಬ ನಂಬಿಕೆಯ ಧೃಡವಾಗಿರುತ್ತದೆ. ಈ ಮೊದಲಾದ ಧಾರ್ಮಿಕ ಸಂಪ್ರದಾಯದ ಹೆಸರಿನ ಮೇಲೆ ಮಹಿಳಾ ದೌರ್ಜನ್ಯಗಳು ಕೂಡಾ ಬೆಳಕಿಗೆ ಬರದಿರುವುದು ಕೂಡಾ ವಿಪರ್ಯಾಸದ ಸಂಗತಿ.

ಇವುಗಳಲ್ಲದೇ ಕೆಲವು ಸಾಮಾಜಿಕ ಸಂಪ್ರದಾಯಗಳಲ್ಲಿ ಗಂಡನು ಹೆಂಡತಿಯನ್ನು ಲೈಂಗಿಕವಾಗಿ ಹಿಂಸಿಸುವುದು, ಅತ್ಯಾಚಾರ, ನಿಂದನೆ, ಅಪಮಾನ, ಅವಮಾನ, ವರದಕ್ಷಿಣೆ ಹಿಂಸೆ ಇವೇ ಮೊದಲಾದವು ಪುರುಷ ಪ್ರಧಾನತೆಯಲ್ಲಿ ನಡೆಯುವ ದೌರ್ಜನ್ಯದ ಸಂಪ್ರದಾಯವನ್ನು ಎತ್ತಿ ತೋರಿಸುವ ನಿದರ್ಶನಗಳಾಗಿವೆ. ಮಾನಸಿಕವಾಗಿ ಖಿನ್ನತೆಗೆ ಒಳಪಡಿಸುವಲ್ಲಿ ಕೆಲವು ಸಂಪ್ರದಾಯಗಳು ಅತೀರೇಕವೆನ್ನುವಷ್ಟು ಇಂದಿಗೂ ಜಾರಿಯಲ್ಲಿವೆ. ಬೆತ್ತಲೆ ಸೇವೆ, ದೇವದಾಸಿ ಪದ್ಧತಿ, ಬಂಜೆ ಮತ್ತು ವಿಧವೆಗೆ ಸಮಾರಂಭಗಳಲ್ಲಿ ನಿಷೇಧ, ಹದಿಹರೆಯಲ್ಲಿಯೇ ಗಂಡನನ್ನು ಕಳೆದುಕೊಂಡಾಗ ಪ್ರಕೃತಿಯ ಸಹಜವಾದ ವಿಶಿಷ್ಟ ಜೈವಿಕ ಕಾಮನಗಳನ್ನು ಹತ್ತಿಕ್ಕಿಕೊಂಡು ಬದುಕಬೇಕೆಂಬ ಮಾನಸಿಕ ಒತ್ತಡಗಳು, ತಲೆಬೋಳಿಸಿ ವಿರೂಪಗೊಳಿಸುವುದು ಇವೇ ಮೊದಲಾದವು ಹೆಣ್ಣನ್ನು ನಿಕೃಷ್ಟವಾಗಿ ಬಳಸಿಕೊಳ್ಳುವ ಗೊಡ್ಡು ಸಂಪ್ರದಾಯಗಳಾಗಿವೆ. ಹೀಗೆ ಸಂಪ್ರದಾಯ ಭಾವವು ತಾತ್ವಿಕ ಜೀವದ ಒಂದು ಕಲ್ಪನೆಯೇ ಆಗಿದೆ. ಕಲ್ಲು ಮುಳ್ಳುಗಳಿಂದ ತುಂಬಿದ ಈ ಮಾರ್ಗವನ್ನು ಪ್ರೇಮ ಭಾವದಿಂದ, ಆಧ್ಯಾತ್ಮಿಕ ಸಾಧನೆಯ ಕಲ್ಪನೆಯ ಪ್ರತೀಕವಾಗಿ ಸ್ತ್ರೀಯರಿಗೆ ವಿಧಿಸಲಾಗಿದೆ.

ಭಾರತೀಯರ ಪ್ರಜ್ಞೆಯು ಸಂಪ್ರದಾಯ ತತ್ವವನ್ನು ಸಮನ್ವಯ ಶಕ್ತಿ, ಸಂಕೇತವಾಗಿ, ಸ್ತ್ರೀ–ಶಕ್ತಿಯನ್ನು ಪರಮಾತ್ಮತತ್ವದ ಸಮಿಕರಣವಾಗಿ ಪರಿಗಣಿಸುತ್ತದೆ. ಶಿವ–ಶಕ್ತಿ, ಪುರುಷ–ಪ್ರಕೃತಿ ಎಂಬ ಪರಿಕಲ್ಪನೆಗಳು ಧಾರ್ಮಿಕ ಮತ್ತು ಸಾಮಾಜಿಕ ಸಂಪ್ರದಾಯಗಳ ನೆಲೆಗಳಲ್ಲಿ ಸ್ತ್ರೀಯು ಅನುಸರಿಸಬೇಕಾದಾಗ ಅನೇಕ ವಿಪರ್ಯಾಸಗಳಿಗೆ ತುತ್ತಾಗುತ್ತಾಳೆ. ಇಂಥ ಸ್ತ್ರೀ ಶಕ್ತಿ ವಿಕಾಸ ಪೂರ್ಣವಾದ ಭವ್ಯತೆ ಹಾಗೂ ದಿವ್ಯತೆಯ ಜೊತೆಗೆ ಧರ್ಮದರ್ಶನ ಮತ್ತು ಸಂಪ್ರದಾಯಗಳ ನಿರ್ಮಾತೃಗಳೂ ಬಹುತೇಕ ಪುರಷರೇ ಆಗಿರುವುದರಿಂದಾಗಿ ಈ ಸಂಪ್ರದಾಯಗಳಲ್ಲಿ ಕಠಿಣ ಆಚರಣೆಗಳು ಸ್ತ್ರೀಯರಿಗೆ ಮಾತ್ರ ಅನ್ವಯಿಸುತ್ತವೆ.

ಪುರುಷರು ಮಹಿಳೆಯನ್ನು ಕುರಿತಂತೆ ಹೊಂದಿರುವ ಕಲ್ಪನೆಗಳೇ ಮಹಿಳಾ ಧಾರ್ಮಿಕ ಅಸ್ತಿತ್ವವೆಂದು ಹೇಳಬಹುದಾದಷ್ಟು ಧರ್ಮ ಪರಂಪರೆಗಳು ನಮಗೆ ಕಾಣಿಸಿಕೊಳ್ಳುತ್ತವೆ. ಮಹಿಳೆಯನ್ನು ಅಧೀನವಾಗಿಸುವಲ್ಲಿ ಸಂಪ್ರದಾಯಗಳ ಮೌಢ್ಯತೆ ಎಷ್ಟರ ಮಟ್ಟಿಗೆ ತನ್ನ ತಂತ್ರವನ್ನು ನಿರ್ವಹಿಸುತ್ತದೆ ಎಂಬುದು ಆಯಾ ಧರ್ಮ–ಶಾಸ್ತ್ರ–ಪುರಾಣಗಳಿಂದ ಅರ್ಥವಾಗುತ್ತದೆ. ಈ ರೀತಿಯಾಗಿ ಪುರುಷ ಪ್ರಭುತ್ವದ ಪ್ರತಿಯೊಂದು ಜೀವನ ಮೌಲ್ಯ(ನೆಲೆ)ಗಳಲ್ಲಿ ಹೆಣ್ಣನ್ನು ಅಧೀನಳನ್ನಾಗಿಸುವ ಹುನ್ನಾರವು ಅನಾದಿ ಕಾಲದಿಂದಲೂ ನಡೆಯುತ್ತಲೇ ಬಂದಿರುವುದನ್ನು ಗುರುತಿಸಬಹುದು.

ಆದರ್ಶತೆ–ಶೀಲ ಪಾತಿವ್ರತ್ಯ–ದಾಂಪತ್ಯ:

ಸ್ತ್ರೀ ಹುಟ್ಟಿನಿಂದಲೂ ತನ್ನ ಜೀವಮಾನವನ್ನು ಪರರಿಗಾಗಿಯೇ ಸವೆಸುತ್ತಾ ಬಂದರೂ ಸಾಮಾಜಿಕ ಅನೇಕ ಸ್ಥಿತ್ಯಂತರಗಳ ಜೊತೆಗೆ, ಪುರುಷ ಪ್ರಭುತ್ವ ಹೆಣ್ಣನ್ನು ಹೀನಾಯವಾಗಿ ನಡೆಸಿಕೊಂಡು ಬರುತ್ತಲೇಇದ್ದಾನೆ. ಹೀಗಾಗಿಯೆಇಂದುತನ್ನ ಅಸ್ತಿತ್ವ–ಅಸ್ಮಿತೆಗಳನ್ನು ಕಾಪಾಡಿಕೊಳ್ಳಲು ಸ್ವತಂತ್ರ್ಯವಾಗಿಅಭಿವ್ಯಕ್ತಿಸಲು ಸ್ತ್ರೀ ತನ್ನದೇಆದ 'ಸಂವೇದನೆ'ಗಳನ್ನು ಹೊರಹಾಕಲು ಹವಣಿಸುತ್ತಿದ್ದಾಳೆ. ಇಂದು ಸಾಹಿತ್ಯವು ಅವಳಿಗೊಂದು ವೇದಿಕೆಯಾಗಿದೆ. ಈ ವೇದಿಕೆಯು ಬಹಳ ವರ್ಷಗಳಿಂದ ತೆರೆಮರೆಯಲ್ಲಿ ಸರಿದು ಹೋಗಿತ್ತು. ನಮ್ಮ ಸಾಹಿತ್ಯ ಚರಿತ್ರೆಯೇ ಹೇಳುವಂತೆ ಎರಡು ಸಾವಿರ ವರ್ಷಗಳ ಸುದೀರ್ಘವಾದ ಕನ್ನಡ ಸಾಹಿತ್ಯದ ಬೆರಳೆಣಿಕೆಯ ಸ್ತ್ರೀ ಬರಹಗಾರರು ಕಾಣಿಸಿಕೊಳ್ಳುತ್ತಾರೆ. ಅದರಲ್ಲಿಯೂ 12ನೆಯ ಶತಮಾನದ ಶಿವಶರಣರ ಕಾಲದಲ್ಲಿನ ವಚನಕಾರ್ತಿಯರನ್ನು ಬಿಟ್ಟರೆ ಸ್ತ್ರೀ ಸಾಹಿತಿಗಳು ಎರಡಂಕಿಯನ್ನು ದಾಟುವುದೇ ಇಲ್ಲ. ಅವರಿಗೆ ಮುಕ್ತವಾಗಿ ಬರೆಯುವುದಿರಲಿ; ಮಾತನಾಡಲು ಸಹ ಸ್ವಾತಂತ್ರವಿರದಿದ್ದ ಕಾಲಗಳು ಈ ಹಿಂದೆಯೇ ಗತಿಸಿ ಹೋಗಿವೆ. ಹಾಗೆಯೇ ಮಧ್ಯಕಾಲೀನ ಕನ್ನಡ ಸಾಹಿತ್ಯವನ್ನು ಅವಲೋಕಿಸುವದಾದರೆ ಅಲ್ಲಿ ಸಂಚಿ ಹೊನ್ನಮ್ಮ ಒಬ್ಬಳೇ 18ನೆಯ ಶತಮಾನದ ಕೊನೆಗಾಲದಲ್ಲಿ ಕಾಣಿಸುವ ಏಕೈಕ ಮಹಿಳಾ ಸಾಹಿತಿ ಆಗಿದ್ದಾಳೆ. ಅವಳ ಸಾಹಿತ್ಯ ಕೃತಿ 'ಹದಿಬದೆಯ ಧರ್ಮ'ವಾದರೂ ಸ್ತ್ರೀಯು ಅನುಸರಿಸಬೇಕಾದ 'ಪಾತಿವ್ರತ್ಯತೆ'ಯ ಧರ್ಮವನ್ನೇ ಸಾರುತ್ತದೆ. ಅವಳು ಪದ್ಯ ಪದ್ಯದಲ್ಲೂ ಹೇಳುವುದು ಹೆಣ್ಣಿನ 'ಸಂವೇದನೆ'ಗಳೇ ಆಗಿವೆ.

ಸಂಚಿ ಹೊನ್ನಮ್ಮಳು ರಚಿಸಿದ 'ಹದಿಬದೆಯ ಧರ್ಮ' ಕನ್ನಡ ಸಾಹಿತ್ಯದ ಒಂದು ಅನನ್ಯ ಕೃತಿ. ಸ್ತ್ರೀಯು ಅನುಸರಿಸಬೇಕಾದ ಪಾತಿವ್ರತ್ಯತೆಯನ್ನು ಸಾರುವ ಸಾಂಗತ್ಯ ಕಾವ್ಯವಾಗಿದೆ. ಈ ಕೃತಿಯಲ್ಲಿ 'ಸನಾತನ ಪದ್ಧತಿ' ಎದ್ದು ಕಾಣುತ್ತದೆ ಆದರೂ ಅಲ್ಲಲ್ಲಿ ಅದನ್ನು ಪ್ರತಿಭಟಿಸುವ, ವಿರೋಧಿಸುವ ಅಲೆಗಳನ್ನು ಮುಕ್ತವಾಗಿ ಹಂಚಿಕೊಂಡಿರುವುದನ್ನು ಕಾಣುತ್ತೇವೆ. ಸ್ತ್ರೀಯರಿಗೆ ಆಗುವ ಅನ್ಯಾಯಗಳನ್ನು ದಿಟ್ಟತನದಿಂದ ಪ್ರತಿರೋಧಿಸುವ ಅವಳ ಎದೆಗಾರಿಕೆ ಮೆಚ್ಚುವಂತಹದ್ದೇ ಆಗಿದೆ. ಆಕೆಯ ದೃಷ್ಟಿಯಲ್ಲಿ ಹೆಣ್ಣು ಗೃಹ ದೇವತೆ. ಹೊನ್ನಮ್ಮ ಹೆಣ್ಣಿನ ಸ್ವಭಾವ ವೈಶಿಷ್ಟ್ಯತೆಯೊಂದಿಗೆ ಅವರ ಪ್ರತಿ ವರ್ತನೆಯನ್ನೂ ಎಳೆ ಎಳೆಯಾಗಿ ಬಿಡಿಸಿಟ್ಟು, ಹದಿಬದೆಯ ಧರ್ಮವನ್ನು ಸರಳವಾಗಿ, ಸುಂದರವಾಗಿ, ಮನೋಹರವಾಗಿ, ಗುಣ ಪೂರ್ಣವಾಗಿ ರಚಿಸಿದ್ದಾಳೆ. ಇದು ಅವಳ ಬೌದ್ಧಿಕ ತಳಹದಿಗೆ ಹಿಡಿದ ಕೈಗನ್ನಡಿಯಾಗಿದೆ. ಕೇವಲ ಅವಳೊಬ್ಬಳದೇ ಆಗಿರದೇ ಅದು ಅಂದಿನ ಸಮಾಜದಲ್ಲಿನ ಹಾಗೂ ಅದುವರೆಗೂ ಹೆಣ್ಣು ನಡೆದುಕೊಂಡು ಬಂದಿರುವಆದರ್ಶತೆ, ಶೀಲ ಪಾತಿವ್ರತ್ಯ, ದಾಂಪತ್ಯ, ಸಂವೇದನೆಗಳನ್ನೇ ಹೇಳುತ್ತದೆ. ಅಲ್ಲದೇ ಹೆಣ್ಣಿನ ಬಗ್ಗೆ ಅಂದಿನ ಸಮಾಜ ತಳೆದಿದ್ದ ಮಲತಾಯಿ ಧೋರಣೆ, ಅಸಮಾನತೆಯನ್ನು ತೀಕ್ಷ್ಣವಾಗಿ ಖಂಡಿಸುತ್ತದೆ. ಅನೇಕ ಕಡೆ ಹೊನ್ನಮ್ಮಳು ಆತ್ಮವಿಶ್ವಾಸದಿಂದ ಮಾತನಾಡುತ್ತಾಳೆ. ಉದಾ :

"ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು?"

ಎಂದಿದ್ದಾಳೆ. ಇದು ಎಷ್ಟೊಂದು ಸರಳ, ಸಹಜವಾಗಿ ಮತ್ತು ಮಾರ್ಮಿಕವಾಗಿ ಪುರುಷ ಕೇಂದ್ರಿಕೃತ ಸಮಾಜದ ದುರುಳತನವನ್ನು ಬಯಲಿಗೆಳೆಯುತ್ತಾಳೆ ಎಂಬುದಕ್ಕೆ ಸಾಕ್ಷಿಯಾಗಿದೆ. ಇಂತಹ ಹತ್ತು ಹಲವು ವಿಚಾರಗಳನ್ನು ಅವಳ ಕಾವ್ಯದುದ್ದಕ್ಕೂ ನಾವು ಗುರುತಿಸಬಹುದು. ಹಾಗೆಯೇಇಲ್ಲಿ ಮಹಿಳಾ ಜಗತ್ತನ್ನು ಎಚ್ಚರಿಸುವಂತಹ ಜವಾಬ್ದಾರಿಯುತ ಕಾರ್ಯವನ್ನು ಹೇಳಿದ್ದಾಳೆ.

ಆದರ್ಶತೆ: ಕುಟುಂಬ ಜೀವನವೇ ತನ್ನ ಸರ್ವಸ್ವ ಎಂದುಕೊಂಡು ಬದುಕಿದ ಸ್ತ್ರೀ ಸಂಕುಲದ ಸಂವೇದನೆಗೆ ಬಹುಮುಖ್ಯ ಕಾರಣವೆಂದರೆ 'ಆದರ್ಶತೆ'. ಹೆಣ್ಣಿಗೆ ಪತಿಯೇ ಪರದೈವ ಎಂಬ ಸತಿ ಧರ್ಮದ ನೀತಿಯನ್ನು ಅವಳ ಮನೋ ಭೂಮಿಕೆಯಲ್ಲಿ ಬಿತ್ತಿರುವುದು "ಬಹುಶಃ ಯಾವುದೇ ಪುರುಷ ಪ್ರಧಾನ ವ್ಯವಸ್ಥೆ ರೂಪಿಸಿದ ಅತಿ ಯಶಸ್ವಿ ಆದರ್ಶವೆಂದರೆ ಪತಿವ್ರತಾ ಧರ್ಮವೇ ಇರಬೇಕು. ಹೆಣ್ಣಿಗೆ ಸ್ತ್ರೀ ಧರ್ಮ ಪತಿವ್ರತಾ ಧರ್ಮದ ಬಗ್ಗೆ

ಮನದಟ್ಟಾಗುವಂತೆ ಸತಿತ್ವದ ನೀತಿ ನಿಯಮಗಳನ್ನು ಅವಳ ಆಂತರಿಕ ಗುಣದಲ್ಲೇ ಅಳವಡಿಸಲು ಅದರಲ್ಲೂ ಮುಖ್ಯವಾಗಿ ಬ್ರಾಹ್ಮಣ ಪುರುಷ ಪ್ರಧಾನ ವ್ಯವಸ್ಥೆ ಪತಿವ್ರತಾ ಧರ್ಮವನ್ನು ಮಹಿಳೆ ಒಪ್ಪುವಂತೆ, ಅಷ್ಟೇ ಅಲ್ಲ ಅದನ್ನೊಂದು ಆದರ್ಶವನ್ನಾಗಿ ಸ್ವೀಕರಿಸುವಂತೆ ಪತಿ ನಿಷ್ಠೆಯೇ ಸ್ತ್ರೀ ತತ್ವ ಆತ್ಯಂತಿಕ ಮೌಲ್ಯವೆಂದು ಒಪ್ಪುವಂತೆ ಮಾಡಿತು."[6] ಇದರಿಂದಾಗಿ ಸ್ತ್ರೀ ಸಂಕುಲ ತನ್ನಜೀವನ ಸಾರ್ಥಕತೆಯನ್ನು ಹೊಂದಬೇಕಾದರೆ 'ಪತಿವ್ರತಾ ಧರ್ಮ' ಅನಿವಾರ್ಯ ಎಂದು ಒಪ್ಪಿಕೊಂಡಳು. ಹೀಗೆ ತನ್ನ ಆಸೆ, ಆಕಾಂಕ್ಷೆಗಳನ್ನು ಹತ್ತಿಕ್ಕಿಕೊಂಡು ಪುರುಷ ಪ್ರಧಾನದ ಆಳ್ವಿಕೆಗೆ ಒಳಪಟ್ಟು 'ಆದರ್ಶ ಸತಿ' ಎನಿಸಿಕೊಳ್ಳಬೇಕಾಯಿತು.

ಪುರುಷ ಪ್ರಭುತ್ವ ಹೆಣದ ಮೌಲ್ಯ ಆದರ್ಶಗಳ ಜೇಡರ ಬಲೆಯಲ್ಲಿ ಸಿಲುಕಿದ ಸ್ತ್ರೀ ಎಲ್ಲಾ ಕಷ್ಟಗಳನ್ನು ಮೌನವಾಗಿ ಸಹಿಸತೊಡಗಿದಳು. ಸ್ವಂತಿಕೆಯಿಲ್ಲದೆ ಪ್ರತಿಯೊಂದು ಹಂತದಲ್ಲಿಯೂ ಪುರುಷ ಪ್ರಾಬಲ್ಯಕ್ಕೆ ಒಳಗಾಗಿ ತನಗೂ ಒಂದು ಸ್ವತಂತ್ರವಾದ ಬದುಕಿದೆ ಎಂಬುದನ್ನು ಮರೆಯುವಂತೆ ಹೊಗಳಿ ಹೊನ್ನ ಶೂಲಕ್ಕೆ ಏರಿಸುವುದು ಸಹ ಈ ಆದರ್ಶದಿಂದಲೇ ಪ್ರಾರಂಭವಾಯಿತು. ಹೀಗೆ ಪತಿವ್ರತಾ ಧರ್ಮವನ್ನು ಅನುಸರಿಸಿದಂತಹ ಸೀತೆ, ಸಾವಿತ್ರಿ, ರೇಣುಕೆ, ಅರುಂಧತಿ, ಅನಸೂಯಾ, ಸತಿ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇವರೆಲ್ಲರೂ ಸಹ ಆದರ್ಶ ಸತಿಯಿಂದಾಗಿಯೇ ನಾನಾ ಹಿಂಸೆಗಳನ್ನು ಅನುಭವಿಸಿ ದು:ಖ್ಯಾಂತದ ವೇದನೆಯ ಬದುಕನ್ನು ಅನುಭವಿಸಿದರು. ಇಂದಿಗೂ ಸಹ "ಭಾರತೀಯ ಸಂಸ್ಕೃತಿ ಹಾಗೂ ಭಾರತೀಯ ನಾರಿಯ ಹೆಸರಿನಲ್ಲಿ ಹೆಣ್ಣಿನ ನಡೆ–ನುಡಿ, ಆಚಾರ–ವ್ಯವಹಾರ–ಸಂಬಂಧಗಳ ಮೇಲೆ ಈಗಲೂ ಬೇರೆ ಬೇರೆ ರೂಪದಲ್ಲಿ ನಿರ್ಬಂಧಗಳು ಚಾಲ್ತಿಯಲ್ಲಿರುವುದನ್ನು ಗಮನಿಸ ಬಹುದು."[7] ಇಂತಹ ಒಣ ಆದರ್ಶಗಳು ಕೇವಲ ತನ್ನ ಸ್ವಾರ್ಥ ಲಾಲಸೆಯೆ ಕುತಂತ್ರಗಳೇ ಆಗಿವೆ ಎಂಬುದು ಆದರ್ಶಗಳ ಹಿಂದಿನ ಸಂಚನ್ನು ಅವಲೋಕಿಸಿದಾಗ ಅರ್ಥವಾಗುತ್ತದೆ.

ಸ್ತ್ರೀವಾದಿ ಚಿಂತಕಿಯಾದ ವರ್ಜೀನಿಯಾ ವುಲ್ಫ್ ಮಹಿಳೆಯ ಸ್ಥಾನಮಾನದ ಕುರಿತು ಈ ರೀತಿ ಹೇಳುತ್ತಾಳೆ– "ಕಾಲ್ಪನಿಕವಾಗಿ ಮಹಿಳೆಗೆ ಅತ್ಯಂತ ಮಹತ್ವಪೂರ್ಣ ಸ್ಥಾನವಿದೆ. ಆದರೆ ವಾಸ್ತವವಾಗಿ ಅವಳು ಸಂಪೂರ್ಣ ಕಡೆಗಣಿಸಲ್ಪಟ್ಟಿದ್ದಾಳೆ. ಕಾವ್ಯದಲ್ಲಿ ಮೊದಲಿನಿಂದ ಕೊನೆಯವರೆಗೂ ಅವಳೇ ವ್ಯಾಪಿಸಿರುತ್ತಾಳೆ. ಆದರೆ ಚರಿತ್ರೆಯಿಂದ ಮಾತ್ರ ಗೈರು ಹಾಜರಾಗಿರುತ್ತಾಳೆ"[8] ಎಂದಿದ್ದಾರೆ.

ಹೀಗೆ ಚರಿತ್ರೆಯುದ್ದಕ್ಕೂ ಹೆಣ್ಣು ರಾಜನನ್ನು, ರಾಜ್ಯ–ಮನೆತನಗಳನ್ನು, ಆಳುತ್ತಾ, ಸ್ತ್ರೀ ಸಂಕುಲಕ್ಕೆ ಆದರ್ಶವಾಗಿರುತ್ತಾಳೆ. ಇಂತಹ ಪೊಳ್ಳು ಆದರ್ಶಗಳಿಂದ, ವ್ಯಕ್ತಿತ್ವವಿಲ್ಲದೆ ಮರು ಭೂಮಿಯಂತೆ ಸಂಸಾರದ ಚುಕ್ಕಾಣಿ ಹಿಡಿದು, ಸತಿತ್ವ ಎಂಬ ತತ್ವವನ್ನು ಚಾಚು ತಪ್ಪದೆ ಪುರುಷ ನಿರ್ಮಿಸಿದ ಚೌಕಟ್ಟುಗಳನ್ನು ಮೈಮನಗಳಲ್ಲಿ ತುಂಬಿಕೊಂಡು ಆದರ್ಶ ಗೃಹಿಣಿ, ಆದರ್ಶ ಮಡದಿ, ಆದರ್ಶ ಮಾತೆ, ತನ್ನದು ಸಾರ್ಥಕದ ಬದುಕು ಎಂದು ಭಾವಿಸಿಕೊಂಡಿದ್ದೆ ತನ್ನತನದ ವ್ಯಕ್ತಿತ್ವಕ್ಕೆ ತಿಲಾಂಜಲಿಯನ್ನು ಇಟ್ಟುಕೊಳ್ಳುವಷ್ಟರ ಮಟ್ಟಿಗೆ 'ಆದರ್ಶತ್ವ' ಬೆಳೆದುಕೊಂಡಿತು. ಹೆಣ್ಣಿನ ಬದುಕು ಆದರ್ಶವೆಂಬ ಮೌಲ್ಯಕ್ಕೆ ಕಟ್ಟುಬಿದ್ದು ನಲುಗುವಂತೆ ಮಾಡಿದ್ದು ಪುರುಷ ಕೇಂದ್ರಿತ ಸಮಾಜವೇ. ಧರ್ಮ, ಶಾಸ್ತ್ರ, ಪುರಾಣಗಳ ವಿಧಿಗೆ ಸಿಲುಕಿಸಿ, ಆದರ್ಶತೆಗಳ ಸರಮಾಲೆಯನ್ನು ಹೆಣೆದು, ಅವಳ ಕೊರಳಿಗೆ ಹಾಕಿ, ಅವಳ ಕೊರಳಿಂದ ಸಂವೇದನೆಗಳ ಧ್ವನಿಯೇ ಹೊರಡದಂತೆ ಹತ್ತಿಕ್ಕಲಾಯಿತು. ಈ ಆದರ್ಶತೆ, ಗೃಹಣೇತ್ವ, ಶೀಲ ಪಾತಿವ್ರತ್ಯಗಳೇ ಅವಳನ್ನು ಕಲ್ಪನಾ ಲೋಕದಲ್ಲಿ ಉನ್ನತಿಗೇರಿಸಿದರೆ ವಾಸ್ತವದಲ್ಲಿ ಅವಳನ್ನು ಕೊಲ್ಲಲು ಮಾಡಿದ ಪಾಶಾಣಗಳಾಗಿ ಮಾರ್ಪಟ್ಟಿವೆ.

[6]ಮಹಿಳೆ ದಲಿತತ್ವ ಮತ್ತುರಾಜಕೀಯ ಪ್ರಜ್ಞೆ, ಎಚ್.ಎಸ್. ಅನುಪಮಾ, ಲಡಾಯಿ ಪ್ರಕಾಶನ, ಪುಟ–30

[7]ಮಹಿಳೆ ದಲಿತತ್ವ ಮತ್ತುರಾಜಕೀಯ ಪ್ರಜ್ಞೆ, ಎಚ್.ಎಸ್. ಅನುಪಮಾ, ಲಡಾಯಿ ಪ್ರಕಾಶನ, ಪುಟ–30

[8]ಮಹಿಳೆ ದಲಿತತ್ವ ಮತ್ತುರಾಜಕೀಯ ಪ್ರಜ್ಞೆ, ಎಚ್.ಎಸ್. ಅನುಪಮಾ, ಲಡಾಯಿ ಪ್ರಕಾಶನ, ಪುಟ–31

ಗೃಹಣೀತ್ವ ದೀಕ್ಷೆ:

ಪುರುಷ ಪ್ರಧಾನ ಕುಟುಂಬದ ಯಜಮಾನ ಸಂಸ್ಕೃತಿಯಲ್ಲಿ ಹೆಣ್ಣನ್ನು ಭೋಗದ ವಸ್ತುವನ್ನಾಗಿ ಬಳಸಿಕೊಂಡು ಶೋಷಣೆಗೆ ಒಳಪಡಿಸುತ್ತಲೆ ಬಂದಿದೆ. ಹೆಣ್ಣು ಗೃಹಣೀತ್ವದ ದೀಕ್ಷೆಗೆ ಮಾತ್ರ ಸೀಮಿತ ಎಂಬ ನಿಯಂತ್ರಣ ಶತ–ಶತಮಾನಗಳಲ್ಲಿ ವೇದ–ಪುರಾಣಗಳು ಸಹ ಸ್ಪಷ್ಟಪಡಿಸುತ್ತವೆ. ಇದಕ್ಕೆ ನಿದರ್ಶನವೆಂಬಂತೆ ಮನು ತನ್ನ ಮನುಸ್ಮೃತಿಯಲ್ಲಿ– "ಪೀತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ರಕ್ಷಂತಿ ಸ್ಥವಿರೇ ಪುತ್ರಾನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ"[9]ಎಂದಿರುವುದು. ಜೊತೆಗೆ ಹೆಣ್ಣು ಬಾಲ್ಯದಲ್ಲಿ ತಂದೆಯ ಜೊತೆಗೆ, ಯೌವ್ವನದಲ್ಲಿ ಗಂಡನ ಜೊತೆಗೆ ವೃದ್ಯಾಪದಲ್ಲಿ ಮಗನ ಆಶ್ರಯದಲ್ಲಿ ತನ್ನ ಜೀವನ ನಡೆಸಬೇಕೆಂದು ನಿರ್ದೇಶನವನ್ನು ನೀಡುತ್ತಾನೆ. ಹೀಗೆ ಹೆಣ್ಣನ್ನುಗೃಹಣೀತ್ವದ ದೀಕ್ಷೆಯನ್ನು ನೀಡಿತಮ್ಮನ್ನು, ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಅವಳನ್ನು ಉದ್ದೇಶಪೂರಕವಾಗಿ ಗೃಹಕೃತ್ಯಗಳಿಗೆ ನೇಮಿಸಲಾಗಿತ್ತು. ಅಲ್ಲದೇ ಅವಳು ಸುಕೋಮಲೆ, ಹೆಂಗರುಳು, ಕರುಣಾಮಯಿಯೆಂಬ ಭಾವನಾತ್ಮಕತೆಯ ಜೇಡರ ಬಲೆಯಲ್ಲಿ ಅವಳನ್ನು ಬಂದಿಸಿ, ಕೊನೆಗೂ ಹೆಣ್ತನದ ಗೃಹ ಬಂಧನದಲ್ಲಿ ತಾನಾಗಿಯೇ ಅನುಸರಿಸುವಂತೆ, ಅವಳಲ್ಲಿ ಸ್ತ್ರೀ ತತ್ವವನ್ನು ಬೆಳೆಸಲಾಯಿತು. ನಂತರ ಪುರುಷ ಪ್ರಧಾನತೆಯ ಚೌಕಟ್ಟಿನಲ್ಲಿ ತನ್ನನ್ನುತಾನು ಸೀಮಿತಗೊಳಿಸಿಕೊಳ್ಳಲು ಪುರುಷನ ಯಾಜಮಾನ್ಯ ಸಂಸ್ಕೃತಿಯೇ ಮೂಲ ಕಾರಣವಾಯಿತು.

ಸಮಾಜದಲ್ಲಿ ಹೆಣ್ಣು–ಗಂಡು ಎಂಬುದು ಅವಶ್ಯ ಮಾನವ ಸಂಪನ್ಮೂಲಗಳಾಗಿದ್ದರೂ ಪುರುಷನಿಗೆ ಸಿಗುವ ಬಲ, ಶೌರ್ಯ, ಗೌರಾವನ್ವಿತ ಸ್ಥಾನಮಾನಗಳು ಹೆಣ್ಣಿನ ಬದುಕಿನಲ್ಲಿ ಗೌಣವಾಗಿವೆ. ಅಲ್ಲದೇ "ಮಹಿಳೆ ಸಾಮಾಜಿಕ ಉತ್ಪಾದನಾ ಕ್ಷೇತ್ರದಿಂದ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ವಲಯಗಳ ಮುಖ್ಯ ಪ್ರವಾಹದಿಂದ ಹೊರಗೆ ದಬ್ಬಲ್ಪಟ್ಟು ಕುಟುಂಬಕ್ಕೆ ಅವಳನ್ನು ಕಟ್ಟಿ ಹಾಕಲಾಯಿತು. ಮಾತೃತ್ವ, ಪತ್ನಿತ್ವ, ಸ್ತ್ರೀತ್ವದ ಆದರ್ಶಗಳು ಕ್ರಮೇಣ ಅವಳ ಮೇಲೆ ಹೇರಲ್ಪಟ್ಟವು."[10]

ಹೀಗೆ ಸ್ತ್ರೀ ಸುತ್ತ ಹೆಣೆದ ಅನುಕಂಪ, ದೌರ್ಜನ್ಯ ಹೀಗೆ ಅನೇಕ ಸವಾಲುಗಳ ಸರಮಾಲೆಗಳ ಮಧ್ಯದಲ್ಲಿ ಪುರುಷ ಪ್ರಧಾನ ಜಗತ್ತು ಹೆಣ್ಣನ್ನು ಹೆಣ್ಣಾಗಿಸಿ, 'ಗೃಹಣೀತ್ವ' ಎಂಬ ನಾಲ್ಕು ಗೋಡೆಗಳ ಬಂಧನದಲ್ಲಿ ಅವಳನ್ನು ಕೇಂದ್ರಿಕರಿಸಿ ತನ್ನ ಪೌರುಷದ ಸಂಕೋಲೆಯಿಂದ ಬಂದಿಸುತ್ತಾ ಬಂದಿದೆ ಪುರುಷ ಸಮಾಜ. ಇದರಿಂದ "ಕೌಟುಂಬಿಕ ಸಂಸ್ಥೆಯಕಾರ್ಯ ನಿರ್ವಹಣೆಯಲ್ಲಿ ಸ್ತ್ರೀಯು ಮನೆತನದ ಒಳಗೆ ತಾಯಿಯಾಗಿ, ಪೋಷಕಿಯಾಗಿ, ರಕ್ಷಕಿಯಾಗಿ ಪರಿಕಲ್ಪಿತಳಾದರೇ ಪುರುಷನು ಆ ಸಂಸ್ಥೆಯ ಯಜಮಾನನಾಗಿ ನಿರ್ದೇಶಕನಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರಿಯಾಗಿ ಹಾಗೂ ವಿಶೇಷವಾಗಿ ಉತ್ಪಾದಕನಾಗಿ ಪರಿಕಲ್ಪಿತನಾಗಿದ್ದಾನೆ."[11] ಈ ರೀತಿಯಾದ ಕೌಟುಂಬಿಕ ನಿಯಂತ್ರಣಗಳಿಗೆ ಸ್ತ್ರೀ ಒಳಪಡುತ್ತಾ ತನ್ನ ಸ್ವಾಭಿಮಾನವನ್ನು ಬದಿಗೊತ್ತಿ ಪುರುಷನ ವಿಚಾರಗಳಿಗೆ ತಲೆಬಾಗುತ್ತಾ ತನ್ನ ಬದುಕನ್ನು ಸವೆಸುತ್ತಾ ಬಂದಿದ್ದಾಳೆ, ಬರುತ್ತಿದ್ದಾಳೆಯು ಸಹ.

ಕುಟುಂಬ ಜೀವನದಲ್ಲಿ ಹೆಣ್ಣು ಮತ್ತು ಗಂಡುಗಳೂ ಸಮಾನ ಸ್ಥಾನವನ್ನು ಪಡೆದುಕೊಳ್ಳುವ ಬದಲು ಪುರುಷನನ್ನು ಉಚ್ಚ ಸ್ಥಾನದಲ್ಲಿ, ಸ್ತ್ರೀಯನ್ನು ನೀಚ್ಚ ಸ್ಥಾನದಲ್ಲಿ ನಿಲ್ಲಿಸುತ್ತಾ ಬಂದಿದೆ. ಇದಕ್ಕೆ ಮೂಲ ಕಾರಣಸ್ತ್ರೀ–ಪುರುಷ ಪ್ರಧಾನ ಜೈವಿಕ ವ್ಯತ್ಯಾಸವಾಗಿದೆ. ಈ ವ್ಯತ್ಯಾಸವನ್ನು ಸಹ ಪುರುಷ ಪ್ರಧಾನ ವರ್ಗವೆ ಮಾಡಿಕೊಂಡು ಸ್ತ್ರೀಯರ ಮನೋಸ್ಥೈರ್ಯವನ್ನು ಹತ್ತಿಕುತ್ತಾ ಬಂದಿತು. ಅದಕ್ಕೆ ಸಾಕ್ಷಿಯೆಂಬತೆ ಸ್ತ್ರೀ ಸುಕೋಮಲೆ ಅಬಲೆ, ತ್ಯಾಗಮಯಿ ಇತ್ಯಾದಿ ಪುರುಷ ನೀಡಿದ ಬಿರುದುಗಳಿಂದ ಶೀಲದ ವಿಷಯದಲ್ಲಿ ದ್ವಿಸ್ತರ

9ಮಹಿಳೆ ಮತ್ತುಧರ್ಮ, ಶಿವಾನಂದ ಎಸ್. ವಿರಕ್ತಮಠ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ–27

10ಸ್ತ್ರೀ ವಾದಿ ಸಾಹಿತ್ಯ ವಿಮರ್ಶೆ, ತೇಜಶ್ವೀನಿ ನಿರಂಜನಿ ಮತ್ತು ಸೀಮಂತಿನಿ ನಿರಂಜನ, ಅಭಿನವ ಪ್ರಕಾಶನ, ಪುಟ–230

ನೀತಿಗಳಿಂದ ಹೆಣ್ಣು ಅಸಹಾಯಕಳು, ಅವಳನ್ನು ಗೃಹ ಬಂಧನದಲ್ಲಿಟ್ಟರೆ ಮಾತ್ರ ಒಳಿತು ಎಂಬಂತೆ ಅವಳನ್ನು ಹೆಣ್ಣಾಗಿ ಮಾಡಿತು.

ಈ ರೀತಿಯಾಗಿ ಹೆಣ್ಣನ್ನು ಕುಟುಂಬ ಜೀವನಕ್ಕೆ ಅಣಿಯಾಗುವಂತೆ ಮಾಡುವುದರೊಂದಿಗೆ ಅವಳನ್ನು ಶಿಕ್ಷಣದಿಂದ ವಂಚಿತಳನ್ನಾಗಿ ಮಾಡಿತು. ಶಿಕ್ಷಣದಿಂದ ವಂಚಿತಳಾದ ಮಹಿಳೆ ಗೃಹಣೀತ್ವವೇ ತನ್ನ ಬದುಕಿನ ಮೈಲಿಗಲ್ಲು ಎಂದು ಭಾವಿಸಿ ಪರಾವಲಂಬಿ ಜೀವನಕ್ಕೆ ತನ್ನನ್ನು ಅರ್ಪಿಸಿಕೊಂಡು ಸಂವೇದನೆಯ ಮಹಾಪೂರಕ್ಕೆ ಒಳಗಾದಳು. ಹೀಗೇ ಕೌಟುಂಬಿಕವಾಗಿ ಹೆಣ್ಣು ಸ್ತ್ರೀ ಧರ್ಮವನ್ನು, ಗೃಹಣೀತ್ವದ ದೀಕ್ಷೆಯನ್ನು ಪಡೆದುಕೊಂಡು ತನ್ನ ನೋವಿನ ಸಂವೇದನೆಗಳನ್ನು ಗಾಢವಾಗಿ ಹತ್ತಿಕ್ಕಿಕೊಂಡು ಬಂದಳು. ಹೀಗೆ ಕುಟುಂಬವೆಂದರೆ ಅದು ಹೆಣ್ಣಿಗೆ ಮಾತ್ರ ಸಂಬಂಧಿಸಿದ್ದೆನ್ನುವ ಮಟ್ಟಕ್ಕೆ ಕೌಟುಂಬಿಕ ಸಮಸ್ಯೆಗಳಿಗೆ ಸ್ತ್ರೀ ತನ್ನನೇ ಕಾರಣವಾಗಿಸಿಕೊಂಡು ತನ್ನ ಸಂವೇದನೆಗೆ ತಾನೇ ಆಹುತಿಯಾಗುತ್ತ ಬಂದಿದ್ದಾಳೆ.

ಉಪಸಂಹಾರ:

ಸ್ತ್ರೀ ಸಂಕುಲದ ಸುತ್ತ ಹೆಣದಿರುವ ಶೋಷಣೆಯ ವಿಭಿನ್ನ ಸ್ಥರಗಳಲ್ಲಿ ಪುರುಷ ಸರ್ವಾಧಿಕಾರಿ ಆಗಿದ್ದಾನೆ. ಈ ಪುರುಷ ಪ್ರಾಧಾನ್ಯತೆಯ ಸಮಾಜದಲ್ಲಿ ಹೆಣ್ಣು ಸುಖ–ಸಂತೋಷಕ್ಕಿಂತ ಕಷ್ಟಗಳ ಸೆಳೆತಕ್ಕೆ ಸಿಕ್ಕು ನಲುಗಿದ್ದಾಳೆ. ಹೆಣ್ಣನ್ನು ಶತ–ಶತಮಾನಗಳಿಂದಲೂ ತಾಳ್ಮೆ, ಸಹನೆಯ, ಪ್ರೀತಿ, ತ್ಯಾಗಗಳ ಪ್ರತೀಕವಾಗಿ ದುಃಖಕ್ಕೆ ತಳ್ಳಲ್ಪಟ್ಟಿದೆ. ಕಷ್ಟಗಳ ಬವಣೆಯನ್ನು ನಿಗಿಸುವ, ಸಕಲ ದಾರಿದ್ರ್ಯವನ್ನು ಹೊರುವ ಧರಿತ್ರಿಗೆ ಹೆಣ್ಣನ್ನು ಹೋಲಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ವಾಸ್ತವವಾಗಿ ಅವಳಿಗೆ ಆದ ನೋವು, ದುಃಖ–ದುಮ್ಮಾನಗಳು ಈ ತ್ಯಾಗ–ಸಹನೆಗಳಲ್ಲಿ ಮರೆಮಾಚಿಕೊಂಡಿವೆ. ಹೆಣ್ಣಿಗೆತ್ಯಾಗ, ಆದರ್ಶತೆ, ಸಂಪ್ರದಾಯಗಳು ಗೌರವತೆಯ ಪ್ರತೀಕವಾದರೂ ಅದು ಇನ್ನೊಂದು ರೀತಿಯಲ್ಲಿ ದುಃಖದ ಮಡುವಾಗಿರುವುದು ಸತ್ಯವೆಂದು ಭಾಸವಾಗುತ್ತದೆ. ಆದರ್ಶಗಳ ನೆರಳಿನಲ್ಲಿ ಆಳವಿಲ್ಲದ ದುಃಖದ ಕಂದಕವೇ ಅಡಗಿದೆ. ಇಂತಹ ಸ್ತ್ರೀಪರವಾದ ನೋವಿನ ನೆಲೆಗಳು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಪಾರವಾಗಿ ಅಭಿವ್ಯಕ್ತಗೊಂಡಿವೆ.

1. ಮಹಿಳಾ ಅಧ್ಯಯನ ಸಂ. 01, ಹೇಮಲತಾಎಚ್.ಎಂ., ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು ಪುಟ–33.
2. ಮಹಿಳಾ ಅಧ್ಯಯನ ಸಂ. 01, ಹೇಮಲತಾಎಚ್.ಎಂ., ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು ಪುಟ–39
3. ಮಹಿಳಾ ಅಧ್ಯಯನ: ಪ್ರೊ. ಎಚ್.ವಿ.ನಾಗೇಶ ಅಭಿನಂದನಗ್ರಂಥ: ವೀಣಾ ಶಾಂತೇಶ್ವರ, ಎಚ್.ವಿ.ನಾಗೇಶ ಸಮಿತಿಧಾರವಾಡ ಪುಟ–11
4. ಅಕ್ಕ ಕೇಳವ್ವಾ (ಡಾ. ಸರೋಜಿನಿ ಶಿಂತ್ರಿ, ಅಭಿನಂದನಾಗ್ರಂಥ), ವೀಣಾ ಶಾಂತೇಶ್ವರ, ಸಾಹಿತ್ಯ ಪ್ರಕಾಶನ, ಪುಟ–81
5. ಸಹೃದಯ ಸಂವಾದ, ಎಸ್.ವಿದ್ಯಾಶಂಕರ ಮತ್ತುಡಾ. ಜಿ.ಎಂ.ಹೆಗಡೆ, ಪ್ರಿಯದರ್ಶಿನಿ ಪ್ರಕಾಶನ, ಪುಟ–422
6. ಮಹಿಳೆ ದಲಿತತ್ವ ಮತ್ತುರಾಜಕೀಯ ಪ್ರಜ್ಞೆ ಎಚ್.ಎಸ್. ಅನುಪಮಾ, ಲಡಾಯಿ ಪ್ರಕಾಶನ, ಪುಟ–30
7. ಮಹಿಳೆ ದಲಿತತ್ವ ಮತ್ತುರಾಜಕೀಯ ಪ್ರಜ್ಞೆ ಎಚ್.ಎಸ್. ಅನುಪಮಾ, ಲಡಾಯಿ ಪ್ರಕಾಶನ, ಪುಟ–31
8. ಮಹಿಳೆ ಮತ್ತುಧರ್ಮ, ಶಿವಾನಂದ ಎಸ್. ವಿರಕ್ತಮಠ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ–27
9. ಮಹಿಳೆ ಮತ್ತುಧರ್ಮ, ಶಿವಾನಂದ ಎಸ್. ವಿರಕ್ತಮಠ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ–27
10. ಸ್ತ್ರೀ ವಾದಿ ಸಾಹಿತ್ಯ ವಿಮರ್ಶೆ, ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ, ಅಭಿನವ ಪ್ರಕಾಶನ, ಪುಟ–230

11. ಮಹಿಳೆ ದಲಿತತ್ವ ಮತ್ತುರಾಜಕೀಯ ಪ್ರಜ್ಞೆ, ಎಚ್.ಎಸ್. ಅನುಪಮಾ, ಲಡಾಯಿ ಪ್ರಕಾಶನ, ಪುಟ–30

ಪರಾಮರ್ಶನ ಗ್ರಂಥಗಳು:

1. ಮಹಿಳೆ ಮತ್ತುಧರ್ಮ, ಶಿವಾನಂದ ಎಸ್. ವಿರಕ್ತಮಠ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
2. ಸ್ತ್ರೀ ವಾದಿ ಸಾಹಿತ್ಯ ವಿಮರ್ಶೆ, ತೇಜಸ್ವೀನಿ ನಿರಂಜನಿ ಮತ್ತು ಸೀಮಂತಿನಿ ನಿರಂಜನ, ಅಭಿನವ ಪ್ರಕಾಶನ,
3. ಮಹಿಳೆ ದಲಿತತ್ವ ಮತ್ತುರಾಜಕೀಯ ಪ್ರಜ್ಞೆ, ಎಚ್.ಎಸ್. ಅನುಪಮಾ, ಲಡಾಯಿ ಪ್ರಕಾಶನ.
4. 'ಹೃದಯ ಸಂವಾದ, ಎಸ್.ವಿದ್ಯಾಶಂಕರ ಮತ್ತುಡಾ. ಜಿ.ಎಂ.ಹೆಗಡೆ, ಪ್ರಿಯದರ್ಶಿನಿ ಪ್ರಕಾಶನ

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಪಯಣ: ಪ್ರಸ್ತುತ ಸಮಾಜಕ್ಕೆಕನ್ನಡ ಸಾಹಿತ್ಯದ ಕೊಡುಗೆಗಳು

ಶ್ರೀಮತಿ ಲಕ್ಷ್ಮಿಎಸ್. ಕುರಿ
ಮುಖ್ಯಸ್ಥರು, ಕನ್ನಡ ವಿಭಾಗ
ಸೋನಿಯಾ ಪದವಿ ಮಹಾವಿದ್ಯಾಲಯ, ಸಂಗೊಳ್ಳಿ ರಾಯಣ್ಣ ನಗರ, ಧಾರವಾಡ
Corresponding Author–ಶ್ರೀಮತಿ ಲಕ್ಷ್ಮಿಎಸ್. ಕುರಿ
DOI - 10.5281/zenodo.23528534

ಪೀಠಿಕೆ:

ಕನ್ನಡ ಸಾಹಿತ್ಯವು ಕರ್ನಾಟಕದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಮತ್ತು ಮಾನವೀಯ ಬದುಕಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಜ್ಞಾನ ಪರಂಪರೆಯಾಗಿದೆ. ಸುಮಾರು ಎರಡು ಸಾವಿರ ವರ್ಷಗಳ ಸಾಂಸ್ಕೃತಿಕ ನಿರಂತರತೆಯನ್ನು ಹೊಂದಿರುವ ಕನ್ನಡ ಭಾಷೆ ಮತ್ತು ಸಾಹಿತ್ಯವು ಕಾಲಾನುಕಾಲಕ್ಕೆ ಬದಲಾಗುತ್ತಿರುವ ಸಮಾಜದ ಆಶಯಗಳು, ಸಂಘರ್ಷಗಳು, ಮೌಲ್ಯಗಳು ಮತ್ತು ಜೀವನಾನುಭವಗಳನ್ನು ತನ್ನೊಳಗೆ ದಾಖಲಿಸಿಕೊಂಡು ಬಂದಿದೆ. ಪ್ರಾಚೀನ ಕಾವ್ಯದಿಂದ ಆರಂಭಿಸಿ ವಚನ ಸಾಹಿತ್ಯ, ತತ್ವಪದ, ಕೀರ್ತನೆ, ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ, ಸ್ತ್ರೀವಾದಿ ಹಾಗೂ ಸಮಕಾಲೀನ ಸಾಹಿತ್ಯದವರೆಗೆ ಕನ್ನಡ ಸಾಹಿತ್ಯದ ಪಯಣವು ವೈವಿಧ್ಯಮಯವಾದ ಸಾಂಸ್ಕೃತಿಕ ಅನುಭವಗಳ ಪ್ರತಿಬಿಂಬವಾಗಿದೆ.

ಕನ್ನಡ ಸಾಹಿತ್ಯ ಕೇವಲ ಮನರಂಜನೆಯ ಅಥವಾ ಸೌಂದರ್ಯಾನುಭವದ ಸಾಧನವಲ್ಲ. ಅದು ಸಮಾಜವನ್ನು ಪ್ರಶ್ನಿಸುವ, ಜಾಗೃತಗೊಳಿಸುವ, ಮಾನವೀಯ ಮೌಲ್ಯಗಳನ್ನು ಬೆಳೆಸುವ ಮತ್ತು ಸಾಮಾಜಿಕ ಪರಿವರ್ತನೆಗೆ ಪ್ರೇರಣೆ ನೀಡುವ ಶಕ್ತಿಯಾಗಿದೆ. ವಚನಕಾರರು ಜಾತಿ, ಅಸಮಾನತೆ ಮತ್ತು ಕಂದಾಚಾರಗಳನ್ನು ಪ್ರಶ್ನಿಸಿದರೆ, ದಾಸ ಸಾಹಿತ್ಯವು ಭಕ್ತಿ, ನೈತಿಕತೆ ಮತ್ತು ಸಾಮಾಜಿಕ ಸಮಾನತೆಯ ಸಂದೇಶವನ್ನು ಸಾರಿತು. ಆಧುನಿಕ ಸಾಹಿತ್ಯವು ಸ್ವಾತಂತ್ರ್ಯ, ರಾಷ್ಟ್ರಪ್ರಜ್ಞೆ, ಸಾಮಾಜಿಕ ನ್ಯಾಯ, ಮಹಿಳಾ ಹಕ್ಕು, ದಲಿತ ಅಸ್ಮಿತ್ವ, ಪರಿಸರ ಮತ್ತು ಮಾನವ ಹಕ್ಕುಗಳಂತಹ ವಿಚಾರಗಳನ್ನು ತನ್ನಚರ್ಚೆಯಕೇಂದ್ರಕ್ಕೆತಂದಿದೆ. ಪ್ರಸ್ತುತಜಾಗತೀಕರಣ ಮತ್ತುಡಿಜಿಟಲ್‌ಯುಗದಲ್ಲಿಕನ್ನಡ ಸಾಹಿತ್ಯವು ಹೊಸ ಮಾಧ್ಯಮಗಳ ಮೂಲಕ ಹೊಸ ಓದುಗರನ್ನು ತಲುಪುತ್ತಿದೆ. ಈ ಹಿನ್ನೆಲೆಯಲ್ಲಿಕನ್ನಡ ಸಾಹಿತ್ಯದ ಸಾಂಸ್ಕೃತಿಕ ಪಯಣವನ್ನು ಅರ್ಥಮಾಡಿಕೊಳ್ಳುವುದು ಮತ್ತು ಸಮಕಾಲೀನ ಸಮಾಜಕ್ಕೆಅದರಕೊಡುಗೆಯನ್ನು ವಿಶ್ಲೇಷಿಸುವುದು ಈ ಅಧ್ಯಯನದ ಮುಖ್ಯಉದ್ದೇಶವಾಗಿದೆ.

ಪ್ರಮುಖ ಪದಗಳು: ಕನ್ನಡ ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ, ನವೋದಯ, ನವ್ಯ, ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯ, ಸ್ತ್ರೀವಾದ, ಸಾಮಾಜಿಕ ಪರಿವರ್ತನೆ.

ಪರಿಚಯ:

ಸಾಹಿತ್ಯವು ಒಂದು ಸಮಾಜದ ಕನ್ನಡಿ ಮಾತ್ರವಲ್ಲ; ಅದು ಸಮಾಜವನ್ನು ರೂಪಿಸುವ ಸೃಜನಾತ್ಮಕ ಶಕ್ತಿಯೂ ಹೌದು. ಒಂದು ಭಾಷೆಯ ಸಾಹಿತ್ಯದಲ್ಲಿ ಆ ಭಾಷೆಯನ್ನು ಮಾತನಾಡುವ ಜನರ ಜೀವನಶೈಲಿ, ಸಂಸ್ಕೃತಿ, ಆಚರಣೆ, ನಂಬಿಕೆ, ನೋವು, ಸಂತೋಷ, ಸಂಘರ್ಷ, ಕನಸು ಮತ್ತು ಭವಿಷ್ಯದ ಆಶಯಗಳು ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ಕನ್ನಡ ಸಾಹಿತ್ಯವು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಪ್ರಮುಖ ದಾಖಲೆಯಾಗಿದೆ.

ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ಕನ್ನಡ ಸಾಹಿತ್ಯದಿಂದ ಬೇರ್ಪಡಿಸಿ ನೋಡುವುದು ಕಷ್ಟ. ಪ್ರಾಚೀನ ಕವಿಗಳ ಕೃತಿಗಳಲ್ಲಿ ರಾಜಕೀಯ ಮತ್ತು ಧಾರ್ಮಿಕ ಜೀವನದ ಚಿತ್ರಣ ದೊರೆತರೆ, ವಚನಕಾರರ ಸಾಹಿತ್ಯದಲ್ಲಿ ಸಾಮಾಜಿಕ ಸಮಾನತೆಯ ಚಿಂತನೆ ವ್ಯಕ್ತವಾಗಿದೆ. ದಾಸ ಸಾಹಿತ್ಯವು ಭಕ್ತಿ ಮತ್ತು ನೈತಿಕತೆಯ ಜೊತೆಗೆ ಜನಸಾಮಾನ್ಯರ ಭಾಷೆಯನ್ನು ಸಾಹಿತ್ಯದ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿತು. ಆಧುನಿಕ ಸಾಹಿತ್ಯವು ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧವನ್ನು ಹೊಸ ದೃಷ್ಟಿಕೋನದಿಂದ ಪರಿಶೀಲಿಸಿತು.

ಆದ್ದರಿಂದ ಕನ್ನಡ ಸಾಹಿತ್ಯದ ಪಯಣವು ಕೇವಲ ಸಾಹಿತ್ಯ ಪ್ರಕಾರಗಳ ಬೆಳವಣಿಗೆಯ ಇತಿಹಾಸವಲ್ಲ. ಅದು ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಯ ಪಯಣವೂ ಆಗಿದೆ.

ಅಧ್ಯಯನದ ಉದ್ದೇಶಗಳು:

ಈ ಅಧ್ಯಯನದ ಪ್ರಮುಖ ಉದ್ದೇಶಗಳು ಹೀಗಿವೆ:

1. ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಬೆಳವಣಿಗೆಯನ್ನು ಪರಿಚಯಿಸುವುದು.
2. ವಿವಿಧ ಕಾಲಘಟಗಳಲ್ಲಿ ಸಾಹಿತ್ಯ ಮತ್ತು ಸಮಾಜದ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದು.
3. ವಚನ, ದಾಸ, ನವೋದಯ, ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯ ಸಾಹಿತ್ಯದ ಸಾಮಾಜಿಕ ಪಾತ್ರವನ್ನು ಗುರುತಿಸುವುದು.
4. ಕನ್ನಡ ಸಾಹಿತ್ಯವು ಸಾಮಾಜಿಕ ಜಾಗೃತಿ ಮೂಡಿಸಿದ ರೀತಿಯನ್ನು ವಿಶ್ಲೇಷಿಸುವುದು.
5. ಪ್ರಸ್ತುತ ಸಮಾಜದಲ್ಲಿ ಕನ್ನಡ ಸಾಹಿತ್ಯದ ಪ್ರಸ್ತುತತೆ ಮತ್ತು ಕೊಡುಗೆಯನ್ನು ಗುರುತಿಸುವುದು.
6. ಡಿಜಿಟಲ್ ಯುಗದಲ್ಲಿ ಕನ್ನಡ ಸಾಹಿತ್ಯ ಎದುರಿಸುತ್ತಿರುವ ಅವಕಾಶ ಮತ್ತು ಸವಾಲುಗಳನ್ನು ಪರಿಶೀಲಿಸುವುದು.
7. ಸಂಶೋಧನಾ ವಿಧಾನ.

ಸಂಶೋಧನಾ ವಿಧಾನ:

ಈ ಅಧ್ಯಯನವು ಮುಖ್ಯವಾಗಿದ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನವನ್ನು ಅನುಸರಿಸುತ್ತದೆ. ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಿಗೆ ಸಂಬಂಧಿಸಿದ ಕಾವ್ಯ, ವಚನ, ಕಾದಂಬರಿ, ಕಥೆ, ನಾಟಕ, ವಿಮರ್ಶೆ ಮತ್ತು ಇತರ ಸಾಹಿತ್ಯ ಪ್ರಕಾರಗಳನ್ನು ಅಧ್ಯಯನದ ಆಧಾರವನ್ನಾಗಿ ಪರಿಗಣಿಸಲಾಗಿದೆ.

ಪ್ರಾಥಮಿಕ ಮತ್ತು ದ್ವಿತೀಯಕ ಮೂಲಗಳ ಸಹಾಯದಿಂದ ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಬೆಳವಣಿಗೆ ಹಾಗೂ ಸಾಮಾಜಿಕ ಪ್ರಭಾವವನ್ನು ವಿಶ್ಲೇಷಿಸಲಾಗಿದೆ. ಸಾಹಿತ್ಯ ಇತಿಹಾಸ, ವಿಮರ್ಶಾ ಕೃತಿಗಳು, ಸಂಶೋಧನಾ ಲೇಖನಗಳು ಮತ್ತು ಸಂಬಂಧಿತ ಗ್ರಂಥಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಬಹುದು.

ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಪಯಣ:

1. ಪ್ರಾಚೀನಕನ್ನಡ ಸಾಹಿತ್ಯ

ಕನ್ನಡ ಸಾಹಿತ್ಯದ ಪ್ರಾಚೀನ ಪರಂಪರೆಯು ಸಮೃದ್ಧವಾದ ಕಾವ್ಯ ಮತ್ತು ಗದ್ಯ ಸಾಹಿತ್ಯವನ್ನು ಹೊಂದಿದೆ. ಕವಿರಾಜಮಾರ್ಗ ಕನ್ನಡ ಸಾಹಿತ್ಯದ ಪ್ರಾಚೀನ ಮಹತ್ವ ಕೃತಿಗಳಲ್ಲಿ ಒಂದು. ಇದು ಕನ್ನಡ ಭಾಷೆಯ ಸಾಹಿತ್ಯಿಕ ಸಾಮರ್ಥ್ಯವನ್ನು ಮಾತ್ರವಲ್ಲದೆ ಆ ಕಾಲದ ಸಾಂಸ್ಕೃತಿಕ ಮತ್ತು ಭಾಷಿಕ ಪರಿಸರವನ್ನೂ ಪರಿಚಯಿಸುತ್ತದೆ.

ಮುಂದಿನ ಹಂತದಲ್ಲಿ ಪಂಪ, ಪೊನ್ನ ಮತ್ತು ರನ್ನರಂತಹ ಮಹಾಕವಿಗಳು ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದರು. ಪಂಪನ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ, ಪೊನ್ನನ ಶಾಂತಿಪುರಾಣ, ರನ್ನನ ಗದಾಯುದ್ಧ ಮುಂತಾದ ಕೃತಿಗಳು ಕನ್ನಡದ ಮಹಾಕಾವ್ಯ ಪರಂಪರೆಯನ್ನು ಬಲಪಡಿಸಿದವು.

ಈ ಕೃತಿಗಳಲ್ಲಿ ಧರ್ಮ, ನೀತಿ, ಶೌರ್ಯ, ರಾಜಧರ್ಮ, ಮಾನವೀಯ ಗುಣಗಳು ಮತ್ತು ಸಾಮಾಜಿಕ ಮೌಲ್ಯಗಳು ಪ್ರತಿಫಲಿಸುತ್ತವೆ.

2. ವಚನ ಸಾಹಿತ್ಯದ ಸಾಂಸ್ಕೃತಿಕಕ್ರಾಂತಿ:

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನ ಸಾಹಿತ್ಯಒಂದು ಮಹತ್ವದ ತಿರುವು. ಬಸವಣ್ಣ,

ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ ಮುಂತಾದ ಶರಣರು ತಮ್ಮ ವಚನಗಳ ಮೂಲಕ ಸಮಾಜದಲ್ಲಿದ್ದ ಅನೇಕ ಸಮಾನತೆಗಳನ್ನು ಪ್ರಶ್ನಿಸಿದರು. ವಚನ ಸಾಹಿತ್ಯದ ಮುಖ್ಯ ಲಕ್ಷಣವೆಂದರೆ ಸರಳ ಮತ್ತು ಜನ ಸಾಮಾನ್ಯರಿಗೆ ಅರ್ಥವಾಗುವ ಭಾಷೆ. ವಚನಕಾರರು ಕಾಯಕ, ದಾಸೋಹ, ಸಮಾನತೆ, ಮಾನವೀಯತೆ ಮತ್ತು ಆತ್ಮಗೌರವಕ್ಕೆ ಮಹತ್ವ ನೀಡಿದರು.

"ಕಾಯಕವೇ ಕೈಲಾಸ" ಎಂಬ ಬಸವಣ್ಣನ ಚಿಂತನೆಯು ದುಡಿಮೆಯ ಗೌರವವನ್ನು ಪ್ರತಿಪಾದಿಸುತ್ತದೆ. ಜಾತಿ, ಜನ್ಮ ಮತ್ತು ಸಾಮಾಜಿಕ ಸ್ಥಾನಮಾನಗಳ ಆಧಾರದ ಮೇಲೆ ವ್ಯಕ್ತಿಯ ಮೌಲ್ಯವನ್ನು ನಿರ್ಧರಿಸುವ ಪ್ರವೃತ್ತಿಗೆ ವಚನ ಸಾಹಿತ್ಯ ಸವಾಲು ಹಾಕಿತು.

ಅಕ್ಕಮಹಾದೇವಿಯ ವಚನಗಳಲ್ಲಿ ಆತ್ಮ ಸ್ವಾತಂತ್ರ್ಯ ಮತ್ತು ಮಹಿಳಾ ಅಸ್ತಿತ್ವದ ಪ್ರಬಲ ಅಭಿವ್ಯಕ್ತಿ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ವಚನ ಸಾಹಿತ್ಯವುಕನ್ನಡದ ಸಾಮಾಜಿಕ ಚಿಂತನೆಯ ಪ್ರಮುಖ ಘಟ್ಟವಾಗಿದೆ.

ದಾಸ ಸಾಹಿತ್ಯ ಮತ್ತು ಜನಸಂಸ್ಕೃತಿ:

ಪುರಂದರದಾಸ, ಕನಕದಾಸ ಮುಂತಾದ ದಾಸರು ಕನ್ನಡ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ದಾಸ ಸಾಹಿತ್ಯವು ಭಕ್ತಿಯನ್ನು ಕೇಂದ್ರವಾಗಿಟ್ಟುಕೊಂಡಿದ್ದರೂ, ಅದರೊಳಗೆ ಸಾಮಾಜಿಕ ಮತ್ತು ನೈತಿಕ ಚಿಂತನೆಯೂ ಅಡಕವಾಗಿದೆ.

ಕನಕದಾಸರ ಸಾಹಿತ್ಯದಲ್ಲಿ ಅಸಮಾನತೆ ಮತ್ತು ಮಾನವೀಯ ಮೌಲ್ಯಗಳ ಕುರಿತು ಚಿಂತನೆ ಕಂಡುಬರುತ್ತದೆ. ಪುರಂದರದಾಸರ ಕೀರ್ತನೆಗಳು ಜನ ಸಾಮಾನ್ಯರ ಬದುಕು, ನೈತಿಕತೆ ಮತ್ತು ಭಕ್ತಿಯನ್ನು ಸರಳ ಭಾಷೆಯಲ್ಲಿ ವ್ಯಕ್ತಪಡಿಸಿದವು. ದಾಸ ಸಾಹಿತ್ಯವು ಸಾಹಿತ್ಯವನ್ನು ಜನ ಸಾಮಾನ್ಯರ ಜೀವನಕ್ಕೆ ಇನ್ನಷ್ಟು ಹತ್ತಿರ ತಂದಿತು. ಸಂಗೀತದ ಮೂಲಕ ಸಾಹಿತ್ಯವನ್ನು ವ್ಯಾಪಕ ಜನ ಸಮೂಹಕ್ಕೆ ತಲುಪಿಸಿದ ಮಹತ್ವದ ಪರಂಪರೆಯೂ ಇದಾಗಿದೆ.

ಆಧುನಿಕಕನ್ನಡ ಸಾಹಿತ್ಯ:

ಆಧುನಿಕ ಕನ್ನಡ ಸಾಹಿತ್ಯವು ಪಾಶ್ಚಾತ್ಯ ಶಿಕ್ಷಣ, ಮುದ್ರಣ, ಆಧುನಿಕ ವಿಜ್ಞಾನ, ರಾಷ್ಟ್ರೀಯ ಚಳವಳಿ ಮತ್ತು ಸಾಮಾಜಿಕ ಸುಧಾರಣಾ ಚಿಂತನೆಗಳ ಪ್ರಭಾವದಿಂದ ಹೊಸ ರೂಪ ಪಡೆದುಕೊಂಡಿತು.

1. ನವೋದಯ ಸಾಹಿತ್ಯ:

ಕನ್ನಡದ ನವೋದಯ ಸಾಹಿತ್ಯವು ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಹಂತವಾಗಿದೆ. ಬಿ.ಎಂ.ಶ್ರೀಕಂಠಯ್ಯ, ಕುವೆಂಪು, ದ.ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ ಮುಂತಾದ ಸಾಹಿತಿಗಳು ಕನ್ನಡ ಸಾಹಿತ್ಯಕ್ಕೆ ಹೊಸ ಸಂವೇದನೆಗಳನ್ನು ನೀಡಿದರು.

ಕುವೆಂಪು ಅವರ ಸಾಹಿತ್ಯದಲ್ಲಿ ವಿಶ್ವಮಾನವತೆಯ ಚಿಂತನೆ ಪ್ರಮುಖವಾಗಿದೆ. "ವಿಶ್ವಮಾನವ" ಪರಿಕಲ್ಪನೆಯು ಮಾನವೀಯತೆಯನ್ನು ಜಾತಿ, ಧರ್ಮ ಮತ್ತು ಗಡಿಗಳಿಗಿಂತ ಮೇಲಾಗಿ ನೋಡುವ ದೃಷ್ಟಿಯನ್ನು ಪ್ರತಿನಿಧಿಸುತ್ತದೆ. ಬೇಂದ್ರೆಯ ಕಾವ್ಯದಲ್ಲಿ ಜನಜೀವನ, ಪ್ರಕೃತಿ, ಪ್ರೀತಿ ಮತ್ತು ಮಾನವೀಯ ಅನುಭವಗಳು ವಿಶಿಷ್ಟವಾಗಿ ಮೂಡಿಬಂದಿದೆ. ಮಾಸ್ತಿ ಮತ್ತು ಕಾರಂತರ ಕೃತಿಗಳಲ್ಲಿ ಕರ್ನಾಟಕದ ಸಾಮಾಜಿಕ ಬದುಕಿನ ವೈವಿಧ್ಯಮಯ ಚಿತ್ರಣ ದೊರೆಯುತ್ತದೆ.

ಪ್ರಗತಿಶೀಲ ಸಾಹಿತ್ಯ:

ಪ್ರಗತಿಶೀಲ ಸಾಹಿತ್ಯವು ಸಮಾಜದಲ್ಲಿನ ಆರ್ಥಿಕ ಅಸಮಾನತೆ, ಶೋಷಣೆ, ಬಡತನ ಮತ್ತು ಅನ್ಯಾಯಗಳ ಕುರಿತು ಪ್ರಶ್ನೆಗಳನ್ನು ಎತ್ತಿತು.

ಈ ಸಾಹಿತ್ಯ ಪರಂಪರೆಯು ಸಾಮಾನ್ಯ ಮನುಷ್ಯನ ಬದುಕನ್ನು ಸಾಹಿತ್ಯದ ಕೇಂದ್ರಕ್ಕೆ ತಂದಿತು. ರೈತರು, ಕಾರ್ಮಿಕರು, ಬಡವರು ಮತ್ತು ಸಾಮಾಜಿಕವಾಗಿ ಹಿಂದುಳಿದ ಜನರ ಸಮಸ್ಯೆಗಳು ಸಾಹಿತ್ಯದ ಪ್ರಮುಖ ವಿಷಯಗಳಾದವು.

ಸಾಹಿತ್ಯವು ಕೇವಲ ಅರಮನೆ ಮತ್ತು ಶ್ರೀಮಂತರ ಜೀವನವನ್ನು ವರ್ಣಿಸುವ ಮಾಧ್ಯಮವಲ್ಲ; ಸಾಮಾನ್ಯ ಜನರ ಬದುಕಿನ ವಾಸ್ತವತೆಗಳನ್ನೂ ದಾಖಲಿಸಬೇಕು ಎಂಬ ದೃಷ್ಟಿಕೋನ ಬಲವಾಯಿತು.

ನವ್ಯ ಸಾಹಿತ್ಯ:

ನವ್ಯ ಸಾಹಿತ್ಯವು ವ್ಯಕ್ತಿಯ ಅಂತರಂಗ, ಅಸ್ತಿತ್ವದ ಪ್ರಶ್ನೆ, ಆಧುನಿಕ ಜೀವನದ ಸಂಕೀರ್ಣತೆ ಮತ್ತು ವ್ಯಕ್ತಿ ಸಮಾಜದ ಸಂಘರ್ಷಗಳನ್ನು ಕೇಂದ್ರವಾಗಿಟ್ಟುಕೊಂಡಿತು.

ಯು.ಆರ್.ಅನಂತಮೂರ್ತಿ, ಗೋಪಾಲಕೃಷ್ಣ ಅಡಿಗ, ಪಿ.ಲಂಕೇಶ, ಶಾಂತಿನಾಥ ದೇಸಾಯಿ ಮುಂತಾದವರ ಆಧುನಿಕ ವ್ಯಕ್ತಿಯ ಅಂತರಂಗದ ತಲ್ಲಣಗಳು ಮತ್ತು ಸಾಮಾಜಿಕ ವಾಸ್ತವತೆಗಳು ಪ್ರತಿಬಿಂಬಿಸಿದವು.

ನವ್ಯ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ಹೊಸ ಭಾಷೆ, ಹೊಸ ನಿರೂಪಣಾ ತಂತ್ರ ಮತ್ತು ಹೊಸ ವಿಚಾರಧಾರೆಗಳನ್ನು ಪರಿಚಯಿಸಿತು.

ದಲಿತ ಮತ್ತು ಬಂಡಾಯ ಸಾಹಿತ್ಯ:

ಕನ್ನಡ ಸಾಹಿತ್ಯದ ಸಾಮಾಜಿಕ ಪಯಣದಲ್ಲಿ ದಲಿತ ಮತ್ತು ಬಂಡಾಯ ಸಾಹಿತ್ಯದ ಕೊಡುಗೆ ಅತ್ಯಂತ ಗಮನಾರ್ಹವಾಗಿದೆ. ದಲಿತ ಸಾಹಿತ್ಯವು ಜಾತಿ ಆಧಾರಿತ ಶೋಷಣೆ, ಅಸ್ಪೃಶ್ಯತೆ, ಸಾಮಾಜಿಕ ತಾರತಮ್ಯ ಮತ್ತು ಅಸ್ತಿತ್ವದ ಪ್ರಶ್ನೆಗಳನ್ನು ಸಾಹಿತ್ಯದ ಕೇಂದ್ರಕ್ಕೆ ತಂದಿತು. ದಲಿತ ಅನುಭವವನ್ನು ಸ್ವತಃ ದಲಿತ ಬರಹಗಾರರ ದೃಷ್ಟಿಕೋನದಿಂದ ದಾಖಲಿಸುವ ಪ್ರಕ್ರಿಯೆ ಕನ್ನಡ ಸಾಹಿತ್ಯದಲ್ಲಿ ಹೊಸ ಧ್ವನಿಯನ್ನು ರೂಪಿಸಿತು.

ಬಂಡಾಯ ಸಾಹಿತ್ಯವು ಸಾಮಾಜಿಕ ಅನ್ಯಾಯದ ವಿರುದ್ಧದ್ವನಿ ಎತ್ತಿತು. ಇದು ಸಾಹಿತ್ಯವನ್ನು ಸಾಮಾಜಿಕ ಹೋರಾಟದ ಒಂದು ಅಭಿವ್ಯಕ್ತಿಯನ್ನಾಗಿ ಮಾಡಿವೆ.

ಸ್ತ್ರೀವಾದಿ ಸಾಹಿತ್ಯ:

ಮಹಿಳೆಯರ ಅನುಭವ, ಅಸ್ತಿತ್ವ, ಸ್ವಾತಂತ್ರ್ಯ, ಕುಟುಂಬ ವ್ಯವಸ್ಥೆ, ಲಿಂಗ ಅಸಮಾನತೆ ಮತ್ತು ಸಾಮಾಜಿಕ ನಿರೀಕ್ಷೆಗಳ ಕುರಿತುಕನ್ನಡ ಸ್ತ್ರೀವಾದಿ ಸಾಹಿತ್ಯಚರ್ಚೆ ನಡೆಸಿದೆ.

ಸಮಕಾಲೀನ ಕನ್ನಡ ಸಾಹಿತ್ಯ:

ಇಂದಿನ ಕನ್ನಡ ಸಾಹಿತ್ಯವು ಬಹು ಮುಖವಾಗಿದೆ. ಕಾದಂಬರಿ, ಕಥೆ, ಕಾವ್ಯ, ನಾಟಕ, ಆತ್ಮಕಥೆ, ಪ್ರವಾಸ ಸಾಹಿತ್ಯ, ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಪರಿಸರ ಸಾಹಿತ್ಯ ಮತ್ತು ಡಿಜಿಟಲ್ ಸಾಹಿತ್ಯ ಮುಂತಾದ ಅನೇಕ ಪ್ರಕಾರಗಳು ಬೆಳೆಯುತ್ತಿವೆ. ಸಮಕಾಲೀನ ಬರಹಗಾರರು ಜಾಗತೀಕರಣ, ನಗರೀಕರಣ, ವಲಸೆ, ಪರಿಸರ ಬಿಕ್ಕಟ್ಟು, ತಂತ್ರಜ್ಞಾನ, ಸಾಮಾಜಿಕ ಮಾಧ್ಯಮ, ಉದ್ಯೋಗ, ಕುಟುಂಬ ಸಂಬಂಧಗಳು ಮತ್ತು ಹೊಸ ತಲೆಮಾರಿನ ಮನೋಭಾವಗಳಂತಹ ವಿಷಯಗಳನ್ನು ಸಾಹಿತ್ಯದಲ್ಲಿ ಪ್ರತಿಬಿಂಬಿಸುತ್ತಿದ್ದಾರೆ.

ಪ್ರಸ್ತುತ ಸಮಾಜಕ್ಕೆ ಕನ್ನಡ ಸಾಹಿತ್ಯದ ಕೊಡುಗೆಗಳು:

1. ಸಾಮಾಜಿಕ ಜಾಗೃತಿ:

ಕನ್ನಡ ಸಾಹಿತ್ಯವು ಸಮಾಜದ ಸಮಸ್ಯೆಗಳನ್ನು ಗುರುತಿಸಲು ಮತ್ತು ಅವುಗಳ ಕುರಿತುಚಿಂತಿಸಲು ಜನರನ್ನು ಪ್ರೇರೇಪಿಸಿದೆ. ಸಾಮಾಜಿಕ ಅನ್ಯಾಯ, ಅಸಮಾನತೆ ಮತ್ತು ಶೋಷಣೆಯ ವಿರುದ್ಧ ಸಾಹಿತ್ಯವು ಪ್ರಶ್ನಿಸುವ ಮನೋಭಾವವನ್ನು ಬೆಳೆಸಿದೆ.

2. ಮಾನವೀಯ ಮೌಲ್ಯಗಳ ಬೆಳವಣಿಗೆ:

ಪ್ರೀತಿ, ಸಹಾನುಭೂತಿ, ಸಹಿಷ್ಣುತೆ, ಕರುಣೆ, ಸತ್ಯ, ನ್ಯಾಯ ಮತ್ತು ಪರಸ್ಪರ ಗೌರವದಂತಹ ಮೌಲ್ಯಗಳನ್ನು ಸಾಹಿತ್ಯವು ಬೆಳೆಸುತ್ತದೆ. ಉತ್ತಮ ಸಾಹಿತ್ಯ ಓದುಗರಲ್ಲಿ ಇತರರ ಜೀವನಾನುಭವವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

3. ಕನ್ನಡ ಭಾಷೆಯ ಸಂರಕ್ಷಣೆ

ಜಾಗತೀಕರಣದ ಸಂದರ್ಭದಲ್ಲಿ ಭಾಷೆಯ ಅಸ್ತಿತ್ವಕ್ಕೆ ಸವಾಲುಗಳು ಎದುರಾಗುತ್ತಿರುವಾಗ ಕನ್ನಡ ಸಾಹಿತ್ಯವು ಭಾಷೆಯ ನಿರಂತರೆಯನ್ನು ಕಾಪಾಡುವ ಪ್ರಮುಖ ಸಾಧನವಾಗಿದೆ.

ಹೊಸ ಪದಗಳು, ಹೊಸ ಅಭಿವ್ಯಕ್ತಿಗಳು ಮತ್ತು ಹೊಸ ಸಾಹಿತ್ಯ ಪ್ರಕಾರಗಳ ಮೂಲಕ ಕನ್ನಡ ಭಾಷೆ ನಿರಂತರವಾಗಿ ಬೆಳೆಯುತ್ತಿದೆ.

4. ಸಾಂಸ್ಕೃತಿಕ ಅಸ್ಮಿತೆ:

ಕನ್ನಡ ಸಾಹಿತ್ಯವು ಕರ್ನಾಟಕದ ಜನಪದ, ಆಚರಣೆ, ಸಂಪ್ರದಾಯ, ಸ್ಥಳೀಯ ಇತಿಹಾಸ, ಪ್ರಕೃತಿ ಮತ್ತು ಜೀವನ ಶೈಲಿಯನ್ನು ದಾಖಲಿಸಿದೆ.

ಈ ಕಾರಣದಿಂದ ಸಾಹಿತ್ಯವು ಕನ್ನಡಿಗರ ಸಾಂಸ್ಕೃತಿಕ ಅಸ್ಮಿತೆಯ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದೆ.

5. ಮಹಿಳಾ ಸಬಲೀಕರಣ:

ಸ್ತ್ರೀವಾದಿ ಸಾಹಿತ್ಯವು ಮಹಿಳೆಯರ ಸಮಸ್ಯೆಗಳನ್ನು ಸಾರ್ವಜನಿಕ ಚರ್ಚೆಗೆ ತಂದಿದೆ. ಶಿಕ್ಷಣ, ಸ್ವಾತಂತ್ರ್ಯ, ಸಮಾನತೆ ಮತ್ತು ಸ್ವಾಭಿಮಾನದ ಕುರಿತು ಚಿಂತನೆಗೆ ಸಾಹಿತ್ಯ ಪ್ರೇರಣೆ ನೀಡಿದೆ.

6. ಸಾಮಾಜಿಕ ಸಮಾನತೆ:

ವಚನ, ದಾಸ, ದಲಿತ ಮತ್ತು ಬಂಡಾಯ ಸಾಹಿತ್ಯದ ವಿವಿಧ ಹಂತಗಳಲ್ಲಿ ಸಾಮಾಜಿಕ ಸಮಾನತೆಯ ಪ್ರಶ್ನೆ ಪ್ರಮುಖವಾಗಿದೆ. ಜಾತಿ ಮತ್ತು ಸಾಮಾಜಿಕ ಸ್ಥಾನಮಾನಕ್ಕಿಂತ ಮಾನವೀಯತೆಯೇ ಮುಖ್ಯ ಎಂಬ ಚಿಂತನೆಗೆ ಸಾಹಿತ್ಯ ಬಲ ನೀಡಿದೆ.

7. ಶಿಕ್ಷಣ ಮತ್ತುಜ್ಞಾನ ಪ್ರಸಾರ:

ಸಾಹಿತ್ಯವು ಶಿಕ್ಷಣದ ಒಂದು ಪ್ರಮುಖ ಸಾಧನ. ಕಾದಂಬರಿ, ಜೀವನಚರಿತ್ರೆ, ಪ್ರಬಂಧ, ವಿಜ್ಞಾನ ಸಾಹಿತ್ಯ ಮತ್ತು ಮಕ್ಕಳ ಸಾಹಿತ್ಯದ ಮೂಲಕ ಜ್ಞಾನವನ್ನು ಸರಳವಾಗಿ ಜನರಿಗೆತಲುಪಿಸಬಹುದು.

8. ಪ್ರಜಾಪ್ರಭುತ್ವದ ಮೌಲ್ಯಗಳು:

ಸ್ವತಂತ್ರಚಿಂತನೆ, ಪ್ರಶ್ನಿಸುವ ಮನೋಭಾವ, ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಮತ್ತು ಸಾಮಾಜಿಕ ಹೊಣೆಗಾರಿಕೆಗಳು ಪ್ರಜಾಪ್ರಭುತ್ವದ ಪ್ರಮುಖ ಮೌಲ್ಯಗಳು, ಸಾಹಿತ್ಯವು ಇವುಗಳನ್ನು ಬೆಳೆಸುವ ಬೌದ್ಧಿಕ ವಾತಾವರಣವನ್ನು ನಿರ್ಮಿಸುತ್ತದೆ.

ಪರಿಸರ ಜಾಗೃತಿಗೆ ಕನ್ನಡ ಸಾಹಿತ್ಯದ ಕೊಡುಗೆ:

ಸಮಕಾಲೀನ ಸಂದರ್ಭದಲ್ಲಿ ಪರಿಸರ ಸಂರಕ್ಷಣೆ ಪ್ರಮುಖ ಸಾಮಾಜಿಕ ಪ್ರಶ್ನೆಯಾಗಿದೆ. ಪ್ರಕೃತಿ, ನದಿ, ಕಾಡು, ಕೃಷಿ ಮತ್ತುಗ್ರಾಮೀಣ ಬದುಕಿನೊಂದಿಗೆ ಕನ್ನಡ ಸಾಹಿತ್ಯದ ಸಂಬಂಧ ಬಹಳ ಹಳೆಯದು.

ಆಧುನಿಕ ಸಾಹಿತ್ಯದಲ್ಲಿ ಪರಿಸರ ನಾಶ, ನಗರೀಕರಣ ಮತ್ತು ಪ್ರಕೃತಿಯ ಮೇಲೆ ಮಾನವನ ಒತ್ತಡದಂತಹ ವಿಷಯಗಳು ಚರ್ಚೆಯಾಗುತ್ತಿದೆ.

ಸಾಹಿತ್ಯದ ಮೂಲಕ ಪರಿಸರದೊಂದಿಗೆ ಮಾನವನ ಸಂಬಂಧವನ್ನು ಮರು ಪರಿಶೀಲಿಸುವ ಅವಕಾಶ ದೊರೆಯುತ್ತದೆ.

ಯುವ ಜನತೆ ಮತ್ತುಕನ್ನಡ ಸಾಹಿತ್ಯ:

ಡಿಜಿಟಲ್ ಯುಗದಲ್ಲಿ ಯುವ ಜನರ ಓದುವ ಅಭ್ಯಾಸದಲ್ಲಿ ಬದಲಾವಣೆ ಕಂಡುಬರುತ್ತಿದೆ. ಆದರೂ ಸಾಹಿತ್ಯದ ಪ್ರಸ್ತುತತೆ ಕಡಿಮೆಯಾಗಿಲ್ಲ; ಅದರ ಮಾಧ್ಯಮ ಮಾತ್ರ ಬದಲಾಗುತ್ತಿದೆ.

ಇ–ಪುಸ್ತಕಗಳು, ಆನ್‌ಲೈನ್ ಪತ್ರಿಕೆಗಳು, ಬ್ಲಾಗ್‌ಗಳು, ಪಾಡ್‌ಕಾಸ್ಟ್‌ಗಳು ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಕನ್ನಡ ಸಾಹಿತ್ಯ ಹೊಸ ತಲೆಮಾರಿಗೆತಲುಪುತ್ತಿದೆ.

ಯುವಜನರಲ್ಲಿ ಭಾಷಾ ಪ್ರೀತಿ, ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸುವಲ್ಲಿ ಕನ್ನಡ ಸಾಹಿತ್ಯ ಪ್ರಮುಖ ಪಾತ್ರ ವಹಿಸಬಹುದು.

ಡಿಜಿಟಲ್ ಯುಗದಲ್ಲಿ ಕನ್ನಡ ಸಾಹಿತ್ಯ:

ಡಿಜಿಟಲ್ ತಂತ್ರಜ್ಞಾನವು ಕನ್ನಡ ಸಾಹಿತ್ಯದ ಪ್ರಸಾರಕ್ಕೆ ಹೊಸ ಅವಕಾಶಗಳನ್ನು ಸೃಷ್ಟಿಸಿದೆ. ಹಿಂದೆ ಒಂದು ಕೃತಿ ನಿರ್ದಿಷ್ಟ ಪ್ರದೇಶದ ಓದುಗರಿಗೆ ಮಾತ್ರ ಸೀಮಿತವಾಗಿದ್ದರೆ, ಇಂದು ಅಂತರ್ಜಾಲದ ಮೂಲಕ ವಿಶ್ವದ ವಿವಿಧ ಭಾಗಗಳಲ್ಲಿರುವ ಕನ್ನಡಿಗರನ್ನು ತಲುಪಬಹುದು.

ಯೂನಿಕೋಡ್ ತಂತ್ರಜ್ಞಾನ, ಡಿಜಿಟಲ್ ಗ್ರಂಥಾಲಯಗಳು, ಇ–ಪುಸ್ತಕಗಳು ಮತ್ತು ಸಾಮಾಜಿಕ ಮಾಧ್ಯಮಗಳು ಕನ್ನಡದ ಬಳಕೆಯನ್ನು ವಿಸ್ತರಿಸಿವೆ.

ಆದರೆ ಡಿಜಿಟಲ್ ಯುಗವು ಕೆಲವು ಸವಾಲುಗಳನ್ನೂ ತಂದಿದೆ. ವೇಗದ ಓದು, ಸಂಕ್ಷಿಪ್ತ ಬರಹ, ತಪ್ಪು ಭಾಷಾ ಬಳಕೆ ಮತ್ತು ಆಳವಾದ ಓದುವಿಕೆಯ ಕೊರತೆ ಸಾಹಿತ್ಯದ ಗುಣಮಟ್ಟದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಆದ್ದರಿಂದ ತಂತ್ರಜ್ಞಾನವನ್ನು ಬಳಸಿಕೊಂಡು ಗುಣಮಟ್ಟದ ಕನ್ನಡ ಸಾಹಿತ್ಯವನ್ನು ಹೊಸ ತಲೆಮಾರಿಗೆ ತಲುಪಿಸುವ ಅಗತ್ಯವಿದೆ.

ಕನ್ನಡ ಸಾಹಿತ್ಯದ ಪ್ರಸ್ತುತ ಸವಾಲುಗಳು:

ಕನ್ನಡ ಸಾಹಿತ್ಯವು ಇಂದು ಕೆಲವು ಪ್ರಮುಖ ಸವಾಲುಗಳನ್ನು ಎದುರಿಸುತ್ತಿದೆ. ಕನ್ನಡ ಓದುಗರ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯ. ಯುವ ಜನರಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸುವುದು. ಗುಣಮಟ್ಟದ ಕನ್ನಡ ವಿಷಯವನ್ನು ಡಿಜಿಟಲ್ ಮಾಧ್ಯಮಗಳಲ್ಲಿ ಹೆಚ್ಚಿಸುವುದು. ಕನ್ನಡದ ವೈಜ್ಞಾನಿಕ ಮತ್ತು ತಾಂತ್ರಿಕ ಸಾಹಿತ್ಯವನ್ನು ವಿಸ್ತರಿಸುವುದು. ಅನುವಾದದ ಮೂಲಕ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವುದು. ಹಳೆ ಸಾಹಿತ್ಯವನ್ನು ಡಿಜಿಟಲೀಕರಣಗೊಳಿಸಿ ಸಂರಕ್ಷಿಸುವುದು.

ಸಂಶೋಧನಾಕಂಡುಬಂದ ಅಂಶಗಳು:

ಈ ಅಧ್ಯಯನದಿಂದ ಕೆಳಗಿನ ಅಂಶಗಳನ್ನು ಗುರುತಿಸಬಹುದು:

1. ಕನ್ನಡ ಸಾಹಿತ್ಯವು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದ ಪ್ರಮುಖದ ದಾಖಲೆಯಾಗಿದೆ.
2. ಕನ್ನಡ ಸಾಹಿತ್ಯವು ಕಾಲಾನುಕಾಲಕ್ಕೆ ಸಮಾಜದ ಬದಲಾವಣೆಗಳನ್ನು ಪ್ರತಿಬಿಂಬಿಸಿದೆ.
3. ವಚನ ಸಾಹಿತ್ಯವು ಸಮಾನತೆ ಮತ್ತು ಮಾನವೀಯ ಮೌಲ್ಯಗಳಿಗೆ ಒತ್ತು ನೀಡಿದೆ.
4. ದಾಸ ಸಾಹಿತ್ಯವು ಭಕ್ತಿ ಮತ್ತು ನೈತಿಕ ಮೌಲ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸಿದೆ.
5. ಆಧುನಿಕ ಸಾಹಿತ್ಯವು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಪ್ರಶ್ನೆಗಳನ್ನು ಚರ್ಚೆಯ ಕೇಂದ್ರಕ್ಕೆ ತಂದಿದೆ.
6. ದಲಿತ, ಬಂಡಾಯ ಮತ್ತು ಸ್ತ್ರೀವಾದಿ ಸಾಹಿತ್ಯವು ಅಂಚಿನ ಧ್ವನಿಗಳಿಗೆ ಮಹತ್ವದ ಅಭಿವ್ಯಕ್ತಿ ನೀಡಿದೆ.
7. ಕನ್ನಡ ಸಾಹಿತ್ಯವು ಭಾಷೆ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ.
8. ಡಿಜಿಟಲ್ ತಂತ್ರಜ್ಞಾನವು ಕನ್ನಡ ಸಾಹಿತ್ಯದ ಪ್ರಸಾರಕ್ಕೆ ಹೊಸ ಅವಕಾಶಗಳನ್ನು ಒದಗಿಸಿದೆ.
9. ಸಾಹಿತ್ಯ ಪ್ರಸ್ತುತ ಸಮಾಜದಲ್ಲಿ ಮಾನವೀಯತೆ, ಸಮಾನತೆ ಮತ್ತು ಸಾಮಾಜಿಕ ಹೊಣೆಗಾರಿಕೆಯ ಚಿಂತನೆಗಳನ್ನು ಬೆಳೆಸುವ ಸಾಮರ್ಥ್ಯ ಹೊಂದಿದೆ.

ಸಲಹೆಗಳು:

ಕನ್ನಡ ಸಾಹಿತ್ಯದ ಭವಿಷ್ಯವನ್ನು ಬಲಪಡಿಸಲು ಕೆಲವು ಕ್ರಮಗಳನ್ನು ಕೈಗೊಳ್ಳಬಹುದು. ಶಾಲಾ ಮತ್ತುಕಾಲೇಜು ಹಂತದಲ್ಲಿ ಸಾಹಿತ್ಯ ಓದುವ ಅಭ್ಯಾಸವನ್ನು ಉತ್ತೇಜಿಸಬೇಕು. ಯುವ ಜನರನ್ನು ಕನ್ನಡ ಪುಸ್ತಕಗಳತ್ತ ಆಕರ್ಷಿಸುವ ಕಾರ್ಯಕ್ರಮಗಳನ್ನು ರೂಪಿಸಬೇಕು. ಕನ್ನಡದ ಪ್ರಮುಖ ಕೃತಿಗಳನ್ನು ಡಿಜಿಟಲ್ ರೂಪದಲ್ಲಿ ಸಂರಕ್ಷಿಸಬೇಕು. ಕನ್ನಡ ಸಾಹಿತ್ಯದ ಉತ್ತಮ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶಿ ಭಾಷೆಗಳಿಗೆ ಅನುವಾದಿಸಬೇಕು. ಇತರ ಭಾಷೆಗಳ ಉತ್ತಮ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯವನ್ನು ವಿಸ್ತರಿಸಬೇಕು. ಗ್ರಾಮೀಣ ಮತ್ತು ಜನಪದ ಸಾಹಿತ್ಯದ ಸಂಗ್ರಹ ಮತ್ತು ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಡಿಜಿಟಲ್ ವೇದಿಕೆಗಳಲ್ಲಿ ಗುಣಮಟ್ಟದ ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಅವಕಾಶ ಕಲ್ಪಿಸಬೇಕು. ಯುವ ಬರಹಗಾರರನ್ನು ಪ್ರೋತ್ಸಾಹಿಸುವ ಸಾಹಿತ್ಯಿಕ ವೇದಿಕೆಗಳನ್ನು ಹೆಚ್ಚಿಸಬೇಕು.

ಉಪಸಂಹಾರ:

ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಪಯಣವು ನಿರಂತರವಾಗಿ ಸಾಗುತ್ತಿರುವ ಜೀವಂತ ಪರಂಪರೆಯಾಗಿದೆ. ಪ್ರಾಚೀನ ಕಾವ್ಯದಿಂದ ವಚನ ಸಾಹಿತ್ಯದ ಸಾಮಾಜಿಕ ಚಿಂತನೆಗೆ, ದಾಸ ಸಾಹಿತ್ಯದ ಭಕ್ತಿ ಪರಂಪರೆಯಿಂದ ನವೋದಯದ ಮಾನವತಾ ವಾದಕ್ಕೆ, ಪ್ರಗತಿಶೀಲ ಮತ್ತು ನವ್ಯ ಸಾಹಿತ್ಯದ ಸಾಮಾಜಿಕ–ವೈಯಕ್ತಿಕ ಸಂಘರ್ಷಗಳಿಂದ ದಲಿತ, ಬಂಡಾಯ ಮತ್ತು ಸ್ತ್ರೀವಾದಿ ಸಾಹಿತ್ಯದ ಅಸ್ತಿತ್ವದ ಪ್ರಶ್ನೆಗಳವರೆಗೆ ಕನ್ನಡ ಸಾಹಿತ್ಯವು ಸಮಾಜದ ವಿವಿಧ ಆಯಾಮಗಳನ್ನು ತನ್ನೊಳಗೆ ಅಳವಡಿಸಿಕೊಂಡಿದೆ.

ಸಾಹಿತ್ಯವು ಸಮಾಜದ ಪ್ರತಿಬಿಂಬವಾಗಿರುವುದರ ಜೊತೆಗೆ ಸಮಾಜವನ್ನು ಪ್ರಶ್ನಿಸುವ ಮತ್ತು

ಪರಿವರ್ತನೆಯತ್ತ ಕೊಂಡೊಯ್ಯವ ಶಕ್ತಿಯಾಗಿದೆ. ಕನ್ನಡ ಸಾಹಿತ್ಯವು ಸಾಮಾಜಿಕ ಜಾಗೃತಿ, ಸಮಾನತೆ, ಮಾನವೀಯತೆ, ಮಹಿಳಾ ಸಬಲೀಕರಣ, ದಲಿತ ಅಸ್ತಿತ್ವ, ಪರಿಸರ ಪ್ರಜ್ಞೆ ಭಾಷಾ ಸಂರಕ್ಷಣೆ ಮತ್ತು ಸಾಂಸ್ಕೃತಿಕ ಅಸ್ಮಿತೆಯ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡಿದೆ.

ಪ್ರಸ್ತುತಜಾಗತೀಕರಣ ಮತ್ತು ಡಿಜಿಟಲ್ ತಂತ್ರಜ್ಞಾನದ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ರೂಪ ಮತ್ತು ಪ್ರಸರಣ ವಿಧಾನಗಳು ಬದಲಾಗುತ್ತಿದ್ದರೂ ಅದರ ಮೂಲ ಉದ್ದೇಶವಾದ ಮಾನವ ಜೀವನದ ಅರ್ಥವನ್ನು ಅರಿಯುವುದು, ಸಮಾಜವನ್ನು ಪ್ರಶ್ನಿಸುವುದು ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವುದು ಮುಂದುವರಿದಿದೆ.

ಹೀಗಾಗಿ ಕನ್ನಡ ಸಾಹಿತ್ಯವನ್ನು ಕೇವಲ ಹಿಂದಿನ ಕಾಲದ ಸಾಂಸ್ಕೃತಿಕ ಪರಂಪರೆಯಾಗಿ ನೋಡದೆ, ಸಮಕಾಲೀನ ಸಮಾಜದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಮತ್ತು ಭವಿಷ್ಯದ ಸಮಾಜವನ್ನು ರೂಪಿಸುವ ಜ್ಞಾನಸಂಪತ್ತಾಗಿ ಪರಿಗಣಿಸಬೇಕಾಗಿದೆ. ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಪಯಣವು ಇನ್ನೂ ಮುಗಿದಿಲ್ಲ; ಅದು ಹೊಸ ತಲೆಮಾರು, ಹೊಸ ತಂತ್ರಜ್ಞಾನ ಮತ್ತು ಹೊಸ ಸಾಮಾಜಿಕ ಅನುಭವಗಳೊಂದಿಗೆ ನಿರಂತರವಾಗಿ ಮುಂದುವರಿಯುತ್ತಿದೆ.

ಉಲ್ಲೇಖ ಗ್ರಂಥಗಳು:

1. ಪಂಪ– ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ
2. ರನ್ನ– ಗದಾಯುದ್ಧ
3. ಬಸವಣ್ಣ– ವಚನಗಳು
4. ಅಲ್ಲಮಪ್ರಭು–ವಚನಗಳು
5. ಅಕ್ಕಮಹಾದೇವಿ – ವಚನಗಳು
6. ಪುರಂದರದಾಸ– ದಾಸ ಸಾಹಿತ್ಯ
7. ಕನಕದಾಸ– ಕನಕದಾಸರ ಕೀರ್ತನೆಗಳು
8. ಕುವೆಂಪು– ಶ್ರೀ ರಾಮಾಯಣದರ್ಶನಂ
9. ದ.ರಾ.ಬೇಂದ್ರೆ – ನಾಕುತಂತಿ
10. ಶಿವರಾಮ ಕಾರಂತ– ಆಯ್ದ ಕಾದಂಬರಿಗಳು
11. ಮಾಸ್ತಿ ವೆಂಕಟೇಶಅಯ್ಯಂಗಾರ್– ಆಯ್ದ ಕಥೆಗಳು ಮತ್ತು ಕಾದಂಬರಿಗಳು
12. ಯು.ಆರ್. ಅನಂತಮೂರ್ತಿ– ಸಂಸ್ಕಾರ
13. ಗೋಪಾಲಕೃಷ್ಣ ಅಡಿಗ–ಆಯ್ದ ಕವನಗಳು
14. ಕನ್ನಡ ಸಾಹಿತ್ಯಚರಿತ್ರೆಗೆ ಸಂಬಂಧಿಸಿದ ವಿಶ್ವವಿದ್ಯಾಲಯ ಮಟ್ಟದ ಗ್ರಂಥಗಳು
15. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳು
16. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳು.

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ವಚನ ಸಾಹಿತ್ಯ ಮತು ಲಿಂಗ ಸಮಾನತೆಯ ಧ್ವನಿ

ಸೌಮ್ಯ. ಸಿ.
ಸಂಶೋಧನಾ ವಿದ್ಯಾರ್ಥಿನಿ.
ಮಾರ್ಗದರ್ಶಕರು: ಪ್ರೊ.ನಿಜಲಿಂಗಪ್ಪ ಮಟ್ಟಿಹಾಳ
ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ.
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ
Corresponding Author–ಸೌಮ್ಯ. ಸಿ.
DOI - 10.5281/zenodo.23528570

ಸಾರಲೇಖ:

ಕನ್ನಡ ಭಾಷಾ ಸಾಹಿತ್ಯ ಪರಂಪರೆಯನ್ನು ಗಮನಿಸಿದಾಗ ನಡುಗನ್ನಡ ಕಾಲಾವಧಿಯಲ್ಲಿ ಹುಟ್ಟಿಕೊಂಡ ವಚನ ಸಾಹಿತ್ಯವು ಕೇವಲ ಸಾಹಿತ್ಯವಾಗಿ ಉಳಿಯದೆ ಅದು ಸಮಾಜವನ್ನು ಉದ್ಧರಿಸುವ ಚಳುವಳಿಯಾಗಿ ವಿಶ್ವವಿಖ್ಯಾತಿ ಪಡೆದದ್ದು ಒಂದು ಹೆಮ್ಮೆಯ ಸಂಗತಿ. ವಚನ ಚಳುವಳಿಯು ಕೇವಲ ಧಾರ್ಮಿಕ ಚಳುವಳಿಯಾಗಿ ಮಾತ್ರ ಉಳಿಯದೆ ಅದೊಂದು ಸಾಮಾಜಿಕ ಚಳುವಳಿಯಾಗಿ ಪ್ರಾಮುಖ್ಯತೆ ಹೊಂದಿದೆ. ಅಂದಿನ ಸಮಾಜದಲ್ಲಿದ್ದ ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಿ ಒಂದು ಉತ್ತಮ ಸಮಾಜವನ್ನು ನಿರ್ಮಿಸುವ ಗುರಿ ಹೊಂದಿದ್ದ ಶಿವಶರಣರ ಹೋರಾಟ ನಿಜಕ್ಕೂ ಶ್ಲಾಘನೀಯವಾದುದು. ಅಂದಿನ ಸಮಾಜದಲ್ಲಿದ್ದ ಜಾತಿ, ಧರ್ಮ, ಲಿಂಗ, ವರ್ಗ, ಬಡವ ಶ್ರೀಮಂತರೆಂಬ ಭೇದ ಭಾವಗಳನ್ನು ಅಳಿಸಿ ಸಮ ಸಮಾಜದ ಕನಸು ಹೊತ್ತವರು ಶಿವಶರಣರು.ಈ ನಿಟ್ಟಿನಲ್ಲಿ ವಚನಕಾರರು ಅಂದು ಸಮಾಜದಲ್ಲಿ ಹೆಣ್ಣನ್ನು ಕೀಳು ಎಂಬ ಭಾವನೆಯಲ್ಲಿ ನೋಡುತ್ತಿದ್ದ ಅವಮಾನಕರ ಸನ್ನಿವೇಶವನ್ನು ವಿರೋಧಿಸಿ, ತಮ್ಮ ವಚನಗಳ ಮೂಲಕ ಗಂಡು ಹೆಣ್ಣು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಹೆಣ್ಣು ಗಂಡು ಇಬ್ಬರು ಸಮಾನರು ಎಂದು ಸಾರಿದರು. ವಚನಕಾರರಿಗೆ ಸರಿಸಮವಾಗಿ ವಚನಕಾರ್ತಿಯರು ಅಂದು ವಚನಗಳನ್ನು ರಚಿಸಿ ಸಾಮಾಜಿಕ ಕಾರ್ಯಗಳಲ್ಲಿ ಮುಂದಿದ್ದಿದ್ದನ್ನು ಗಮನಿಸಿದರೆ ವಚನಕಾರರು ಸ್ತ್ರೀಯರಿಗೆ ಹೇಗೆ ಗೌರವದ ಸ್ಥಾನಮಾನ ನೀಡಿದ್ದರು ಎನ್ನುವ ಅರಿವು ಮೂಡುತ್ತದೆ.

ಕೀಲಿ ಪದಗಳು: ವಚನ, ಸ್ತ್ರೀ, ಲಿಂಗಸಮಾನತೆ, ಸಮ ಸಮಾಜ, ಸತಿ–ಪತಿ, ಶರಣರು.

ಪೀಠಿಕೆ:

ಭಾರತದ ಇತಿಹಾಸದಲ್ಲಿ ಸ್ತ್ರೀಗೆ ಸಂಪೂರ್ಣ ಸ್ವಾತಂತ್ರ್ಯ, ಗೌರವ ದೊರೆತದ್ದು 12ನೇ ಶತಮಾನದ ವಚನಕಾರರ ಕಾಲದಲ್ಲಿ. ಲಿಂಗ ಭೇದವಿಲ್ಲದೆ ಮಹಿಳೆಯರಿಗೆ ವಚನಕಾರರು ನೀಡಿದ ಗೌರವ ಸ್ಥಾನ ಮಾನ ಉದಾತ್ತವಾದದ್ದು. ಸ್ತ್ರೀಯರಲ್ಲಿ ಇರುವ ಅದ್ಭುತ ಶಕ್ತಿಯನ್ನು ಅರಿತಿದ್ದ ವಚನಕಾರರು ಸ್ತ್ರೀಯರಿಗು ಪುರುಷರಷ್ಟೇ ಸಮಾನ ಅವಕಾಶಗಳನ್ನು ನೀಡಿದರು. ಹೆಣ್ಣು ಕೇವಲ ಮನೆ ಕೆಲಸಗಳಿಗೆ ಸೀಮಿತಳಾಗಿ ಬಂಧಿಸಲ್ಪಟ್ಟ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣನ್ನು ಉನ್ನತ ಸ್ಥಾನದಲ್ಲಿಟ್ಟು ಗೌರವಿಸಿದವರು ನಮ್ಮ ವಚನಕಾರರು. ಸಂಸಾರ ಮತ್ತು ಸಮಾಜದ ರಥಗಳಿಗೆ ಗಂಡು ಒಂದು ಗಾಲಿಯಾದರೆ ಹೆಣ್ಣು ಇನ್ನೊಂದು ಗಾಲಿ ಎನ್ನುವ ಸತ್ಯವನ್ನು ವಚನಕಾರರು ಅರಿತಿದ್ದರು, ಹಾಗೂ ಆ ಸತ್ಯದ ಅರಿವನ್ನು ಸಮಾಜದ ಎಲ್ಲಾ ಜನರಿಗೂ ಮೂಡಿಸಲು ಪ್ರಯತ್ನಿಸಿದರು ಈ ಕಾರಣದಿಂದಾಗಿ ಶಿವಶರಣರ ಕ್ರಾಂತಿಯಲ್ಲಿ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಂಡಂತೆ ಇನ್ಯಾವ ಕ್ರಾಂತಿಯಲ್ಲೂ ಮಹಿಳೆಯರು ಹೆಚ್ಚು ಪಾಲ್ಗೊಂಡಂತೆ ಕಂಡುಬರುವುದಿಲ್ಲ.

ಸ್ತ್ರೀಯರಿಗೆ ಯಾವುದೇ ರೀತಿಯ ಮಹತ್ವ ಇಲ್ಲದೆ, ಅವಳನ್ನು ಹೀನಾಯವಾಗಿ ಕಾಣಲಾಗುತ್ತಿದ್ದ ಸಮಾಜವನ್ನು ಜೇಡರ ದಾಸಿಮಯ್ಯನವರು ವಿರೋಧಿಸುತ್ತಾರೆ. ದೈಹಿಕವಾಗಿ ಭಿನ್ನತೆಗಳನ್ನು ಹೊಂದಿರುವ ಹೆಣ್ಣಿನ ಒಳಗೆ ಇರುವ ಆತ್ಮಕ್ಕೆ ಯಾವುದೇ ವ್ಯತ್ಯಾಸ ಇಲ್ಲ ಎಂದಿದ್ದಾರೆ.

ಮೊಲೆ ಮುಡಿ ಬಂದರೆ ಹೆಣ್ಣೆಂಬರು,
ಗಡ್ಡ ಮೀಸೆ ಬಂದರೆ ಗಂಡೆಂಬರು,
ನಡುವೆ ಸುಳಿವಾತ್ಮನು
ಹೆಣ್ಣು ಅಲ್ಲ, ಗಂಡು ಅಲ್ಲ ಕಾಣಾ ರಾಮನಾಥ.
(ಸಮಗ್ರ ವಚನ ಸಂಪುಟ: ಒಂದು–2016/ಪುಟ ಸಂಖ್ಯೆ–1284/ವಚನ ಸಂಖ್ಯೆ –845)

ಮೊಲೆ ಮುಡಿ ಬಂದರೆ ಹೆಣ್ಣೆಂಬರು/
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೊ ಗಂಡೊ ನಾಸ್ತಿ ನಾಥಾ//
(ಸಮಗ್ರ ವಚನ ಸಂಪುಟ: ಒಂದು–2016/ಪುಟ ಸಂಖ್ಯೆ–873/ವಚನ ಸಂಖ್ಯೆ –778)

ಮೊಲೆ ಮುಡಿ ಇದ್ದುದೆ/ಹೆಣ್ಣೆಂದು ಪ್ರಮಾಣಿಸಲಿಲ್ಲ/
ಕಾಸೆ ಮೀಸೆ ಕಶಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ
ಅದು ಜಗದ ಹಾಹೆದ/ಬಲ್ಲವರ ನೀತಿಯಲ್ಲ
ಏತರ ಹಣ್ಣಾದಡೂ ಮಧುರವೆ ಕಾರಣ/
ಅಂದವಿಲ್ಲದ ಕುಸುಮಕ್ಕೆ ವಾಸನೆಯೇ ಕಾರಣ
ಇದರಂದವ ನೀನೇ ಬಲ್ಲೆ ಶಂಭುಜಕ್ಕೇಶ್ವರಾ//
(ಸಮಗ್ರ ವಚನ ಸಂಪುಟ: ಒಂದು–2016/ಪುಟ ಸಂಖ್ಯೆ–915/ವಚನ ಸಂಖ್ಯೆ –1226)

ಈ ಮೂರು ವಚನಗಳಲ್ಲಿ ಹೊರ ಹೊಮ್ಮಿರುವ ಧ್ವನಿಯೆಂದರೆ ಅದು ಗಂಡು ಹೆಣ್ಣಿನ ಸಮಾನತೆ. ದೈಹಿಕವಾಗಿ ಮಾತ್ರ ಗಂಡು ಹೆಣ್ಣಿನ ನಡುವೆ ವ್ಯತ್ಯಾಸ ಇರುತ್ತದೆಯೇ ಹೊರತು ಅವರ ನಡುವೆ ಯಾವುದೇ ತಾರತಮ್ಯ ಸರಿಯಲ್ಲ. ಸಮಾಜದ ಉತ್ತಮ ರೀತಿಯ ಬೆಳವಣಿಗೆಗೆ ಸ್ತ್ರೀ ಪುರುಷರಿಬ್ಬರ ಕೊಡುಗೆಯು ಮುಖ್ಯವಾಗಿರುತ್ತದೆ. ಹಾಗಾಗಿ ಸ್ತ್ರೀ ಪುರುಷರ ಮಧ್ಯೆ ಯಾವುದೇ ಭೇದ ಭಾವ ಇರಬಾರದು. ಎನ್ನುವುದು ವಚನಕಾರರ ನಿಲುವಾಗಿದೆ.

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದೀತೆ?
ಒಡೆಯನ ಪ್ರಾಣಕ್ಕೆ ಇದ್ದೀತೆ ಯಜ್ಞೋಪವೀತ?
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ?
ನೀ ತೊಡಗಿಕ್ಕಿದ ತೊಡಕ ನೀ ಲೋಕದ ಜಡರೆತ್ತ ರಾಮನಾಥ.
(ವಿದ್ಯಾಶಂಕರ ಎಸ್.(ಸಂ), 2001, ಸಂಕೀರ್ಣ ವಚನ ಸಂಪುಟಎರೆಡು,ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ.257)

ಈ ವಚನದಲ್ಲಿ ಹೆಣ್ಣು ಗಂಡಿನ ಆತ್ಮದೊಳಗಿನ ಪ್ರಾಣಕ್ಕೆ ಯಾವುದೇ ಲಿಂಗ ಭೇದ ಇರುವುದಿಲ್ಲ, ಹಾಗಾಗಿ ಸತಿ ಪತಿಗಳು ಸಂಸಾರದ ರಥಕ್ಕೆ ಎರಡು ಗಾಲಿಗಳೇ ಹೊರತು ಗಂಡ ಮೇಲು ಹೆಂಡತಿ ಕೀಳು ಎನ್ನುವ ಭಾವನೆ ಸಲ್ಲದು ಎನ್ನುವುದು ಜೇಡರ ದಾಸಿಮಯ್ಯನವರ ಅಭಿಪ್ರಾಯವಾಗಿದೆ.

"ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ" ಎಂದು ಹೇಳುವ ಮೂಲಕ ಅಲ್ಲಮಪ್ರಭುಗಳು ಹೆಣ್ಣು, ಹೊನ್ನು, ಮಣ್ಣು ಮಾಯೆ ಎನ್ನುವ ವೈಧಿಕಶಾಹಿ ಮಾಯಾ ಕಲ್ಪನೆಯನ್ನು, ಮೂಢ ನಂಬಿಕೆಗಳ ಕಟ್ಟುಪಾಡುಗಳನ್ನು ಮುರಿದು ಹಾಕಲು ಪ್ರಯತ್ನಿಸಿದ್ದಾರೆ.

"ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ, ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ, ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ, ಇದಾವ ಪರಿಯಲ್ಲಿ ಕಾಡಿತ್ತು ಮಾಯೆ," ಎನ್ನುವ ಬಸವಣ್ಣನವರ ವಚನದ ಸಾಲುಗಳನ್ನು ಗಮನಿಸಿದರೆ ಹೆಣ್ಣು ಗಂಡಿನ ನಡುವೆ ಬಿಡಿಸಿಕೊಳ್ಳಲಾಗದ ಒಂದು ಅನುಬಂಧವಿದೆ ಎಂದು ಅರಿವಾಗುತ್ತದೆ. ಹೆಣ್ಣು ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ ಗಂಡಿನ ಜೀವನವನ್ನು ಬೆಳಗುತ್ತಾಳೆ ಎನ್ನುವ ಉದಾತ್ತ ಚಿಂತನೆ ಬಸವಣ್ಣನವರದು. ನಮಗೆಲ್ಲಾ ಉತ್ತಮ ಸಂದೇಶವಾಗಿದೆ. ಸ್ತ್ರೀಯರ ಸ್ಥಾನಮಾನವನ್ನು ತುಂಬಾ ಉತ್ತುಂಗಕ್ಕೆ ಕರೆದೊಯ್ಯುತ್ತದೆ.

"ನಿರ್ಲಜ್ಜೇಶ್ವರ" ಎಂಬ ಅಂಕಿತ ಸೂಳೆ ಸಂಕವ್ವೆ ಮತ್ತು ಕೊಟ್ಟಣದ ಸೋಮವ್ವೆ ಈ ಇಬ್ಬರ ವಚನಗಳಲ್ಲಿ ಕಂಡು ಬರುತ್ತದೆ. ಇದುವರೆಗೆ ದೊರೆತ ಒಂದೊಂದೆ ವಚನದಲ್ಲಿ ಕೊನೆಯ ಸಾಲು ಒಂದೇ ಆಗಿದೆ.

ಒತ್ತೆಯ ಹಿಡಿದಡೆ/ಮತ್ತೊತ್ತೆಯ ಹಿಡಿಯೆ
ಹಿಡಿದಡೆ ಬತ್ತಲೆ/ನಿಲ್ಲಿಸಿ ಕೊಲ್ಲುವರಯ್ಯಾ
ವ್ರತಹೀನನರಿದು ಬೆರೆದಡೆ//
ಕಾದ ಕತ್ತಿಯಲ್ಲಿ /ಕೈಕಿವಿ ಮೂಗ ಕೊಯ್ವರಯ್ಯಾ/
ಒಲ್ಲೆನೊಲ್ಲೆ ಬಲ್ಲೆನಾಗಿ /ನಿಮ್ಮಾಣೆ ನಿರ್ಲಜ್ಜೇಶ್ವರಾ//
(ಸಮಗ್ರ ವಚನ ಸಂಪುಟ: ಒಂದು–2016/ಪುಟ ಸಂಖ್ಯೆ–916/ವಚನ ಸಂಖ್ಯೆ –1232)

ಹದ ತಪ್ಪಿ ಕುಟ್ಟಲು/ನುಚ್ಚಲ್ಲದೆಅಕ್ಕಿಯಿಲ್ಲ/
ವ್ರತ ಹೀನನ ನೆರೆಯ/ನರಕವಲ್ಲದೆ ಮುಕ್ತಿಯಿಲ್ಲ
ಅರಿಯದುದು ಹೋಗಲಿ/ಅರಿದು ಬರೆದೆನಾದಡೆ/
ಒಲ್ಲೆ ಬಲ್ಲೆನಾಗಿ/ನಿಮ್ಮಾಣೆ ನಿರ್ಲಜ್ಜೇಶ್ವರಾ//
(ಸಮಗ್ರ ವಚನ ಸಂಪುಟ: ಒಂದು–2016/ಪುಟ ಸಂಖ್ಯೆ–870/ವಚನ ಸಂಖ್ಯೆ –751)

ಸೂಳೆ ಸಂಕವ್ವೆ ವೃತ್ತಿಯಾವುದೇ ಆದರೂ ಪ್ರತಿ ವೃತ್ತಿಗೂ ಅದರದ್ದೇ ಆದ ಗೌರವ ಇರುತ್ತದೆ, ಹಾಗಾಗಿ ತನ್ನ ವೃತ್ತಿಯ ಬಗ್ಗೆ ಯಾವುದೇ ಮುಜುಗರ, ಸಂಕೋಚ ಇಲ್ಲದೇ ಮುಚ್ಚುಮರೆ ಇಲ್ಲದೇ ಪ್ರತಿಯೊಂದನ್ನು ಬಿಡಿಸಿ ಹೇಳಿದ್ದಾರೆ. ವಚನಕಾರ್ತಿಯರಲ್ಲಿ ಇದ್ದ ಈ ದಿಟ್ಟತನ ಪ್ರಶಂಸನೀಯವಾದದ್ದು. ಹಾಗಾಗಿ ಪ್ರತಿಯೊಬ್ಬರೂ ತಮ್ಮ ಜೀವನ ನಿರ್ವಹಣೆಗೆ ಒಂದೊಂದು ವೃತ್ತಿ ಮಾಡಲೇ ಬೇಕು. ತಮ್ಮ ವೃತ್ತಿಯ ಬಗ್ಗೆ ನಮಗೆ ಗೌರವ ಇರಬೇಕು. ಬತ್ತಲೇಶ್ವರನ ಪುಣ್ಯ ಸ್ತ್ರೀ ಗುಡ್ಡವ್ವೆ ಅವರುಒಂದು ವಚನದಲ್ಲಿ ಹೀಗೆ ಹೇಳುತ್ತಾರೆ.

ತನು ಬತ್ತಲೆಯಾದಡೇನು//
ಮನ ಬತ್ತಲೆಯಾಗದನ್ನಕ್ಕ//
ವೃತವಿದ್ದಡೇನು/ವೃತಹೀನರಾದ ಬಳಿಕ//
ನೆರೆದಡೆ ನರಕವಯ್ಯಾ/ನಿಂಬೇಶ್ವರಾ//
(ಸಮಗ್ರ ವಚನ ಸಂಪುಟ: ಒಂದು–2016/ಪುಟ ಸಂಖ್ಯೆ–899/ವಚನ ಸಂಖ್ಯೆ –1087)

ಈ ವಚನದ ಸಾಲುಗಳನ್ನು ಗಮನಿಸಿದರೆ, ಈ ವಚನಕಾರ್ತಿಯರದು ಎಂತಹ ಉನ್ನತ ಮಟ್ಟದ ವಿಚಾರಧಾರೆ ಎನ್ನುವ ಅರಿವಾಗುತ್ತದೆ. ಎಲ್ಲಿಯವರೆಗೂ ಮನಸ್ಸಿನಲ್ಲಿ ಕಲ್ಮಷ ತೆಗೆದು ಮನಸ್ಸು ನಿರಾಳ ಆಗುವುದಿಲ್ಲವೋ ಅಲ್ಲಿಯವರೆಗೂ ತನು ಶುದ್ಧವಾಗುವುದಿಲ್ಲ. ವ್ರತ ನಿಯಮಗಳನ್ನು ಎಷ್ಟು ಮಾಡಿದರೂ ವ್ರತ ತಪ್ಪಿದರೆ ಕಷ್ಟ ತಪ್ಪಿದ್ದಲ್ಲ, ಅಂತರಂಗದೊಳಗೆ ಕಲ್ಮಷ ಇದ್ದರೆ ತನು ಎಂದಿಗೂ ಶುದ್ಧವಾಗುವುದಿಲ್ಲ ಎನ್ನುವ ಸಂದೇಶ ಕೊಡುತ್ತಾರೆ ಗುಡ್ಡವ್ವೆ.

ತೊಳಲಾಟ, ಪೇಚಾಟ ಮತ್ತು ದ್ವಂದ್ವ ಮನಸ್ಸು ಸ್ತ್ರೀಯರ ಒಂದು ಲಕ್ಷಣವಾಗಿರುತ್ತದೆ. ಮನಸ್ಸಿನ ಈ ಪೇಚಾಟದ ನಡುವೆ ಶರಣರ ಸಾಂಗತ್ಯ ಎಂತಹ ಅನುಭೂತಿ ನೀಡುತ್ತದೆ ಎನ್ನುವುದಕ್ಕೆ ಹಡಪದ ಅಪ್ಪಣ್ಣ ಅವರ ಪುಣ್ಯ ಸ್ತ್ರೀ ಲಿಂಗಮ್ಮ ಅವರ ಈ ವಚನ ಉದಾಹರಣೆಯಾಗಿದೆ.

ನೆನೆವುತ್ತಿದೆ ಮನ
ದುರ್ವಾಸನೆಗೆ/ಹರಿವುತ್ತಿದೆ ಮನ
ಕೊನೆಕೊಂಬೆಗೆ/ಎಳೆವುತ್ತಿದೆ ಮನ
ಕಟ್ಟಿಗೆ ನಿಲ್ಲದು ಮನ/ಬಿಟ್ಟಡೆ ಹೋಗದು ಮನ//
ತನ್ನಿಚ್ಛೆಯಲ್ಲಾಡುವ ಮನವ
ಕಟ್ಟಿಗೆತಂದು/ಗೊತ್ತಿಗೆ ನಿಲಿಸಿ
ಬಚ್ಚಬರಿಯ ಬಯಲಿನೊಳಗೆ
ಓಲಾಡುವ ಶರಣರ ಪಾದದಲ್ಲಿ
ನಾ/ಬೆಚ್ಚಂತಿದ್ದೆನಯ್ಯಾ/
ಅಪ್ಪಣ್ಣಪ್ರಿಯಚೆನ್ನಬಸವಣ್ಣಾ//
(ಸಮಗ್ರ ವಚನ ಸಂಪುಟ: ಒಂದು–2016/ಪುಟ ಸಂಖ್ಯೆ–917/ವಚನ ಸಂಖ್ಯೆ –1240)

ಕೇವಲ ನಾಲ್ಕು ಸಾಲಿನಲ್ಲಿ ಈ ವಚನ ಇಡೀ ಸ್ತ್ರೀ ಕುಲದ ಸಂವೇದನೆ ಮತ್ತು ಸಂಕಟವನ್ನು ತೆರೆದಿಡುತ್ತದೆ. ವಿಷಯ ಸುಖಗಳತ್ತ ಮನಸ್ಸು ಹರಿದು ಹೊಗುತ್ತಾ ಇದೆ.

ಕಟ್ಟಿ ನಿಲ್ಲಿಸಲು ಹೋದರೆ ಓಡಿ ಹೋಗುತ್ತಾ ಇದೆ. ಶರಣರ ಸಂಘದಲ್ಲಿ ತೊಡಗಿಸಿಕೊಂಡು ಮನಸ್ಸನ್ನು ಹಿಡಿತಕ್ಕೆ ತಂದು ನಿಲ್ಲಿಸಿ ಬೆಚ್ಚಗೆ ಇರಬೇಕು ಎಂದು ಲಿಂಗಮ್ಮನವರು ತಿಳಿಸಿದ್ದಾರೆ.

ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ ಎಂಬ ಅಂಕಿತದಲ್ಲಿ ವಚನಗಳನ್ನು ಬರೆದಿರುವ ಅಕ್ಕಮ್ಮ ತನ್ನ ಚಿಂತನೆಗೆ ಮೂಡಿದ ಪ್ರಶ್ನೆಗಳನ್ನು ಎಲ್ಲರ ಮುಂದಿಡುತ್ತಾಳೆ, 12ನೇ ಶತಮಾನದಲ್ಲಿ ಅವಳು ಕೇಳಿದ ಪ್ರಶ್ನೆಗಳು ಇಂದಿಗೂ ಉತ್ತರ ಹೇಳಲು ಸಾಧ್ಯವಾಗದ ಸ್ಥಿತಿಗೆ ನಮ್ಮನ್ನು ಒಡ್ಡುತ್ತವೆ.

"ತಂದೆಯ ಒಂದಾಗಿ ಬಂದ
ಸಹೋದರ ಗಂಡೆಲ್ಲ ತಂದೆಯಾದ ಕಾರಣ,
ಆ ತಂದೆಯ ಒಡ ಹುಟ್ಟಿದ ಹೆಣ್ಣೆಲ್ಲ ತನಗೆ ತಾಯಲ್ಲವೇ?
ಆಕೆಯನತ್ತೆಯೆಂಬ ಜಗದತೆತ್ತುಮತ್ತರ ನಾನರಿವೆನಯ್ಯಾ
ಮತ್ತೆ, ತಾವು ಬಳಸುವುದಕ್ಕೆ ಗೊತ್ತಿಲ್ಲವೆಂದಾಕೆಯ
ಮಗಳನು ಸತಿಯನೆ ಮಾಡಿಕೊಳ್ಳಬಹುದೆ?
ಹೆತ್ತತಾಯ ಮಗಳ ಮಗಳು ಒಡಹುಟ್ಟಿದವಳಲ್ಲವೇ?"
(ಬಸವಯುಗದ ವಚನ ಮಹಾಸಂಪುಟ: ಒಂದು:–
ಶಿವಶರಣೆಯರ ವಚನಸಂಪುಟ,
ವಚನ– 487, ಪುಟ–839)

ಹೀಗೆ ಪ್ರಶ್ನಿಸುವುದರ ಮೂಲಕ ಅಕ್ಕಮ್ಮ 12 ನೇ ಶತಮಾನದಲ್ಲಿಯೇ ರಕ್ತಸಂಬಂಧಿ ವಿವಾಹವನ್ನು ಪ್ರಶ್ನಿಸುತ್ತಾಳೆ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಅಸಂಬದ್ಧವಾಗಿ ಹೆಣೆದುಕೊಂಡಿರುವ ಸಂಬಂಧಗಳನ್ನು ಅಲ್ಲಗಳಿಯುತ್ತಾಳೆ. ಇದು ಇಂದಿಗೂ ವೈಜ್ಞಾನಿಕವಾಗಿಯೂ ತಪ್ಪು ರೂಢಿಯಾಗಿದೆ. ಸೋದರ ಸಂಬಂಧಿ ವಿವಾಹಗಳಿಂದ ಜನಿಸುವ ಬಹುತೇಕ ಮಕ್ಕಳು ಅಂಗ ವೈಫಲ್ಯ ಅಥವಾ ನಿಶ್ಯಕ್ತಿ ಮುಂತಾದ ಸಮಸ್ಯೆಗಳಿಂದ ಬಳಲುವುದನ್ನು ನಾವು ಇಂದಿಗೂ ಗಮನಿಸಬಹುದು.

ಪುರುಷ ನಿರ್ಮಿತ ಸಮಾಜದಲ್ಲಿ ಮಹಿಳೆಗೆ ತನ್ನ ಸಂಗಾತಿಯನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಇಲ್ಲದಿರುವುದನ್ನು ಖಂಡಿಸುತ್ತಾರೆ ನಮ್ಮ ವಚನಗಾರ್ತಿಯರು. ಇದಕ್ಕೆ ಒಳ್ಳೆಯ ಉದಾಹರಣೆ ನಮ್ಮ ಅಕ್ಕಮಹಾದೇವಿಯವರು. ಕೌಶಿಕನಂತಹ ಪುರುಷ ದಬ್ಬಾಳಿಕೆಯ ಮುಂದೆ ಸ್ತ್ರೀಯರ ಆಸೆ, ಕನಸುಗಳಿಗೆ ಯಾವುದೇ ಬೆಲೆ ಇರುವುದಿಲ್ಲ ಎನ್ನುವುದನ್ನು ಹಲವಾರು ವಚನಗಳಲ್ಲಿ ಕಾಣಬಹುದಾಗಿದೆ. ಇಂತಹ ಸ್ತ್ರೀ ಪುರುಷರ ನಡುವಿನ ತಾರತಮ್ಯವನ್ನು ಪ್ರಶ್ನಿಸುವ ವಚನಗಾರ್ತಿ ಗೊಗ್ಗವ್ವೆಯ ಒಂದು ವಚನ,

"ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು?
ಈ ಎರೆಡರ ಉಭಯವ ಕಳೆದು ಸುಖೀ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ."
(.ಬಸವಯುಗದ ವಚನ ಮಹಾಸಂಪುಟ:ಒಂದು : –
ಶಿವಶರಣೆಯರ ವಚನಸಂಪುಟ,
ವಚನ–775, ಪುಟ–873)

ಗಂಡು ಹೆಣ್ಣನ್ನು ಮೋಹಿಸಿದರೆ ಸಮಾಜವು ಒಪ್ಪುತ್ತದೆ, ಹೆಣ್ಣು ಗಂಡನ್ನು ಮೋಹಿಸುವುದನ್ನು ಸಮಾಜವು ತಿರಸ್ಕರಿಸುತ್ತದೆ. ಇಬ್ಬರು ಪ್ರಕೃತಿಯಲ್ಲಿ ಸಮಾನರು. ಹೆಣ್ಣಿನ ಮೋಹಕ್ಕೆ ಈ ಸಮಾಜವು ಲಜ್ಜೆಗೆಟ್ಟವಳು, ವೇಶ್ಯೆ ಎಂಬ ಅರ್ಥಹೀನ ಹೆಸರುಗಳಿಂದ ಕರೆಯುವುದನ್ನು ಗಮನಿಸಬಹುದಾಗಿದೆ.

ಸಂಸಾರದಲ್ಲಿ ಗಂಡ ಹೆಂಡತಿಯರ ನಡುವೆ ಇರಬೇಕಾದ ಅನ್ಯೋನ್ಯತೆ, ಪರಸ್ಪರ ಪ್ರೀತಿಯನ್ನು ನಮ್ಮ ವಚನಗಾರ್ತಿಯರು ತಮ್ಮ ವಚನಗಳಲ್ಲಿ ತಿಳಿಸಿರುವುದನ್ನು ನಾವು ಕಾಣಬಹುದು.ಗಂಡು ಹೆಣ್ಣು ಹೊಂದಾಣಿಕೆಯಿಂದ ಸಹಬಾಳ್ವೆಯಿಂದ ಬದುಕಿದರೆ ಜೀವನ ಸ್ವರ್ಗವಾಗುತ್ತದೆ ಎನ್ನವುದು ಶಿವಶರಣೆಯರ ನಿಲುವಾಗಿತ್ತು ಅವರ ಈ ಚಿಂತನೆ ಇಂದಿನ ಯುವ ಪೀಳಿಗೆಗೆ ಒಂದು ಉತ್ತಮ ಸಂದೇಶವಾಗಿದೆ. ಇಂತಹ ಗಂಡ ಹೆಂಡತಿಯ ಸ್ನೇಹವನ್ನು ತಿಳಿಸುವ ಒಂದು ವಚನವನ್ನು ಗಮನಿಸುವುದಾದರೆ, ಬಸವಣ್ಣನವರ ಸತಿಯಾದ ನೀಲಮ್ಮನವರ ಒಂದು ವಚನವನ್ನು ಗಮನಿಸಬಹುದು.

"ಮಡದಿ ಎನಲಾಗದು ಬಸವಂಗೆ ಎನ್ನ
ಪುರುಷನೆನಲಾಗದು ಬಸವನ ಎನಗೆ

ಉಭಯದ ಕುಳವ ಹರಿದು ಬಸವಂಗೆ ಶಿಸುವಾನಾದೆನು
ಬಸವನೆನ್ನ ಶಿಶುವಾದನು
ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನ್ನಿಕ್ಕಿದ ದಿಬ್ಯವ ಮೀರದೆ ಬಸವನೊಳ ಗಾನಡಗಿದೆ."

(ಬಸವಯುಗದ ವಚನ ಮಹಾ ಸಂಪುಟ:ಒಂದು : – ಶಿವಶರಣೆಯರ ವಚನ ಸಂಪುಟ,ವಚನ–1023, ಪುಟ–894.)

ಈ ವಚನದಲ್ಲಿ ನೀಲಮ್ಮ ಮತ್ತು ಬಸವಣ್ಣನವರು ಕೇವಲ ಸತಿಪತಿಗಳಾಗಿ ಬಾಳದೆ ಒಬ್ಬರಿಗೊಬ್ಬರು ಪರಸ್ಪರ ಶಿಶುವಾಗಿ, ಒಬ್ಬರಿಂದೊಬ್ಬರು ಪೋಷಿಸಲ್ಪಡುತ್ತಾರೆ. ಸತಿ ತಪ್ಪು ಮಾಡಿದರೆ ಪತಿತಂದೆಯಾಗಿ ತಿದ್ದಬೇಕು, ಪತಿ ತಪ್ಪು ಮಾಡಿದರೆ ಸತಿಯಾದವಳು ತಾಯಿಯಾಗಿ ತಿದ್ದಿ ನಡೆಸಬೇಕು ಆಗ ಸಂಸರದಲ್ಲಿ ಯಾವುದೇ ವೈಷಮ್ಯಗಳು, ವೈರುಧ್ಯಗಳು ಬಾರದೆ ಸುಗಮವಾಗಿ ಮುಂದುವರೆಯಲು ಸಹಾಯವಾಗುತ್ತದೆ. ಪರಸ್ಪರ ಕ್ಷಮಿಸುವ ಗುಣ ಇದ್ದಾಗ ದಾಂಪತ್ಯ ಸುಖವಾಗಿರುತ್ತದೆ ಎನ್ನುವುದು ನೀಲಮ್ಮನವರ ಅಭಿಪ್ರಾಯ. ಇದು ಇಂದಿಗೂ ನಮಗೆಲ್ಲಾ ಮಾದರಿಯಾಗಿದೆ.

ಇಂದಿನ ಯುವಜನತೆ ನಾನು ಮೇಲು ನೀನು ಕೀಳು ಎಂದು ಸದಾ ಜಿದ್ದಿಗೆ ಬಿದ್ದು ದಾಂಪತ್ಯವನ್ನು ಹಾಳು ಮಾಡಿಕೊಳ್ಳುತ್ತಾರೆ. ಆದರೆ ದಾಂಪತ್ಯದಲ್ಲಿ ಯಾರೂ ಮೇಲಲ್ಲ ಯಾರೂ ಕೀಳಲ್ಲ ಎನ್ನುವ ಸತ್ಯಎಲ್ಲರಿಗೂ ಅರಿವಾಗಬೇಕಿದೆ. ಈ ನಿಟ್ಟಿನಲ್ಲಿ ಅಕ್ಕಮಹಾದೇವಿಯವರ ಒಂದು ವಚನ ತುಂಬಾ ಪ್ರಸ್ತುತವೆನಿಸುತ್ತದೆ.

"ಗಂಡ ಮನೆಗೆ ಒಡೆಯನಲ್ಲ
ಹೆಂಡತಿ ಮನೆಗೆ ಒಡತಿಯೇ?ಒಡತಿಯಲ್ಲ
ಗಂಡ ಹೆಂಡಿರ ಸಂಬಂಧವಿಲ್ಲವಯ್ಯಾ
ಗಂಡುಗಲಿಯೇ ಚೆನ್ನಮಲ್ಲಿಕಾರ್ಜುನಾ
ನೀ ಮನೆಯನೊಡೆಯನೆಂದು ನಾ ದುಡಿವೆ ತೊತ್ತುಗೆಲಸವನು"

(ಬಸವಯುಗದ ವಚನ ಮಹಾಸಂಪುಟ: ಒಂದು: – ಶಿವಶರಣೆಯರ ವಚನಸಂಪುಟ, ವಚನ–186, ಪುಟ–804.)

ಈ ವಚನವನ್ನು ಗಮನಿಸಿದಾಗ ಮನೆಯು ಯಾರೊಬ್ಬರ ಸ್ವತ್ತಲ್ಲ, ಮನೆಯು ಎಲ್ಲರ ಒಡೆತನಕ್ಕೂ ಸಂಬಂಧಿಸಿರುತ್ತದೆ ಎನ್ನುವ ಸತ್ಯದ ಅರಿವಾಗುತ್ತದೆ. ಪತಿ ಪತ್ನಿಯರ ನಡುವೆಯಾವುದೇ ಸ್ಪರ್ಧೆ ಇರದೇ ಪರಸ್ಪರ ಸೋತುಗೆದ್ದು ಬದುಕಬೇಕು. ಎಲ್ಲರೂಒಂದಾಗಿ ಬದುಕುವ ಮನೆಯು ಮಾತ್ರ ಗೃಹವೆನಿಸಿಕೊಳ್ಳುತ್ತದೆ ಇಲ್ಲವಾದರೆ ಅದೊಂದು ಕಲ್ಲಿನ ಕಟ್ಟಡವಾಗಿ ಮಾತ್ರ ಉಳಿಯುತ್ತದೆ.

ಶರಣರು ದಾಂಪತ್ಯ ಎನ್ನುವುದು ಸತಿ ಪತಿಗಳ ನಡುವಿನ ಸಾಮರಸ್ಯವನ್ನು ಅವಲಂಬಿಸಿರುತ್ತದೆ. ಹಾಗಾಗಿ ಸಂಸಾರ ಸುಖಕ್ಕೆ ಗಂಡು ಹೆಣ್ಣಿನ ನಡುವೆ ಮಧುರವಾದ ಸಂಬಂಧಇರಬೇಕು, ಯಾವುದೇ ತಾರತಮ್ಯ ಇರಬಾರದು. ಗಂಡು ಮೇಲು ಹೆಣ್ಣು ಕೀಳು ಎನ್ನುವ ಭೇದ ಭಾವ ಸಲ್ಲದು ಎನ್ನುವುದು ವಚನಕಾರರ ಅಭಿಪ್ರಾಯವಾಗಿದೆ. ಯಾವುದೇ ಸಾಧನೆಗೆ ಸಂಸಾರ ಆತಂಕಕಾರಿಯಾದುದಲ್ಲ, ಅದು ಸದಾ ಪೂರಕವಾಗಿರುತ್ತದೆ. ಹಾಗಾಗಿ ಶರಣರು ಸದಾ ಸತಿಪತಿಗಳಿಬ್ಬರು ಒಂದಾಗಿ ಕಾಯಕ ಮಾಡಿ ಉತ್ತಮವಾದ ಜೀವನ ಮಾರ್ಗವನ್ನು ನಮಗೆಲ್ಲಾ ಹಾಕಿಕೊಟ್ಟಿದ್ದಾರೆ.

"ಇಂದ್ರಿಯ ನಿಗ್ರಹವ ಮಾಡಿದರೆ ಬಂದು ಕಡುವವು ದೋಷಂಗಳು,
ಮುಂದೆ ಬಂದು ಕಾಡುವವು ಪಂಚೇಂದ್ರಯಗಳು,
ಸತಿ ಪತಿರತಿ ಸುಖವ ಬಿಟ್ಟರೆ ಸಿರಿಯಾಳ ಚೆಂಗಳೆಯರು?
ಸತಿಪತಿ ರತಿ ಭೋಗೋಪಗ ವಿಳಾಸವೆ ಬಿಟ್ಟನೆ ಸಿಂಧುಬಲ್ಲಾಳ?"

(ಶಿವ ಶರಣೆಯರ ವಚನ ಸಂಪುಟ–5, ಪುಟ ಸಂಖ್ಯೆ–29)

ಎಂದು ಬಸವಣ್ಣನವರು ಇಂದ್ರಯ ನಿಗ್ರಹವನ್ನು ನಿರಾಕರಿಸಿ, ಕೌಟುಂಬಿಕ ಜೀವನವನ್ನು ಉತ್ತೇಜಿಸಿದ್ದಾರೆ.

"ಭಕ್ತನ ಮನ ಹೆಣ್ಣಿನೊಳಗಾದರೆ, ವಿವಾಹವಾಗಿ ಕೂಡುವುದು,
ಭಕ್ತನ ಮನ ಮಣ್ಣಿನೊಳಗಾದರೆ, ಕೊಂಡು ಆಲಯವ ಮಾಡುವುದು,
ಭಕ್ತನ ಮನ ಹೊನ್ನಿನೊಳಗಾದರೆ, ಬಳಲಿ ದೊರಕಿಸುವುದು ನೋಡಾ"

(ಶಿವಶರಣೆಯರ ವಚನ ಸಂಪುಟ –5, ಪುಟ ಸಂಖ್ಯೆ – 29)

ಎಂದು ಶಿವಶರಣ ವಚನಕಾರರು ಆದ ಸಿದ್ದರಾಮ ಅವರು ತಿಳಿಸಿದ್ದಾರೆ. ಮನಸ್ಸಿನೊಳಗೆ ಬಂದ ಆಸೆಯನ್ನು ವ್ಯಕ್ತಿಯು ಒಳ್ಳೆಯ ರೀತಿಯಲ್ಲಿ ಈಡೇರಿಸಿಕೊಳ್ಳಬೇಕು ಇದರಿಂದ ಯಾವುದೇ ದೋಷಗಳು ಉಂಟಾಗುವುದಿಲ್ಲ ಎಂದಿದ್ದಾರೆ.

"ಹೆಣ್ಣು ಬಿಟ್ಟು ಲಿಂಗವನೊಲಿಸಬೇಕೆಂಬರು
ಹೆಣ್ಣೆಂಗೆಯೂ ಲಿಂಗಕ್ಕೆಯೂ ವಿರುದ್ಧವೇ?"
(ಶಿವಶರಣೆಯರ ವಚನ ಸಂಪುಟ –5, ಪುಟ ಸಂಖ್ಯೆ – 29)

ಎಂದು ಪ್ರಶ್ನಿಸುವ ಗಣೇಶ ಮಸಣಯ್ಯಅವರ ಪುಣ್ಯ ಸ್ತ್ರೀ ಅವರು, ದಾಂಪತ್ಯ ಜೀವನ ಸತ್ಯ ಶುದ್ಧವಾಗಿರಬೇಕು. ಸತಿಪತಿಗಳು ದೇಹ ಬೇರೆ ಆದರೂ ಮನಸ್ಸುಗಳು ಒಂದೇ ಎನ್ನುವಂತೆ ಸದಾ ಕಾಲ ಹೊಂದಾಣಿಕೆಯಿಂದ ಆಚಾರ ವಿಛಾರಗಳಲ್ಲಿ ಏಕ ರೀತಿಯ ನಿಲುವುಗಳನ್ನು ಹೊಂದಿ ಜೀವನದ ಸಾರ್ಥಕತೆಯ ಕಡೆ ಗಮನಹರಿಸಬೇಕು ಎನ್ನುವುದು ವಚನಕಾರರ ಅಭಿಪ್ರಾಯವಾಗಿದೆ.

ವಚನ ಯುಗವು ಕೇವಲ ಒಂದು ಸಾಹಿತ್ಯರಚನೆಗೆ ಸಾಕ್ಷಿಯಾಗಿ ಉಳಿಯದೆ, ಅದೊಂದು ಚಳುವಳಿಯಾಗಿ ಸಾಮಾಜಿಕ ಕಳಕಳಿಯನ್ನು ಹೊಂದಿ, ಉತ್ತಮ ಸಮಾಜದ ನಿರ್ಮಾಣ ಮಾಡುವಲ್ಲಿ ಕಾರ್ಯ ಕೈಗೊಂಡು ವಚನ ಆಂದೋಲನ ಎನಿಸಿಕೊಂಡಿತು. ಸಮಾಜದಲ್ಲಿ ಯಾವುದೇ ಭೇದ ಭಾವ ಇಲ್ಲದೇ, ಜಾತಿ, ಧರ್ಮ, ವರ್ಗ, ಲಿಂಗ ಅಸಮಾನತೆ ಇಲ್ಲದೇ ಎಲ್ಲರೂ ಸಮಾನತೆಯಿಂದ ಬಾಳುವಂತಾಗಬೇಕು ಎಂದು ಹಗಲಿರುಳು ಶ್ರಮಿಸಿದವರು ವಚನಕಾರರು. ಮಾನವೀಯ ಮೌಲ್ಯಗಳ ಅಡಿಪಾಯದಲ್ಲಿ ಒಂದು ಸರ್ವ ಸಮಾನತೆಯ ಸಮಾಜದ ಕನಸು ಕಂಡು ಎಲ್ಲರಲ್ಲೂ ಅದರ ಬಗ್ಗೆ ಜ್ಞಾನ ಮೂಡಿಸಲು ತಾವು ರಚಿಸಿದ ವಚನಗಳನ್ನೇ ಅಸ್ತ್ರಗಳನ್ನಾಗಿ ಮಾಡಿಕೊಂಡು ಜನರಿಗೆ ಅರಿವು ನೀಡಿದರು. ವಚನಕಾರರು ಸೌಮ್ಯವಾಗಿ, ಕೆಲವೊಮ್ಮೆ ನಿಷ್ಠುರವಾಗಿ ಜನರ ತಪ್ಪುಗಳನ್ನು ತಿದ್ದಿದ್ದಾರೆ. ದೇವರು, ಧರ್ಮಎಲ್ಲವನ್ನು ಪ್ರಶ್ನಿಸಿದ್ದಾರೆ. ಮೂಢನಂಬಿಕೆ, ಕಂದಾಚಾರ, ಗೊಡ್ಡು ಸಂಪ್ರದಾಯಗಳನ್ನು ವಿರೋಧಿಸಿದ್ದಾರೆ. ತಮ್ಮನ್ನು ತಾವೇ ಅರಿಯುವ ಪ್ರಯತ್ನ ಮಾಡಿದ್ದಾರೆ. ಆತ್ಮ ಸಾಕ್ಷಾತ್ಕಾರವೇ ನಿಜವದ ಅರಿವು ಎಂದು ಸಾರಿದ್ದಾರೆ. ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ತಿರುವಿ ಹಾಕಿದರೆ 12ನೇ ಶತಮಾನವು ಒಂದು ಸುವರ್ಣಾಕ್ಷರದಲ್ಲಿ ಬರೆದಿಡುವಂತಹ ಸಾಧನೆಗಳನ್ನು ಮಾಡಿಇಡೀ ವಿಶ್ವಕ್ಕೆ ವಚನಗಳು ಎನ್ನುವ ಒಂದು ಅತ್ಯಮೂಲ್ಯ ಆಸ್ತಿಯನ್ನು ಕೊಡುಗೆ ನೀಡಿದ್ದಾರೆ. ಇಂದಿನ ಆಧುನಿಕ ಸ್ತ್ರೀ ಸಂವೇದನಾ ನಿಲುವಿಗೆ ವಚನಕಾರರು ಪ್ರೇರಣೆಯಾಗಿದ್ದಾರೆ.

ಆಕರ ಗ್ರಂಥಗಳು:

1. ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ: ನಾರಾಯಣ ಪಿ.ವಿ. ವಸಂತ ಪ್ರಕಾಶನ. ಬೆಂಗಳೂರು,2008.
2. ಶರಣರ ಸಮಗ್ರ ಕ್ರಾಂತಿ. ರಂಜಾನ್‌ದರ್ಗಾ. ಲೋಹಿಯಾ ಪ್ರಕಾಶನ.ಬಳ್ಳಾರಿ.2015.
3. ಚಿದಾನಂದ ಮೂರ್ತಿ. ಎಂ. – ವಚನಸಾಹಿತ್ಯ.
4. ವಚನಗಳಲ್ಲಿ ಶರಣರ ಕಾಯಕ ನಿಷ್ಠೆ. –ಡಾ. ವಿನೋದಾ.
5. ಇಪ್ಪತ್ತೇಳು ಶಿವಶರಣೆಯರ ವಚನಗಳು, ಭಾಗ–3. ಆರ್.ಸಿ. ಹಿರೇಮಠ, ಧಾರವಾಡ.1968
6. ಶಿವಶರಣರ ಚರಿತ್ರೆಗಳು. ಬಾಗ1. ಫ.ಗು. ಃಳಕಟ್ಟಿ.1944.
7. ಶಿವಶರಣೆಯರ ವಚನ ಸಂಪುಟ–5: (ಸಂ) ವೀರಣ್ಣರಾಜೂರ
8. ಡಾ.ಜಯಶ್ರೀದಂಡೆ ,ಶರಣಜೀವನ(2008)
9. ಡಾ.ಶಶಿಕಲಾಶಿವಶಂಕರ್ ,ವಚನಕಾರ್ತಿಯರು : ಮಹಿಳಾಸಂವೇಧನೆ (2008)
10. ರಂಜಾನ್‌ದರ್ಗಾ, ಶರಣರ ಸಮಗ್ರ ಕ್ರಾಂತಿ, ಲೋಹಿಯಾ ಪ್ರಕಾಶನ ಬಳ್ಳಾರಿ.2015.

11. ವೀರಣ್ಣಸಿ. ಕಾಯಕ ಜೀವಿಗಳ ಪರ್ಯಾಯ ಸಂಸ್ಕೃತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು.ಮೈಸೂರು.2014
12. ಹಿರೇಮಠ ಎಸ್, ಎಂ. ವಚನಕಾರರ ಕಾವ್ಯ ಮೀಮಾಂಸೆ, ಅಶ್ವಿನಿ ಪ್ರಕಾಶನ ಗುಲ್ಬರ್ಗಾ.1999

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಕನ್ನಡ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆ ಮತ್ತು ಸುಸ್ಥಿರ ಅಭಿವೃದ್ಧಿ

ಶ್ರೀಮತಿ ಜಯಲಕ್ಷ್ಮಿ ಎನ್. ಕೌಜಗೇರಿ ಮತ್ತು ಡಾ.ಎನ್.ಎ.ಕೌಜಗೇರಿ
ಸಹಾಯಕ ಪ್ರಾಧ್ಯಾಪಕರು,
ಅರ್ಥಶಾಸ್ತ್ರ ವಿಭಾಗ, ಕೆ.ಎಲ್.ಇ ಸಂಸ್ಥೆಯ ಎಸ್.ವಿ.ಎಸ್ ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ
Corresponding Author–ಶ್ರೀಮತಿ ಜಯಲಕ್ಷ್ಮಿ ಎನ್. ಕೌಜಗೇರಿ

DOI - 10.5281/zenodo.23528600

ಸಾರಾಂಶ:

ಪರಿಸರವು ಮಾನವನ ಬದುಕಿನ ಮೂಲಾಧಾರವಾಗಿದೆ. ಗಾಳಿ, ನೀರು, ಮಣ್ಣು, ಅರಣ್ಯ, ನದಿ, ಸಮುದ್ರ, ಪರ್ವತ, ಜೀವಜಾಲ ಮತ್ತು ಜೈವಿಕ ವೈವಿಧ್ಯಗಳು ಮಾನವ ಜೀವನದೊಂದಿಗೆ ಅವಿನಾಭಾವ ಸಂಬಂಧ ಹೊಂದಿವೆ. ಆಧುನಿಕ ಯುಗದಲ್ಲಿ ಕೈಗಾರೀಕರಣ, ನಗರೀಕರಣ, ಅತಿಯಾದ ನೈಸರ್ಗಿಕ ಸಂಪನ್ಮೂಲಗಳ ಬಳಕೆ, ಅರಣ್ಯನಾಶ, ಜಲಮಾಲಿನ್ಯ, ವಾಯುಮಾಲಿನ್ಯ, ಪ್ಲಾಸ್ಟಿಕ್ ತ್ಯಾಜ್ಯ ಮತ್ತು ಹವಾಮಾನ ಬದಲಾವಣೆಗಳು ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ.

*ಈ ಸಂದರ್ಭದಲ್ಲಿ ಸಾಹಿತ್ಯವು ಕೇವಲ ಮನರಂಜನೆಯ ಸಾಧನವಲ್ಲ; ಅದು ಸಮಾಜದ ಚಿಂತನೆ, ಮೌಲ್ಯಗಳು ಮತ್ತು ಜಾಗೃತಿಯನ್ನು ರೂಪಿಸುವ ಶಕ್ತಿಯಾಗಿದೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಕೃತಿ, ಮಣ್ಣು, ಮಳೆ, ನದಿ, ಅರಣ್ಯ, ಕೃಷಿ, ಪ್ರಾಣಿ–ಪಕ್ಷಿಗಳು ಮತ್ತು ಮಾನವ–ಪ್ರಕೃತಿ ಸಂಬಂಧಗಳು ನಿರಂತರವಾಗಿ ವ್ಯಕ್ತವಾಗಿವೆ. ಕುವೆಂಪು ಅವರ ಪ್ರಕೃತಿ ಕೇಂದ್ರಿತ ಕಾವ್ಯ ಚಿಂತನೆ, ಶಿವರಾಮ ಕಾರಂತರ ಕೃತಿಗಳಲ್ಲಿನ ಮಣ್ಣು–ಮಾನವ–ಜೀವನದ ಸಂಬಂಧ, ಹಾಗೂ ಆಧುನಿಕಕನ್ನಡ ಸಾಹಿತ್ಯದಲ್ಲಿ ಪರಿಸರ ಸಮಸ್ಯೆಗಳ ಪ್ರತಿಬಿಂಬಗಳು ಪರಿಸರ ಪ್ರಜ್ಞೆಯ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗುತ್ತವೆ. ಕುವೆಂಪು ಅವರ ಪ್ರಕೃತಿ ದೃಷ್ಟಿಯನ್ನು ಕುರಿತ ಅಧ್ಯಯನಗಳು ಅವರ ಪಶ್ಚಿಮಘಟ್ಟದ ಅನುಭವವು ಅವರ ಕಾವ್ಯದಲ್ಲಿ ಪ್ರಕೃತಿಯ ಮಹತ್ವವನ್ನು ರೂಪಿಸಿತು ಎಂದು ಸೂಚಿಸುತ್ತವೆ. **(Dharmaram Journals)***

*ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯು ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಪರಿಸರ ಸಂರಕ್ಷಣೆಯನ್ನು ಸಮನ್ವಯಗೊಳಿಸುವುದನ್ನು ಒತ್ತಿ ಹೇಳುತ್ತದೆ. ವಿಶ್ವಸಂಸ್ಥೆಯ ಪ್ರಕಾರ, ಸುಸ್ಥಿರ ಅಭಿವೃದ್ಧಿಯು ವರ್ತಮಾನದ ಅಗತ್ಯಗಳನ್ನು ಪೂರೈಸುವಾಗ ಭವಿಷ್ಯದ ಪೀಳಿಗೆಗಳ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯಕ್ಕೆ ಧಕ್ಕೆಯಾಗದ ರೀತಿಯ ಅಭಿವೃದ್ಧಿಯಾಗಿದೆ. **(UNDP)***

ಈ ಪ್ರಬಂಧವು ಕನ್ನಡ ಸಾಹಿತ್ಯದಲ್ಲಿನ ಪರಿಸರ ಪ್ರಜ್ಞೆಯನ್ನು ಗುರುತಿಸಿ, ಅದನ್ನು ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯೊಂದಿಗೆ ಸಂಪರ್ಕಿಸುವ ಪ್ರಯತ್ನವಾಗಿದೆ. ಸಾಹಿತ್ಯದ ಮೂಲಕ ಪರಿಸರ ಸಂರಕ್ಷಣೆ, ಜವಾಬ್ದಾರಿಯುತ ಬಳಕೆ ಮತ್ತು ಭವಿಷ್ಯದ ಪೀಳಿಗೆಗಳ ಬಗ್ಗೆ ಜಾಗೃತಿ ಮೂಡಿಸುವ ಸಾಧ್ಯತೆಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಪ್ರಮುಖ ಪದಗಳು: ಕನ್ನಡ ಸಾಹಿತ್ಯ, ಪರಿಸರ ಪ್ರಜ್ಞೆ, ಪ್ರಕೃತಿ, ಪರಿಸರ ಸಂರಕ್ಷಣೆ, ಸುಸ್ಥಿರ ಅಭಿವೃದ್ಧಿ, ಪರಿಸರ ಶಿಕ್ಷಣ, ಕುವೆಂಪು, ಶಿವರಾಮ ಕಾರಂತ.

ಪರಿಚಯ:

ಮಾನವ ನಾಗರಿಕತೆಯ ಬೆಳವಣಿಗೆಯು ಪ್ರಕೃತಿಯೊಂದಿಗೆ ಹೊಂದಿಕೊಂಡಿರುವ ಸಂಬಂಧದ ಮೇಲೆ ನಿಂತಿದೆ. ಮಾನವನು ಪ್ರಕೃತಿಯಿಂದ ಆಹಾರ, ನೀರು, ಗಾಳಿ, ಔಷಧಿ, ಇಂಧನ ಮತ್ತು ವಿವಿಧ ನೈಸರ್ಗಿಕ ಸಂಪನ್ಮೂಲಗಳನ್ನು ಪಡೆಯುತ್ತಾನೆ. ಆದ್ದರಿಂದ ಪ್ರಕೃತಿಯ ಸಂರಕ್ಷಣೆ ಎಂದರೆ ಮಾನವ ಜೀವನದ ಸಂರಕ್ಷಣೆಯೇ ಆಗಿದೆ.

ಆದರೆ ಆಧುನಿಕ ಅಭಿವೃದ್ಧಿಯ ಮಾದರಿಯಲ್ಲಿ ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡುವ

ಸಂದರ್ಭದಲ್ಲಿ ಪರಿಸರದ ಮೇಲೆ ಒತ್ತಡ ಹೆಚ್ಚಾಗಿದೆ. ನಗರಗಳ ವಿಸ್ತರಣೆ, ಕೈಗಾರಿಕೆಗಳ ಬೆಳವಣಿಗೆ, ರಸ್ತೆ ಮತ್ತು ಮೂಲಸೌಕರ್ಯ ನಿರ್ಮಾಣ, ಅರಣ್ಯ ಪ್ರದೇಶಗಳ ಪರಿವರ್ತನೆ, ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ಬಳಕೆ ಮುಂತಾದವುಗಳು ಪರಿಸರದ ಸಮತೋಲನದ ಮೇಲೆ ಪರಿಣಾಮ ಬೀರುತ್ತಿವೆ.

ಇಂತಹ ಸಂದರ್ಭದಲ್ಲಿ 'ಸುಸ್ಥಿರ ಅಭಿವೃದ್ಧಿ' ಎಂಬ ಪರಿಕಲ್ಪನೆ ಮಹತ್ವ ಪಡೆದುಕೊಂಡಿದೆ. ವಿಶ್ವಸಂಸ್ಥೆಯ 2030ರ ಕಾರ್ಯಸೂಚಿಯಲ್ಲಿ ಪರಿಸರ ಮತ್ತು ಅಭಿವೃದ್ಧಿಯ ಸಂಬಂಧವನ್ನು ಹಲವು **Sustainable Development Goals (SDGs)** ಮೂಲಕ ವಿವರಿಸಲಾಗಿದೆ. ವಿಶೇಷವಾಗಿ **SDG 6** – ಶುದ್ಧ ನೀರು ಮತ್ತು ನೈರ್ಮಲ್ಯ, **SDG 7** –ಕೈಗೆಟುಕುವ ಮತ್ತು ಶುದ್ಧಇಂಧನ, **SDG 11** – ಸುಸ್ಥಿರ ನಗರಗಳು, **SDG 12** – ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆ, **SDG 13** – ಹವಾಮಾನಕ್ರಮ, **SDG 14** –ಜಲಜೀವನ ಮತ್ತು **SDG 15** – ಭೂಮಿಯ ಮೇಲಿನ ಜೀವಜಾಲದ ಸಂರಕ್ಷಣೆ ಪರಿಸರಕ್ಕೆ ನೇರವಾಗಿ ಸಂಬಂಧಿಸಿವೆ.

ಈ ಪರಿಸರ ಚಿಂತನೆ ಕೇವಲ ವಿಜ್ಞಾನ ಅಥವಾ ಅರ್ಥಶಾಸ್ತ್ರಕ್ಕೆ ಸೀಮಿತವಾಗಿಲ್ಲ. ಸಾಹಿತ್ಯವೂ ಪರಿಸರದ ಬಗ್ಗೆ ಮಾನವನ ಭಾವನೆ ಮತ್ತು ಜವಾಬ್ದಾರಿಯನ್ನು ರೂಪಿಸುವ ಪ್ರಮುಖ ಮಾಧ್ಯಮವಾಗಿದೆ.

ಅಧ್ಯಯನದ ಉದ್ದೇಶಗಳು:

ಈ ಅಧ್ಯಯನದ ಪ್ರಮುಖ ಉದ್ದೇಶಗಳು:

- ❖ ಕನ್ನಡ ಸಾಹಿತ್ಯದಲ್ಲಿರುವ ಪರಿಸರ ಪ್ರಜ್ಞೆಯನ್ನು ಗುರುತಿಸುವುದು.
- ❖ ಕನ್ನಡ ಸಾಹಿತ್ಯದಲ್ಲಿ ಪ್ರಕೃತಿ ಮತ್ತು ಮಾನವನ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದು.
- ❖ ಆಧುನಿಕ ಪರಿಸರ ಸಮಸ್ಯೆಗಳ ಸಾಹಿತ್ಯಿಕ ಪ್ರತಿಬಿಂಬವನ್ನು ಅಧ್ಯಯನ ಮಾಡುವುದು.
- ❖ ಕನ್ನಡ ಸಾಹಿತ್ಯ ಮತ್ತು ಸುಸ್ಥಿರ ಅಭಿವೃದ್ಧಿಯ ನಡುವಿನ ಸಂಬಂಧವನ್ನು ವಿವರಿಸುವುದು.
- ❖ ಪರಿಸರ ಸಂರಕ್ಷಣೆಯಲ್ಲಿ ಸಾಹಿತ್ಯದ ಪಾತ್ರವನ್ನುಗುರುತಿಸುವುದು.
- ❖ ವಿದ್ಯಾರ್ಥಿಗಳು ಮತ್ತು ಯುವಜನರಲ್ಲಿ ಪರಿಸರ ಜಾಗೃತಿ ಮೂಡಿಸುವಲ್ಲಿ ಕನ್ನಡ ಸಾಹಿತ್ಯದ ಸಾಧ್ಯತೆಗಳನ್ನು ಪರಿಶೀಲಿಸುವುದು.
- ❖ ಸ್ಥಳೀಯ ಪರಿಸರ ಸಂರಕ್ಷಣೆಯೊಂದಿಗೆ ಸಾಹಿತ್ಯಿಕ ಚಿಂತನೆಗಳನ್ನು ಸಂಪರ್ಕಿಸುವ ಮಾರ್ಗಗಳನ್ನು ಸೂಚಿಸುವುದು.

ಅಧ್ಯಯನ ವಿಧಾನ:

ಈ ಅಧ್ಯಯನವು ಮುಖ್ಯವಾಗಿ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನವನ್ನು ಆಧರಿಸಿದೆ.

❖ದತ್ತಾಂಶದ ಮೂಲಗಳು

ಪ್ರಾಥಮಿಕ ಮೂಲಗಳು:

- ಆಯ್ದ ಕನ್ನಡ ಸಾಹಿತ್ಯ ಕೃತಿಗಳು
- ಕಾವ್ಯ, ಕಥೆ, ಕಾದಂಬರಿ ಮುಂತಾದ ಸಾಹಿತ್ಯ ಪ್ರಕಾರಗಳು
- ಪ್ರಕೃತಿ ಮತ್ತು ಪರಿಸರ ಕುರಿತ ಸಾಹಿತ್ಯಿಕ ಬರಹಗಳು

ದ್ವಿತೀಯ ಮೂಲಗಳು:

- ಪುಸ್ತಕಗಳು
- ಸಂಶೋಧನಾ ಲೇಖನಗಳು
- ಸರ್ಕಾರಿ ವರದಿಗಳು
- **NITI Aayog SDG** ವರದಿಗಳು
- **Forest Survey of India** ವರದಿಗಳು
- ವಿಶ್ವಸಂಸ್ಥೆಯ **Sustainable Development Goals** ಸಂಬಂಧಿತ ದಾಖಲೆಗಳು

NITI Aayog ಭಾರತದಲ್ಲಿ **SDGs** ಅನುಷ್ಠಾನದ ಪ್ರಮುಖ ರಾಷ್ಟ್ರೀಯ ಸಂಸ್ಥೆಯಾಗಿದ್ದು, **SDG India Index** ಮೂಲಕ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಪ್ರಗತಿಯನ್ನು ಅಳೆಯುತ್ತದೆ.

ಪರಿಸರ ಪ್ರಜ್ಞೆ– ಪರಿಕಲ್ಪನೆ:

ಪರಿಸರ ಪ್ರಜ್ಞೆ ಎಂದರೆ ಮಾನವನು ತನ್ನ ಸುತ್ತಲಿನ ಪ್ರಕೃತಿ, ಜೀವಜಾಲ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮಹತ್ವವನ್ನು ಅರಿತು ಅವುಗಳ ಸಂರಕ್ಷಣೆಯ ಬಗ್ಗೆ ಜವಾಬ್ದಾರಿಯುತ ಮನೋಭಾವ ಹೊಂದಿರುವುದು.

ಇದರಲ್ಲಿ ಮೂರು ಪ್ರಮುಖ ಅಂಶಗಳಿವೆ:

ಜ್ಞಾನ→ಜವಾಬ್ದಾರಿ→ಕ್ರಿಯೆ

ಅಂದರೆ, ಪರಿಸರದ ಬಗ್ಗೆ ತಿಳುವಳಿಕೆ → ಪರಿಸರದ ಬಗ್ಗೆ ಕಾಳಜಿ → ಪರಿಸರ ಸಂರಕ್ಷಣೆಯ ಕಾರ್ಯ

ಸಾಹಿತ್ಯವು ಈ ಮೂರು ಹಂತಗಳಲ್ಲಿಯೂ ಪ್ರಭಾವ ಬೀರುವ ಸಾಮರ್ಥ್ಯ ಹೊಂದಿದೆ.

ಕನ್ನಡ ಸಾಹಿತ್ಯ ಮತ್ತು ಪ್ರಕೃತಿ:

ಕನ್ನಡ ಸಾಹಿತ್ಯದ ಪರಂಪರೆಯನ್ನು ಗಮನಿಸಿದರೆ ಪ್ರಕೃತಿಯು ಸಾಹಿತ್ಯದ ಅವಿಭಾಜ್ಯ ಅಂಗವಾಗಿದೆ.

ಮಳೆ, ಮರ, ನದಿ, ಬೆಟ್ಟ, ಹೊಲ, ಹಕ್ಕಿ, ಪ್ರಾಣಿ, ಹೂವು, ಚಂದ್ರ, ಸೂರ್ಯ ಮುಂತಾದ ಪ್ರಕೃತಿ ಅಂಶಗಳು ಕಾವ್ಯ ಮತ್ತು ಗದ್ಯಗಳಲ್ಲಿ ಸೌಂದರ್ಯದ ಸಂಕೇತಗಳಾಗಿ ಮಾತ್ರವಲ್ಲದೆ ಮಾನವ ಜೀವನದ ಸಹಭಾಗಿಗಳಾಗಿ ಚಿತ್ರಿಸಲ್ಪಟ್ಟಿವೆ.

ಹಳೆಯ ಸಾಹಿತ್ಯದಲ್ಲಿ ಪ್ರಕೃತಿಯು ಸಾಮಾನ್ಯವಾಗಿ: ಸೌಂದರ್ಯದ ಪ್ರತೀಕ, ಪ್ರೇಮದ ಹಿನ್ನೆಲೆ ಆಧ್ಯಾತ್ಮಿಕ ಅನುಭವದ ಮಾಧ್ಯಮ, ಕೃಷಿ ಜೀವನದ ಆಧಾರ, ಮಾನವ ಜೀವನದ ಸಹಜ ಸಂಗಾತಿ, ಎಂಬ ರೂಪಗಳಲ್ಲಿ ಕಾಣಿಸಿಕೊಂಡಿದೆ.

ಆಧುನಿಕ ಕಾಲದಲ್ಲಿ ಇದರೊಂದಿಗೆ ಹೊಸ ಆಯಾಮ ಸೇರ್ಪಡೆಯಾಗಿದೆ:

ಪ್ರಕೃತಿ→ ಪರಿಸರ→ ಪರಿಸರ ಬಿಕ್ಕಟ್ಟು→ ಸಂರಕ್ಷಣೆ→ ಸುಸ್ಥಿರ ಅಭಿವೃದ್ಧಿ

ಕುವೆಂಪು ಅವರ ಸಾಹಿತ್ಯದಲ್ಲಿ ಪ್ರಕೃತಿ ಪ್ರಜ್ಞೆ:

ಕುವೆಂಪು ಅವರ ಸಾಹಿತ್ಯದಲ್ಲಿ ಪ್ರಕೃತಿಗೆ ವಿಶೇಷ ಸ್ಥಾನವಿದೆ. ಪಶ್ಚಿಮಘಟ್ಟದ ನಿಸರ್ಗದೊಂದಿಗೆ ಅವರ ಆಳವಾದ ಅನುಭವವು ಅವರ ಕಾವ್ಯದೃಷ್ಟಿಯನ್ನು ಪ್ರಭಾವಿಸಿದೆ ಎಂಬುದು ಸಾಹಿತ್ಯ ಅಧ್ಯಯನಗಳಲ್ಲಿಯೂ ಕಾಣುತ್ತದೆ. ಅವರ ಸಾಹಿತ್ಯದಲ್ಲಿ ಪ್ರಕೃತಿ ಕೇವಲ ಹಿನ್ನೆಲೆಯಲ್ಲ; ಅದು ಮಾನವನ ಅಂತರಂಗದೊಂದಿಗೆ ಸಂಬಂಧ ಹೊಂದಿರುವ ಜೀವಂತ ಅಸ್ತಿತ್ವವಾಗಿದೆ.

ಕುವೆಂಪು ಅವರ ಪ್ರಕೃತಿ ಚಿಂತನೆಯ ಪ್ರಮುಖ ಲಕ್ಷಣಗಳು: ನಿಸರ್ಗದ ಸೌಂದರ್ಯದ ಆರಾಧನೆ, ಮನುಷ್ಯ ಮತ್ತು ಪ್ರಕೃತಿಯ ಏಕತೆ, ಜೀವಜಾಲದ ಬಗ್ಗೆ ಗೌರವ, ವಿಶ್ವಮಾನವೀಯ ದೃಷ್ಟಿಕೋನ, ಪ್ರಕೃತಿಯೊಂದಿಗೆ ಸಾಮರಸ್ಯದ ಬದುಕು, ಇಂತಹ ಸಾಹಿತ್ಯಿಕ ದೃಷ್ಟಿಕೋನವನ್ನು ಇಂದಿನ ಪರಿಸರ ಶಿಕ್ಷಣದೊಂದಿಗೆ ಸಂಪರ್ಕಿಸಬಹುದು. ವಿದ್ಯಾರ್ಥಿಗಳು ಪ್ರಕೃತಿಯನ್ನು ಕೇವಲ ಸಂಪನ್ಮೂಲ ಎಂದು ನೋಡುವ ಬದಲುಜೀವನದ ಸಹಭಾಗಿ ಎಂದು ನೋಡುವ ಮನೋಭಾವವನ್ನು ಸಾಹಿತ್ಯದ ಮೂಲಕ ಬೆಳೆಸಬಹುದು.

ಶಿವರಾಮ ಕಾರಂತ ಮತ್ತು ಪರಿಸರಚಿಂತನೆ:

ಕನ್ನಡ ಸಾಹಿತ್ಯದಲ್ಲಿ ಪರಿಸರ ಮತ್ತು ಗ್ರಾಮೀಣಜೀವನದ ಸಂಬಂಧವನ್ನು ಚರ್ಚಿಸುವಾಗ ಕೋಟ ಶಿವರಾಮ ಕಾರಂತರು ಪ್ರಮುಖರು. ಅವರ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಮಣ್ಣು, ಕೃಷಿ, ಗ್ರಾಮೀಣ ಬದುಕು ಮತ್ತು ಪ್ರಕೃತಿಯ ನಡುವಿನ ಸಂಬಂಧವನ್ನು ಗಮನಿಸಬಹುದು. ಇತ್ತೀಚಿನ ಸಾಹಿತ್ಯ ಅಧ್ಯಯನವೊಂದು ಈ ಕೃತಿಯಲ್ಲಿ ಪರಿಸರ ಪ್ರೀತಿ ಮತ್ತು ಸಾಮಾಜಿಕ ಕಳಕಳಿ ಎರಡೂ ವ್ಯಕ್ತವಾಗುತ್ತವೆ ಎಂದು ವಿಶ್ಲೇಷಿಸಿದೆ.

'ಮರಳಿ ಮಣ್ಣಿಗೆ'ಯಂತಹ ಕೃತಿಗಳಲ್ಲಿ:

- ಮಣ್ಣಿನೊಂದಿಗೆ ಮಾನವನ ಸಂಬಂಧ
- ಕೃಷಿ ಜೀವನ
- ಗ್ರಾಮೀಣಆರ್ಥಿಕತೆ
- ಪ್ರಕೃತಿ ಅವಲಂಬನೆ
- ಜೀವನಶೈಲಿಯ ಬದಲಾವಣೆ

ಮುಂತಾದ ವಿಚಾರಗಳನ್ನು ಕಾಣಬಹುದು. ಹೀಗಾಗಿ ಕನ್ನಡ ಸಾಹಿತ್ಯವು ಸುಸ್ಥಿರ ಕೃಷಿ, ಸ್ಥಳೀಯ ಸಂಪನ್ಮೂಲ ಮತ್ತು ಗ್ರಾಮೀಣ ಜೀವನದ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕ ವಾಗುತ್ತದೆ.

ಆಧುನಿಕಕನ್ನಡ ಸಾಹಿತ್ಯದಲ್ಲಿ ಪರಿಸರ ಬಿಕ್ಕಟ್ಟು :

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಕೃತಿಯ ಸೌಂದರ್ಯದ ಜೊತೆಗೆ ಪ್ರಕೃತಿಯ ಮೇಲಿನ ಮಾನವನಒತ್ತಡವೂ ಪ್ರಮುಖ ವಿಷಯವಾಗಿದೆ. ಅರಣ್ಯನಾಶ, ಜಲಮಾಲಿನ್ಯ, ಮಣ್ಣಿನ ಸವಕಳಿ, ನಗರೀಕರಣ ಮತ್ತು ಹವಾಮಾನ ಬದಲಾವಣೆಗಳು ಸಾಹಿತ್ಯದಲ್ಲಿ ಪರಿಸರ ಬಿಕ್ಕಟ್ಟಿನ ರೂಪದಲ್ಲಿ ವ್ಯಕ್ತವಾಗುತ್ತಿವೆ. **India State of Forest Report 2023** ಪ್ರಕಾರ, 2021ಕ್ಕೆ ಹೋಲಿಸಿದರೆ ಭಾರತದಲ್ಲಿ **Forest and Tree Cover 1,445.81** ಚ.ಕಿ.ಮೀ. ಹೆಚ್ಚಾಗಿದೆ. ಆದರೆ ಕರ್ನಾಟಕದಲ್ಲಿ **459.36** ಚ.ಕಿ.ಮೀ. ಇಳಿಕೆಯಾಗಿದೆ. ಈ ಅಂಕಿಅಂಶಗಳು ಮಣ್ಣು–ಮರ–ಮಾನವ ಸಂಬಂಧದ ಮಹತ್ವವನ್ನು ಸೂಚಿಸುತ್ತವೆ.

ಜಲಸಂರಕ್ಷಣೆ ಮತ್ತುಕನ್ನಡ ಸಾಹಿತ್ಯ:

ನದಿ, ಕೆರೆ, ಬಾವಿ ಮತ್ತು ಮಳೆನೀರು ಗ್ರಾಮೀಣ ಬದುಕಿನ ಅವಿಭಾಜ್ಯ ಭಾಗಗಳಾಗಿವೆ. ಕನ್ನಡ ಸಾಹಿತ್ಯದಲ್ಲಿ ನೀರು ಕೇವಲ ಪ್ರಕೃತಿ ಸೌಂದರ್ಯದ ಅಂಶವಲ್ಲ; ಕೃಷಿ, ಜೀವನೋಪಾಯ, ಗ್ರಾಮೀಣ ಸಂಸ್ಕೃತಿ ಮತ್ತು ಆರ್ಥಿಕ ಚಟುವಟಿಕೆಗಳೊಂದಿಗೆ ಸಂಬಂಧ ಹೊಂದಿದೆ. ನೀರಿನಕೊರತೆ, ಭೂಗರ್ಭಜಲ ಕುಸಿತ ಮತ್ತು ಜಲಮಾಲಿನ್ಯದ ಸಂದರ್ಭದಲ್ಲಿ ಸಾಹಿತ್ಯವು ನೀರಿನ ಮೌಲ್ಯ ಮತ್ತು ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಬಹುದು. ಇದು **SDG6 – Clean Water and Sanitation** ಸಂಬಂಧಿಸಿದೆ.

ಕೃಷಿ, ಮಣ್ಣು ಮತ್ತು ಸುಸ್ಥಿರ ಅಭಿವೃದ್ಧಿ:

ಕನ್ನಡ ಕೃಷಿ ಸಾಹಿತ್ಯದಲ್ಲಿ ಮಣ್ಣು ಕೇವಲ ಉತ್ಪಾದನಾ ಸಾಧನವಲ್ಲ; ಅದು ರೈತ, ಬೀಜ, ನೀರು, ಮಳೆ ಮತ್ತು ಜೀವಜಾಲದೊಂದಿಗೆ ಸಂಬಂಧ ಹೊಂದಿರುವ ಪರಿಸರ ವ್ಯವಸ್ಥೆಯಾಗಿದೆ. ರಾಸಾಯನಿಕಗಳ ಅತಿಯಾದ ಬಳಕೆ, ಮಣ್ಣಿನ ಸವಕಳಿ ಮತ್ತು ನೀರಿನ ಅತಿಯಾದ ಬಳಕೆ ಕೃಷಿಯ ಸುಸ್ಥಿರತೆಗೆ ಸವಾಲಾಗಿದೆ. ಆದ್ದರಿಂದ ಮಣ್ಣಿನ ಸಂರಕ್ಷಣೆ, ಸಾವಯವ ಕೃಷಿ, ಸ್ಥಳೀಯ ಬೀಜಗಳ ರಕ್ಷಣೆ ಮತ್ತು ಕೃಷಿ ಜೀವವೈವಿಧ್ಯದ ಕುರಿತು ಸಾಹಿತ್ಯದ ಮೂಲಕ ಜಾಗೃತಿ ಮೂಡಿಸಬಹುದು.

ನಗರೀಕರಣ ಮತ್ತು ಪರಿಸರ:

ನಗರೀಕರಣವು ಆರ್ಥಿಕ ಅವಕಾಶಗಳನ್ನು ಸೃಷ್ಟಿಸಿದರೂ ಯೋಜನಾರಹಿತ ನಗರೀಕರಣದಿಂದ ವಾಯು ಮತ್ತು ಶಬ್ದಮಾಲಿನ್ಯ, ನೀರಿನ ಮಾಲಿನ್ಯ, ಘನ ತ್ಯಾಜ್ಯ, ಹಸಿರು ಪ್ರದೇಶಗಳ ಕುಸಿತ ಮತ್ತು ಸಂಚಾರ ದಟ್ಟಣೆ ಉಂಟಾಗಬಹುದು. ಆಧುನಿಕ ಕನ್ನಡ ಸಾಹಿತ್ಯವು ಗ್ರಾಮದಿಂದ ನಗರಕ್ಕೆ ವಲಸೆ, ಬದಲಾಗುತ್ತಿರುವ ಜೀವನಶೈಲಿ ಮತ್ತು ಪ್ರಕೃತಿಯಿಂದ ದೂರವಾಗುತ್ತಿರುವ ಮಾನವ ಬದುಕನ್ನು ಪ್ರತಿಬಿಂಬಿಸುತ್ತದೆ. ಇದು **SDG 11 – Sustainable Cities and Communities** ಮತ್ತು **SDG 12 – Responsible Consumption and Production** ಗಳೊಂದಿಗೆ ಸಂಪರ್ಕ ಹೊಂದಿದೆ.

ಪರಿಸರ ಪ್ರಜ್ಞೆಮತ್ತು ಸುಸ್ಥಿರ ಅಭಿವೃದ್ಧಿ:

ಸುಸ್ಥಿರ ಅಭಿವೃದ್ಧಿಯ ಮೂಲ ಉದ್ದೇಶ ಇಂದಿನ ಅಭಿವೃದ್ಧಿಯು ಭವಿಷ್ಯದ ಪೀಳಿಗೆಗಳ ಅವಕಾಶಗಳನ್ನು ಹಾಳುಮಾಡಬಾರದು ಎಂಬುದಾಗಿದೆ. ಆರ್ಥಿಕ ಬೆಳವಣಿಗೆ, ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಪರಿಸರ ಸಂರಕ್ಷಣೆಯ ಸಮನ್ವಯವೇ ಇದರ ಆಧಾರ. ಕನ್ನಡ ಸಾಹಿತ್ಯವು ಈ ಮೌಲ್ಯಗಳನ್ನು ಸಮಾಜದಲ್ಲಿ ಬೆಳೆಸುವ ಪರಿಣಾಮಕಾರಿ ಮಾಧ್ಯಮವಾಗಬಹುದು.

ಪರಿಸರ ವಿಮರ್ಶೆ ಮತ್ತು ಕನ್ನಡ ಸಾಹಿತ್ಯ:

ಸಾಹಿತ್ಯವನ್ನು ಪರಿಸರದ ದೃಷ್ಟಿಕೋನದಿಂದ ಅಧ್ಯಯನ ಮಾಡುವ ವಿಧಾನವನ್ನು ಪರಿಸರ ವಿಮರ್ಶೆ ಎಂದು ಕರೆಯಲಾಗುತ್ತದೆ. ಇದರಲ್ಲಿ ಮಾನವ–ಪ್ರಕೃತಿ

ಸಂಬಂಧ, ಪ್ರಕೃತಿಯ ಚಿತ್ರಣ, ಪರಿಸರ ನಾಶ, ಪ್ರಾಣಿ–ಪಕ್ಷಿಗಳ ಸ್ಥಾನ, ಮಣ್ಣು ಮತ್ತು ನೀರಿನ ಮಹತ್ವ ಮುಂತಾದವುಗಳನ್ನು ವಿಶ್ಲೇಷಿಸಲಾಗುತ್ತದೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಈ ದೃಷ್ಟಿಯಿಂದ ಮರು ಓದುವುದು ಹೊಸ ಸಂಶೋಧನಾ ಅವಕಾಶಗಳನ್ನು ಒದಗಿಸುತ್ತದೆ.

ಕನ್ನಡ ಸಾಹಿತ್ಯ ಮತ್ತು ಪರಿಸರ ಶಿಕ್ಷಣ:

ಕನ್ನಡ ಸಾಹಿತ್ಯವನ್ನು ಪರಿಸರ ಶಿಕ್ಷಣದೊಂದಿಗೆ ಸಂಯೋಜಿಸುವುದರಿಂದ ವಿದ್ಯಾರ್ಥಿಗಳಲ್ಲಿ ಪರಿಸರ ಪ್ರಜ್ಞೆ ಬೆಳೆಸಬಹುದು. ಪ್ರಕೃತಿ ಕವಿತೆ ವಾಚನ, 'ನನ್ನೂರಿನ ನದಿ/ಕೆರೆ' ಬರಹ, ಪರಿಸರಕಥೆ, ಪೋಸ್ಟರ್ ರಚನೆ ಮತ್ತು ಸ್ಥಳೀಯ ಪರಿಸರ ಅಧ್ಯಯನದಂತಹ ಚಟುವಟಿಕೆಗಳನ್ನು ನಡೆಸಬಹುದು. ಇದರಿಂದ ಸಾಹಿತ್ಯ→ಜಾಗೃತಿ→ ಸ್ಥಳೀಯ ಅಧ್ಯಯನ→ ಪರಿಸರ ಕಾರ್ಯ ಎಂಬ ಕಲಿಕಾ ಪ್ರಕ್ರಿಯೆ ರೂಪುಗೊಳ್ಳುತ್ತದೆ.

ಕನ್ನಡ ಸಾಹಿತ್ಯದ ಮೂಲಕ ಯುವಜನರಲ್ಲಿ ಪರಿಸರಜಾಗೃತಿ:

ಯುವಜನರನ್ನು ತಲುಪಲು ಪರಿಸರ ಸಾಹಿತ್ಯವನ್ನು ಡಿಜಿಟಲ್ ಮಾಧ್ಯಮಗಳೊಂದಿಗೆ ಸಂಪರ್ಕಿಸಬಹುದು. ಕನ್ನಡ ಪರಿಸರ **Podcast, YouTube** ಸಾಹಿತ್ಯ ವಾಚನ, **Short Film,** ಸಾಮಾಜಿಕ ಮಾಧ್ಯಮ ಸಂದೇಶಗಳು, ಪರಿಸರ ಬ್ಲಾಗ್‌ಗಳು ಮತ್ತು ವಿದ್ಯಾರ್ಥಿ ವರದಿಗಳ ಮೂಲಕ ಸಾಹಿತ್ಯವನ್ನು ಪರಿಸರಜಾಗೃತಿಯ ಸಾಧನವಾಗಿ ಬಳಸಬಹುದು.

ಪ್ರಮುಖ ಕಂಡು ಬಂದ ಅಂಶಗಳು:

ಕನ್ನಡ ಸಾಹಿತ್ಯದಲ್ಲಿ ಪ್ರಕೃತಿ ಮತ್ತು ಮಾನವ ಜೀವನದ ಸಂಬಂಧಕ್ಕೆ ದೀರ್ಘ ಪರಂಪರೆ ಇದೆ. ಕುವೆಂಪು ಅವರ ಸಾಹಿತ್ಯದಲ್ಲಿ ಪ್ರಕೃತಿಯೊಂದಿಗೆ ಮಾನವನ ಆಂತರಿಕ ಸಂಬಂಧ ಹಾಗೂ ಶಿವರಾಮ ಕಾರಂತರ ಕೃತಿಗಳಲ್ಲಿ ಮಣ್ಣು, ಕೃಷಿ ಮತ್ತು ಗ್ರಾಮೀಣ ಜೀವನದ ಸಂಬಂಧವನ್ನು ಗಮನಿಸಬಹುದು. ಪರಿಸರ ಸಾಹಿತ್ಯವನ್ನು **SDG 6, 11, 12, 13** ಮತ್ತು **15**ಗಳೊಂದಿಗೆ ಸಂಪರ್ಕಿಸಬಹುದು. ಸಾಹಿತ್ಯವು ಪರಿಸರದ ಬಗ್ಗೆ ಜ್ಞಾನ ನೀಡುವುದರ ಜೊತೆಗೆ ಭಾವನಾತ್ಮಕ ಸಂಬಂಧ ಮತ್ತುಜವಾಬ್ದಾರಿಯನ್ನೂ ಬೆಳೆಸುತ್ತದೆ.

ಸಲಹೆಗಳು:

ಪದವಿ ಪಠ್ಯಕ್ರಮದಲ್ಲಿ ಪರಿಸರ ಸಾಹಿತ್ಯಕ್ಕೆ ಹೆಚ್ಚಿನ ಸ್ಥಾನ ನೀಡಬೇಕು. ಕಾಲೇಜುಗಳಲ್ಲಿ ಸಾಹಿತ್ಯ ಮತ್ತು ಪರಿಸರಅಧ್ಯಯನ ಘಟಕಗಳನ್ನು ಸ್ಥಾಪಿಸಬೇಕು. ವಿದ್ಯಾರ್ಥಿಗಳಿಂದ ಸ್ಥಳೀಯ ಕೆರೆ, ನದಿ, ಮರಗಳು ಮತ್ತು ಜೀವಜಾಲದ ದಾಖಲೀಕರಣ ಮಾಡಿಸಬೇಕು.

ಪರಿಸರ ಕವನ, ಕಥೆ, ಪ್ರಬಂಧ, ಪೋಸ್ಟರ್ ಮತ್ತು **Short Film** ಸ್ಪರ್ಧೆಗಳನ್ನು ನಡೆಸಬೇಕು.

ಪರಿಸರ ಕುರಿತು ಬರೆಯುವ ಸ್ಥಳೀಯ ಲೇಖಕರೊಂದಿಗೆ ಸಂವಾದ ನಡೆಸಬೇಕು.

ಕನ್ನಡದಲ್ಲಿ ಪರಿಸರ **e-content, Podcast** ಮತ್ತು **Digital Stories** ಸೃಷ್ಟಿಸಬೇಕು. ಒಬ್ಬ ವಿದ್ಯಾರ್ಥಿ–ಒಂದು ಮರದಂತಹ ಸಾಹಿತ್ಯ–ಪರಿಸರ ಚಟುವಟಿಕೆಗಳನ್ನು ಉತ್ತೇಜಿಸಬೇಕು. ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾತೃಭಾಷೆಯಲ್ಲಿ ಪರಿಸರ ಶಿಕ್ಷಣ ನೀಡಬೇಕು. **SDGs** ಮತ್ತು ಕನ್ನಡ ಸಾಹಿತ್ಯದ ಕುರಿತು ವಿದ್ಯಾರ್ಥಿ ಸಂಶೋಧನೆಗಳನ್ನು ಪ್ರೋತ್ಸಾಹಿಸಬೇಕು.

ಜನಪದಗೀತೆ, ಗಾದೆ, ಆಚರಣೆ ಮತ್ತು ಸ್ಥಳೀಯ ಜ್ಞಾನದಲ್ಲಿರುವ ಪರಿಸರ ಸಂರಕ್ಷಣಾ ಅಂಶಗಳನ್ನು ದಾಖಲಿಸಬೇಕು.**20**.

ಉಪಸಂಹಾರ:

ಕನ್ನಡ ಸಾಹಿತ್ಯವು ಪ್ರಕೃತಿಯ ಸೌಂದರ್ಯವನ್ನು ಮಾತ್ರ ಹಾಡಿದ ಸಾಹಿತ್ಯವಲ್ಲ; ಅದು ಮಾನವ ಮತ್ತು ಪ್ರಕೃತಿಯ ನಡುವಿನ ಆಳವಾದ ಸಂಬಂಧವನ್ನು ಪ್ರತಿಬಿಂಬಿಸುವ ಸಾಂಸ್ಕೃತಿಕ ಸಂಪತ್ತಾಗಿದೆ. ಕುವೆಂಪು ಅವರ ನಿಸರ್ಗ ದೃಷ್ಟಿ, ಶಿವರಾಮ ಕಾರಂತರ ಮಣ್ಣು

ಮತ್ತು ಗ್ರಾಮೀಣ ಬದುಕಿನ ಚಿತ್ರಣ ಹಾಗೂ ಆಧುನಿಕ ಕನ್ನಡ ಸಾಹಿತ್ಯದಲ್ಲಿನ ಪರಿಸರ ಚಿಂತನೆಗಳನ್ನು ಒಟ್ಟಾಗಿ ನೋಡಿದಾಗ ಕನ್ನಡ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆಯ ಬಲವಾದ ಪರಂಪರೆ ಇರುವುದನ್ನು ಗುರುತಿಸಬಹುದು.

ಇಂದು ಹವಾಮಾನ ಬದಲಾವಣೆ, ಅರಣ್ಯನಾಶ, ನೀರಿನಕೊರತೆ, ಮಾಲಿನ್ಯ, ಜೀವ ವೈವಿಧ್ಯದ ಕುಸಿತ ಮತ್ತು ತ್ಯಾಜ್ಯ ನಿರ್ವಹಣೆ ಮುಂತಾದ ಸಮಸ್ಯೆಗಳು ಅಭಿವೃದ್ಧಿಯ ಮಾದರಿಯನ್ನು ಮರುಪರಿಶೀಲಿಸುವ ಅಗತ್ಯವನ್ನು ತೋರಿಸುತ್ತಿವೆ. ಆದ್ದರಿಂದ ಸುಸ್ಥಿರ ಅಭಿವೃದ್ಧಿ ಕೇವಲ ಸರ್ಕಾರದ ಜವಾಬ್ದಾರಿಯಲ್ಲ; ಅದು ಪ್ರತಿಯೊಬ್ಬ ನಾಗರಿಕನ ಜೀವನಶೈಲಿ ಮತ್ತು ಮೌಲ್ಯಗಳೊಂದಿಗೆ ಸಂಬಂಧ ಹೊಂದಿದೆ. ಈ ಮೌಲ್ಯಗಳನ್ನು ರೂಪಿಸುವಲ್ಲಿ ಸಾಹಿತ್ಯದ ಪಾತ್ರ ಮಹತ್ವದ್ದಾಗಿದೆ. ವಿಶೇಷವಾಗಿ ಕನ್ನಡದಂತಹ ಜನಸಾಮಾನ್ಯರೊಂದಿಗೆ ನೇರವಾಗಿ ಸಂಪರ್ಕ ಹೊಂದಿರುವ ಭಾಷೆಯ ಸಾಹಿತ್ಯವು ಪರಿಸರ ಸಂರಕ್ಷಣೆಯ ಸಂದೇಶವನ್ನು ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ತಲುಪಿಸಬಲ್ಲದು. ಹೀಗಾಗಿ, ಪ್ರಕೃತಿಯನ್ನು ಉಳಿಸುವುದು ಎಂದರೆ ಕೇವಲ ಮರವನ್ನು ಉಳಿಸುವುದಲ್ಲ; ಮಾನವ ಜೀವನದ ಭವಿಷ್ಯವನ್ನು ಉಳಿಸುವುದು.

ಕನ್ನಡ ಸಾಹಿತ್ಯವು ಈ ಅರಿವನ್ನು ಸಮಾಜದಲ್ಲಿ ಬೆಳೆಸುವ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸಾಧನವಾಗಿ ಕಾರ್ಯನಿರ್ವಹಿಸಬಹುದು. ಸಾಹಿತ್ಯದ ಪರಿಸರ ಪ್ರಜ್ಞೆಯನ್ನು ಸುಸ್ಥಿರ ಅಭಿವೃದ್ಧಿಯ ಕಾರ್ಯಚಟುವಟಿಕೆಗಳೊಂದಿಗೆ ಜೋಡಿಸಿದಾಗ ಸಾಹಿತ್ಯ– ಶಿಕ್ಷಣ – ಸಮಾಜ– ಪರಿಸರ–ಅಭಿವೃದ್ಧಿ ಎಂಬ ಸಮಗ್ರ ಸಂಬಂಧವನ್ನು ನಿರ್ಮಿಸಲು ಸಾಧ್ಯ.

ಉಲ್ಲೇಖಗಳು:

1. ಕುವೆಂಪು – ಶ್ರೀ ರಾಮಾಯಣದರ್ಶನಂ, ಕನ್ನಡ ಸಾಹಿತ್ಯ ಪರಿಷತ್ತು / ಸಂಬಂಧಿತಆವೃತ್ತಿ.
2. ಕುವೆಂಪು – ಕೊಳಲು, ಕನ್ನಡ ಸಾಹಿತ್ಯದ ಆಯ್ದ ಕವನ ಸಂಕಲನ.
3. ಕುವೆಂಪು – ಮಲೆಗಳಲ್ಲಿ ಮದುಮಗಳು, ಕನ್ನಡ ಸಾಹಿತ್ಯ.
4. ಶಿವರಾಮ ಕಾರಂತ– ಮರಳಿ ಮಣ್ಣಿಗೆ, ಕನ್ನಡ ಸಾಹಿತ್ಯ.
5. ಶಿವರಾಮ ಕಾರಂತ– ಚೋಮನ ದುಡಿ, ಕನ್ನಡ ಸಾಹಿತ್ಯ.
6. ಶಿವರಾಮ ಕಾರಂತ–ಆಯ್ದ ಪ್ರಬಂಧಗಳು ಮತ್ತು ಪ್ರಕೃತಿಕುರಿತ ಬರಹಗಳು.
7. ಸಂಶೋಧನಾ ಮತ್ತು ಅಧಿಕೃತ ಮೂಲಗಳು
8. **NITI Aayog. SDG India Index 2023–24. Government of India.**
9. **NITI Aayog. India Voluntary National Review 2025. Government of India. 9. Forest Survey of India. India State of Forest Report 2023. Ministry of Environment, Forest and Climate Change, Government of India.**
10. **United Nations. The 2030 Agenda for Sustainable Development. (Sustainable Development Goals)**

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಭಾರತದಲ್ಲಿ ಸಹಕಾರಾತ್ಮಕಒಕ್ಕೂಟ ವ್ಯವಸ್ಥೆ ಹಾಗೂ ಉದಯೋನ್ಮುಖ ಸವಾಲುಗಳು

ಶ್ರೀಪಾದ ಆರ್ ಮಾಳಗಿ
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ,
ಎಸ್.ಎಸ್.ಬಿ.ಎಮ್. ಕಾಲೇಜು, ಬಾದಾಮಿ–587201
ತಾ : ಬಾದಾಮಿ, ಜಿ : ಬಾಗಲಕೋಟ
Corresponding Author–ಶ್ರೀಪಾದ ಆರ್ ಮಾಳಗಿ
DOI - 10.5281/zenodo.23528647

Abstract:

*ಭಾರತವು ವೈವಿಧ್ಯಮಯ ಭಾಷೆ, ಸಂಸ್ಕೃತಿ, ಧರ್ಮ, ಆರ್ಥಿಕತೆ ಮತ್ತು ಭೌಗೋಳಿಕ ಲಕ್ಷಣಗಳನ್ನು ಹೊಂದಿರುವ ಬಹುರೂಪಿ ರಾಷ್ಟ್ರವಾಗಿದ್ದು, ಇಂತಹ ವೈವಿಧ್ಯತೆಯನ್ನು ಆಡಳಿತಾತ್ಮಕವಾಗಿ ಸಮನ್ವಯಗೊಳಿಸುವಲ್ಲಿ ಒಕ್ಕೂಟ ವ್ಯವಸ್ಥೆಯು ಮಹತ್ವದ ಪಾತ್ರವನ್ನು ವಹಿಸುತ್ತದೆ. ಭಾರತೀಯ ಸಂವಿಧಾನವು ಕೇಂದ್ರ ಮತ್ತು ರಾಜ್ಯಗಳ ನಡುವೆ ಶಾಸಕಾಂಗ, ಕಾರ್ಯಾಂಗ ಹಾಗೂ ಹಣಕಾಸು ಅಧಿಕಾರಗಳ ಹಂಚಿಕೆಯನ್ನು ನಿರ್ದಿಷ್ಟಪಡಿಸುವ ಮೂಲಕ ಬಲಿಷ್ಠ ಕೇಂದ್ರದೊಂದಿಗೆ ಒಕ್ಕೂಟಾತ್ಮಕ ಆಡಳಿತ ವ್ಯವಸ್ಥೆಯನ್ನು ರೂಪಿಸಿದೆ. ಈ ವ್ಯವಸ್ಥೆಯ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಸಹಕಾರ, ಸಮನ್ವಯ, ಪರಸ್ಪರ ವಿಶ್ವಾಸ ಮತ್ತು ಸಂಪನ್ಮೂಲಗಳ ಸಮಾನ ಹಂಚಿಕೆ ಅತ್ಯಂತ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ "ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆ" (**Cooperative Federalism**) ಭಾರತೀಯ ಆಡಳಿತದ ಪ್ರಮುಖ ಪರಿಕಲ್ಪನೆಯಾಗಿ ರೂಪುಗೊಂಡಿದೆ.*

ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಸ್ಪರ್ಧಿಸುವುದಕ್ಕಿಂತ ರಾಷ್ಟ್ರೀಯ ಅಭಿವೃದ್ಧಿ, ಸಾಮಾಜಿಕ ನ್ಯಾಯ, ಆರ್ಥಿಕ ಪ್ರಗತಿ ಮತ್ತು ಸಾರ್ವಜನಿಕ ಕಲ್ಯಾಣದಂತಹ ಸಾಮಾನ್ಯ ಗುರಿಗಳನ್ನು ಸಾಧಿಸಲು ಒಟ್ಟಾಗಿ ಕಾರ್ಯನಿರ್ವಹಿಸುವುದನ್ನು ಸೂಚಿಸುತ್ತದೆ. ನೀತಿಆಯೋಗ, ಜಿಎಸ್‌ಟಿ ಮಂಡಳಿ, ಅಂತರರಾಜ್ಯ ಮಂಡಳಿ, ಹಣಕಾಸು ಆಯೋಗ ಹಾಗೂ ವಿವಿಧ ಕೇಂದ್ರ–ರಾಜ್ಯ ಸಮನ್ವಯ ವ್ಯವಸ್ಥೆಗಳು ಈ ಸಹಕಾರಾತ್ಮಕತೆಯನ್ನು ಬಲಪಡಿಸುವ ಪ್ರಮುಖ ಸಂಸ್ಥೆಗಳಾಗಿವೆ. ವಿಶೇಷವಾಗಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯು ತೆರಿಗೆ ನೀತಿ ರೂಪಿಸುವಿಕೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಹಭಾಗಿತ್ವಕ್ಕೆ ಒಂದು ಪ್ರಮುಖ ಉದಾಹರಣೆಯಾಗಿದೆ.

ಆದಾಗ್ಯೂ, ಭಾರತೀಯ ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯ ಮುಂದೆ ಹಲವು ಉದಯೋನ್ಮುಖ ಸವಾಲುಗಳಿವೆ. ಕೇಂದ್ರ ಮತ್ತು ರಾಜ್ಯಗಳ ನಡುವಿನ ಹಣಕಾಸಿನ ಅವಲಂಬನೆ, ತೆರಿಗೆ ಆದಾಯ ಹಂಚಿಕೆಯ ಕುರಿತ ಭಿನ್ನಾಭಿಪ್ರಾಯಗಳು, ರಾಜ್ಯಗಳ ಸಾಲ ಮತ್ತು ಹಣಕಾಸಿನ ಸ್ವಾಯತ್ತತೆ, ರಾಜ್ಯಪಾಲರ ಪಾತ್ರ, ಕೇಂದ್ರ ತನಿಖಾ ಸಂಸ್ಥೆಗಳ ಬಳಕೆಯ ಕುರಿತ ರಾಜಕೀಯ ವಿವಾದಗಳು, ಅಂತರರಾಜ್ಯ ನದಿ ನೀರಿನ ಸಮಸ್ಯೆಗಳು, ಪ್ರಾದೇಶಿಕ ಅಸಮಾನತೆ, ಭಾಷಾ ಮತ್ತು ಸಾಂಸ್ಕೃತಿಕ ಪ್ರಶ್ನೆಗಳು ಹಾಗೂ ರಾಷ್ಟ್ರೀಯ ನೀತಿಗಳ ಅನುಷ್ಠಾನದಲ್ಲಿ ಕೇಂದ್ರ–ರಾಜ್ಯ ಭಿನ್ನಾಭಿಪ್ರಾಯಗಳು ಒಕ್ಕೂಟಾತ್ಮಕ ಸಂಬಂಧಗಳ ಮೇಲೆ ಪರಿಣಾಮ ಬೀರುತ್ತಿವೆ. ಜಾಗತೀಕರಣ, ಡಿಜಿಟಲೀಕರಣ, ಹವಾಮಾನ ಬದಲಾವಣೆ, ಸಾರ್ವಜನಿಕ ಆರೋಗ್ಯ, ಆಂತರಿಕ ವಲಸೆ ಮತ್ತು ರಾಷ್ಟ್ರೀಯ ವಿಪತ್ತುಗಳಂತಹ ಹೊಸ ಸವಾಲುಗಳು ಕೂಡ ಕೇಂದ್ರ ಮತ್ತು ರಾಜ್ಯಗಳ ನಡುವಿನ ಹೆಚ್ಚಿನ ಸಮನ್ವಯವನ್ನು ಅಗತ್ಯಗೊಳಿಸುತ್ತಿವೆ.

ಈ ಅಧ್ಯಯನವು ಭಾರತದಲ್ಲಿನ ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯ ಸ್ವರೂಪ, ಸಾಂವಿಧಾನಿಕ ಆಧಾರ, ಪ್ರಮುಖ ಸಂಸ್ಥೆಗಳು ಮತ್ತು ಕಾರ್ಯವಿಧಾನಗಳನ್ನು ವಿಶ್ಲೇಷಿಸುವುದರ ಜೊತೆಗೆ, ಪ್ರಸ್ತುತ ಎದುರಾಗುತ್ತಿರುವ ಸವಾಲುಗಳನ್ನು ಪರಿಶೀಲಿಸುತ್ತದೆ. ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂವಾದವನ್ನು ಬಲಪಡಿಸುವುದು, ಹಣಕಾಸಿನ ವಿಕೇಂದ್ರೀಕರಣವನ್ನು ಸುಧಾರಿಸುವುದು, ಸಾಂವಿಧಾನಿಕ ಸಂಸ್ಥೆಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಖಚಿತಪಡಿಸುವುದು, ರಾಜ್ಯಗಳ ಸ್ವಾಯತ್ತತೆಯನ್ನು ಗೌರವಿಸುವುದು ಮತ್ತು ಸಾಮಾನ್ಯ ರಾಷ್ಟ್ರೀಯ ಗುರಿಗಳಿಗಾಗಿ ಸಹಭಾಗಿತ್ವದ ಆಡಳಿತವನ್ನು ಉತ್ತೇಜಿಸುವುದು, ಭಾರತೀಯ ಒಕ್ಕೂಟ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಅಗತ್ಯವೆಂದು ಅಧ್ಯಯನವು ಸೂಚಿಸುತ್ತದೆ.

Keywords: *ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆ, ಭಾರತೀಯ ಸಂವಿಧಾನ, ಕೇಂದ್ರ–ರಾಜ್ಯ ಸಂಬಂಧಗಳು, ಹಣಕಾಸಿನ ಒಕ್ಕೂಟವಾದ, ಜಿಎಸ್‌ಟಿ ಮಂಡಳಿ, ನೀತಿ ಆಯೋಗ, ರಾಜ್ಯ ಸ್ವಾಯತ್ತತೆ, ಅಂತರ–ರಾಜ್ಯ ಸಂಬಂಧಗಳು.*

ಪೀಠಿಕೆ:

ಭಾರತವು ವಿಶಾಲವಾದ ಭೌಗೋಳಿಕ ವ್ಯಾಪ್ತಿ, ಬಹುಭಾಷಾ ಸಮಾಜ, ವಿವಿಧ ಧರ್ಮಗಳು, ಸಂಸ್ಕೃತಿಗಳು, ಜನಾಂಗಗಳು ಮತ್ತು ಆರ್ಥಿಕ ವೈವಿಧ್ಯತೆಯನ್ನು ಹೊಂದಿರುವ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿದೆ. ಇಂತಹ ವೈವಿಧ್ಯಮಯ ದೇಶವನ್ನು ಪರಿಣಾಮಕಾರಿಯಾಗಿ ಆಡಳಿತ ನಡೆಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಅಧಿಕಾರ, ಜವಾಬ್ದಾರಿ ಮತ್ತು ಸಂಪನ್ಮೂಲಗಳ ಸಮನ್ವಯ ಅತ್ಯಂತ ಅಗತ್ಯವಾಗಿದೆ. ಈ ಅಗತ್ಯವನ್ನು ಪೂರೈಸುವ ಪ್ರಮುಖ ವ್ಯವಸ್ಥೆಯೇ ಒಕ್ಕೂಟ ವ್ಯವಸ್ಥೆ. ಭಾರತೀಯ ಒಕ್ಕೂಟ ವ್ಯವಸ್ಥೆಯ ವಿಶೇಷತೆಯೆಂದರೆ, ಇದು ಸಾಂಪ್ರದಾಯಿಕ ಒಕ್ಕೂಟ ಮಾದರಿಯನ್ನು ನೇರವಾಗಿ ಅನುಸರಿಸದೆ, ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡುವ ಬಲಿಷ್ಠ ಕೇಂದ್ರದೊಂದಿಗೆ ರಾಜ್ಯಗಳಿಗೂ ಸಂವಿಧಾನಾತ್ಮಕ ಸ್ಥಾನಮಾನ ಮತ್ತು ಅಧಿಕಾರಗಳನ್ನು ನೀಡುತ್ತದೆ.

ಭಾರತೀಯ ಸಂವಿಧಾನವು ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರಗಳ ಹಂಚಿಕೆಯನ್ನು ಸ್ಪಷ್ಟವಾಗಿ ನಿರ್ಧರಿಸಿದೆ. ಸಂವಿಧಾನದ ಏಳನೇ ಅನುಸೂಚಿಯಲ್ಲಿ ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ ಮತ್ತು ಸಮವರ್ತಿ ಪಟ್ಟಿಗಳ ಮೂಲಕ ಶಾಸನಾಧಿಕಾರಗಳನ್ನು ಹಂಚಲಾಗಿದೆ. ಇದರಜೊತೆಗೆ, ಆಡಳಿತಾತ್ಮಕ ಮತ್ತು ಹಣಕಾಸಿನ ಕ್ಷೇತ್ರಗಳಲ್ಲಿಯೂ ಕೇಂದ್ರ ಹಾಗೂ ರಾಜ್ಯಗಳ ಜವಾಬ್ದಾರಿಗಳನ್ನು ನಿರ್ದಿಷ್ಟಪಡಿಸಲಾಗಿದೆ. ಹೀಗಾಗಿ, ಭಾರತೀಯ ಒಕ್ಕೂಟ ವ್ಯವಸ್ಥೆಯು ಕೇವಲ ಅಧಿಕಾರ ಹಂಚಿಕೆಯ ವ್ಯವಸ್ಥೆಯಾಗಿರದೆ, ದೇಶದ ಆಡಳಿತವನ್ನು ವಿವಿಧ ಹಂತಗಳಲ್ಲಿ ನಿರ್ವಹಿಸುವ ವ್ಯವಸ್ಥೆಯಾಗಿದೆ.

ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯಅರ್ಥ:

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಸಂವಿಧಾನಾತ್ಮಕ ಅಧಿಕಾರಗಳ ವ್ಯಾಪ್ತಿಯಲ್ಲಿ ಪರಸ್ಪರ ಸಹಕಾರ, ಸಮನ್ವಯ ಮತ್ತು ಸಂವಾದದ ಮೂಲಕ ಸಾಮಾನ್ಯರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಗುರಿಗಳನ್ನು ಸಾಧಿಸುವ ವಿಧಾನವನ್ನು ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆ ಎಂದು ಕರೆಯಬಹುದು.

ಇಂದಿನ ಆಡಳಿತದಲ್ಲಿ ಅನೇಕ ವಿಷಯಗಳು ಒಂದೇ ಸರ್ಕಾರದ ವ್ಯಾಪ್ತಿಯಲ್ಲಿ ಪರಿಹರಿಸಲಾಗುವುದಿಲ್ಲ. ಉದಾಹರಣೆಗೆ, ಆರೋಗ್ಯ, ಶಿಕ್ಷಣ, ಬಡತನ ನಿರ್ಮೂಲನೆ, ಕೃಷಿ, ಪರಿಸರ ಸಂರಕ್ಷಣೆ, ಮೂಲಸೌಕರ್ಯ, ವಿಪತ್ತು ನಿರ್ವಹಣೆ, ಆಂತರಿಕ ವಲಸೆ ಮತ್ತು ಆರ್ಥಿಕ ಅಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಹಯೋಗ ಅಗತ್ಯವಾಗುತ್ತದೆ. ಆದ್ದರಿಂದ, ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧವು ಕೇವಲ ಅಧಿಕಾರದ ಹಂಚಿಕೆಯ ಮೇಲೆ ಆಧಾರಿತವಾಗಿರದೆ, ಸಹಭಾಗಿತ್ವದ ಆಡಳಿತದ ಮೇಲೆ ಆಧಾರಿತವಾಗುವುದು ಅಗತ್ಯವಾಗಿದೆ.

ಭಾರತೀಯ ಸಂದರ್ಭದಲ್ಲಿ ಸಹಕಾರಾತ್ಮಕ ಒಕ್ಕೂಟವಾದದ ಬೆಳವಣಿಗೆ:

ಸ್ವಾತಂತ್ರ್ಯಾ ನಂತರದ ಆರಂಭಿಕ ಅವಧಿಯಲ್ಲಿ ದೇಶದ ಏಕತೆ, ಭದ್ರತೆ ಮತ್ತು ಆರ್ಥಿಕ ಯೋಜನೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದ್ದರಿಂದ ಕೇಂದ್ರ ಸರ್ಕಾರದ ಪಾತ್ರ ತುಲನಾತ್ಮಕವಾಗಿ ಪ್ರಬಲವಾಗಿತ್ತು. ಆದರೆ ಕಾಲಕ್ರಮೇಣ ರಾಜ್ಯಗಳ ರಾಜಕೀಯ, ಆರ್ಥಿಕ ಮತ್ತು ಆಡಳಿತಾತ್ಮಕ ಮಹತ್ವ ಹೆಚ್ಚಾಯಿತು. ಪ್ರಾದೇಶಿಕ ಪಕ್ಷಗಳ ಬೆಳವಣಿಗೆ, ಸಮ್ಮಿಶ್ರ ಸರ್ಕಾರಗಳ ಯುಗ, ಆರ್ಥಿಕ ಉದಾರೀಕರಣ ಮತ್ತು ರಾಜ್ಯಗಳ ಅಭಿವೃದ್ಧಿ ಅಗತ್ಯಗಳು ಕೇಂದ್ರ–ರಾಜ್ಯ ಸಂಬಂಧಗಳಲ್ಲಿ ಹೆಚ್ಚಿನ ಸಂವಾದ ಮತ್ತು ಸಹಕಾರದ ಅಗತ್ಯವನ್ನು ಉಂಟು ಮಾಡಿದವು.

ಈ ಹಿನ್ನೆಲೆಯಲ್ಲಿ ನೀತಿ ಆಯೋಗದಂತಹ ಸಂಸ್ಥೆಗಳು ರಾಜ್ಯಗಳನ್ನು ರಾಷ್ಟ್ರೀಯ ನೀತಿ ರೂಪಿಸುವಿಕೆ ಮತ್ತು ಅಭಿವೃದ್ಧಿ ಚರ್ಚೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳುವ ಉದ್ದೇಶವನ್ನು ಹೊಂದಿವೆ. ಅದೇ ರೀತಿ ಜಿಎಸ್‌ಟಿ ಮಂಡಳಿ ಕೇಂದ್ರ ಮತ್ತು ರಾಜ್ಯಗಳು ತೆರಿಗೆ ನೀತಿಗೆ ಸಂಬಂಧಿಸಿದ

ಪ್ರಮುಖ ನಿರ್ಧಾರಗಳಲ್ಲಿ ಒಟ್ಟಾಗಿ ಕಾರ್ಯನಿರ್ವಹಿಸುವ ವ್ಯವಸ್ಥೆಯನ್ನು ರೂಪಿಸಿದೆ.

ಭಾರತದಲ್ಲಿ ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯ ಪ್ರಮುಖ ಲಕ್ಷಣಗಳು:

- ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಹಕಾರ – ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯ ಮುಖ್ಯ ಲಕ್ಷಣವೆಂದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸುವುದು. ದೇಶದ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ವಿಷಯಗಳಲ್ಲಿ ಎರಡೂ ಸರ್ಕಾರಗಳ ಸಹಭಾಗಿತ್ವ ಅಗತ್ಯ. ಉದಾಹರಣೆಗೆ, ಆರೋಗ್ಯ, ಶಿಕ್ಷಣ, ಕೃಷಿ, ಬಡತನ ನಿರ್ಮೂಲನೆ ಮತ್ತು ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿ ಕಾರ್ಯನಿರ್ವಹಿಸುತ್ತವೆ.
- ಅಧಿಕಾರಗಳ ಸಂವಿಧಾನಾತ್ಮಕ ಹಂಚಿಕೆ – ಭಾರತದ ಸಂವಿಧಾನವು ಸಂವಿಧಾನದ ಏಳನೇ ಅನುಸೂಚಿಯಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರಗಳನ್ನು ಸ್ಪಷ್ಟವಾಗಿ ಹಂಚಿದೆ. ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ, ಸಮವರ್ತಿ ಪಟ್ಟಿ ಈ ಅಧಿಕಾರ ಹಂಚಿಕೆಯು ಎರಡೂ ಸರ್ಕಾರಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಲು ಅವಕಾಶ ನೀಡುತ್ತದೆ.
- ಪರಸ್ಪರ ಅವಲಂಬನೆ – ಕೇಂದ್ರ ಮತ್ತು ರಾಜ್ಯಗಳು ಸಂಪೂರ್ಣವಾಗಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಅನೇಕ ಯೋಜನೆಗಳು ಮತ್ತು ಕಾರ್ಯಕ್ರಮಗಳ ಯಶಸ್ಸಿಗೆ ಎರಡೂ ಸರ್ಕಾರಗಳ ಸಹಕಾರ ಅಗತ್ಯ. ಕೇಂದ್ರವು ನೀತಿ ಮತ್ತು ಹಣಕಾಸಿನ ನೆರವು ನೀಡಬಹುದು; ರಾಜ್ಯಗಳು ಅವುಗಳನ್ನು ಸ್ಥಳೀಯ ಮಟ್ಟದಲ್ಲಿ ಅನುಷ್ಠಾನಗೊಳಿಸುತ್ತವೆ. ಉದಾಹರಣೆಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆ, ಸ್ವಚ್ಛ ಭಾರತ ಅಭಿಯಾನ
- ಹಣಕಾಸಿನ ಸಹಕಾರ – ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಹಣಕಾಸಿನ ಸಹಕಾರ ಬಹಳ ಮುಖ್ಯ. ಕೇಂದ್ರದಿಂದ ರಾಜ್ಯಗಳಿಗೆ ತೆರಿಗೆ ಆದಾಯದ ಹಂಚಿಕೆ, ಅನುದಾನಗಳು, ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣಕಾಸಿನ ನೆರವು ಮುಂತಾದವುಗಳ ಮೂಲಕ ಸಹಾಯ ದೊರೆಯುತ್ತದೆ.
- ತೆರಿಗೆ ಹಂಚಿಕೆ – ಕೇಂದ್ರ ಮತ್ತು ರಾಜ್ಯಗಳ ನಡುವೆ ತೆರಿಗೆ ಆದಾಯವನ್ನು ಹಂಚಿಕೊಳ್ಳುವ ವ್ಯವಸ್ಥೆ ಇದೆ. ಈ ಹಂಚಿಕೆಯಲ್ಲಿ ಹಣಕಾಸು ಆಯೋಗ ಪ್ರಮುಖ ಪಾತ್ರ ವಹಿಸುತ್ತದೆ. ಇದರ ಉದ್ದೇಶ ರಾಜ್ಯಗಳ ಹಣಕಾಸಿನ ಅಗತ್ಯಗಳನ್ನು ಪರಿಗಣಿಸಿ ಸಂಪನ್ಮೂಲಗಳ ಸಮತೋಲನ ಸಾಧಿಸುವುದಾಗಿದೆ.
- ಜಂಟಿ ನೀತಿರೂಪಣೆ – ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮಾತ್ರ ಎಲ್ಲ ನೀತಿಗಳನ್ನು ನಿರ್ಧರಿಸುವುದಿಲ್ಲ. ರಾಜ್ಯಗಳ ಅಭಿಪ್ರಾಯ ಮತ್ತು ಅಗತ್ಯಗಳನ್ನೂ ಪರಿಗಣಿಸುವ ವ್ಯವಸ್ಥೆಗಳು ಇವೆ. ಇದರಿಂದ ರಾಷ್ಟ್ರೀಯ ಆದ್ಯತೆಗಳು ಮತ್ತು ರಾಜ್ಯಗಳ ಸ್ಥಳೀಯ ಅಗತ್ಯಗಳ ನಡುವೆ ಸಮನ್ವಯ ಸಾಧಿಸಲು ಸಾಧ್ಯವಾಗುತ್ತದೆ.
- ಸಮನ್ವಯದ ಆಡಳಿತ –ದೇಶದ ವಿವಿಧ ಭಾಗಗಳಲ್ಲಿ ಏಕರೂಪವಾದ ರಾಷ್ಟ್ರೀಯ ಗುರಿಗಳನ್ನು ಸಾಧಿಸಲು ಕೇಂದ್ರ ಮತ್ತು ರಾಜ್ಯಗಳ ಆಡಳಿತ ವ್ಯವಸ್ಥೆಗಳ ನಡುವೆ ಸಮನ್ವಯ ಅಗತ್ಯ. ಉದಾಹರಣೆಗೆ, ವಿಪತ್ತು ನಿರ್ವಹಣೆ, ಸಾಂಕ್ರಾಮಿಕ ರೋಗ ನಿಯಂತ್ರಣ ಮತ್ತು ರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಕೇಂದ್ರ ಹಾಗೂ ರಾಜ್ಯಗಳ ಆಡಳಿತ ಯಂತ್ರಗಳು ಒಟ್ಟಾಗಿ ಕಾರ್ಯನಿರ್ವಹಿಸುತ್ತವೆ.
- ರಾಜ್ಯಗಳ ಸ್ವಾಯತ್ತತೆಗೆ ಗೌರವ – ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳಿಗೆ ಸಂವಿಧಾನ ನೀಡಿರುವ ಅಧಿಕಾರ ಮತ್ತು ಜವಾಬ್ದಾರಿಗಳನ್ನು ಗೌರವಿಸುವುದು ಮುಖ್ಯ. ರಾಜ್ಯಗಳು ತಮ್ಮ ವ್ಯಾಪ್ತಿಯ

ವಿಷಯಗಳಲ್ಲಿ ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳುವ ಅವಕಾಶ ಹೊಂದಿವೆ. ಅದೇ ಸಮಯದಲ್ಲಿ ರಾಷ್ಟ್ರೀಯ ಹಿತಾಸಕ್ತಿಯ ವಿಷಯಗಳಲ್ಲಿ ಕೇಂದ್ರದೊಂದಿಗೆ ಸಹಕರಿಸುತ್ತವೆ. ಆದರೆ ರಾಷ್ಟ್ರೀಯ ತುರ್ತುಪರಿಸ್ಥಿತಿ ಜಾರಿಯಾದ ಸಂದರ್ಭದಲ್ಲಿ ರಾಜ್ಯ ಪಟ್ಟಿಯಲ್ಲಿರುವ ವಿಷಯಗಳ ಮೇಲೆ ಕಾನೂನು ಮಾಡುವ ಅಧಿಕಾರ ಸಂಸತ್ತಿಗೆ ಸಂವಿಧಾನ ನೀಡಿದೆ.

- ರಾಷ್ಟ್ರೀಯ ಏಕತೆ ಮತ್ತು ಪ್ರಾದೇಶಿಕ ವೈವಿಧ್ಯತೆಯ ಸಮನ್ವಯತೆ – ಭಾರತವು ಭಾಷೆ, ಸಂಸ್ಕೃತಿ, ಆರ್ಥಿಕತೆ ಮತ್ತು ಭೌಗೋಳಿಕ ಪರಿಸ್ಥಿತಿಯಲ್ಲಿ ಬಹಳ ವೈವಿಧ್ಯಮಯವಾಗಿದೆ. ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆ ರಾಷ್ಟ್ರೀಯ ಏಕತೆಯನ್ನು ಕಾಪಾಡಲು, ರಾಜ್ಯಗಳ ವೈವಿಧ್ಯತೆಯನ್ನು ಗೌರವಿಸಲು, ಪ್ರಾದೇಶಿಕ ಅಗತ್ಯಗಳನ್ನು ಪರಿಗಣಿಸಲು ಸಹಾಯ ಮಾಡುತ್ತದೆ.
- ಅಭಿವೃದ್ಧಿಯಲ್ಲಿ ಪಾಲುದಾರಿಕೆ –ಕೇಂದ್ರ ಮತ್ತು ರಾಜ್ಯಗಳು ದೇಶದ ಅಭಿವೃದ್ಧಿಯಲ್ಲಿ ಪಾಲುದಾರರಾಗಿ ಕಾರ್ಯನಿರ್ವಹಿಸುತ್ತವೆ. ಉದಾಹರಣೆಗೆ: ರಸ್ತೆ ಮತ್ತು ಸಾರಿಗೆ, ಶಿಕ್ಷಣ, ಆರೋಗ್ಯ, ಕೃಷಿ, ಕುಡಿಯುವ ನೀರು, ಗ್ರಾಮೀಣ ಅಭಿವೃದ್ಧಿ, ನಗರಾಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಎರಡೂ ಹಂತದ ಸರ್ಕಾರಗಳ ಸಹಕಾರ ಅಗತ್ಯ.
- ವಿವಾದಗಳ ಶಾಂತಿಯುತ ಪರಿಹಾರ –ಕೇಂದ್ರ ಮತ್ತು ರಾಜ್ಯಗಳ ನಡುವೆ ಅಥವಾ ರಾಜ್ಯ–ರಾಜ್ಯಗಳ ನಡುವೆ ಉಂಟಾಗುವ ವಿವಾದಗಳನ್ನು ಸಂವಿಧಾನಾತ್ಮಕ ಸಂಸ್ಥೆಗಳು, ನ್ಯಾಯಾಂಗ ಮತ್ತು ಸಂವಾದದ ಮೂಲಕ ಪರಿಹರಿಸುವ ಪ್ರಯತ್ನ ಮಾಡಲಾಗುತ್ತದೆ. ಇದರಿಂದ ಸಂಘರ್ಷದ ಬದಲು ಚರ್ಚೆ ಮತ್ತು ಸಮನ್ವಯಕ್ಕೆ ಆದ್ಯತೆ ದೊರೆಯುತ್ತದೆ.
- ಅಖಿಲ ಭಾರತ ಸೇವೆಗಳ ಮೂಲಕ ಸಮನ್ವಯತೆ – ಐಎಎಸ್, ಐಪಿಎಸ್, ಐಎಫ್ಎಸ್ ಮುಂತಾದ ಅಖಿಲ ಭಾರತ ಸೇವೆಗಳು ಕೇಂದ್ರ ಮತ್ತು ರಾಜ್ಯಗಳ ಆಡಳಿತ ವ್ಯವಸ್ಥೆಗಳ ನಡುವೆ ಸಂಪರ್ಕವನ್ನು ಬಲಪಡಿಸುತ್ತವೆ. ಇವು ರಾಷ್ಟ್ರೀಯ ಮಟ್ಟದ ಆಡಳಿತಾತ್ಮಕ ಮಾನದಂಡಗಳನ್ನು ರಾಜ್ಯ ಮಟ್ಟದ ಆಡಳಿತದೊಂದಿಗೆ ಸಂಪರ್ಕಿಸಲು ಸಹಾಯ ಮಾಡುತ್ತವೆ.
- ಪರಸ್ಪರ ಜವಾಬ್ದಾರಿತನ – ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳು ತಮ–ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವುದರ ಜೊತೆಗೆ, ಪರಸ್ಪರ ಸಹಕಾರಕ್ಕೂ ಬದ್ಧವಾಗಿರುತ್ತವೆ. ಒಂದು ಸರ್ಕಾರದ ಯಶಸ್ಸು ಮತ್ತೊಂದು ಸರ್ಕಾರದ ಸಹಕಾರದ ಮೇಲೂ ಅವಲಂಬಿತವಾಗಿರುವ ಅನೇಕ ಕ್ಷೇತ್ರಗಳಿವೆ ಎಂದು ಹೇಳಬಹುದು.

ಭಾರತದಲ್ಲಿ ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ಪ್ರಮುಖ ಸಂಸ್ಥೆಗಳು:

- ಅಂತರರಾಜ್ಯ ಮಂಡಳಿ ಅಂತರರಾಜ್ಯ ಮಂಡಳಿಯು ಭಾರತದಲ್ಲಿ ಕೇಂದ್ರ–ರಾಜ್ಯ ಮತ್ತು ರಾಜ್ಯ–ರಾಜ್ಯ ಸಂಬಂಧಗಳಲ್ಲಿ ಸಮನ್ವಯವನ್ನು ಉತ್ತೇಜಿಸುವ ಸಂವಿಧಾನಾತ್ಮಕ ವ್ಯವಸ್ಥೆಯಾಗಿದೆ. ಕೇಂದ್ರ ಮತ್ತು ರಾಜ್ಯಗಳ ನಡುವಿನ ಚರ್ಚೆ, ಸಮನ್ವಯ ಮತ್ತು ಸಹಕಾರಕ್ಕೆ ಪ್ರಮುಖ ವೇದಿಕೆಯಾಗಿದೆ. ಇದರ ಮೂಲಕ ಕೇಂದ್ರ–ರಾಜ್ಯ ಹಾಗೂ ರಾಜ್ಯಗಳ ವಿವಾದಗಳನ್ನು ಚರ್ಚೆ ಮತ್ತು ವಿಚಾರಣೆಯ ಮೂಲಕ ಪರಿಹರಿಸಲು ಸಹಾಯ ಮಾಡುವುದು, ರಾಜ್ಯಗಳ ನಡುವಿನ ಸಾಮಾನ್ಯ ಹಿತಾಸಕ್ತಿಯ ವಿಷಯಗಳನ್ನು ಪರಿಶೀಲಿಸಿ ಚರ್ಚಿಸುವುದು, ಕೇಂದ್ರ ಮತ್ತು ರಾಜ್ಯಗಳ ನೀತಿಗಳು ಮತ್ತು ಕಾರ್ಯಗಳ ಉತ್ತಮ ಸಮನ್ವಯಕ್ಕಾಗಿ ಮಾರ್ಗಗಳನ್ನು ಸೂಚಿಸುವುದು, ಕೇಂದ್ರ ಮತ್ತು ರಾಜ್ಯಗಳು ಪರಸ್ಪರ ಅಭಿಪ್ರಾಯ ವಿನಿಮಯ ಮಾಡಿಕೊಳ್ಳಬಹುದು.
- ಸರಕು ಮತ್ತು ಸೇವಾ ತೆರಿಗೆ (ಜಿಎಸ್ಟಿ) ಮಂಡಳಿ – ಸರಕು ಮತ್ತು ಸೇವಾ ತೆರಿಗೆ ಮಂಡಳಿ ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯ ಪ್ರಮುಖ ಉದಾಹರಣೆಯಾಗಿದೆ,

ಇದರಲ್ಲಿ ಕೇಂದ್ರ ಮತ್ತು ರಾಜ್ಯಗಳ ಪ್ರತಿನಿಧಿಗಳು ಭಾಗವಹಿಸುತ್ತಾರೆ. ಜಿಎಸ್‌ಟಿ ದರಗಳು, ದರಗಳ ವರ್ಗೀಕರಣ, ವಿನಾಯಿತಿಗಳು, ಜಿಎಸ್‌ಟಿಗೆ ಸಂಬಂಧಿಸಿದ ಮಾದರಿ ಕಾನೂನುಗಳು ಮತ್ತು ತೆರಿಗೆಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿ ನಿರ್ಧಾರ ಕೈಗೊಳ್ಳುತ್ತವೆ.

- ಹಣಕಾಸು ಆಯೋಗ –ಕೇಂದ್ರ ಮತ್ತು ರಾಜ್ಯಗಳ ನಡುವಿನ ತೆರಿಗೆ ಆದಾಯ ಹಂಚಿಕೆ ಹಾಗೂ ರಾಜ್ಯಗಳಿಗೆ ನೀಡುವ ಅನುದಾನಗಳ ಕುರಿತು ಶಿಫಾರಸು ಮಾಡುತ್ತದೆ. ಇದು ಹಣಕಾಸಿನ ಸಮತೋಲನವನ್ನು ಸಾಧಿಸಲು ಸಹಾಯ ಮಾಡುತ್ತದೆ.
- ನೀತಿ ಆಯೋಗ –ಕೇಂದ್ರ ಮತ್ತು ರಾಜ್ಯಗಳ ನಡುವೆ ನೀತಿ ಆಯೋಗವು ಸಹಕಾರ ಹಾಗೂ ಅಭಿವೃದ್ಧಿ ಸಂಬಂಧಿತ ಸಂವಾದಕ್ಕೆ ವೇದಿಕೆಯನ್ನು ಒದಗಿಸುತ್ತದೆ. ಬಲಿಷ್ಟ ರಾಜ್ಯಗಳು ಬಲಿಷ್ಟ ರಾಷ್ಟ್ರವನ್ನು ನಿರ್ಮಿಸುತ್ತವೆ ಎಂಬ ತತ್ವದ ಆಧಾರದ ಮೇಲೆ, ರಾಷ್ಟ್ರೀಯ ಅಭಿವೃದ್ಧಿ ಕಾರ್ಯಸೂಚಿಯತ್ತ ಕೆಲಸ ಮಾಡಲು ರಾಜ್ಯಗಳನ್ನು 'ಟೀಮ್ ಇಂಡಿಯಾ' ಆಗಿ ಒಗ್ಗೂಡಿಸುವ ಮೂಲಕ ಭಾರತ ಸರ್ಕಾರಕ್ಕೆ ನೀತಿ ಆಯೋಗವು ಒಂದು ಪ್ರಮುಖ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಈ ನಿಟ್ಟಿನಲ್ಲಿ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳೊಂದಿಗೆ ನಿರಂತರ ಸಂಪರ್ಕ ಹಾಗೂ ರಚನಾತ್ಮಕ ಬೆಂಬಲ ಉಪಕ್ರಮಗಳ ಮೂಲಕ ಸಹಕಾರಿ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಲು ನೀತಿ ಆಯೋಗವು ಹಲವಾರು ಕ್ರಮಗಳನ್ನು ಕೈಗೊಂಡಿದೆ.

ಭಾರತದಲ್ಲಿ ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯ ಉದಾಹರಣೆಗಳು:

- ಆರೋಗ್ಯಕ್ಷೇತ್ರ –ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರ ರೂಪಿಸುವ ಸಂದರ್ಭದಲ್ಲಿ, ಅವುಗಳನ್ನು ರಾಜ್ಯ ಸರ್ಕಾರಗಳ ಆರೋಗ್ಯ ವ್ಯವಸ್ಥೆಗಳ ಮೂಲಕ ಜನರಿಗೆ ತಲುಪಿಸುವುದು, ಇದು ಸಮವರ್ತಿ ಪಟ್ಟಿಯಲ್ಲಿರುವುದರಿಂದ ಕೇಂದ್ರ ಮತ್ತು ರಾಜ್ಯಗಳು ಎರಡೂ ಕಾನೂನು ಹಾಗೂ ನೀತಿರೂಪಣೆಯಲ್ಲಿ ಪಾತ್ರವಹಿಸುತ್ತವೆ. ಹೀಗಾಗಿ ಕೇಂದ್ರದ ನೀತಿ ಮತ್ತು ರಾಜ್ಯದ ಅನುಷ್ಠಾನ ಪರಸ್ಪರ ಸಂಬಂಧ ಹೊಂದಿವೆ. ಉದಾಹರಣೆಗೆ ಕೋವಿಡ್–19 ವೈರಸ್ ರೋಗದ ವಿರುದ್ಧ ದೇಶದ ಜನರನ್ನು ರಕ್ಷಿಸಲು ಲಸಿಕಾ ಕಾರ್ಯಕ್ರಮ ಯೋಜನೆ ಯಶಸ್ವಿಗೆ ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆ ಕಾರಣವಾಗಿದೆ
- ಶಿಕ್ಷಣ ಕ್ಷೇತ್ರ – ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿರುವುದರಿಂದ ಕೇಂದ್ರ ಮತ್ತು ರಾಜ್ಯಗಳು ಎರಡೂ ಕಾನೂನು ಹಾಗೂ ನೀತಿರೂಪಣೆಯಲ್ಲಿ ಪಾತ್ರವಹಿಸುತ್ತವೆ. ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ಹಂತ ಮತ್ತು ಉನ್ನತ ಶಿಕ್ಷಣದ ವಿವಿಧ ಕಾರ್ಯಕ್ರಮಗಳಲ್ಲಿ ಎರಡೂ ಸರ್ಕಾರಗಳ ಸಹಕಾರ ಅಗತ್ಯ.
  ಉದಾಹರಣೆಗೆ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ, ಮಧ್ಯಾಹ್ನದ ಬಿಸಿಯೂಟ ಯೋಜನೆ, ಅಂಗನವಾಡಿ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ ಕಾರ್ಯಕ್ರಮ ಮುಂತಾದವು ಯಶಸ್ವಿಗೆ ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆ ಕಾರಣವಾಗಿದೆ
- ವಿಪತ್ತು ನಿರ್ವಹಣೆ – ಪ್ರವಾಹ, ಬರಗಾಲ, ಚಂಡಮಾರುತ ಅಥವಾ ಇತರ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಹಾರ, ಪುನರ್ವಸತಿ ಮತ್ತು ಹಣಕಾಸಿನ ನೆರವಿಗಾಗಿ ಒಟ್ಟಾಗಿ ಕಾರ್ಯನಿರ್ವಹಿಸುತ್ತವೆ.
- ಮೂಲಸೌಕರ್ಯ ಅಭಿವೃದ್ಧಿ –ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಗ್ರಾಮೀಣ ರಸ್ತೆಗಳ ನಿರ್ಮಾಣ, ರೈಲ್ವೆ ನಿಲ್ದಾಣ ಹಾಗೂ ರೈಲ್ವೆ ಹಳಿಗಳ ನಿರ್ಮಾಣ, ಹೊಸ ರೈಲ್ವೆಗಳ ಕೊಡುಗೆ, ಬಂದರುಗಳ ಅಭಿವೃದ್ಧಿ, ವಿದ್ಯುತ್ ಮತ್ತು ನಗರಾಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಂಯೋಜಿತ ಪ್ರಯತ್ನ ಅಗತ್ಯವಾಗುತ್ತದೆ.

ಭಾರತದಲ್ಲಿ ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯ ಮಹತ್ವ :

- ರಾಷ್ಟ್ರೀಯ ಏಕತೆಯನ್ನು ಬಲಪಡಿಸುತ್ತದೆ.
- ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಘರ್ಷವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.
- ರಾಜ್ಯಗಳ ಸ್ಥಳೀಯ ಅಗತ್ಯಗಳನ್ನು ರಾಷ್ಟ್ರೀಯ ನೀತಿಗಳೊಂದಿಗೆ ಹೊಂದಾಣಿಕೆ ಮಾಡುತ್ತದೆ.
- ದೇಶದ ಸಮತೋಲನದ ಅಭಿವೃದ್ಧಿಗೆ ನೆರವಾಗುತ್ತದೆ.
- ಸಂಪನ್ಮೂಲಗಳ ಉತ್ತಮ ಬಳಕೆಗೆ ಸಹಾಯ ಮಾಡುತ್ತದೆ.
- ನೀತಿಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಅವಕಾಶ ನೀಡುತ್ತದೆ.
- ರಾಜ್ಯಗಳಿಗೆ ರಾಷ್ಟ್ರೀಯ ಆಡಳಿತದಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಹೆಚ್ಚಿಸುತ್ತದೆ.

ಭಾರತದಲ್ಲಿ ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯ ಉದಯೋನ್ಮುಖ ಸವಾಲುಗಳು:

ಭಾರತವು ಒಕ್ಕೂಟ ವ್ಯವಸ್ಥೆಯ ಲಕ್ಷಣಗಳನ್ನು ಹೊಂದಿರುವ ಸಂವಿಧಾನಾತ್ಮಕ ವ್ಯವಸ್ಥೆಯಾಗಿದ್ದು, ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ, ಹಣಕಾಸು ಮತ್ತು ಆಡಳಿತಾತ್ಮಕ ಜವಾಬ್ದಾರಿಗಳ ಹಂಚಿಕೆಇದೆ. ಆದರೆ ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ, ತಾಂತ್ರಿಕ ಮತ್ತು ರಾಜಕೀಯ ಪರಿಸ್ಥಿತಿಗಳಿಂದ ಭಾರತದ ಮುಂದೆ ಹಲವು ಹೊಸ ಅಥವಾ ಉದಯೋನ್ಮುಖ ಸವಾಲುಗಳು ಕಾಣಿಸಿಕೊಂಡಿವೆ.

- ಕೇಂದ್ರ ರಾಜ್ಯಗಳ ಅಧಿಕಾರದ ಸಂಘರ್ಷ –ಕೇಂದ್ರ ಮತ್ತು ರಾಜ್ಯಗಳ ನಡುವೆಯಾವ ಸರ್ಕಾರಕ್ಕೆ ಯಾವ ವಿಷಯದಲ್ಲಿ ಹೆಚ್ಚಿನ ಅಧಿಕಾರ ಇರಬೇಕು ಎಂಬ ಬಗ್ಗೆ ಭಿನ್ನಾಭಿಪ್ರಾಯಗಳು ಉಂಟಾಗಬಹುದು. ಕೇಂದ್ರ ಮತ್ತು ರಾಜ್ಯಗಳ ಶಾಸನಾಧಿಕಾರಗಳ ನಡುವೆ ಸಂಘರ್ಷ, ಸಮವರ್ತಿ ಪಟ್ಟಿಯ ವಿಷಯಗಳಲ್ಲಿ ಭಿನ್ನ ನಿಲುವುಗಳು, ಕೇಂದ್ರದ ಕಾನೂನುಗಳು ಮತ್ತು ರಾಜ್ಯಗಳ ನೀತಿಗಳ ನಡುವೆ ಹೊಂದಾಣಿಕೆಯ ಸಮಸ್ಯೆ, ರಾಜ್ಯಗಳ ಸ್ವಾಯತ್ತತೆಯ ಕುರಿತು ಚರ್ಚೆ, ಇದರ ಪರಿಣಾಮದಿಂದಾಗಿ ಕೇಂದ್ರ–ರಾಜ್ಯ ಸಂಬಂಧಗಳಲ್ಲಿ ಒತ್ತಡ ಉಂಟಾಗಿ ನೀತಿಗಳ ಅನುಷ್ಠಾನ ನಿಧಾನವಾಗಬಹುದು.
- ಹಣಕಾಸಿನ ಸ್ವಾಯತ್ತತೆಯ ಸವಾಲು –ರಾಜ್ಯ ಸರ್ಕಾರಗಳಿಗೆ ಶಿಕ್ಷಣ, ಆರೋಗ್ಯ, ಕೃಷಿ, ರಸ್ತೆ, ನೀರು ಮುಂತಾದ ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದ ಖರ್ಚಿನ ಜವಾಬ್ದಾರಿ ಇದೆ. ಆದರೆ ತೆರಿಗೆ ಆದಾಯದ ಪ್ರಮುಖ ಮೂಲಗಳ ಮೇಲೆ ಕೇಂದ್ರದ ಪಾತ್ರವೂ ಬಹಳ ಮಹತ್ವದ್ದಾಗಿದೆ. ಇದರಿಂದಾಗಿ ರಾಜ್ಯಗಳ ಹಣಕಾಸಿನ ಸ್ವಾಯತ್ತತೆ ಕುರಿತು ಪ್ರಶ್ನೆಗಳು, ಕೇಂದ್ರದಿಂದ ರಾಜ್ಯಗಳಿಗೆ ತೆರಿಗೆ ಹಂಚಿಕೆ ಮತ್ತು ಅನುದಾನಗಳ ಬಗ್ಗೆ ಚರ್ಚೆ. ಅಭಿವೃದ್ಧಿಶೀಲ ಮತ್ತು ಹಿಂದುಳಿದ ರಾಜ್ಯಗಳ ಅಗತ್ಯಗಳಲ್ಲಿ ವ್ಯತ್ಯಾಸ. ಕೇಂದ್ರ ಯೋಜನೆಗಳಲ್ಲಿ ರಾಜ್ಯಗಳ ಹಣಕಾಸಿನ ಪಾಲಿನ ಪ್ರಶ್ನೆ. ಜಿಎಸ್‌ಟಿ ನಂತರ ಕೇಂದ್ರ ಮತ್ತು ರಾಜ್ಯಗಳ ತೆರಿಗೆ ವ್ಯವಸ್ಥೆಗಳು ಇನ್ನಷ್ಟು ಪರಸ್ಪರ ಅವಲಂಬಿತವಾಗಿವೆ. ಆದ್ದರಿಂದ ಕೇಂದ್ರ–ರಾಜ್ಯ ಹಣಕಾಸು ಸಹಕಾರವು ಒಕ್ಕೂಟ ವ್ಯವಸ್ಥೆಯ ಪ್ರಮುಖ ಅಂಶವಾಗಿದೆ.
- ರಾಜ್ಯಪಾಲರ ಪಾತ್ರ –ರಾಜ್ಯಪಾಲರು ರಾಜ್ಯದಲ್ಲಿ ಸಂವಿಧಾನಾತ್ಮಕ ಮುಖ್ಯಸ್ಥರಾಗಿದ್ದಾರೆ. ಆದರೆ ರಾಜ್ಯಪಾಲರ ಕೆಲವು ಅಧಿಕಾರಗಳ ಬಳಕೆಯ ಕುರಿತು ಕೇಂದ್ರ–ರಾಜ್ಯ ಸಂಬಂಧಗಳಲ್ಲಿ ಚರ್ಚೆಗಳು ನಡೆಯುತ್ತವೆ. ಅದರಲ್ಲಿ ಮುಖ್ಯವಾಗಿ ಸರ್ಕಾರ ರಚನೆಯ ಸಂದರ್ಭದಲ್ಲಿ ರಾಜ್ಯಪಾಲರ ಪಾತ್ರವು ವಿಧಾನಸಭೆ ಅಂಗೀಕರಿಸಿದ ಮಸೂದೆಗಳಿಗೆ ಸಹಿ ಹಾಕುವ ಕುರಿತು ಕ್ರಮಗಳು, ವಿಧಾನಸಭೆಯ ಅಧಿವೇಶನ ಕರೆಯುವುದು ಅಥವಾ

ಮುಂದೂಡುವುದು, ರಾಷ್ಟ್ರಪತಿ ಆಳ್ವಿಕೆಗೆ ಸಂಬಂಧಿಸಿದ ಶಿಫಾರಸು, ಹೀಗಾಗಿ ರಾಜ್ಯಪಾಲರ ತಟಸ್ಥ ಮತ್ತು ಸಂವಿಧಾನಾತ್ಮಕ ಪಾತ್ರ ಒಕ್ಕೂಟ ವ್ಯವಸ್ಥೆಯ ದೃಷ್ಟಿಯಿಂದ ಮಹತ್ವದ್ದಾಗಿದೆ.

- ಪ್ರಾದೇಶಿಕ ಅಸಮಾನತೆ – ಭಾರತದಎಲ್ಲಾ ರಾಜ್ಯಗಳು ಆರ್ಥಿಕವಾಗಿ ಸಮಾನ ಸ್ಥಿತಿಯಲ್ಲಿಲ್ಲ. ಕೆಲವು ರಾಜ್ಯಗಳಲ್ಲಿ ಕೈಗಾರಿಕಾ ಅಭಿವೃದ್ಧಿ ಹೆಚ್ಚು, ಆದಾಯ ಹೆಚ್ಚಾಗಿದೆ, ಮೂಲಸೌಕರ್ಯ ಉತ್ತಮವಾಗಿದೆ, ಇನ್ನೂ ಕೆಲವು ರಾಜ್ಯಗಳಲ್ಲಿ ಬಡತನ ಹೆಚ್ಚು, ಕೈಗಾರಿಕೆ ಕಡಿಮೆ, ಮೂಲಸೌಕರ್ಯ ಮತ್ತು ಮಾನವ ಅಭಿವೃದ್ಧಿಯ ಅಗತ್ಯ ಹೆಚ್ಚು. ಆದ್ದರಿಂದ ಸಂಪನ್ಮೂಲಗಳ ಹಂಚಿಕೆಯಲ್ಲಿ ಸಮಾನತೆ ಮತ್ತು ಅಗತ್ಯಾಧಾರಿತ ಹಂಚಿಕೆ ನಡುವೆ ಸಮತೋಲನ ಸಾಧಿಸುವುದು ಸವಾಲಾಗಿದೆ.
- ಅಂತರರಾಜ್ಯ ನದಿ ನೀರಿನ ವಿವಾದ –ನದಿಗಳು ರಾಜ್ಯಗಳ ಗಡಿಗಳನ್ನು ಅನುಸರಿಸುವುದಿಲ್ಲ. ಒಂದು ನದಿಯ ನೀರನ್ನು ಹಲವು ರಾಜ್ಯಗಳು ಬಳಸುವುದರಿಂದ ನೀರಿನ ಹಂಚಿಕೆಕುರಿತು ವಿವಾದಗಳು ಉಂಟಾಗುತ್ತವೆ. ಉದಾಹರಣೆಗಾಗಿ ಕಾವೇರಿ, ಕೃಷ್ಣಾ, ಮಹದಾಯಿ ಮುಂತಾದ ವಿವಾದಗಳು ಕೃಷಿ, ಕುಡಿಯುವ ನೀರು ಮತ್ತು ಕೈಗಾರಿಕೆಗೆ ನೇರವಾಗಿ ಪರಿಣಾಮ ಬೀರುತ್ತವೆ. ಆದ್ದರಿಂದ ಪರಿಣಾಮಕಾರಿ ಅಂತರರಾಜ್ಯ ಸಹಕಾರ ಮತ್ತು ವಿವಾದಗಳ ಪರಿಹಾರ ವ್ಯವಸ್ಥೆ ಅಗತ್ಯ.
  ಉದಾಹರಣೆಗೆ ಕರ್ನಾಟಕ–ಗೋವಾ, ಕರ್ನಾಟಕ–ಆಂಧ್ರ ಪ್ರದೇಶ, ಕರ್ನಾಟಕ–ತಮಿಳುನಾಡು
- ರಾಷ್ಟ್ರೀಯ ಏಕತೆ ಮತ್ತು ಪ್ರಾದೇಶಿಕ ಸ್ವಾಯತ್ತತೆಯ ಸಮತೋಲನ –ಒಕ್ಕೂಟ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಏಕತೆ ಮತ್ತು ರಾಜ್ಯಗಳ ಸ್ವಾಯತ್ತತೆ ಎರಡನ್ನೂ ಸಮತೋಲನಗೊಳಿಸುವುದು ಅಗತ್ಯ. ಕೇಂದ್ರವು ಹೆಚ್ಚು ಅಧಿಕಾರ ಕೇಂದ್ರೀಕರಿಸಿದರೆ ರಾಜ್ಯಗಳ ಸ್ವಾಯತ್ತತೆ ಕುರಿತು ಪ್ರಶ್ನೆಗಳು ಏಳಬಹುದು. ರಾಜ್ಯಗಳು ಅತಿಯಾಗಿ ಸ್ವಾಯತ್ತತೆಯನ್ನು ಒತ್ತಾಯಿಸಿದರೆ ರಾಷ್ಟ್ರೀಯ ಮಟ್ಟದ ಸಮನ್ವಯ ಕಷ್ಟವಾಗಬಹುದು.
- ಜಾಗತೀಕರಣದ ಪರಿಣಾಮ –ಜಾಗತೀಕರಣದಿಂದ ರಾಜ್ಯಗಳ ಆರ್ಥಿಕತೆ ಜಾಗತಿಕ ಮಾರುಕಟ್ಟೆಯೊಂದಿಗೆ ಹೆಚ್ಚು ಸಂಪರ್ಕ ಹೊಂದುತ್ತಿದೆ. ಇದರಿಂದಾಗಿ ವಿದೇಶಿ ಹೂಡಿಕೆ ಆಕರ್ಷಿಸುವ ಸ್ಪರ್ಧೆ, ಕೈಗಾರಿಕಾ ನೀತಿಗಳ ವ್ಯತ್ಯಾಸ, ಉದ್ಯೋಗ ಮತ್ತು ವ್ಯಾಪಾರ ನೀತಿಗಳು, ನೈಸರ್ಗಿಕ ಸಂಪನ್ಮೂಲಗಳ ಬಳಕೆ, ಮುಂತಾದ ವಿಷಯಗಳಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಹೊಸ ರೀತಿಯ ಸಮನ್ವಯದ ಅಗತ್ಯ ಉಂಟಾಗಿದೆ.
  ಉದಾಹರಣೆಗೆ ಕರ್ನಾಟಕದ ಬೆಂಗಳೂರು, ತೆಲಂಗಾಣದ ಹೈದರಾಬಾದ, ಮಹಾರಾಷ್ಟ್ರದ ಮುಂಬೈ, ಗುಜರಾತಿನ ಅಹಮದಾಬಾದ ಮುಂತಾದ ನಗರಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಸ್ಪರ್ಧೆಯನ್ನು ನೋಡಬಹುದು.
- ಆಂತರಿಕ ಭದ್ರತೆ – ಭಯೋತ್ಪಾದನೆ, ಸೈಬರ್ ಅಪರಾಧ, ಸಂಘಟಿತ ಅಪರಾಧ ಮತ್ತು ಅಂತರರಾಜ್ಯ ಅಪರಾಧಗಳಂತಹ ಸಮಸ್ಯೆಗಳು ಒಂದು ರಾಜ್ಯದ ಗಡಿಯಲ್ಲಿ ಮಾತ್ರ ಸೀಮಿತವಾಗಿರುವುದಿಲ್ಲ. ಆದ್ದರಿಂದ ಕೇಂದ್ರ ಮತ್ತು ರಾಜ್ಯಗಳ ಭದ್ರತಾ ಸಂಸ್ಥೆಗಳ ನಡುವೆ ಪರಿಣಾಮಕಾರಿ ಸಹಕಾರ ಅಗತ್ಯವಾಗುತ್ತದೆ.
- ಸ್ಥಳೀಯ ಸಂಸ್ಥೆಗಳ ಬಲವರ್ಧನೆ –ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಮತ್ತು ಹಣಕಾಸಿನ ಸಂಪನ್ಮೂಲಗಳನ್ನು ಸಮರ್ಪಕವಾಗಿ ನೀಡುವುದು ಮತ್ತೊಂದು ಸವಾಲಾಗಿದೆ. ಕೇಂದ್ರ–ರಾಜ್ಯ ಸಂಬಂಧಗಳ ಜೊತೆಗೆ ಕೇಂದ್ರ–ರಾಜ್ಯ–ಸ್ಥಳೀಯ ಸರ್ಕಾರಗಳ ನಡುವೆ ಅಧಿಕಾರದ ಸಮನ್ವಯವೂ ಅಗತ್ಯವಾಗಿದೆ.
- ಸಹಕಾರಿ ಮತ್ತು ಸ್ಪರ್ಧಾತ್ಮಕ ಒಕ್ಕೂಟ ವ್ಯವಸ್ಥೆ – ಇಂದಿನ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳು ಕೇವಲ ಕೇಂದ್ರದೊಂದಿಗೆ ಸಹಕರಿಸುವುದಷ್ಟೇ ಅಲ್ಲದೆ, ಹೂಡಿಕೆ, ಕೈಗಾರಿಕೆ, ಪ್ರವಾಸೋದ್ಯಮ ಮತ್ತು ಅಭಿವೃದ್ಧಿಯಲ್ಲಿ ಪರಸ್ಪರ ಸ್ಪರ್ಧಿಸುತ್ತವೆ. ಇದು ಅಭಿವೃದ್ಧಿಗೆ ಉತ್ತೇಜನ

ನೀಡಬಹುದು. ಆದರೆ ರಾಜ್ಯಗಳ ನಡುವೆ ಅತಿಯಾದ ಸ್ಪರ್ಧೆ ಉಂಟಾದರೆ ಪ್ರಾದೇಶಿಕ ಅಸಮಾನತೆ ಹೆಚ್ಚುವ ಸಾಧ್ಯತೆಯೂ ಇದೆ.

ಉಪಸಂಹಾರ:

ಒಕ್ಕೂಟ ವ್ಯವಸ್ಥೆಯ ಯಶಸ್ಸು ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಹಕಾರ, ಪರಸ್ಪರ ಗೌರವ ಮತ್ತು ಸಂವಿಧಾನಾತ್ಮಕ ಮಿತಿಗಳ ಪಾಲನೆಯ ಮೇಲೆ ಅವಲಂಬಿತವಾಗಿದೆ. ಹಣಕಾಸಿನ ಹಂಚಿಕೆ, ಪ್ರಾದೇಶಿಕ ಅಸಮಾನತೆ, ನದಿ ನೀರು, ರಾಜ್ಯಪಾಲರ ಪಾತ್ರ, ಪ್ರಾದೇಶಿಕತೆ, ಜಾಗತೀಕರಣ ಮತ್ತು ತಂತ್ರಜ್ಞಾನ ಮುಂತಾದವು ಇಂದಿನ ಪ್ರಮುಖ ಉದಯೋನ್ಮುಖ ಸವಾಲುಗಳಾಗಿವೆ. ಆದ್ದರಿಂದ "ಸಹಕಾರದ ಮೂಲಕ ಒಕ್ಕೂಟೀಯತೆ" (Cooperative Federalism) ಮತ್ತು ಅಗತ್ಯವಿರುವಲ್ಲಿ "ಸ್ಪರ್ಧಾತ್ಮಕ ಒಕ್ಕೂಟೀಯತೆ" (Competitive Federalism) ಎರಡನ್ನೂ ಸಮತೋಲನದಿಂದ ಬಳಸುವುದು ಪರಿಣಾಮಕಾರಿ ಆಡಳಿತಕ್ಕೆ ಮುಖ್ಯವಾಗಿದೆ.

ಪರಾಮರ್ಶನ ಗ್ರಂಥಗಳು :

1. ಡಾ. ಕೆ.ಎಮ್.ಸುರೇಶ – ಭಾರತದ ಸಂವಿಧಾನ— ವಿಶೇಷವಾಗಿ 245–263, 268–293, 280 ಮತ್ತು 282 ವಿಧಿಗಳು
2. ಡಾ. ಗಂಗಾಧರ್ ಪಿ.ಎಸ್. – ಭಾರತ ಸಂವಿಧಾನ ಮತ್ತು ರಾಜಕೀಯ, ಪುಟ ಸಂಖ್ಯೆ 123 ರಿಂದ 137

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ರಾಜ್ಯಪಾಲರ ಸಂವಿಧಾನಾತ್ಮಕ ಅಧಿಕಾರಗಳು ಮತ್ತು ವಿವಾದಗಳು

ರಾಜು ಬಜಂತ್ರಿ
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಥಣಿ
Corresponding Author–ರಾಜು ಬಜಂತ್ರಿ
DOI - 10.5281/zenodo.23528678

ಲೇಖನದ ಸಂಕ್ಷಿಪ್ತ ವಿವರಣೆ:

ಸಂಯುಕ್ತ ವ್ಯವಸ್ಥೆಯ ಅಳವಡಿಕೆಯೊಂದಿಗೆ ದೇಶಕ್ಕೆ ಸಂಸದೀಯ ಪದ್ಧತಿಯ ಸರ್ಕಾರವನ್ನು ರಚಿಸಿರುವುದು ಸ್ವತಂತ್ರ ಹೋರಾಟಗಾರರು, ಸಂವಿಧಾನದ ನಿರ್ಮಾತೃಗಳು ಭವಿಷ್ಯದ ಭಾರತದ ಬಗ್ಗೆ ಅವರು ಕಟ್ಟಿಕೊಂಡಿದ್ದ ಕನಸುಗಳಿಗೆ ಸಾಕ್ಷಿ. ಸಂಸದೀಯ ವ್ಯವಸ್ಥೆಯ ಅಳವಡಿಕೆಯ ಬಗ್ಗೆ ಸಂವಿಧಾನ ರಚನಾ ಸಭೆಯಲ್ಲಿ ಸುದೀರ್ಘ ಸಮಾಲೋಚನೆಯ ನಂತರ ಭಾರತಕ್ಕೆ ಸಂಸದೀಯ ಸರ್ಕಾದ ಮಾದರಿಯನ್ನು ಅಳವಡಿಸಿಕೊಂಡಿದ್ದು, ಸಂಸದೀಯ ವ್ಯವಸ್ಥೆಯ ರಚನೆಯು ಎರಡು ವಿಧದ ಕಾರ್ಯಾಂಗದ ವ್ಯವಸ್ಥೆಯನ್ನು ಹೊಂದಿದ್ದು, ಒಂದು ನಾಮ ಮಾತ್ರ ಕಾರ್ಯಾಂಗವಾದರೆ ಮತ್ತೋಂದು ನೈಜಕಾರ್ಯಾಂಗ. ಒಕ್ಕೂಟ ವ್ಯವಸ್ಥೆಯ ಅಡಿಯಲ್ಲಿ ಪ್ರಸ್ತುತ ಭಾರತದಲ್ಲಿ 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳಿದ್ದು ಕೇಂದ್ರದಲ್ಲಿ ನಾಮಮಾತ್ರ ಕಾರ್ಯಾಂಗವಾಗಿ ರಾಷ್ಟ್ರಪತಿಗಳು ಕಾರ್ಯ ನಿರ್ವಹಿಸಿದರೆ, ಪ್ರಧಾನ ಮಂತ್ರಿಗಳ ನೇತೃತ್ವದಲ್ಲಿರುವ ಮಂತ್ರಿಮಂಡಳ ನೈಜ ಕಾರ್ಯಾಂಗವಾಗಿ ಕಾರ್ಯನಿರ್ವಹಿಸುತ್ತದೆ. ಅದೇ ರೀತಿಯಲ್ಲಿ ರಾಜ್ಯಗಳಲ್ಲಿ ಕೇಂದ್ರದ ನಿಯೋಗಿಯಾಗಿರುವ ರಾಜ್ಯಪಾಲರು ನಾಮ ಮಾತ್ರ ಕಾರ್ಯಾಂಗವಾದರೆ, ನೈಜ ಕಾರ್ಯಾಂಗವಾಗಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿರುವ ಮಂತ್ರಿಮಂಡಳ ಕಾರ್ಯ ನಿರ್ವಹಿಸುತ್ತದೆ. ಬಹು ಪಕ್ಷ ಪದ್ಧತಿ ವ್ಯವಸ್ಥೆಯನ್ನು ಹೊಂದಿರುವ ಭಾರತದಲ್ಲಿ ಕೇಂದ್ರ ಸರ್ಕಾರದ ಬೇರೆ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯ ಸರ್ಕಾರಗಳನ್ನು ರಾಜ್ಯಪಾಲರ ಮುಖಾಂತರ ಇಕ್ಕಟ್ಟಿಗೆ ಸಿಲುಕಿಸುವುದು, ಸಂವಿಧಾನದ ರಕ್ಷಕರಾಗಬೇಕಾದ ರಾಜ್ಯಪಾಲರು ಸಂವಿಧಾನಿಕ ಮುಖ್ಯಸ್ಥರಾಗಿ ಹುದ್ದೆಯನ್ನು ಹೊಂದಿದ್ದರು, ಸರ್ಕಾರದ ಮುಖ್ಯಸ್ಥರಂತೆ ವರ್ತಿಸುತ್ತಾ ಚುನಾಯಿತ ಸರ್ಕಾರಕ್ಕೆ ಅಡ್ಡಿಪಡಿಸಿ ಸಂವಿಧಾನಿಕ ಬಿಕ್ಕಟ್ಟುಗಳಿಗೆ ಕಾರಣರಾಗುತ್ತಿರುವು ವಿಪರ್ಯಾಸ.

ಪ್ರಸ್ತಾವನೆ:

ಬಿ.ಜಿಖೇರ್‌ರವರು ಅಭಿಪ್ರಾಯಪಟ್ಟಂತೆ "ರಾಜ್ಯಪಾಲರು ಒಳ್ಳೆಯ ವ್ಯಕ್ತಿಯಾದರೆ ರಾಜ್ಯಕ್ಕೆ ಅನೇಕ ಒಳ್ಳೆಯ ಕಾರ್ಯಗಳನ್ನು ಮಾಡಬಹುದು, ಕೆಟ್ಟ ವ್ಯಕ್ತಿಯಾದರೆ ಅನೇಕ ಕೆಟ್ಟ ಕಾರ್ಯಗಳನ್ನು ಮಾಡಬಹುದು"(1). ಭಾರತದ ರಾಜಕೀಯ ಇತಿಹಾಸದಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆಯಿಂದ ಇಲ್ಲಿಯವರೆಗೂ ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಸರ್ಕಾರವಿದ್ದಾಗಕೇಂದ್ರ ಮತ್ತುರಾಜ್ಯದ ಸಂಬಂಧಗಳು ಪರಸ್ಪರ ಹೊಂದಾಣಿಕೆಯಿಂದ ಇರುವುದು ಮತ್ತು ವಿಭಿನ್ನ ಪಕ್ಷಗಳ ಸರ್ಕಾರಗಳಿದ್ದಾಗ ಸಂಬಂಧಗಳು ವೈಮನಸ್ಸಿನಿಂದ ಕೂಡಿರುವುದು ಸಾಮಾನ್ಯ ಸಂಗತಿ ಎಂಬಂತಾಗಿದ್ದು, ಕೇಂದ್ರ ಮತ್ತು ರಾಜ್ಯಗಳ ಮಧ್ಯೆ ಸಮನ್ವಯಕಾರರಾಗಿ ಕಾರ್ಯವನ್ನು ನಿರ್ವಹಿಸಬೇಕಾದ ಮತ್ತು ರಾಜ್ಯದ ಸಂವಿಧಾನಿಕ ಮುಖ್ಯಸ್ಥರಾಗಿ ರಾಜ್ಯದ ಅಭಿವೃದ್ಧಿಗೆ ಮಾರ್ಗದರ್ಶಕರಾಗಬೇಕಿದ್ದ, ರಾಜ್ಯಪಾಲರು

ಕೇಂದ್ರ ಸರ್ಕಾರದ ಅಣತಿಯಂತೆ ವರ್ತಿಸುತ್ತಾ ಪ್ರಸ್ತುತ ಅನೇಕ ರಾಜ್ಯಗಳಲ್ಲಿ ಮುಖ್ಯಮಂತ್ರಿ ನೇತೃತ್ವದಮಂತ್ರಿಮಂಡಳದ ಅಧಿಕಾರ ನಿರ್ವಹಣೆಗೆ ತಡೆಯೊಡ್ಡುತ್ತಾ, ಶಾಸನ ಸಭೆಗಳಲ್ಲಿ ಪಾಸಾದ ಮಸೂದೆಗಳಿಗೆ ಒಪ್ಪಿಗೆಯನ್ನು ನೀಡದೆ, ತಿರಸ್ಕಾರವನ್ನು ಮಾಡದೇ ಅಥವಾ ರಾಷ್ಟ್ರಪತಿಗಳ ಅವಗಾಹಣೆಗೆ ಮಸೂದೆಗಳನ್ನು ಕಳುಹಿಸದೆ ಪ್ರಮುಖ ಮಸೂದೆಗಳು ಕಾನೂನುಗಳಾಗದಂತೆ ತಡೆಯುತ್ತಿರುವುದು ಒಂದು ವಿಧದಲ್ಲಿ ಜನತಾ ಪರಮಾಧಿಕಾರಕ್ಕೆ ಮಾಡುತ್ತಿರುವ ಅವಮಾನಕ್ಕೆ ಸಮ.

ಲೇಖನದ ಉದ್ದೇಶಗಳು:

1. ಐತಿಹಾಸಿಕವಾಗಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧದಲ್ಲಿರಾಜ್ಯ ಪಾಲರ ಪಾತ್ರದ ಕುರಿತು ಚರ್ಚಿಸುತ್ತದೆ.
2. ಸಂವಿಧಾನಿಕ ಮುಖ್ಯಸ್ಥರಾದ ರಾಜ್ಯಪಾರ ಅಧಿಕಾರ ಮತ್ತು ಕಾರ್ಯಗಳು ಹಾಗೂ ಸರ್ಕಾರದ ಮುಖ್ಯಸ್ಥರಾದ ಮುಖ್ಯಮಂತ್ರಿ ನೇತೃತ್ವದ ಮಂತ್ರಿಮಂಡಳದ ಅಧಿಕಾರ ಮತ್ತು ಕಾರ್ಯಗಳು ನಡುವೆ ಉದ್ಭವಿಸುತ್ತಿರುವ ವಾದವಿವಾದಗಳ ಕುರಿತು ಚರ್ಚಿಸುತ್ತದೆ.
3. ಸಂವಿಧಾನದ ರಕ್ಷಕನಾಗಿರುವ ಸುಪ್ರೀಂಕೋರ್ಟಿನ ಪಾತ್ರವನ್ನು ಕುರಿತು ಚರ್ಚಿಸುತ್ತದೆ.
4. ರಾಜ್ಯಪಾಲರ ಅಧಿಕಾರ ಮತ್ತು ಕಾರ್ಯಗಳು ಹಾಗೂ ಮುಖ್ಯಮಂತ್ರಿ ನೇತೃತ್ವದ ಮಂತ್ರಿಮಂಡಳದ ಅಧಿಕಾರ ಮತ್ತು ಕಾರ್ಯಗಳ ನಡುವಿನ ಸಮನ್ವಯದ ಮಹತ್ವವನ್ನು ತಿಳಿಸುತ್ತದೆ.

ಲೇಖನದ ನಿರೂಪಣೆ:

ಪ್ರಸ್ತುತ ತಮಿಳುನಾಡು, ಕೇರಳ, ತೆಲಂಗಾಣ, ಪಂಜಾಬ್, ಪಶ್ಚಿಮ ಬಂಗಾಳ, ಜಾರ್ಖಂಡ, ದೆಹಲಿ (ಕೇಂದ್ರಾಡಳಿತ ಪ್ರದೇಶ) ಮುಂತಾದ ರಾಜ್ಯಗಳಲ್ಲಿ ರಾಜ್ಯಪಾಲರು ಮತ್ತು ಸರ್ಕಾರದ ಮಧ್ಯದ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಸುಪ್ರೀಂಕೋರ್ಟ್‌ನ ಬುದ್ಧಿ ಮಾತುಗಳು ಪ್ರಭಾವ ಬೀರಿದಂತೆಕಾಣುತ್ತಿಲ್ಲ, ಬದಲಾಗಿ ಪ್ರಸ್ತುತಕೇಂದ್ರ –ರಾಜ್ಯಗಳ ಸಂಬಂಧಗಳಲ್ಲಿ ಸಂಘರ್ಷಯುತ ವಾತಾವರಣದೊಂದಿಗೆ ರಾಜ್ಯಗಳ ಅಭಿವೃದ್ಧಿಗೆ ರಾಜ್ಯಪಾಲರು ತಡೆಯಾಗಿದ್ದಾರೆ ಎಂಬುದು ಸರ್ಕಾರದ ವಾದವಾದರೆ, ಸರ್ಕಾರ ಸಂವಿಧಾನದ ಚೌಕಟ್ಟನ್ನು ಮೀರಿ ವರ್ತಿಸುತ್ತಿದೆ ಎಂಬುದು ರಾಜ್ಯಪಾಲರ ಮತ್ತು ಕೇಂದ್ರ ಸರ್ಕಾರದ ನಿಲುವು. ಸದ್ಯರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವಿನ ಸಂಘರ್ಷ ಸುಪ್ರೀಂಕೋರ್ಟ್ ಅಂಗಳದಲ್ಲಿ ವಾದ ವಿವಾದಗಳ ಸ್ಥಿತಿಯಲ್ಲಿ ಇದೆ.

ಲೇಖನದಿಂದ ದೊರೆಯಬಹುದಾದ ಪರಿಹಾರಗಳ ಊಹೆ:

1. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಪಾಲರು ಕೇಂದ್ರದ ನಿಯೋಗಿಯಾದರೂ ಅವರ ಕಾರ್ಯಗಳ ವ್ಯಾಪ್ತಿಕಡಿಮೆಇದೆ.
2. ಜನತಾ ಪರಮಾಧಿಕಾರದಿಂದ ಅಧಿಕಾರವನ್ನು ಪಡೆದಿರುವ ಸರ್ಕಾರ ಸಂವಿಧಾನದ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವ ಜವಾಬ್ದಾರಿ ರಾಜ್ಯಪಾಲರದಾಗಿದೆ.
3. ಸುಪ್ರೀಂಕೋರ್ಟ್ ತಾನು ಕೊಡುವ ತೀರ್ಪಿನ ಮೂಲಕ ಮುಂದೆ ಈ ತರಹದ ಸಂವಿಧಾನಿಕ ಬಿಕ್ಕಟ್ಟುಗಳು ಭವಿಷ್ಯದಲ್ಲಿ ನಡೆಯದಂತೆ ಶಿಫಾರಸ್ಸುಗಳನ್ನು ಮಾಡಬಹುದು.
4. ಒಕ್ಕೂಟ ವ್ಯವಸ್ಥೆಯಲ್ಲಿಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳನ್ನು ಇಕ್ಕಟ್ಟಿಗೆ ಸಿಲುಕಿಸಲು ರಾಜ್ಯಪಾಲರ ಮೂಲಕ ಪ್ರಯತ್ನಿಸುತ್ತಿರುವುದನ್ನು ತಿಳಿದುಕೊಳ್ಳಬಹುದು.

ವಿಧಾನ:

ಐತಿಹಾಸಿಕ ವಿಧಾನ ಮತ್ತು ವಿಶ್ಲೇಷಣಾತ್ಮಕ ವಿಧಾನದ ಮೂಲಕ ಪ್ರಸ್ತುತ ಲೇಖನವನ್ನು ವಿವರಿಸಲಾಗಿದೆ.

ವಿಶ್ಲೇಷಣೆ:

ಭಾರತವು ಒಂದು ಸಂಯುಕ್ತ ರಾಜ್ಯಗಳ ಒಕ್ಕೂಟವಾಗಿದ್ದು, ಪ್ರಸ್ತುತ 28 ರಾಜ್ಯಗಳು ಮತ್ತು 8

ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಿದ್ದು ಬಲಿಷ್ಠ ಕೇಂದ್ರ ಸರ್ಕಾರವನ್ನು ಹೊಂದಿದ್ದರೂ ಸಂವಿಧಾನದ ಮೂಲಕವೇ ಕೇಂದ್ರ ಮತ್ತು ರಾಜ್ಯಗಳ ಮಧ್ಯ ಸಂವಿಧಾನದ ಭಾಗ 11 ರಲ್ಲಿ ಶಾಸಕಾಂದ ಸಂಬಂಧಗಳನ್ನು ಸಂವಿಧಾನದ ವಿಧಿ 245 ರಿಂದ 255 ರ ವರೆಗೆ ವಿವರಿಸಿದ್ದು ಸಂವಿಧಾನದ 7 ನೇ ಶೆಡ್ಯುಲ್‌ಅಡಿಯಲ್ಲಿಕೇಂದ್ರ ಪಟ್ಟಿ, ರಾಜ್ಯ ಪಟ್ಟಿ ಮತ್ತು ಸಮವರ್ತಿ ಪಟ್ಟಿಎಂದು ಶಾಸನ ರೂಪಿಸುವ ಅಧಿಕಾರವನ್ನು ವಿಂಗಡಿಸಿದೆ.(3) ರಾಜ್ಯಗಳಲ್ಲಿ ಜನ ಬೆಂಬಲದಿಂದ ರಚಿತವಾದ ಸರ್ಕಾರಗಳು ಸಂವಿಧಾನಕ್ಕೆ ಅನುಗುಣವಾಗಿ ಆಡಳಿತ ನಡೆಸಬೇಕು ಹೀಗೆ ರಾಜ್ಯಗಳಲ್ಲಿರುವ ಸರ್ಕಾರಗಳು ಸರಿಯಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವ ಗುರುತರ ಜವಾಬ್ದಾರಿ ಸಂವಿಧಾನಿಕ ಮುಖ್ಯಸ್ಥರಾದ ಮತ್ತು ಕೇಂದ್ರದ ನಿಯೋಗಿಯಾಗಿ ರಾಷ್ಟ್ರಪತಿಗಳಿಂದ ನೇಮಕವಾಗುವ ರಾಜ್ಯಪಾಲರದು. ರಾಜ್ಯಪಾಲರು ಸಂವಿಧಾನಾತ್ಮಕ ಮುಖ್ಯಸ್ಥರೇ ವಿನಃ ಸರ್ಕಾರದ ಮುಖ್ಯಸ್ಥರಲ್ಲಎಂದು ಸಂವಿಧಾನರಚನಾ ಸಭೆಯಿಂದ ಹಿಡಿದು ಅನೇಕ ತೀರ್ಪುಗಳಲ್ಲಿ ಭಾರತದ ಸುಪ್ರೀಂಕೋರ್ಟ್ ತಿಳಿಸುತ್ತಾ ಬಂದಿದ್ದರೂ ರಾಜ್ಯಪಾಲರ ಕಾರ್ಯವ್ಯಾಪ್ತಿ ಮತ್ತು ರಾಜ್ಯಗಳಲ್ಲಿಯ ಚುನಾಯಿತ ಸರ್ಕಾರಗಳ ಮಧ್ಯದ ಬಿಕ್ಕಟ್ಟು ಒಂದಿಲ್ಲೋಂದು ವಿಧದಲ್ಲಿ ಸದಾಕಾಲ ಚಾಲನೆಯಲ್ಲಿದೆ.

1757 ರಲ್ಲಿ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ರಾಜ್ಯಪಾಲರ ಹುದ್ದೆಯನ್ನು ಬ್ರಿಟಿಷ್ ಈಸ್ಟ್ ಇಂಡಿಯಾಕಂಪನಿಯ ಆಡಳಿತದಲ್ಲಿ ರಚಿಸಲಾಗಿದ್ದು ಆ ಹುದ್ದೆಯನ್ನು ಗೌರ್ನರ್ ಎಂದುಕರೆಯುತ್ತಿದ್ದರು. ಪ್ರಸ್ತುತವು ನಾವು ಈ ಶಬ್ದವನ್ನು ಬಳಸುತ್ತೆವೆ. 1757 ರಲ್ಲಿ ರಾಬರ್ಟ್‌ಕ್ಲೈವ್ ಬಂಗಾಳದ ರಾಜ್ಯಪಾಲನಾಗಿ ಮೊದಲಬಾರಿಗೆ ನೇಮಕಗೊಂಡನು. ಹೀಗೆ ಪ್ರಾರಂಭವಾದ ರಾಜ್ಯಪಾಲರ ಹುದ್ದೆ ಮುಂದೆ ಸಂಸದೀಯ ಪದ್ಧತಿಯ ಸರ್ಕಾರವನ್ನು ಅಳವಡಿಸಿಕೊಂಡ ಮೇಲೆ ಕೇಂದ್ರದಲ್ಲಿ ನಾಮಮಾತ್ರ ಕಾರ್ಯಾಂದ ಮುಖ್ಯಸ್ಥರಾಗಿ ರಾಷ್ಟ್ರಪತಿಗಳು ಹಾಗೂ ರಾಜ್ಯಗಳಲ್ಲಿ ನಾಮಮಾತ್ರಕಾರ್ಯಾಂದ ಮುಖ್ಯಸ್ಥರಾಗಿ ರಾಜ್ಯಪಾಲರು ಸಂವಿಧಾನಿಕ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಲಾಯಿತು.

ಭಾರತದ ಸಂವಿಧಾನ ರಚನಾ ಸಭೆಯಲ್ಲಿ ರಾಜ್ಯಪಾಲರ ಹುದ್ದೆಯನ್ನು ಸೃಷ್ಟಿಸಬಾರದು ಎಂದು ಕೆಲವರು ಮತ್ತೆ ಕೆಲವರು ಕೇಂದ್ರ ಮತ್ತು ರಾಜ್ಯಗಳ ಮಧ್ಯೆ ಸಂಪರ್ಕಕೊಂಡಿಯಾಗಿ ರಾಜ್ಯಪಾಲರು ಕಾರ್ಯ ನಿರ್ವಹಿಸುವುದರಿಂದ ರಾಜ್ಯಪಾಲರ ಹುದ್ದೆ ಅನಿವಾರ್ಯವೆಂದು ವಾದಿಸಿದರು. ಅಂತಿಮವಾಗಿ ರಾಜ್ಯಪಾಲರ ಹುದ್ದೆಯನ್ನು ಸೃಜಿಸಲು ಸಂವಿಧಾನ ರಚನಾ ಸಭೆ ಮಾಡಿದ ಶಿಫಾರಸ್ಸಿನಂತೆ ರಾಜ್ಯಪಾಲರ ಹುದ್ದೆಯನ್ನು ಸೃಜಿಸಲಾಯಿತು.

ಸಂವಿಧಾನದ ವಿಧಿ 153 ರಾಜ್ಯಪಾಲರ ಹುದ್ದೆಗೆ ಅವಕಾಶ ಕಲ್ಪಿಸಿದ್ದು, ರಾಜ್ಯದ ಮೊದಲ ಪ್ರಜೆಯಾದ ರಾಜ್ಯಪಾಲರು ರಾಜ್ಯದ ಕಾರ್ಯಾಂಗದ ಮುಖ್ಯಸ್ಥರು. ರಾಜ್ಯದ ಎಲ್ಲ ಕೆಲಸಕಾರ್ಯಗಳು ಇವರ ಹೆಸರಿನಲ್ಲಿ ನಡೆಯುತ್ತವೆ ಎಂದು ತಿಳಿಸುತ್ತದೆ. ರಾಜ್ಯಪಾಲರಿಗೆ ಸಂವಿಧಾನವು ವಿಶಾಲವಾದ ಅಧಿಕಾರ ಮತ್ತು ಕಾರ್ಯಗಳನ್ನು ಒದಗಿಸಿದ್ದರೂ, ವಿವೇಚನಾ ಕಾರ್ಯಗಳನ್ನು ಹೊರತುಪಡಿಸಿ ಉಳಿದ ಅಧಿಕಾರ ಮತ್ತು ಕಾರ್ಯಗಳನ್ನು ರಾಜ್ಯಪಾಲರ ಹೆಸರಿನ ಮೇಲೆ ರಾಜ್ಯದ ಕಾರ್ಯಾಂಗ ನಿರ್ವಹಿಸುತ್ತದೆ. ಸಂವಿಧಾನದ ವಿಧಿ 163 ರ ಪ್ರಕಾರ ರಾಜ್ಯಪಾಲರು ಮಂತ್ರಿಮಂಡಳದ ಸಲಹೆ ಮೇರೆಗೆ ಕಾರ್ಯನಿರ್ವಹಿಸತಕ್ಕದ್ದುಎಂದು ತಿಳಿಸುವುದರ ಮೂಲಕ ಅಧಿಕಾರದ ವಿಷಯದಲ್ಲಿ ರಾಜ್ಯಪಾಲರು ಸಂವಿಧಾನಿಕ ಮುಖ್ಯಸ್ಥರು ಮಾತ್ರಎಂದು ಸಾಬೀತುಪಡಿಸಿದೆ. ಇದು ಸಂವಿಧಾನವೇ ಸೃಷ್ಟಿಸಿರುವ ನಾಮಮಾತ್ರ ಮತ್ತು ನೈಜಕಾರ್ಯಾಂಗೀಯ ವ್ಯವಸ್ಥೆಯ ನೈಜಚಿತ್ರಣ.(2)

ರಾಜ್ಯಗಳಲ್ಲಿಯೂ ಸಹ ಕೇಂದ್ರದಂತೆ ಸಂಸದೀಯ ಸರ್ಕಾರ ಪದ್ಧತಿಇದ್ದು, ಇದು ಸುಸೂತ್ರವಾಗಿ ಕಾರ್ಯನಿರ್ವಹಿಸುವಂತೆ ರಾಜ್ಯಪಾಲರು ತಮ್ಮಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಕೇಂದ್ರ ಮತ್ತು ರಾಜ್ಯ ಎರಡರಲ್ಲೂ ಒಂದೇ ಪಕ್ಷದ ಸರ್ಕಾರವಿದ್ದರೆ ರಾಜ್ಯದಲ್ಲಿ ಸುಸೂತ್ರವಾದ ಆಡಳಿತ ನಿರ್ವಹಣೆ ಸಾಧ್ಯವಾಗುತ್ತದೆ. ಅಲ್ಲದೆ ರಾಜ್ಯಪಾಲರು ನಾಮ ಮಾತ್ರ ಕಾರ್ಯಾಂಗದ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ. ಆದರೆ ಯಾವಾಗ ಕೇಂದ್ರ ಹಾಗು ರಾಜ್ಯಗಳಲ್ಲಿ ಬೇರೆ ಬೇರೆ

ಪಕ್ಷದ ಸರ್ಕಾರಗಳು ಇರುತ್ತವೆಯೋ ಆಗ ರಾಜ್ಯಪಾಲರುತಮ್ಮ ವಿವೇಚನಾ ಅಧಿಕಾರವನ್ನು ಬಳಸಲು ಯತ್ನಿಸಿ ಮುಖ್ಯಮಂತ್ರಿ ನೇತೃತ್ವದ ಮಂತ್ರಿಮಂಡಲ ಹಾಗೂ ರಾಜ್ಯಪಾಲರ ನಡುವೆ ಸೌಹಾರ್ದತೆ ಇಲ್ಲವಾಗಿ ಸಂಯುಕ್ತತೆಗೆ ಧಕ್ಕೆಆಗುತ್ತದೆ.

1967 ರವರೆಗೆ ಹೆಚ್ಚು ಕಡಿಮೆ ಯಾವುದೇ ಸಮಸ್ಯೆಇಲ್ಲದೆ ಮುಖ್ಯಮಂತ್ರಿ ನೇತೃತ್ವದ ಮಂತ್ರಿಮಂಡಳ ಹಾಗೂ ರಾಜ್ಯಪಾಲರ ನಡುವಿನ ಸಂಬಂಧ ಉತ್ತಮವಾಗಿಯೇ ಇತ್ತು. ಆದರೆ 1967 ರ ನಂತರದೇಶದಲ್ಲಿ ಕಾಂಗ್ರೆಸ್ ಪಕ್ಷದ ಪ್ರಾಬಲ್ಯತೆ ಕಡಿಮೆಯಾಗುತ್ತಾ ಬಂದು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಪಕ್ಷದ ಸರ್ಕಾರಗಳು ಅಧಿಕಾರಕ್ಕೆ ಬಂದವು. ಉದಾಹರಣೆಗೆ ಕೇರಳ, ಪಶ್ಚಿಮ ಬಂಗಾಳ, ಪಂಜಾಬ್ ಮೊದಲಾದ ರಾಜ್ಯಗಳು. ಹೀಗೆ ಬೇರೆ ಬೇರೆ ಪಕ್ಷಗಳ ಸರ್ಕಾರಗಳು ಅಸ್ತಿತ್ವದಲ್ಲಿರುವಂತಹ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ರಾಜ್ಯಪಾಲರ ಮೂಲಕ ಆ ರಾಜ್ಯಗಳ ಮೇಲೆ ತನ್ನ ಹಿಡಿತವನ್ನು ಸಾಧಿಸಲು ಯತ್ನಿಸಿ ಕೇಂದ್ರ ರಾಜ್ಯಗಳ ನಡುವಿನ ಸಂಬಂಧದಲ್ಲಿ ವಿವಾದಗಳಿಗೆ ಅವಕಾಶವನ್ನುಂಟು ಮಾಡಿತು. 1967ರ ವರೆಗೂ ಸಾಮಾನ್ಯವಾಗಿ ರಾಜ್ಯಗಳ ಜೊತೆ ಸಮಾಲೋಚಿಸಿಯೇ ರಾಜ್ಯಪಾಲರನ್ನು ನೇಮಕ ಮಾಡುವ ಪರಿಪಾಠವಿತ್ತು. ಆದರೆ ನಂತರದಲ್ಲಿ ಇದನ್ನು ಕೈ ಬಿಡಲಾಯಿತು. ಪಶ್ಚಿಮ ಬಂಗಾಳ ರಾಜ್ಯವು ಸೂಚಿಸಿದಂತೆ ಮೂರು ಹೆಸರುಗಳಲ್ಲಿ ಯಾರನ್ನು ನೇಮಕ ಮಾಡದೆ ಕೇಂದ್ರ ತನಗೆಇಷ್ಟ ಬಂದವರನ್ನು ನೇಮಕ ಮಾಡುವ ಮೂಲಕ ಹೀಗೆ ಬೆಳೆದು ಬಂದ ಸಂಪ್ರದಾಯವನ್ನು ಕಡೆಗಣಿಸಿತು. ಇದನ್ನು ಪಶ್ಚಿಮ ಬಂಗಾಳ ವಿರೋಧಿಸಿದರೂ ಪ್ರಯೋಜನವಾಗಲಿಲ್ಲ. ಆಗ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಆಗಿದ್ದ ಅಜೇಯ ಮುಖರ್ಜಿ ಅವರು 1967 ರಲ್ಲಿ ರಾಜ್ಯಪಾಲರಾಗಿದ್ದ ಧರ್ಮವೀರರನ್ನು ವಾಪಸ್ ಕರೆಸಿಕೊಳ್ಳುವಂತೆ ಕೇಂದ್ರವನ್ನು ಒತ್ತಾಯಿಸಿದರು. ನಂತರದ ಉದಾಹರಣೆಯಾಗಿ ಕೇರಳವನ್ನು ತೆಗೆದುಕೊಂಡರೆ ಅಂದಿನ ರಾಜ್ಯಪಾಲರಾಗಿದ್ದ ಶ್ರೀಮತಿ ರಾಮ್‌ಧುಲಾರಿ ಸಿನ್ಹ ಹಾಗೂ ಅಲ್ಲಿನ ಮುಖ್ಯಮಂತ್ರಿ ಆಗಿದ್ದ ಇ.ಕೆ ನಾಯನರ್ ನಡುವೆಯೂ ಪರಸ್ಪರ ಹೊಂದಾಣಿಕೆ ಇಲ್ಲದೆ ವಿವಾದಕ್ಕೆ ಅವಕಾಸವಾಯಿತು. ಇದೇರೀತಿ ಬಿಹಾರದಲ್ಲಿ ಭಗತ್‌ಝಾ ಮುತ್ತು ರಾಜ್ಯಪಾಲರಾಗಿದ್ದ ಗೋವಿಂದನಾರಾಯಣ ಸಿಂಗ್ ನಡುವೆಯೂ ಪರಸ್ಪರ ವಿವಾದ ಉಂಟಾಗಿ ರಾಜ್ಯಪಾಲರೇ ರಾಜೀನಾಮೆ ನೀಡಿ ಹೊರಬಂದರು.

ತಮಿಳುನಾಡಿನಲ್ಲಿ ಮುಖ್ಯಮಂತ್ರಿಯಾಗಿದ್ದ ಜಯಲಲಿತಾರವರು ಹಾಗೂ ರಾಜ್ಯಪಾಲರಾಗಿದ್ದ ಚೆನ್ನಾರೆಡ್ಡಿಅವರ ನಡುವೆ ಬಹಿರಂಗವಾಗಿ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿ ಸರ್ಕಾರವು ಮುಖ್ಯ ಕಡತಗಳನ್ನು ರಾಜಭವನಕ್ಕೆ ಕಳುಹಿಸಲೇಬಾರದೆಂಬ ತೀರ್ಮಾನವನ್ನು ಕೈಗೊಳ್ಳುವ ಮಟ್ಟಕ್ಕೆ ಮುಂದುವರೆಯಿತು. ಇನ್ನು ಮುಂದುವರೆದು ತಮಿಳುನಾಡು ವಿಧಾನಸಭೆ 1995ರ ಏಪ್ರಿಲ್ 26 ರಂದು ನಿರ್ಣಯವನ್ನು ಕೈಗೊಂಡು ರಾಜ್ಯಪಾಲರನ್ನು ವಾಪಸ್ ಕರೆಸಿಕೊಳ್ಳುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿತು. ಇದರಜೊತೆಗೆ 155ನೇ ವಿಧಿಗೆ ತಿದ್ದುಪಡಿ ತಂದು ಕೇಂದ್ರ ರಾಜ್ಯಪಾಲರನ್ನು ನೇಮಿಸುವ ಮುನ್ನರಾಜ್ಯ ಸರ್ಕಾರದ ಜೊತೆ ಸಮಾಲೋಚಿಸಬೇಕು ಎಂಬುದನ್ನು ಕಡ್ಡಾಯ ಗೊಳಿಸಬೇಕೆಂದು ಒತ್ತಾಯಿಸಿತು. ಆನಂದ ಪುರ್ ಸಾಹೇಬ್ ನಿರ್ಣಯ, ಪಶ್ಚಿಮ ಬಂಗಾಳದ ವಿರೋಧ ಪಕ್ಷಗಳ ಘೋಷಣೆ, ತಮಿಳುನಾಡಿನ ರಾಜಮನ್ನಾರ್ ಸಮಿತಿಯ ಶಿಫಾರಸ್ಸುಗಳು, ಕರ್ನಾಟಕದಲ್ಲಿ ಆದ ಎಸ್‌ಆರ್ ಬೊಮ್ಮಾಯಿ ಪ್ರಕರಣ ಇತ್ಯಾದಿಗಳು ಎಲ್ಲವೂ ರಾಜ್ಯಪಾಲರ ಹುದ್ದೆಯ ದುರ್ಬಳಕೆಯ ಬಗ್ಗೆ ತಿಳಿಸುತ್ತದೆ.

ಹೀಗೆ ಪ್ರಾರಂಭವಾದ ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳ ನೇತೃತ್ವದ ಮಂತ್ರಿ ಮಂಡಲದ ಮಧ್ಯದ ಸಂಘರ್ಷದ ಹಿನ್ನೆಲೆಯಲ್ಲಿ ಪ್ರಸ್ತುತ ಸಂದರ್ಭದಲ್ಲಿ ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ, ಜಾರ್ಖಂಡ, ದೆಹಲಿ ಮತ್ತು ಪಂಜಾಬ್ ರಾಜ್ಯಗಳ ರಾಜ್ಯಪಾಲರ ನಿರ್ಣಯಗಳು ಹಾಗೂ ಅಲ್ಲಿನ ರಾಜ್ಯ ಸರ್ಕಾರಗಳ ಮಧ್ಯೆ ಉಂಟಾಗಿರುವ ಬಿಕ್ಕಟ್ಟು ಸಂವಿಧಾನಿಕ ತೊಂದರೆಗಳನ್ನು ಪ್ರಸ್ತುತಪಡಿಸುತ್ತದೆ. ರಾಜ್ಯಪಾಲರು ಮತ್ತೆಅಲ್ಲಿನ ಮುಖ್ಯಮಂತ್ರಿಗಳ ನೇತೃತ್ವದ ಮಂತ್ರಿಮಂಡಲದ ನಡುವಿನ ಈ ಸಮಸ್ಯೆ ಪ್ರಸ್ತುತ ಸುಪ್ರೀಂಕೋರ್ಟಿನಲ್ಲಿ ವಾದವಿವಾದಗಳಿಗೆ ಕಾರಣವಾಗಿದ್ದು,

ಅದರ ವಿವರಗಳು ಹೀಗಿವೆ:

1) ಭಾರತದ ಮಾಜಿ ಉಪರಾಷ್ಟ್ರಪತಿಯಾಗಿದ್ದ ಜಗದೀಪ್‌ಧನಕರ್ ಅವರು ಹಿಂದೆ ಪಶ್ಚಿಮ ಬಂಗಾಳದಲ್ಲಿ ರಾಜ್ಯಪಾಲರಾಗಿದ್ದಅವಧಿ ಪೂರ್ತಿಅಲ್ಲಿನ ಮಮತಾ ಬ್ಯಾನರ್ಜಿ ನೇತೃತ್ವದ ಟಿ.ಎಂ.ಸಿ ಸರ್ಕಾರದದೊಂದಿಗೆ ತಿಕ್ಕಾಟ ನಡೆಸಿದರು.ಇವರ ನಂತರಅಧಿಕಾರ ವಹಿಸಿಕೊಂಡಿರುವ ಸಿ.ವಿ ಆನಂದ್ ಮತ್ತು ಅಲ್ಲಿನ ರಾಜ್ಯ ಸರ್ಕಾರದೊಂದಿಗೆ ಕುಲಪತಿಗಳ ನೇಮಕದ ಅಧಿಕಾರವನ್ನು ಸರ್ಕಾರಕ್ಕೆ ನೀಡುವ ಮಸೂದೆ, ರಾಜ್ಯ ಸಂಸ್ಥಾಪನಾ ದಿನ, ಪಂಚಾಯತ್ ಚುನಾವಣಾ ಹಿಂಸಾಚಾರ ಹಾಗೂ ಇತರ ಮಸೂದೆಗಳ ವಿಷಯವಾಗಿ ರಾಜ್ಯ ಸರ್ಕಾರದೊಂದಿಗೆ ಸಂಘರ್ಷ ನಡೆಸಿರುವುದು ಜಗಜ್ಜಾಹೀರಾಗಿದ್ದು ಇತ್ತೀಚೀಗೆ ರಾಜಭವನದಲ್ಲಿ ಮಹಿಳಾ ಉದ್ಯೋಗಿಯೊಬ್ಬರ ಮೇಲೆ ಲೈಂಗಿಕ ಕಿರುಕುಳ ನೀಡಿದ ಕುರಿತು, ಇತ್ತೀಚೀಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯಪಾಲರು ರಾಜ್ಯಸರ್ಕಾರದ ವಿರುದ್ಧ ಕೇಂದ್ರ ಸರ್ಕಾರದ ಪರವಾಗಿ ಹಸ್ತಕ್ಷೇಪ ಮಾಡಿದ್ದಾರೆ ಎಂಬ ಗುರುತರ ಆರೋಪಗಳನ್ನು ರಾಜ್ಯಪಾಲರು ಎದುರಿಸುತ್ತಿದ್ದು ಹೀಗೆ ವಿವಿಧ ಕಾರಣಗಳಿಗಾಗಿ ಸಂಘರ್ಷ ನಡೆಯುತ್ತಿದೆ.

2)ತೆಲಂಗಾಣದಲ್ಲಿ ರಾಜ್ಯಪಾಲೆ ತಮಿಳ್ ಇಸೈ ಸೌಂದರರಾಜನ್ ಮತ್ತು ಅಲ್ಲಿನಬಿ.ಆರ್.ಎಸ್ ಪಕ್ಷದ ಸರ್ಕಾರದ ಮಧ್ಯೆ ಮಸೂದೆಗಳನ್ನು ತಡೆಹಿಡಿಯುವುದು ಮತ್ತು ಆದೇಶಗಳನ್ನು ತಡೆಹಿಡಿಯುವುದು ಮಾಮೂಲಿಯಾಗಿದ್ದು, ರಾಜ್ಯಪಾಲೆ ಸರ್ಕಾರದ ಕಾರ್ಯವೈಖರಿಯನ್ನು ಹಲವು ಬಾರಿ ಟೀಕಿಸಿದ್ದಾರೆ ಮತ್ತು ಮಹಿಳೆಯೆಂಬ ಕಾರಣಕ್ಕೆ ತಮ್ಮನ್ನು ರಾಜ್ಯಸರ್ಕಾರ ಕೆಟ್ಟದಾಗಿ ನಡೆಸಿಕೊಳ್ಳಿತ್ತಿದೆ ಎಂದು ಆರೋಪಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ರಾಜ್ಯಪಾಲರು ಪಕ್ಷವೊಂದರ ಪ್ರತಿನಿಧಿಯಂತೆ ವರ್ತಿಸುತ್ತಿದ್ದಾರೆ ಎಂದು ಸರ್ಕಾರ ಆರೋಪ ಮಾಡಿದೆ.

3)ಜಾರ್ಖಂಡ್‌ನಲ್ಲಿ ಜೆ.ಎಂ.ಎಂ ನೇತೃತ್ವದ ಸರ್ಕಾರದ ಸುಮಾರು 20 ಮಸೂದೆಗಳಿಗೆ ಹಿಂದಿನ ರಾಜ್ಯಪಾಲರಾಗಿದ್ದ ರಮೇಶ ಬೈಸ್ ಸಹಿಹಾಕಿರಲಿಲ್ಲ. ಪ್ರಸ್ತುತ ರಾಜ್ಯಪಾಲರಾಗಿರುವ ರಾಧಾಕೃಷ್ಣನ್ ಅವರು ಹಿಂದಿನ ರಾಜ್ಯಪಾಲರಂತೆ ಹಿಂದಿನ ಮುಖ್ಯಮಂತ್ರಿ ಹೆಮಂತ್ ಸೊರೇನ್ ನೇತೃತ್ವದ ಸರ್ಕಾರದ ಮಸೂದೆಗಳಿಗೆ ತಡೆ ಒಡ್ಡುತ್ತಿದ್ದಾರೆ ಎಂಬ ಆರೋಪ ರಾಜ್ಯಪಾಲರ ಮೇಲಿದೆ.

4) ಕೇರಳ ರಾಜ್ಯದ ವಿಶ್ವವಿದ್ಯಾಲಯಗಳ ತಿದ್ದುಪಡಿ ಮಸೂದೆ, ಕೇರಳ ಸಹಕಾರ ಸಂಘಗಳ ತಿದ್ದುಪಡಿ ಮಸೂದೆ, ಕೇರಳ ಲೋಕಾಯುಕ್ತ ತಿದ್ದುಪಡಿ ಮಸೂದೆಗಳನ್ನು ಅಲ್ಲಿನ ರಾಜ್ಯಪಾಲರಾದ ಆರಿಫ್ ಮೊಹಮ್ಮದ್ ಖಾನ್ ಅಂಕಿತ ಹಾಕದೇ ಮೂರು ವರ್ಷಗಳಿಂದ ತಮ್ಮ ಬಳಿಯೇ ಇರಿಸಿಕೊಂಡಿದ್ದು ಇನ್ನೂ ಐದು ಮಸೂದೆಗಳಿಗೆ ಅಂಕಿತ ಹಾಕದೇಒಂದು ವರ್ಷಕ್ಕಿಂತ ಹೆಚ್ಚು ಕಾಲದಿಂದ ತಮ್ಮ ಬಳಿ ಇರಿಸಿಕೊಂಡಿರುವುದು ರಾಜ್ಯಪಾಲರು ಮತ್ತು ಸರ್ಕಾರದ ಮಧ್ಯದ ಸಂಘರ್ಷಕ್ಕೆ ಕಾರಣವಾಗಿದ್ದು, ಸರ್ಕಾರ ರಾಜ್ಯಪಾಲರ ವಿರುದ್ಧ ವಿಧಾನಸಭೆಯಲ್ಲಿ ನಿರ್ಣಯವನ್ನು ಮಂಡಿಸಿದೆ.

5) ತಮಿಳುನಾಡಿನ ಎಂ.ಕೆ ಸ್ಟಾಲಿನ್ ನೇತೃತ್ವವದಡಿ.ಎಂ.ಕೆ ಸರ್ಕಾರ ಮತ್ತು ಅಲ್ಲಿನ ರಾಜ್ಯಪಾಲರಾದ ಆರ್.ಎನ್. ರವಿ ಮಧ್ಯೆತಿಕ್ಕಾಟ ಬಹುದಿನದಿಂದ ನಡೆಯುತ್ತಿದ್ದು 19 ಮಸೂದೆಗಳು ಮತ್ತು 20ಕ್ಕೂ ಹೆಚ್ಚು ಸೂಚನೆಗಳು ರಾಜ್ಯಪಾರ ಬಳಿ ವಿಲೇವಾರಿಯಾಗದೆ ಉಳಿದಿವೆ. ಉಭಯ ಸದನಗಳನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಬೇಕಿದ್ದ ಭಾಷಣವನ್ನು ಸರ್ಕಾರ ಸಿದ್ಧಪಡಿಸಿತ್ತು, ಆದರೆ ರಾಜ್ಯಪಾಲರು ಅದರಲ್ಲಿನ ಹಲವು ಅಂಶಗಳನ್ನು ಬಿಟ್ಟು ಓದತೊಡಗಿರುವುದರ ವಿರುದ್ಧ ಮುಖ್ಯಮಂತ್ರಿ ಸ್ಟಾಲಿನ್ ನಿರ್ಣಯ ಮಂಡಿಸಿದರು. ಪ್ರಸ್ತುತ 2020 ಮತ್ತು 2022 ರ ನಡುವೆ ವಿಧಾನಸಭೆಯಲ್ಲಿ ಅಂಗೀಕರಿಸಿದ್ದ ಹತ್ತು ಮಸೂದೆಗಳಿಗೆ ಅಂಕಿತ ಹಾಕದೆ ರಾಜ್ಯ ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದು. ಇದರಲ್ಲಿ ತಮಿಳುನಾಡು ವಿಶ್ವವಿದ್ಯಾಲಯಗಳ ಕಾಯ್ದೆಯ ತಿದ್ದುಪಡಿ ಮಸೂದೆಯನ್ನು ವಾಪಸ್ ಕಳುಹಿಸಲಾಗಿದೆ. ಮದ್ರಾಸ್ ವಿ.ವಿ ಹೊರತುಪಡಿಸಿ ರಾಜ್ಯ ಅನುದಾನಿತವಿ.ವಿಗಳಿಗೆ ಉಪಕುಲಪತಿಗಳ ನೇಮಕ ಸಂಬಂಧರಾಜ್ಯಪಾಲರಿಗೆ ನೀಡಿರುವ ಅಧಿಕಾರವನ್ನು ಮೊಟಕುಗೊಳಿಸುವ ಬಗ್ಗೆ ಇದರಲ್ಲಿ ಪ್ರಸ್ತಾಪಿಸಲಾಗಿದೆ. ಉಳಿದಂತೆ ತಮಿಳುನಾಡು

ಮೀನುಗಾರಿಕೆಕಾಯ್ದೆ 2012, ತಮಿಳುನಾಡು ಪಶು ವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನ ವಿಶ್ವವಿದ್ಯಾಲಯಕಾಯ್ದೆ 1989, ತಮಿಳುನಾಡು ಡಾ.ಅಂಬೇಡ್ಕರ್ ಕಾನೂನು ವಿಶ್ವವಿದ್ಯಾಲಯ ಕಾಯ್ದೆ 1996, ತಮಿಳುನಾಡು ಡಾ. ಎಂ.ಜಿ. ಆಯುರ್ವೇದಿಕ ವಿದ್ಯಾಲಯ ಕಾಯ್ದೆ 1987, ತಮಿಳುನಾಡು ಕೃಷಿ ವಿಶ್ವವಿದ್ಯಾಲಯ ಕಾಯ್ದೆ 1971 ಹಾಗೂ ತಮಿಳು ವಿಶ್ವವಿದ್ಯಾಲಯ ಕಾಯ್ದೆ 1982ಕ್ಕೆ ಸಂಬಂಧಿಸಿದ ಮಸೂದೆಗಳಾಗಿವೆ. ತಮಿಳುನಾಡು ರಾಜ್ಯಪಾಲರಾದ ಆರ್‌ಎನ್‌ರವಿ ಅವರು ಹೀಗೆ ರಾಜ್ಯ ಸರ್ಕಾರದಿಂದ ಪಾಸಾದ ಮಸೂದೆಗಳನ್ನು ವಾಪಸ್ ಕಳುಹಿಸುತ್ತಿರುವುದು ಇದು ಮೂರನೇ ಬಾರಿ. 2022ರ ಫೆಬ್ರುವರಿ ಹಾಗೂ 2023ರ ಮಾರ್ಚ್‌ನಲ್ಲಿ ನೀಟ್ ವಿರೋಧಿ ಮಸೂದೆ ಹಾಗೂ ಆನೈಲೈನ್ ಜೂಜಾಟಕ್ಕೆ ಸಂಬಂಧಿಸಿದ ಮಸೂದೆಗಳನ್ನು ಅವರು ವಾಪಸ್ ಕಳುಹಿಸಿದರು. ಈ ಎರಡು ಮಸೂದೆಗಳನ್ನು ಸರ್ಕಾರವು ಸದನದಲ್ಲಿ ಮತ್ತೆ ಮಂಡಿಸಿ ಮರಳಿ ರಾಜಭವನಕ್ಕೆ ಕಳಿಸಿದ್ದು ಆನೈಲೈನ್ ಜೂಜಾಟ ಮಸೂದೆಗೆ ಕೆಲವೇ ವಾರಗಳಲ್ಲಿ ಅಂಕಿತ ಹಾಕಿದ ರಾಜ್ಯಪಾಲರು ನೀಟ್ ವಿರೋಧಿ ಮಸೂದೆಯನ್ನು ರಾಷ್ಟ್ರಪತಿಯವರಿಗೆ ಕಳುಹಿಸಿದರು. ರಾಜ್ಯಪಾಲರು ವಾಪಸ್ ಕಳುಹಿಸಿರುವ ಮಸೂದೆಗಳಲ್ಲಿ ಯಾವುದೇ ಬದಲಾವಣೆ ಮಾಡದೆ ಯಥಾಸ್ಥಿತಿಯಲ್ಲಿ ಅಂಗೀಕರಿಸಿ ಮತ್ತೆ ರಾಜ್ಯಪಾಲರ ಅಂಗಳಕ್ಕೆ ಕಳುಹಿಸಲು ಸರ್ಕಾರವು ಮುಂದಾಗಿದೆ. ಇದಕ್ಕಾಗಿ ವಿಧಾನಸಭಾಧ್ಯಕ್ಷರು ಒಂದು ದಿನದ ವಿಶೇಷ ಅಧಿವೇಶನವನ್ನು ಕರೆದಿದ್ದಾರೆ. ಸರ್ಕಾರದ ವಾದವೆಂದರೆ ವಾಪಸ್ ಕಳುಹಿಸಿದ ಮಸೂದೆಗಳನ್ನು ಸದನದಲ್ಲಿ ಮರು ಮಂಡಿಸಿ ಅಂಗೀಕಾರ ನೀಡಿದ ಬಳಿಕ ಪುನರ್ ರಾಜ್ಯಪಾಲರಿಗೆ ಕಳುಹಿಸಲಾಗುತ್ತದೆ. ರಾಜ್ಯ ಪಟ್ಟಿಯಲ್ಲಿರುವ ವಿಷಯಗಳಿಗೆ ಸಂಬಂಧಿಸಿದ ಮಸೂದೆಗಳನ್ನು ಅವರು ಮತ್ತೆ ಹಿಂದಕ್ಕೆ ಕಳುಹಿಸಲು ಸಾಧ್ಯವಿಲ್ಲ. ಅವುಗಳಿಗೆ ಒಪ್ಪಿಗೆ ನೀಡಲೇಬೇಕು ಆದರೆ ಇಂಥ ಮಸೂದೆಗಳ ಬಗ್ಗೆ ನಿರ್ಧರಿಸಲು ರಾಜ್ಯಪಾಲರಿಗೆ ಸಮಯದ ಚೌಕಟ್ಟನ್ನು ನಿಗದಿಪಡಿಸಿಲ್ಲ. ಸಮವರ್ತಿ ಪಟ್ಟಿಯಲ್ಲಿರುವ ವಿಷಗಳಿಗೆ ಸಂಬಂಧಿಸಿದ ಮಸೂದೆಗಳಿಗೆ ರಾಜ್ಯಪಾಲರು ಸಹಿ ಹಾಕದೆ ರಾಷ್ಟ್ರಪತಿಯವರಿಗೆ ಕಳುಹಿಸಬಹುದಾಗಿದೆ.(3)

6) ಪಂಜಾಬ್ ರಾಜ್ಯಪಾಲರಾದ ಬನ್ವರಿಲಾಲ್ ಪುರೋಹಿತವರು ಭಗವಂತ ಸಿಂಗ್ ಮಾನ್ ನೇತೃತ್ವದ ಎ.ಎ.ಪಿ ಸರ್ಕಾರದ ಹಲವು ಮಸೂದೆಗಳನ್ನು ತಡೆಹಿಡಿದಿದ್ದಾರೆ. ಉಚಿತ ವಿದ್ಯುತ್ ಯೋಜನೆಗೆ ರಾಜ್ಯಪಾಲರು ಸಹಿ ಹಾಕದಿರುವ ಕ್ರಮವನ್ನುರಾಜ್ಯ ಸರ್ಕಾರ ಬಹಿರಂಗವಾಗಿ ಟೀಕಿಸಿದ ತಕ್ಷಣರಾಜ್ಯಪಾಲರು ಸಹಿ ಹಾಕಿದರು. ಆದರೇ ಇನ್ನೂ ಅನೇಕ ಮಸೂದೆಗಳಿಗೆ ರಾಜ್ಯಪಾಲರು ಸಹಿ ಹಾಕಿರಲಿಲ್ಲ, ಇದರ ವಿರುದ್ದ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ ತಕ್ಷಣ ತಮ್ಮತಮ್ಮ ಬಳಿಯಿರುವ ಎಲ್ಲ ಮಸೂದೆಗಳಿಗೆ ರಾಜ್ಯಪಾಲರು ಸಹಿ ಹಾಕಿದ್ದಾರೆ.

ಹೀಗೆ ವಿವಿಧರಾಜ್ಯ ಸರ್ಕಾರಗಳು ಮತ್ತು ರಾಜ್ಯಪಾಲರ ಮಧ್ಯೆ ಬಿಕ್ಕಟ್ಟುಗಳು ಉಂಟಾಗಿದ್ದು ಇದರ ವಿರುದ್ಧ ಪಂಜಾಬ್, ತಮಿಳುನಾಡು ರಾಜ್ಯಗಳು ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದು ಪ್ರಸ್ತುತ ವಿಚಾರಣೆಯ ಮಧ್ಯ ಸುಪ್ರೀಂಕೋರ್ಟ್ ರಾಜ್ಯಪಾಲರು ತಾವು ಚುನಾಯಿತ ಪ್ರತಿನಿಧಿ ಅಲ್ಲ ಎಂಬುದನ್ನು ಮರೆಯಬಾರದು ಎಂದು ತಿಳಿಸಿದೆ. ಹಾಗೆಯೇ ಪಂಜಾಬ್ ರಾಜ್ಯಪಾಲರ ನಡೆಯ ಕುರಿತು ರಾಜ್ಯಪಾಲರ ನಡೆಯು ಬೆಂಕಿ ಜೊತೆ ಆಟವಾಡಿದಂತೆ ಎಂದು ಎಚ್ಚರಿಕೆ ನೀಡಿರುವುದನ್ನು ಗಮನಿಸಬೇಕು. ಇನ್ನು ವಿಚಾರಣೆ ನಡೆಯುತ್ತಿರುವ ಈ ಎಲ್ಲ ಪ್ರಕರಣಗಳ ಕುರಿತು ಸುಪ್ರೀಂಕೋರ್ಟ್ ನೀಡುವ ತೀರ್ಪುಗಳು ಬಹುಶಃ ರಾಜ್ಯಪಾಲರೂ ಮತ್ತುರಾಜ್ಯ ಸರ್ಕಾರದ ಮಧ್ಯದ ಸಂಘರ್ಷಕ್ಕೆ ಕೊನೆಹಾಡುತ್ತದೆ ಎಂದು ಆಶಿಸೋಣ.

ಸಮಾರೋಪ:

ಪ್ರಸ್ತುತ ರಾಜ್ಯಪಾಲರು ಮತ್ತು ರಾಜ್ಯ ಸರ್ಕಾರಗಳ ಮಧ್ಯೆ ನಡೆಯುತ್ತಿರುವ ಸಂಘರ್ಷವು ಹೆಚ್ಚಾಗಿ ಕೇಂದ್ರದಲ್ಲಿರುವ ಬಿಜೆಪಿ ಪಕ್ಷದ ವಿರೋಧ ಪಕ್ಷಗಳ ಆಡಳಿತ ಇರುವ ರಾಜ್ಯಗಳಲ್ಲಿ ತಾರಕಕ್ಕೆರಿದೆ. ಆ ಮೂಲಕ ರಾಜ್ಯಪಾಲರು ಕೇಂದ್ರ ಸರ್ಕಾರದ ಏಜೆಂಟರಂತೆ ವರ್ತಿಸುತ್ತಿದ್ದು, ರಾಜ್ಯಪಾಲರು ಸಂವಿಧಾನಿಕ ಮುಖ್ಯಸ್ಥರಾಗಿ, ರಾಜ್ಯ ಸರ್ಕಾರಕ್ಕೆ ಮಾರ್ಗದರ್ಶನವನ್ನು ಮಾಡುತ್ತಾ ಸಮಸ್ತ ರಾಜ್ಯದ ಅಭಿವೃದ್ಧಿದೊಡ್ಡ

ಕೊಡುಗೆಯನ್ನು ನೀಡುವ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಇತಿಹಾಸದಲ್ಲಿ ಉಳಿಯುವ ಕಾರ್ಯ ಮಾಡಬೇಕು. ಸಂವಿಧಾನಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರಕ್ಕೆ ತಂದೆಯ ರೂಪದಲ್ಲಿ ಮಾರ್ಗದರ್ಶನ ಮಾಡುತ್ತಾ, ಸಹೋದರನ ರೂಪದಲ್ಲಿ ಸಲಹೆ ಸೂಚನೆಗಳನ್ನು ನೀಡುತ್ತಾ, ಮಿತ್ರನ ರೂಪದಲ್ಲಿ ತಪ್ಪುಗಳನ್ನು ತಿಳಿಸುತ್ತಾ ರಾಜ್ಯ ಸರ್ಕಾರವನ್ನು ಸಂವಿಧಾನದ ಚೌಕಟ್ಟಿನಲ್ಲಿ ಮುನ್ನಡೆಸುವ ಗುರುತರ ಜವಾಬ್ದಾರಿಯನ್ನು ಹೊಂದಿದ್ದು ಕೇಂದ್ರದ ಏಜೆಂಟರಂತೆ ವರ್ತಿಸಬಾರದು. ಕೊನೆಯದಾಗಿ ಬಿ.ಜಿಖೇರ್‌ಅವರು ಹೇಳುವಂತೆ "ರಾಜ್ಯಪಾಲರು ಒಳ್ಳೆಯವರಾದರೆ ರಾಜ್ಯಕ್ಕೆ ಅನೇಕ ಒಳ್ಳೆಯ ಕಾರ್ಯಗಳನ್ನು ಮಾಡಬಹುದು ಹಾಗೂ ರಾಜ್ಯಪಾಲರು ಕೆಟ್ಟವರಾದರೆ ರಾಜ್ಯಕ್ಕೆ ಅನೇಕ ಕೆಟ್ಟ ಕಾರ್ಯಗಳನ್ನು ಮಾಡಬಹುದು" ಎಂಬಂತೆ ರಾಜ್ಯಪಾಲರ ಕಾರ್ಯನಿರ್ವಹಣೆಯ ಮೇಲೆ ಮೇಲೆ ರಾಜ್ಯದಅಭುದ್ಯಯ ನಿರ್ಣಯವಾಗುವುದು.

ಶಿಫಾರಸ್ಸುಗಳು:

1. ರಾಜ್ಯಪಾಲರು ಹಾಗೂ ರಾಜ್ಯ ಸರ್ಕಾರಗಳು ಹೇಗೆ ಸಂವಿಧಾನದ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಣೆ ಮಾಡಬೇಕು ಎಂಬ ಬಗ್ಗೆ ಸೂಕ್ತ ಮಾರ್ಗದರ್ಶನಗಳನ್ನು ಕೇಂದ್ರ ಸರ್ಕಾರ ರೂಪಿಸುವ ಅಗತ್ಯತೆ ಇದೆ.
2. ರಾಜ್ಯಪಾಲರು ಸಂವಿಧಾನಿಕ ಮುಖ್ಯಸ್ಥರಾಗಿ ಕೇಂದ್ರದ ಕೈಗೊಂಬೆಯಂತೆ ವರ್ತಿಸದೆ ಸಂವಿಧಾನದ ಚೌಕಟ್ಟಿನಲ್ಲಿ ತಮ್ಮ ಕಾರ್ಯನಿರ್ವಹಿಸಬೇಕು.
3. ಚುನಾಯಿತ ಸರ್ಕಾರತನ್ನ ಕಾರ್ಯವ್ಯಾಪ್ತಿ ಮೀರಬಾರದು.
4. ಕೇಂದ್ರ ಸರ್ಕಾರರಾಜ್ಯ ಸರ್ಕಾರಗಳನ್ನು ತಾರತಮ್ಯದಿಂದ ನೋಡಬಾರದು ಹಾಗೂ ರಾಜ್ಯಪಾಲರ ಮೂಲಕ ರಾಜ್ಯ ಸರ್ಕಾರಗಳನ್ನು ನಿಯಂತ್ರಿಸುವಕಾರ್ಯ ಮಾಡಬಾರದು.

ಕೊನೆ ಟಿಪ್ಪಣಿಗಳು:

1. ಡಾ.ಗಂಗಾಧರ ಪಿ.ಎಸ್.,ಭಾರತ ಸಂವಿಧಾನ ಮತ್ತು ರಾಜಕೀಯ,2021 ಪುಟ, 244
2. ಹೆಚ್.ಡಿ.ವಿಶ್ವನಾಥ್,ಭಾರತದ ಸಂವಿಧಾನ, 2021 ಪುಟ, 121
   ಭಾರತದ ಸಂವಿಧಾನ, ಭಾರತ ಸರ್ಕಾರ ಕಾನೂನು ಮತ್ತು ನ್ಯಾಯ ಮಂತ್ರಾಲಯ,ವಿಧಾಯಿ
3. ಇಲಾಖೆ, 2019 ಪುಟ, 63

ಪರಾಮರ್ಶನ ಗ್ರಂಥಗಳು:

1. ಭಾರತದ ಸಂವಿಧಾನ ಮತ್ತು ಸರ್ಕಾರ–ಡಾ. ಎಚ್ ಎಂ ರಾಜಶೇಖರ
2. ಭಾರತದ ಸಂವಿಧಾನ ಮತ್ತುರಾಜಕೀಯ–ಡಾ. ಗಂಗಾಧರಪಿ.ಎಸ್
3. ಬಿಜೆಪಿಯೇತರ ಪಕ್ಷಗಳಿರುವ ರಾಜ್ಯ ಸರ್ಕಾರಗಳಿಗೆ ರಾಜ್ಯಪಾಲರ ಕಿರುಕುಳ– ಪ್ರಜಾವಾಣಿ ದಿನಪತ್ರಿಕೆ, ನವೆಂಬರ್ 05,2023
4. ಬಿಜೆಪಿಯೇತರ ಪಕ್ಷಗಳಿರುವ ರಾಜ್ಯ ಸರ್ಕಾರಗಳಿಗೆ ರಾಜ್ಯಪಾಲರ ಕಿರುಕುಳ– ಪ್ರಜಾವಾಣಿ ದಿನಪತ್ರಿಕೆ, ನವೆಂಬರ್ 05,2023

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿಗಳ ಪಾತ್ರ, ಪ್ರತಿನಿಧಿತ್ವತೆ ಮತ್ತು ಉತ್ತರದಾಯಿತ್ವ :ಒಂದುಅಧ್ಯಯನ

ಡಾ. ಗಂಗಪ್ಪ ಸವದಿ

ಸಹಾಯಕ ಪ್ರಾಧ್ಯಾಪಕರು ರಾಜ್ಯಶಾಸ್ತ್ರ ವಿಬಾಗ,

ಶ್ರೀಮತಿ ಕುಸುಮಾವತಿ ಮಿರಜಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಬೆಡಕಿಹಾಳ–ಶಮನೇವಾಡಿ

Corresponding Author–ಡಾ. ಗಂಗಪ್ಪ ಸವದಿ

DOI - 10.5281/zenodo.23528694

ಸಾರಾಂಶ:

ಪ್ರಜಾಪ್ರಭುತ್ವ ಎಂಬುದು ಜನರಿಂದ ನೇರವಾಗಿಚುನಾವಣೆ ಮೂಲಕ ಆಯ್ಕೆಯಾಗುವ ಮತ್ತು ಬದಲಾವಣೆಗೆ ಒಳಪಡುವಂತಹ ಒಂದು ಸರಕಾರದ ಪದ್ಧತಿಯಾಗಿದ್ದು ಪ್ರಜಾಪ್ರಭುತ್ವವು ಪ್ರಜೆಗಳ ಆಡಳಿತ, ಪ್ರಜೆಗಳ ಸಾರ್ವಭೌಮತ್ವ, ಪ್ರಜೆಗಳ ಸ್ವಯಂ ಆಡಳಿತದ ವ್ಯವಸ್ಥೆಯನ್ನು ಸೂಚಿಸುತ್ತದೆ. ಪ್ರಜಾಪ್ರಭುತ್ವಎಂದರೆಜನರಇಚ್ಛೆಯ ಮೇಲೆ ಆಧಾರಿತವಾಗಿರುವ ಸರಕಾರ ಎಂದರ್ಥ. ಭಾರತವು ಇಗಾಗಲೇ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡಾಗಿದೆ.

ಒಂದು ರಾಷ್ಟ್ರದ ಅಭಿವೃದ್ಧಿಯು ಅಲ್ಲಿನ ರಾಜಕೀಯ ವ್ಯವಸ್ಥೆ, ಆಡಳಿತ, ಅರ್ಥವ್ಯವಸ್ಥೆಯ ಅನುಕೂಲತೆಗಳು, ಸಾಮಾಜಿಕ ವ್ಯವಸ್ಥೆ, ಪ್ರಜೆಗಳು ಮತ್ತು ಪ್ರಜಾಪ್ರತಿನಿಧಿಗಳ ಕರ್ತವ್ಯಗಳನ್ನು ಅವಲಂಬಿಸಿರುತ್ತದೆ. ಭಾರತವು ಸ್ವತಂತ್ರಗೊಂಡು 69 ವರ್ಷಗಳು ಕಳೆದರೂ ಇನ್ನು ಕೆಲವೊಂದು ಮೂಲಭೂತ ಸಮಸ್ಯೆಗಳಾದ ಆರೋಗ್ಯ, ಕುಡಿಯುವ ನೀರು, ಕೃಷಿಕರ ಸಮಸ್ಯೆಗಳು, ವಸತಿ ಸಮಸ್ಯೆಯಂತಹ ಹಲವಾರು ಸಮಸ್ಯೆಗಳಿಂದ ಮುಕ್ತವಾಗಿಲ್ಲ. ಆದ್ದರಿಂದ ಇಂತಹ ಸಮಸ್ಯೆಗಳು ಪರಿಹಾರವಾಗದೆ ಇರುವುದಕ್ಕೆ ಕಾರಣಗಳೇನು? ಇದಕ್ಕೆ ಜವಾಬ್ದಾರರು ಯಾರು? ಪ್ರಜೆಗಳೋ ಅಥವಾ ಪ್ರತಿನಿಧಿಗಳೋ ಎಂಬುದು ಪ್ರಮುಖವಾಗಿ ಅಧ್ಯಯನ ಮಾಡುವುದಾಗಿದೆ. ಜೆ.ಎಸ್.ಮಿಲ್‌ಅವರು ಹೇಳುವಂತೆ ಪ್ರಾತಿನಿಧಿಕ ಸರಕಾರಗಳು ಕೇವಲ ಪ್ರತಿನಿಧಿಗಳ ಜವಾಬ್ದಾರಿ ಅಷ್ಟೇ ಅಲ್ಲದೇ ದ್ವಿಮುಖವಾಗಿ ಪ್ರಜೆಗಳು ಮತ್ತು ಪ್ರತಿನಿಧಿಗಳು ಸೇರಿಯಾವರೀತಿಯಲ್ಲಿಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಜೆಗಳು ಬದಲಾದ ಕಾಲಕ್ಕೆ ಅನುಗುಣವಾಗಿ ಬೇಕು–ಬೇಡಿಕೆಗಳನ್ನು ಇಡೇರಿಸಿಕೊಳ್ಳಲು ಪ್ರತಿನಿಧಿಗಳು ಸ್ಪಂದಿಸುತ್ತಿದ್ದಾರೆಯೇ? ನಮ್ಮ ಆಡಳಿತ ವ್ಯವಸ್ಥೆಯಾವ ದಿಕ್ಕನತ್ತ ಸಾಗುತ್ತಿದೆ ಮತ್ತು ನಮ್ಮನ್ನಾಳುವಂತಹ ಪ್ರತಿನಿಧಿಗಳು ಪ್ರಜೆಗಳ ಸಮಸ್ಯೆಗಳನ್ನು ಶಾಸನ ಸಭೆಗಳಲ್ಲಿ ಪ್ರತಿನಿಧಿಸುತ್ತಿದ್ದಾರೆಯೇ ಹಾಗಾದರೆಯಾವ ಪ್ರಮಾಣದಲ್ಲಿ ಪ್ರತಿನಿಧಿಸುತ್ತಿದ್ದಾರೆ ಮತ್ತುಅವರ ಕರ್ತವ್ಯಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸುತ್ತಿದ್ದಾರೆಯೇ? ಪ್ರತಿನಿಧಿತ್ವದ ಸ್ವರೂಪ,ಉತ್ತರಧಾಯಿತ್ವದ ವಿವಿಧ ಆಯಾಮಗಳು ಮತ್ತು ಇಂದಿನ ಸಂದರ್ಭದಲ್ಲಿ ಪ್ರತಿನಿಧಿಗಳು ಎದುರಿಸುತ್ತಿರುವ ಸವಾಲುಗಳನ್ನು ವಿಶ್ಲೇಷಿಸುವದರಜೊತೆಗೆ,ಪರಿಣಮಕಾರಿ ಮತ್ತುಜವಾಬ್ದಾರಿಯುತ ಪ್ರಜಾಪ್ರಭುತ್ವಕ್ಕಾಗಿ ಪ್ರನಿತಿಧಿಗಳ ಕಾರ್ಯಕ್ಷಮತೆ ಪಾರದರ್ಶಕತೆ ಮತ್ತುಜನರೊಂದಿಗೆ ನಿರಂತರವಾದ ಸಂಪರ್ಕದಅಗತ್ಯತೆಯನ್ನುಚರ್ಚಿಸುತ್ತದೆ.

ಮುಖ್ಯ ಪದಗಳು: ಸಂಸದೀಯ ಪ್ರಜಾಪ್ರಭುತ್ವದ, ಪ್ರತಿನಿಧಿಗಳ ಪಾತ್ರ, ಪ್ರತಿನಿಧಿತ್ವತೆ, ಉತ್ತರದಾಯಿತ್ವ, ಜವಾಬ್ದಾರಿ, ರಾಜಕೀಯ ಪಕ್ಷಗಳು, ಪ್ರತಿನಿಧಿಗಳು, ಚುನಾವಣೆ

ಸಂಸದೀಯ ಪ್ರಜಾಪ್ರಭುತ್ವದ ಪರಿಕಲ್ಪನೆ:

'ಪ್ರಜಾಪ್ರಭುತ್ವಎಂದರೆ ಡೆಮಾಕ್ರಸಿ' ಎಂಬ ಪದವು 'ಡೆಮೋಸ್' ಮತ್ತು 'ಕ್ರಾಟಿಯಾ' ಎಂಬೆರಡು ಗ್ರೀಕ್ ಪದಗಳ ಸಂಯೋಜನೆಯಾಗಿದೆ. 'ಡೆಮೋಸ್' ಎಂದರೆ 'ಜನತೆ' ಮತ್ತು 'ಕ್ರಾಟಿಯಾ' ಎಂದರೆ 'ಅಧಿಕಾರ' ಅಥವಾ 'ಶಕ್ತಿ' ಅಥವಾ ಬಲ. ಆದ್ದರಿಂದ ಡೆಮಾಕ್ರಸಿ ಎಂದರೆ ಜನತೆಯ ಅಧಿಕಾರ ಪ್ರಜಾಶಕ್ತಿ, ಜನಬಲ, ಪ್ರಜೆಗಳೆ ಸಾರ್ವಭೌಮ ಎಂಬುದನ್ನು ಸೂಚಿಸುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲವನ್ನು ಪ್ರಾಚೀನ ಗ್ರೀಕ್‌ರ ಕಾಲದಲ್ಲಿಯೇ ಗುರುತಿಸಬಹುದಾಗಿದೆ. ಗ್ರೀಕ್ ನಗರ ರಾಜ್ಯಗಳಾದ ಅಥೆನ್ಸ್ ಮತ್ತು ಸ್ಪಾರ್ಟಾಗಳಲ್ಲಿ ಪ್ರತ್ಯಕ್ಷ ಪ್ರಜಾಪ್ರಭುತ್ವ ಸರಕಾರ ಪದ್ಧತಿಯನ್ನು ಹೊಂದಲಾಗಿತ್ತು.[1] ಈ ಪದ್ಧತಿಯ ಸರಕಾರವನ್ನು ಅತ್ಯುತ್ತಮ ಹಾಗೂ ಶ್ರೇಷ್ಠವಾದ ಸಾಮಾಜಿಕ ಸಂಸ್ಥೆಯೆಂದು ಗ್ರೀಕ್‌ರು ಪರಿಗಣಿಸಿದ್ದರು. ಈ ನಗರ–ರಾಜ್ಯಗಳಲ್ಲಿ ಜನರು ಅಥವಾ 'ಡೆಮೋಸ್', ಸ್ವಯಂ ಸರಕಾರದ ಆಳ್ವಿಕೆಯಲ್ಲಿ ಭಾಗವಹಿಸುವ ಮೂಲಕ, ಅಧಿಕಾರಿಗಳ ಮೇಲೆ ಪ್ರಭುತ್ವವನ್ನು ಸಾಧಿಸಿದ್ದರು. ಇಲ್ಲಿ ಜನಸಂಖ್ಯೆಯು ಮಿತ ಪ್ರಮಾಣದಲ್ಲಿದ್ದು, ಸರಕಾರದ ಆಳ್ವಿಕೆಯಲ್ಲಿ ಜನರು ಪ್ರತ್ಯಕ್ಷವಾಗಿ ಭಾಗವಹಿಸುತ್ತಿದ್ದು, ಇದನ್ನು ನೈಜವಾದ 'ರಿಪಬ್ಲಿಕ್' ಎಂದೇ ರಾಜಕೀಯ ಚಿಂತಕರು ವರ್ಣಿಸಿದ್ದಾರೆ.

ಪ್ರಾಚೀನರೋಮನ್ನರ ಕಾಲ (ಕ್ರಿ.ಪೂ. 6) ದಲ್ಲಿಚಕ್ರಾಧಿಪತ್ಯದ ಆಳ್ವಿಕೆ ಕೊನೆಗೊಂಡರೂ, ಪ್ರಜಾಪ್ರಭುತ್ವದ ಅಸ್ತಿತ್ವ ಅಥವಾ ಬೆಳವಣಿಗೆಯಾಗಲಿ ಸಾಧ್ಯವಾಗಲಿಲ್ಲ. ನಂತರ ಮಧ್ಯಯುಗದಲ್ಲಿ (ಕ್ರಿ.ಶ. 470–1500) ಜಮೀನ್ದಾರಿಅಥವಾ ಉಳಿಗಮಾನ್ಯ ಪದ್ಧತಿ ಸರಕಾರ ಅಸ್ತಿತ್ವಕ್ಕೆ ಬಂದು, ರೋಮನ್ 'ರಿಪಬ್ಲಿಕ್' ಎಂದುಕರೆದರೂ ಸಹ ಪ್ರಜಾಪ್ರಭುತ್ವದ ಬೆಳವಣಿಗೆಗೆ ಸಾಧ್ಯವಾಗಲಿಲ್ಲ.[2]ಅಲ್ಲಿ ಕೇವಲ ತಾತ್ವಿಕಚಿಂತನಾ ಶಾಲೆಗಳಾದ ಎಪಿಕ್ಯೂರಿಯನ್ಸ್ ಮತ್ತು ಸ್ಟೋಯಿಕ್ ಪಂತಗಳು ಬೆಳೆದು ನೈಸರ್ಗಿಕ ಕಾನೂನು ಮತ್ತು ನ್ಯಾಯ ಪ್ರಮುಖ ಸ್ಥಾನವನ್ನು ಪಡೆದವುದರಜೊತೆಗೆ ಪೊಲಿಬಿಯಸ್ ಮತ್ತು ಸಿಸೀರೋ ಕಾನೂನಿಗೆ ಪ್ರಮುಖಕೊಡುಗೆಯನ್ನು ಸಲ್ಲಿಸಿದರು. ಪ್ರಜಾಪ್ರಭುತ್ವ ತತ್ವ ಇಲ್ಲಿ ಕೇವಲ ತಾತ್ವಿಕ ರೂಪದಲ್ಲಿತ್ತು ಎಂದು ತಿಳಿದುಬರುತ್ತದೆ.

ಪ್ರಜಾಪ್ರಭುತ್ವದ ತತ್ವವು ಅತ್ಯಂತ ಯಶಸ್ವಿಯ ಘಟ್ಟ ತಲುಪಿದ್ದುಕ್ರಿ.ಶ. 17ನೇ ಶತಮಾನದ ನಂತರ17ನೇ ಶತಮಾನದ ಇಂಗ್ಲೆಂಡಿನ ರಾಣಿ ಎಲಿಜಬೆತ್‌ಳ ಕಾಲದಲ್ಲಿ ನಡೆದಕ್ರೈಸ್ತ ಮತ ಸುಧಾರಣೆಯ ಚಳುವಳಿ[3] ಕಾಲದಲ್ಲಿ. ಇಂಗ್ಲೆಂಡಿನ ರಾಜ ಮತ್ತುಜನರ (ಅಧಿಕಾರಕ್ಕೆ ಸಂಬಂಧಿಸಿದಂತೆ) ನಡುವಿನ ವಾದ ವಿವಾದದಿಂದಾಗಿ, ಜನರುರಾಜನಅಧಿಕಾರವನ್ನು ಪ್ರಶ್ನಿಸಲಾರಂಭಿಸಿದರು. ಈ ಇಂಗ್ಲೆಂಡಿನಗ್ಲೋರಿಯಸ್‌ರೆವಲ್ಯೂಷನ್ (1688), ಅಮೇರಿಕಾದಕ್ರಾಂತಿ (1776), ಫ್ರಾನ್ಸಿನ ಮಹಾಕ್ರಾಂತಿ (1789),[4]ಆಫ್ರಿಕನ್ ದೇಶಗಳಲ್ಲಿ ನಡೆದ ಮಾನವ ಹಕ್ಕುಗಳ ಕ್ರಾಂತಿ ಮತ್ತು ಆ ಕಾಲದ ಅನೇಕ ತತ್ವಜ್ಞಾನಿಗಳು, ಲೇಖಕರು, ರಾಜ್ಯನೀತಿಜ್ಞರ ಭಾಷಣ, ಪ್ರಬಂದ, ಸಂವಾದ, ಉಪನ್ಯಾಸಗಳು, ಇವೇ ಮೊದಲಾದ ಬರಹ ಬರಹಭಾಷಣಗಳು ಪ್ರಜಾಪ್ರಭುತ್ವದ ಬೆಳವಣಿಗೆಗೆ ಸಹಾಯಕಾರಿಯಾದವು.

ಆಧುನಿಕ ಯುಗದಲ್ಲಿ ಪ್ರಜಾಪ್ರಭುತ್ವವನ್ನು ಪ್ರಥಮ ಬಾರಿಗೆ ಸಂಸ್ಥಾಪಿಸಿದ ಕೀರ್ತಿಇಂಗ್ಲೇಂಡಿಗೆ ಸಲ್ಲುತ್ತದೆ. ಅಂದಿನ ಚಾರ್ಲ್ಸ್‌ದೊರೆಯ ವಿರುದ್ಧ ಹೋರಾಟ ನಡೆಸಿದ ಜನರು, ಅವರ ಶಿರಚ್ಛೇದನ ಮಾಡಿದರು. ಅನಂತರ ಎಡನೇ ಜೇಮ್ಸ್‌ನನ್ನು ಅಧಿಕಾರ ದಿಂದ ಕಿತ್ತು ಹಾಕಿ ಪ್ರಜಾಪ್ರಭುತ್ವ ತತ್ವದ ಆಧಾರದ ಮೇಲೆ ಸರಕಾರವನ್ನು ಸ್ಥಾಪಿಸಿದರು. ಅನಂತರ 18ನೇ ಶತಮಾನದಲ್ಲಿ ಅಮೇರಿಕಾದ ಜನತೆ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ನಡೆಸಿ, ವಿಜಯಗಳಿಸಿ ಪ್ರಜಾಪ್ರಭುತ್ವ ಪದ್ಧತಿಯ ಸರಕಾರವನ್ನು ಸ್ಥಾಪಿಸಿಕೊಂಡರು.[5]ಇದಾದ ನಂತರ ಬ್ರಿಟೀಷರು ಸುಮಾರು 300 ವರ್ಷಗಳ ಕಾಲ ಪ್ರಜಾಪ್ರಭುತ್ವ ತತ್ವಕ್ಕೆ ವಿರುದ್ದವಾದತಮ್ಮ ವಸಾಹತುಗಳನ್ನು ವಿಸ್ತರಿಸಿ ಆಡಳಿತ ನಡೆಸಿದರು. ನಂತರ 1857 ರಲ್ಲಿ ನಡೆದ ಸ್ವಾತಂತ್ರ ಚಳುವಳಿ ಬ್ರಿಟೀಷ ವಸಾಹತುಶಾಹಿ ವಿರುದ್ಧ ಹೋರಾಡಿ ಪ್ರಜಾಪ್ರಭುತ್ವ ಬೆಳವಣಿಗೆಗೆ ಮೈಲುಗಲ್ಲಾತು.

1. ಸಸುಭಾಸ್ ಕಶ್ಯಪ್, ಅವರ್ ಪಾಲಿರ್ಮೆಂಟ್ , ನ್ಯಾಶನಲ್ ಬುಕ್‌ಟ್ರಸ್ಟಆಫ್‌ಇಂಡಿಯಾ, ನವದೆಹಲಿ, 2010.
2. ಶರ್ಮ ಮನೋಜ್, ಪಾಲಿಟಿಕಲ್‌ಥಿಯರಿಆಂಡಥೌಟ್, ಎನ್ಮೋಲ್ ಪಬ್ಲಿಕಷನ್, ನವದೆಹಲಿ, 2010.
3. ಸದಾಸಿವ ಕೆ, ಆಧುನಿಕಯುರೋಪಿನ ಇತಿಹಾಸ, ಪ್ರಿಯಾದರ್ಶಿನಿ ಪ್ರಕಾಶನ , ಮೈಸೂರು, 2006
4. ಸ್ವಾತಂತ್ರ್ಯ,ಸಮಾನತೆ ಮತ್ತು ಭಾತೃತ್ವ
5. ಸದಾಸಿವ ಕೆ, ಆಧುನಿಕಯುರೋಪಿನ ಇತಿಹಾಸ, ಪ್ರಿಯಾದರ್ಶಿನಿ ಪ್ರಕಾಶನ , ಮೈಸೂರು, 2006

20–21 ನೇ ಶತಮಾನದಲ್ಲಿ ಪ್ರಜಾಪ್ರಭುತ್ವತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. 'ಪ್ರಜಾಪ್ರಭುತ್ವ' ಎಂಬುದು ಮಾನವನ ಬೆಳವಣಿಗೆಗೆ ಸಂಬಂಧಿಸಿದ ಮೂಲಭೂತವಾದರಾಜಕೀಯ ಪರಿಕಲ್ಪನೆಯಾಗಿದೆ. ಆದರೂ ಈ ಪದದ ಬಳಕೆಯಲ್ಲಿ ವಿವಿಧತೆಗಳನ್ನು ಕಾಣಬಹುದು ಅವುಗಳೆಂದರೆ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕತೆ ಮತು ್ತರಾಜಕೀಯ, ಆರ್ಥಿಕ, ಸಾಮಾಜಿಕ, ನೈತಿಕ ಅಥವಾ ಸರಕಾರದ ವಿಷಯದಲ್ಲಿ ಸಮಾನತೆ ಸ್ವಾತಂತ್ರ್ಯ ಇವೇ ಮೊದಲಾದ ವಿಚಾರಕ್ಕೆ ಸಂಬಂಧಿಸಿದಂತೆಯೂ ಬಳಸಲಾಗುತ್ತದೆ. ಇಂತಹ: ಬಹುವಿಧದ ಬಳಕೆಯಿಂದ ಪ್ರಜಾಪ್ರಭುತ್ವ ಎಂಬ ಪದಕ್ಕೆ ನಿರ್ದಿಷ್ಟವಾಗಿ ವ್ಯಾಖ್ಯಾನವಿದ್ದರೂ ಅದನ್ನು ವಿಭಿನ್ನವಾಗಿ ಕಲ್ಪಿಸಲಾಗುತ್ತದೆ.[6]

ಆಂಗ್ಲೋ–ಅಮೇರಿಕದ ರಾಜಕೀಯ ಚಿಂತಕರು ಪ್ರಜಾಪ್ರಭುತ್ವ ಎಂದರೆ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳುವ ಸ್ವಾತಂತ್ರ್ಯ ವಾಕ್ ಸ್ವಾತಂತ್ರ್ಯ ಕಾನೂನಿನ ಮುಂದೆ ಸಮಾನತೆ, ಸರಕಾರವನ್ನು ವಿರೋಧಿಸುವ ಅಥವಾ ಟೀಕಿಸುವ ಹಕ್ಕು ಯಾವುದೇ ಬಗೆಯಉದ್ಯೋಗಅಥವಾ ವೃತ್ತಿಯನ್ನು ಅವಲಂಬಿಸಲು ಇರುವ ಅವಕಾಶ, ಇದೇ ಪ್ರಜಾಪ್ರಭುತ್ವ ಎಂದಿದ್ದಾರೆ. ಆದರೆ 1900 ರಲ್ಲಿ ಪ್ರಜಾಪ್ರಭುತ್ವ ವಿರೋಧಿ ಸಿದ್ಧಾಂತದ ಕಮ್ಯೂನಿಷ್ಟರು ಪ್ರಜಾಪ್ರಭುತ್ವಎಂದರೆ ಸಂಪೂರ್ಣ ವರ್ಗರಹಿತತತ್ವದ ಬೆಳವಣಿಗೆಯ ಆಧಾರದ ಮೇಲೆ ಅರ್ಥೈಸಿದ್ದಾರೆ. ರಷ್ಯಾದಕಮ್ಯುನಿಷ್ಟರು, ಚೈನಾದ ಮಾವೋವಾದಿಗಳು, ಜಗತ್ತಿನಎಡಪಂಥೀಯರು ಪ್ರಜಾಪ್ರಭುತ್ವವನ್ನು 'ಜನತಾ ಪ್ರಜಾಪ್ರಭುತ್ವ' ಎಂದರೆ ಮುಸಲೋನಿಯು ಸಹ ನಿರಂಕುಶ ಪ್ರಭುತ್ವವನ್ನೇ ನೈಜವಾದ ಪ್ರಜಾಪ್ರಭುತ್ವಎಂದಿದ್ದಾನೆ. ಇಂಡೋನೇಷಿಯಾವು 'ಗೈಡೆಡ್ ಡೆಮಾಕ್ರಸಿ'ಯ ಬಗ್ಗೆ ಹಾಗೂ ಪಾಕಿಸ್ತಾನವು 'ಬೇಸಿಕ್ ಡೆಮಾಕ್ರಸಿ'ಯ ಬಗ್ಗೆ ಪ್ರಸ್ತಾಪಿಸುತ್ತದೆ. ಹೀಗೆ ಪ್ರಜಾಪ್ರಭುತ್ವ ಸಿದ್ಧಾಂತದ ಬಳಕೆಯಲ್ಲಿ ವ್ಯತ್ಯಾಸ ಹಾಗೂ ವಾದ ವಿವಾದಗಳನ್ನು ಕಾಣಬಹುದಾಗಿದೆ. ಉದಾಹರಣೆಗೆ ಜನರು ನೇರವಾಗಿ ಆಡಳಿತ ನಡೆಸುವುದು, ಪ್ರಜೆಗಳೆಲ್ಲರಿಗೂ ಸಮಾನವಾದ ಹಕ್ಕುಗಳನ್ನು ನೀಡುವುದು, ತಾವು ಮಾಡುವ ಕೆಲಸಗಳಿಗೆ ಅಧಿಕಾರಿಗಳು ಪ್ರಜೆಗಳಿಗೆ ಜವಾಬ್ದಾರರಾಗಿರುವುದು ಪ್ರಜಾಪ್ರಭುತ್ವ[7] ಎಂದು ಹೆರೋಡಟಸ್‌ರವರು ಹೇಳುತ್ತಾರೆ. ಅಬ್ರಾಹಂ ಲಿಂಕನ್‌ರವರು ಪ್ರಜೆಗಳಿಂದ ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರವಾಗಿ ನಡೆಸಲ್ಪಡುವ ಆಡಳಿತವೇ ಪ್ರಜಾಪ್ರಭುತ್ವ[8] ಎಂದು ಹೇಳಿದ್ದಾರೆ, ನ್ಯಾಯಬದ್ದವಾದ ಒಂದು ರಾಜ್ಯದ ಪರಮಾಧಿಕಾರವನ್ನು ಯಾವುದೆಒಂದು ವರ್ಗದ ಕೈವಶ ಮಾಡದೆ, ಪೌರತ್ವದ ಹಕ್ಕುಗಳನ್ನು ಪಡೆದಿರುವಎಲ್ಲ ಪ್ರಜೆಗಳ ಇಚ್ಛೆಯ ಮೇಲೆ ಸರಕಾರವನ್ನು ನಡೆಸುವುದು ಪ್ರಜಾಪ್ರಭುತ್ವ[9] ಎಂದು ಲಾರ್ಡ ಬ್ರೈಸ್‌ರವರು ಹೇಳುತ್ತಾರೆ.

ಈ ಮೇಲಿನ ವ್ಯಾಖ್ಯಾನಗಳಿಂದ, ಪ್ರಜಾಪ್ರಭುತ್ವ ಎಂಬುದು ಸರಕಾರದಒಂದು ಪದ್ಧತಿಯಾಗಿದ್ದು, ಇಲ್ಲಿ ಪ್ರಜೆಗಳೇ ಪ್ರಭುಗಳಾಗಿರುತ್ತಾರೆ. ಈ ಸರಕಾರವು ಪ್ರಜೆಗಳೇ, ಪ್ರಜೆಗಳಿಂದ, ಪ್ರಜೆಗಳಿಗೋಸ್ಕರ ನಡೆಯುತ್ತದೆ. ಈ ಬಗೆಯ ಪ್ರಜಾಪ್ರಭುತ್ವ ಸರಕಾರ ಪದ್ಧತಿಯು ಜನರನ್ನು ಪ್ರತಿನಿಧಿಸುತ್ತದೆ ಮತ್ತು ಜನರಿಗೇ ಜವಾಬ್ದಾರಿಯಾಗಿ ಕಾರ್ಯನಿರ್ವಹಿಸುತ್ತದೆ.

ಇಂತಹಾ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರಮುಖವಾಗಿಎರಡು ವಿಧಗಳಲ್ಲಿ ವಿಂಗಡಿಸಲಾಗಿದೆ. ಅವುಗಳೆಂದರೆ, ಪ್ರತ್ಯಕ್ಷ ಪ್ರಜಾಪ್ರಭುತ್ವ ಮತ್ತು ಪ್ರಾತಿನಿಧಿಕ ಪ್ರಜಾಪ್ರಭುತ್ವ. ಪ್ರತ್ಯಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯು ಗ್ರೀಕ್‌ನ ನಗರ ರಾಜ್ಯಗಳಾದ ಅಥೆನ್ಸ್ ಮತ್ತು ಸ್ಪಾರ್ಟಗಳಲ್ಲಿ ಜಾರಿಯಲ್ಲಿದ್ದುದು ತಿಳಿದುಬರುತ್ತದೆ. ಇಲ್ಲಿನ ಭೂವಿಸ್ತಾರ ಮತ್ತುಜನಸಂಖ್ಯೆಕಡಿಮೆ ಪ್ರಮಾಣದಲ್ಲಿದ್ದುಜನರು ನೇರವಾಗಿ ಆಡಳಿತದ ವ್ಯವಹಾರಗಳಲ್ಲಿ ಭಾಗವಹಿಸಿ ಶಾಸನೀಯ ಮತ್ತು ಆಡಳಿತದ ನಿರ್ಧಾರಗಳನ್ನು ಸ್ವತಃತಾವೇ ತೆಗೆದುಕೊಳ್ಳುವುದರ ಮೂಲಕ ಅಧಿಕಾರಿಗಳ

[6] ಸಾರ್ವಭೌಮಅಧಿಕಾರ, ಪ್ರಜೆಗಳ ಆಡಳಿತ, ಸ್ವಾತಂತ್ರ್ಯ

[7]ಚಂದ್ರಪ್ರಕಾಶ ಬಾಂಬ್ರಿ, ಡೆಮಾಕ್ರಸಿ ಇನ್‌ಇಂಡಿಯಾ, ನ್ಯಾಶನಲ್ ಬುಕ್‌ಟ್ರಸ್ಟಆಫ್‌ಇಂಡಿಯಾ, ನವದೆಹಲಿ, 2007.

[8]ಅದೇ ಪುಸ್ತಕ.

[9]ಅದೇ ಪುಸ್ತಕ.

ಮೇಲೆ ಹಿಡಿತ ಸಾಧಿಸಿದ್ದರು ಎಂಬುದು ತಿಳಿದು ಬರುತ್ತದೆ.[10]

ಪ್ರಾತಿನಿಧ್ಯತೆಯ ಪರಿಕಲ್ಪನೆ:

ಪ್ರಾತಿನಿಧ್ಯತೆಎಂಬುವುದು ಅಧುನಿಕ ರಾಜಕೀಯ ವಿಜ್ಞಾನ ಮತ್ತು ಪ್ರಮುಖ ಪರಿಕಲ್ಪನೆಗಳಲ್ಲಿ ಒಂದಾಗಿದೆಇದು ಸರಳವಾದ ವ್ಯಾಖ್ಯಾನಕ್ಕೆ ಸೀಮಿತವಾಗದೆ, ವ್ಯಕ್ತಿ ಸಮುದಾಯ ಮತ್ತು ರಾಜಕೀಯ ಸಂಸ್ಥೆಗಳ ಪರವಾಗಿ ಮತ್ತೊಬ್ಬ ವ್ಯಕ್ತಿಅಥವಾ ಸಂಸ್ಥೆ ಕಾರ್ಯನಿರ್ವಹಿಸುವ ವಿಶಾಲ ಅರ್ಥವನ್ನು ಹೊಂದಿದೆ. ಅಧುನಿಕ ಪ್ರಜಾಪ್ರಭುತ್ವದಲ್ಲಿಜನರ ನೇರ ಭಗವಹಿಸುವಿಕೆ ಸಾಧ್ಯವಾಗದ ಸಂದರ್ಭಗಳಲ್ಲಿ ಚುನಾಯಿತ ಪ್ರತಿನಿಧಿಗಳ ಮೂಲಕ ಜನರ ಆಶೆ ಆಶೋತ್ತರಗಳನ್ನು ಶಾಸನ ಸಭೆಗಳಲ್ಲಿ ವ್ಯಕ್ತಪಡಿಸುವ ವ್ಯವಸ್ಥೆಯೇ ಪ್ರಾತಿನಿಧಿಕ ಪ್ರಜಾಪ್ರಭುತ್ವ.

ಆಂಗ್ಲ ಭಾಷೆಯ ರೆಪ್ರೆಜೆಂಟೇಶನ್ ಎಂಬ ಪದವು ಲ್ಯಾಟಿನ್ ಭಾಷೆಯರೆಪ್ರಜೆಮಟೇರ್ ಎಂಬ ಪದದಿಂದ ಬಂದಿದ್ದು, ಪ್ರದರ್ಶಿಸುವುದು, ತೋರಿಸುವುದು, ಬಿಂಬಿಸುವುದು ಅಥವಾ ಮತ್ತೊಬ್ಬರ ಪರವಾಗಿ ನಿಲ್ಲುವುದು ಎಂಬ ಅರ್ಥಗಳನ್ನು ಹೊಂದಿದೆ. ಆರಂಬದಲ್ಲಿ ಈ ಪದವು ಮುಖ್ಯವಾಗಿ ಭೌತಿಕ ವಸ್ತುಗಳನ್ನು ಪ್ರತಿನಿಧಿಸುವ ಅಥವಾ ಬಿಂಬಿಸುವ ಅರ್ಥದಲ್ಲಿ ಬಳಕೆಯಾಗುತ್ತಿತ್ತು. ನಂತರಇದರ ಅರ್ಥವು ವಿಸ್ತಾರಗೊಂಡು ವ್ಯಕ್ತಿಗಳು, ಸಮುದಾಯಗಳು ಮತ್ತು ರಾಜಕೀಯ ಸಂಸ್ಥೆಗಳನ್ನು ಒಳಗೊಂಡಿತು.

ಪ್ರತಿನಿಧ್ಯತೆಯ ಮೂಲ ರೂಪಗಳನ್ನು ಪುರಾತನ ಗ್ರೀಕ್ ಮತ್ತು ರೋಮನ್ ಸಮಾಜಗಳಲ್ಲಿಯೂ ಗುರುತಿಸಬಹುದು. ಪುರಾತನಗ್ರೀಕರಲ್ಲಿ ಕೆಲವು ಅಧಿಕರಿಗಳನ್ನು ಚುನಾಯಿಸುವ ಮತ್ತು ರಾಯಭಾರಿಗಳನ್ನು ಕಳುಹಿಸುವ ಪದ್ದತಿಗಳಿದ್ದರೂ, ಅವು ಇಂದಿನ ರಾಜಕೀಯ ಪ್ರಾತಿನಿಧ್ಯತೆಯ ಪೂರ್ಣ ರೂಪವಾಗಿರಲಿಲ್ಲ. ರೋಮನ್‌ರ ಕಾಲದಲ್ಲಿ *ರೆಪ್ರೆಸೆಂಟೇರ್* ಎಂಬ ಪದಬಳಕೆಯಲ್ಲಿದ್ದರೂ ಅದರ ರಾಜಕೀಯ ಅರ್ಥವು ನಂತರದಲ್ಲಿ ಹೆಚ್ಚು ಸ್ಪಷ್ಟವಾಗಿ ಬೆಳೆಯಿತು

ಮಧ್ಯಯುಕದ ಕೊನೆಯ ಭಗ ಮತ್ತು ಅಧುನಿಕಯುಗದ ಪ್ರಾರಂಬದಲ್ಲಿ ಪ್ರಾತಿನಿಧ್ಯತೆಯ ರಾಜಕೀಯ ಅರ್ಥವು ವಿಸ್ತಾರಗೊಂಡಿತು. ವಿಶೇಷವಾಗಿ ಹದಿನೈದನೆಯ ಶತಮಾನಗಳಿಂದ ವ್ಯಕ್ತಿಗಳು ಮತ್ತು ಸಮುದಾಯಗಳ ಪರವಾಗಿ ಕಾರ್ಯನಿರ್ವಹಿಸುವ ಪ್ರತಿನಿಧಿಗಳ ಪರಿಕಲ್ಪನೆ ಬಲವಾಯಿತು. ನಂತರ ಸಂವಿದಾನತ್ಮಕ ಸರ್ಕಾರ ಮತ್ತು ಪ್ರಜಾಭ್ರಭುತ್ವದ ಬೆಳವಣಿಗೆಯೊಂದಿಗೆ ಇದು ಪಮುಖ ರಾಜಕೀಯ ಸಂಸ್ಥೆಯಾಗಿರೂಪಗೊಂಡಿತು.

ಅಧುನಿಕರಾಜಕೀಯ ಚಿಂತನೆಗಳಲ್ಲಿ ಹನ್ನಾ ಪಿಟಕಿನ್‌ಅವರ ದಿ ಕಾನ್ಸೆಪ್ಟ ಆಫ್ ರಿಪರೆಸೆಂಟೆಸನ್ ಪ್ರಾತಿನಿಧ್ಯತೆಯ ಅಧ್ಯಯನಕ್ಕೆ ಮಹತ್ವದ ಕೊಡುಗೆ ನೀಡಿದೆ. ಪಿಟಕಿನ್‌ರವರದೃಷ್ಟಿಯಲ್ಲಿ ಪ್ರಾತಿನಿಧ್ಯತೆ ಎಂದರೇ, ಕೇವಲ ಒಬ್ಬ ವ್ಯಕ್ತಿಯು ಮತ್ತೊಬ್ಬರ ಪರವಾಗಿ ಮಾತನಡುವುದು ಮತ್ರವಲ್ಲ, ಪ್ರತಿನಿಧಿ ಮತ್ತು ಪ್ರತಿನಿಧಿಸಲ್ಪಡುವವರ ನಡುವಿನ ರಾಜಕೀಯ ಸಂಬಂಧವಾಗಿದೆ. ರಾಜಕೀಯ ಪ್ರಾತಿನಿಧ್ಯತೆಯಲ್ಲಿ ಚುನಾಯಿತ ಪ್ರತಿನಿಧಿಗಳು ಜನರ ಪರವಾಗಿ ಕಾರ್ಯನಿರ್ವಹಿಸುತ್ತಾರೆ. ಅವರು ಜನರ ಸಮಸ್ಯೆಗಳನ್ನು ಪ್ರಸ್ತಾಪಿಸುವುದು, ಕಾನೂನು ರಚನೆಯಲ್ಲಿ ಭಗವಹಿಸುವುದು, ಸರಕರದಕರ್ಯನಿರ್ವಹಣೆಯನ್ನು ಪರಿಶಿಲಿಸುವುದು ಮತ್ತು ಸಾರ್ವಜನಿಕ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಮುಂತಾದ ಕರ್ಯಗಳನ್ನು ನಿರ್ವಹಿಸುತ್ತಾರೆ. ಈ ಕಾರಣದಿಂದಾಗಿ ಪ್ರಾತಿನಿಧ್ಯತೆ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಮತ್ತು ಸರಕಾರದ ನಡುವಿನ ಸಂಪರ್ಕ ಸೇತುವೆಯಾಗಿದೆ. ಹೀಗಾಗಿ ಪ್ರಾತಿನಿಧ್ಯತೆಯನ್ನು" ಪ್ರಜೆಗಳ ಪರವಾಗಿ ನಿರ್ಧಾರ ಕೈಗೊಳ್ಳುವ ಮತ್ತುಅವರ ಆಶೆ–ಆಶೋತ್ತರಗಳನ್ನು , ಹಿತಾಸಕ್ತಿ ಮತ್ತು ಸಮಸ್ಯೆಗಳನ್ನು ಸಾರ್ವಜನಿಕಆಡಲಿತ ಮತ್ತು ಶಾಸನ ರಚನಾ ಪ್ರಕ್ರಿಯೆಯಲ್ಲಿ ಪ್ರತಿಬಿಂಬಿಸುವ ರಾಜಕೀಯ ವ್ಯವಸ್ಥೆ" ಎಂದು ವ್ಯಾಖ್ಯಾನಿಸಬಹುದು. ಪರೀಣಮಕಾರಿ ಪ್ರಾತಿನಿಧ್ಯತೆಯು ಕೇವಲ ಚುನಾವಣೆಗಳಲ್ಲಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದಕ್ಕೆ ಸೀಮಿತವಾಗದೆ,

[10] ಮಜುಮದಾರ್ ಆರ್.ಸಿ., ಕನ್ನಡಕ್ಕೆ ಶಾರದಾ ಪ್ರಸಾದಎನ್.ಎಸ್. ಭಾರತದಇತಿಹಾಸ, ಕುವೆಂಪು ಕನ್ನಡಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2012.

ನಿರಂತರಜನಸಂಪರ್ಕ, ಪಾರದರ್ಶಕತೆ, ಭಾಗವಹಿಸುವಿಕೆ, ಮತ್ತು ಉತ್ತರಧಯಿತ್ವವನ್ನು ಒಳಗೊಂಡಿರುತ್ತದೆ.

ಪ್ರಾತಿನಿಧ್ಯತೆಯ ಪರಿಕಲ್ಪನೆಯಅಧುನಿಕದೃಷ್ಟಿಕೋನ:

ವಿಶೇಷವಾಗಿ ಎರಡನೇ ಜಾಗತಿಕಯುದ್ಧದ ನಂತರದ ಅವಧಿಯಲ್ಲಿ ಉಂಟಾದ ಸಮಕಾಲಿನಲ್ಲಿ ಪ್ರಪಂಚದಲ್ಲಿ ಸಂಸತ್ತಿನ ಕಾರ್ಯಚಟುವಟಿಕೆಗಳಲ್ಲಿ ಆಗುತ್ತಿರುವ ಕೆಲಸ ಕಾರ್ಯಗಳಬದಲಾವಣೆಗಳ ಪರಿಕಲ್ಪನೆಯ ಹಿನ್ನೆಲೆಯಲ್ಲಿ, ಪ್ರತಿನಿಧಿಯುಒಬ್ಬ ಶಾಸನ ರಚನೆಕಾರ ಎಂಬ ಪರಿಕಲ್ಪನೆಯಿಂದ ಅವನೊಬ್ಬ ಸಂವಹನಕಾರ ಮತ್ತು ಒಂಬುಡ್ಸಮ್ಯಾನಗಳೆಂದು ಪರಿಗಣಿಸ ಬಹುದಾದಷ್ಟು ಬದಲಾವಣೆಗಳು ಆಗಿರುವುದು ತಿಳಿದುಬರುತ್ತದೆ. ಒಂದುರಾಜಕೀಯ ವ್ಯವಸ್ಥೆಯಲ್ಲಿ ಶಾಸಕಾಂಗದ ಮಹತ್ವದ ಆದಾರದ ಮೇಲೆ ಜನಪ್ರತಿನಿಧಿಯ ಪಾತ್ರ ಅವಲಂಬನೆಯಾಗಿರುತ್ತದೆ. ಆಧುನಿಕ ಶಾಸನಸಭೆಗಳ ಸಂಕೀರ್ಣತೆ, ಶಾಸನ ಸಭೆಗಳ ಕಾರ್ಯಭಾರದಒತ್ತಡ ಮತ್ತುಕಲ್ಯಾಣರಾಜ್ಯದ ಪರಿಕಲ್ಪನೆಯಿಂದಾಗಿ ಸಮಕಾಲಿನ ಸಂದರ್ಭದಲ್ಲಿ ಸಂಸತ್ತು ನಿರ್ವಹಿಸುತ್ತಿರುವ ಕಾನೂನುಬದ್ಧಗೊಳಿಸುವಿಕೆ, ಸಾಮಾಜೀಕರಣ, ನೇಮಕಾತಿ ಅನಾನುಕೂಲತೆಗಳ ಪರಿಹಾರಮತ್ತು ಆಡಳಿತಾತ್ಮಕ ಮತ್ತುಕಾರ್ಯ ನಿರ್ವಾಹಕ ಮೇಲುಸ್ತುವಾರಿಗಳಂತಹ ವಿವಿಧ ಅನೇಕ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವ ಕಾರಣದಿಂದ ಶಾಸಕಾಂವನ್ನು ಕಾನೂನು ರಚಿಸುವಅಂಗವೆಂದು ತಿಳಿಯುವುದರ ಬದಲಾಗಿ ಅದನ್ನು ಕಾರ್ಯನಿರ್ವಾಹಕ ಅಂಗದಂತೆ ನೋಡುವಂತಾಗಿದೆ.

ಆರ್.ಬಿ.ಜೈನ್‌ರವರು ಶಾಸಂಕಾಗದ ಉಪಸ್ಥತಿಯು, ಅದರ ಸದ್ಗುಣವೆಂಬ ಜನಪ್ರಿಯ ಗುಣಲಕ್ಷಣದಿಂದಾಗಿಅದುಜವಾಬ್ದಾರಿಯುತ ಸರಕಾರದ ಪ್ರಾಮುಖ್ಯತೆಯನ್ನು ಪ್ರತಿನಿಧಿಸುತ್ತದೆ. ತಮ್ಮ ಚರ್ಚೆಗಳ ಮುಖಾಂತರ ಮತ್ತುತಮ್ಮ ಸಲಹೆಗಳ ಮುಖಾಂತರ ಶಾಸಕರು ಶಾಸನಸಭೆಯ ಗುಣಮಟ್ಟವನ್ನು ಸುಧಾರಿಸಬಹುದುಮತ್ತು ಮಸೂದೆಗಳ ಮಂಡನೆಯ ವಿವಿಧ ಹಂತಗಳಲ್ಲಿ ತಾವು ಭಾಗವಹಿಸುವ ಮುಖಾಂತರ ಶಾಸನ ಸಭೆಯ ಬಗ್ಗೆ ಸಾರ್ವಜನಿಕ ಜಾಗ್ರತಿಯನ್ನು ಉಂಟುಮಾಡಬಹುದು. ಈ ರೀತಿಯಲ್ಲಿ ಶಾಸಕರು ಮತ್ತು ಪ್ರತಿನಿಧಿಗಳ ಪಾತ್ರದಲ್ಲಿ ಮಾಡುವ ಬದಲಾವಣೆಯು ಆಸಕ್ತಿ ಪೂರ್ಣವಾಗಿದೆಮತ್ತು ಪ್ರಾತಿನಿಧ್ಯತೆಯಆಧುನಿಕ ಪರಿಕಲ್ಪನೆಗಳ ಮೇಲೆ ಪರಿಗಣಿಸಬಹುದಾದಷ್ಟು ಪರಿಣಾಮವನ್ನು ಹೊಂದಿದೆ.

ಪ್ರಜಾಪ್ರಭುತ್ವ ಮತ್ತು ಪ್ರಾತಿನಿದ್ಯತೆಯಕುರಿತಾದ ಸಮಕಾಲಿನ ಚರ್ಚೆಗಳು:

ಮದ್ಯಯುಗದಲ್ಲಿ ಪ್ರಾತಿನಿದ್ಯತೆಯು ಸಂವಿಧಾನಾತ್ಮಕ ವ್ಯವಸ್ಥೆಯ ಒಂದು ಪರಿಕಲ್ಪನೆಯಾಗಿದೆ. ಪುರಾತನ ಕ್ರೈಸ್ತ ಚರ್ಚಗಳಲ್ಲಿ ಇದನ್ನು ಪ್ರಾತಿನಿಧಿಕ ಪರಿಷತ್ತು ಎಂದು ಕರೆಯುತ್ತಿದ್ದರು. ಯುರೋಪಿನ ಉಳಿಗಮಾನ್ಯ ಸಮಾಜದಲ್ಲಿ ದೊರೆಗಳ ಉದಯದಿಂದಾಗಿ ವಿವಿಧ ಸಮುದಾಯಗಳಿಂದ ಪ್ರತಿನಿಧಿಗಳನ್ನು ಕರೆಯುವ ಸಂಪ್ರದಾಯ ಪ್ರಾರಂಭವಾಯಿತು. ಮತ್ತು ಕೆಲವು ಚಕ್ರಾಧಿಪತಿಗಳಿಂದ ಬಳಸಲ್ಪಟ್ಟ ತಂತ್ರವಾಗಿ ಮಧ್ಯಕಾಲಿನ ಯುಗದಲ್ಲಿ ಇದು ಜನ್ಮ ತಾಳಿತು. 13ನೇ ಶತಮಾನದ ಅಂತ್ಯ ಮತ್ತು 14ನೇ ಶತಮಾನದ ಪ್ರಾರಂಭದಲ್ಲಿ ಪ್ರಾತಿನಿಧಿಕ ಸಂಸ್ಥೆಗಳಾದ ಇಂಗ್ಲೆಂಡಿನ ಸಂಸತ್ತು, ಪ್ರಾನ್ಸ್‌ನಎಸ್ಟೇಟ್, ಸ್ಪೇನ್‌ನಕೋರ್ಟ್, ಜರ್ಮನಿಯಡಯಟ್ ಮುಂತಾದವುಗಳು ರಾಷ್ಟ್ರೀಯ ವ್ಯವಹಾರಗಳಲ್ಲಿ ಪ್ರಮುಖ ಪಾತ್ರವಹಿಸಿದವು.[11] ಇವುಗಳು ಸಮಾಜದ ಕೆಲವೇ ಅಂಶಗಳನ್ನು ಮಾತ್ರ ಪ್ರತಿನಿಧಿಸುತ್ತಿದ್ದವು. ಮದ್ಯಯುಗದಅಂತ್ಯದಲ್ಲಿ ನಿರಂಕುಶಅರಸೊತ್ತಿಗೆಯ ಪ್ರಾಬಲ್ಯದಿಂದಾಗಿ ಅವುಗಳು ಅವನತಿ ಹೊಂದಿದವು.

ಆಧುನಿಕಯುಗದಲ್ಲಿ ಪ್ರಾತಿನಿದ್ಯತೆಯು ಪ್ರಮುಖವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯೊಂದಿಗೆ ಬೆಳೆದು ಬಂದ ಪರಿಕಲ್ಪನೆಯಾಗಿದ್ದು ಇಂಗ್ಲೆಂಡಿನಲ್ಲಿ ನಡೆದ ರಕ್ತರಹಿತಕ್ರಾಂತಿ, (1688) ಅಮೇರಿಕಾದಕ್ರಾಂತಿ (1776), ಪ್ರಾನ್ಸ್‌ಕ್ರಾಂತಿ, (1789) ಭಾರತದ ಸ್ವಾತಂತ್ರ್ಯ ಸಂಗ್ರಾಮ (1947) ರ ನಂತರಎಲ್ಲ ರಾಷ್ಟ್ರಗಳು ಬ್ರಿಟೀಷ್ ವಸಾಹತು

[11] ಸದಾಶಿವ ಕೆ, ಆಧುನಿಕಯುರೋಪಿನ ಇತಿಹಾಸ, ಪ್ರಿಯಾದರ್ಶಿನಿ ಪ್ರಕಾಶನ , ಮೈಸೂರು, 2006

ಶಾಹಿಯಿಂದ ಸ್ವಾತಂತ್ರ್ಯಗೊಂಡು ತಮ್ಮದೆ ಆದ ಸ್ವಾತಂತ್ರ್ಯವಾದ ಶಾಸನ ಸಭೆಗಳನ್ನು ರಚಿಸಿಕೊಂಡವು.[12] ಬ್ರಿಟಿನ್‌ನಲ್ಲಿ ಹೊಸ ಆಫ್ ಲಾರ್ಡ ಮತ್ತು ಹೌಸ್ ಆಫ್ ಕಾಮನ್ಸ್ ಎಂಬ ಎರಡು ಸದನಗಳನ್ನೊಳಗೊಂಡ ಸಂಸತ್ತಿನರಚನೆಯೊಂದಿಗೆ ಸಮಾಜದ ಹಲವಾರು ವರ್ಗಗಳಿಂದ ಪ್ರತಿನಿಧಿಗಳನ್ನು ನೇಮಕ ಮಾಡುವದರೊಂದಿಗೆ ಪ್ರಾತಿನಿಧ್ಯತೆಯು ಉಗಮಗೊಂಡು ಅಮೇರಿಕಾದ ಶಾಸಕಾಂಗದಲ್ಲಿ ಸಿನೆಟ್ ರಾಜ್ಯಗಳನ್ನು ಪ್ರತಿನಿಧಿಸುವ ಸದನವಾಗಿ, ಪ್ರತಿನಿಧಿ ಸಭೆಯು ಪ್ರಜೆಗಳನ್ನು ಪ್ರತಿನಿಧಿಸುವ ಸಭೆಯಾಗಿಯೂ ಮತ್ತು ಭಾರತದಲ್ಲಿರಾಜ್ಯಸಭೆ ರಾಜ್ಯಗಳನ್ನು ಪ್ರತಿನಿಧಿಸುವ ಸದನವಾಗಿ ಮತ್ತು ಲೋಕಸಭೆ ಜನತಾ ಸದನವಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ವಯಸ್ಕ ಮತದಾನ ಮತ್ತು ಪದ್ದತಿಯಿಂದ ನಡೆಯುವ ಚುನಾವಣೆಗಳ ಮೂಲಕ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದರ ಮೂಲಕ ಪ್ರಾತಿನಿಧ್ಯತೆಯು ವಿಸ್ತಾರಗೊಂಡಿತು.

ಈ ವಿಚಾರವನ್ನುಕುರಿತು ಮಿಲ್‌ರವರುತಮ್ಮ ಪ್ರಾತಿನಿಧಿಕ ಸರಕಾರದಲ್ಲಿ ವಿವರಣೆ ನೀಡಿದ್ದಾರೆ. ಇಲ್ಲಿರಾಜಕೀಯ ಸಂಸ್ಥೆಗಳು ಮತ್ತು ರಾಜಕೀಯ ಸಂಘಗಳ ಕುರಿತಾಗಿ ಚರ್ಚಿಸುವ ಪೂರಕ ಮತ್ತು ವೈರುಧ್ಯದ ಕಲ್ಪನೆಗಳ ಬಗ್ಗೆ ಚರ್ಚಿಸುತ್ತಾರೆ. ಇಲ್ಲಿ ನಾವು ಮೊದಲು ಸರಕಾರ ಮತ್ತು ಅದರ ಉದ್ದೇಶಗಳನ್ನು ಚರ್ಚಿಸುವುದು. ಎರಡನೇಯದಾಗಿ ಯಾವ ಸರಕಾರಗಳು ಉತ್ತಮವಾದುವುಗಳು ಎಂಬುದನ್ನುತಿರ್ಮಾನಿಸುವ ಬಗ್ಗೆ ಚರ್ಚಿಸುತ್ತಾರೆ. ಈ ನಿಟ್ಟಿನಲ್ಲಿ ಸರಕಾರಗಳು ಉದ್ದೇಶಿತ ಕಾರ್ಯವನ್ನು ಪೂರೈಸಲು ಆ ಎಡೆಗೆತಮ್ಮನ್ನುತಾವು ಪರಿವರ್ತನೆ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ. ಇದನ್ನು ತಿಳಿಸುವ ಸಂದರ್ಭದಲ್ಲಿ ಸಂಪೂರ್ಣ ಸರ್ವಾಧಿಕಾರವುಒಬ್ಬ ವ್ಯಕ್ತಿಯಕೈಯಲ್ಲಿಇದ್ದರೆ ಅವನು ಮಾಡುವಎಲ್ಲ ಕೆಲಸಗಳನ್ನು ಗುಣಾತ್ಮಕವಾಗಿ ಮತ್ತು ಬೌದ್ಧಿಕವಾಗಿ ಕಾರ್ಯನಿರ್ವಹಿಸುವದನ್ನು ಒಪ್ಪಬೇಕೆ ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡುಅದರ ಸಾಧ್ಯಾಸಾಧ್ಯತೆಗಳನ್ನು ಚರ್ಚಿಸುತ್ತಾರೆ. ಇಂತಹ ಚರ್ಚೆಯನ್ನು ಮುಂದುವರೆಸಿ ಅತ್ಯಂತಉತ್ತಮವಾದ ಸರಕಾರವೆಂದರೆ ಸಾರ್ವತ್ರಿಕವಾಗಿ ಸಾರ್ವಭೌಮತ್ವವನ್ನು ಹೊಂದಿರುವದು ಮತ್ತು ಅದನ್ನು ನಿಯಂತ್ರಿಸುವ ಅಧಿಕಾರ ಜನರ ಅಥವಾ ಸಮುದಾಯದ ಕೈಯಲ್ಲಿ ಇರುವುದು ಎಂಬ ಚರ್ಚೆಯನ್ನು ಮಂಡಿಸುತ್ತಾರೆ. ಈ ಸಂದರ್ಭದಲ್ಲಿ ಇವರು ಪ್ರತಿನಿಧಿತ್ವ ಸರಕಾರವನ್ನು ಚರ್ಚೆಗೆ ತೆಗೆದುಕೊಂಡು 'ನೈತಿಕ' ಸ್ಥಾನದಿಂದ ತಮ್ಮ ಚರ್ಚೆಯನ್ನು ಪ್ರಾರಂಭಿಸುತ್ತಾರೆ. ಇದು ಮಾನವನ ಏಳಿಗೆಗೆ ಅವಶ್ಯಕ ಎಂಬ ಚರ್ಚೆಯನ್ನು ನೈತಿಕ ನೆಲೆಗಟ್ಟಿನ ಮೇಲೆ ವಿವರಿಸುವ ಇವರು ಅದಕ್ಕಾಗಿ ಮೂಲಭೂತ ಕಟ್ಟಳೆಗಳನ್ನು ಮುಂದಿಡುತ್ತಾರೆ. ಮೊದಲನೆಯದಾಗಿ ಅಂತಹ ಸರಕಾರಗಳನ್ನು ಪಡೆದುಕೊಳ್ಳಲು ಜನರು ಒಪ್ಪಿಗೆಯನ್ನು ನೀಡಬೇಕು. ಎರಡನೇಯದಾಗಿ ಅದನ್ನು ಉಳಿಸಿಕೊಳ್ಳಲು ಅವಶ್ಯಕವಿರುವ ಎಲ್ಲಾ ಕಾರ್ಯಗಳನ್ನು ಮೊದಲು ಅವರು ತಯಾರಿಸಬೇಕು. ಕೊನೆಯದಾಗಿ ಅಂತಹ ಸರಕಾರವು ಇವರಿಗೆ ನೀಡಿದ ಜವಾಬ್ದಾರಿಗಳನ್ನು ಸಂಪೂರ್ಣವಾಗಿ ನಿರ್ವಹಿಸಲು ಸಹಕರಿಸಬೇಕೆಂದು ಪ್ರಸ್ತಾಪಿಸುತ್ತಾರೆ. ಇಂತಹ ಪ್ರಸ್ತಾವನೆಗಳಲ್ಲಿ ಮಿಲ್‌ರವರು ಪ್ರಾತಿನಿಧಿಕ ಸರಕಾರಗಳು ಕೇವಲ ಪ್ರತಿನಿಧಿಗಳ ಜವಾಬ್ದಾರಿ ಅಷ್ಟೆ ಅಲ್ಲದೇ ಅದು ದ್ವಿಮುಖವಾಗಿದೆ.[13] ಪ್ರಜೆಗಳು ಮತ್ತು ಪ್ರತಿನಿಧಿಗಳು ಒಂದಾಗಿ ಕಾರ್ಯನಿರ್ವಹಿಸಬೇಕಾದ ಜವಾಬ್ದಾರಿಯನ್ನು ವಿವರಿಸುತ್ತದೆ. ಈ ರೀತಿಯಲ್ಲಿ ಹೇಳುವ ಮುಖಾಂತರ ಪ್ರಾತಿನಿಧಿತ್ವದ ಜವಾಬ್ದಾರಿಯನ್ನು ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳಿಗೆ ಮತ್ತು ಮತದಾರರ ಮೇಲೂ ಹೊರಿಸುತ್ತಾರೆ. ಇಂತಹ ಸಂದರ್ಭದಲ್ಲಿ ನಾವು ಪ್ರಾತಿನಿದ್ಯತೆ ಎಂದರೇನು ಎಂಬುದನ್ನು ಅರ್ಥೈಸಿಕೊಳ್ಳಬೇಕು.

ರಾಷ್ಟ್ರಗಳ ಜನಸಂಖ್ಯೆಯು ಹೆಚ್ಚಿದ್ದು ಪ್ರಾದೇಶಿಕ ವ್ಯಾಪ್ತಿ ವಿಶಾಲವಾದುದರಿಂದ ಪ್ರಜೆಗಳು ರಾಜ್ಯಾಡಳಿತದಲ್ಲಿ ಭಾಗವಹಿಸಲು ಸಾಧ್ಯವಾಗದ ಕಾರಣ ಜನರಿಂದ ಚುನಾಯಿತಗೊಂಡ ಸದಸ್ಯರಿಂದ ಪ್ರಾತಿನಿಧಿಕ ಸರಕಾರಗಳು ನಡೆಸಲ್ಪಡುತ್ತವೆ. ಇಲ್ಲಿ ಪ್ರಜೆಗಳು ತಮ್ಮ

[12].ಸುಭಾಸ್‌ಕಶ್ಯಪ್, ಅವರ್ ಪಾಲಿರ್ಮೆಂಟ್ , ನ್ಯಾಶನಲ್ ಬುಕ್‌ಟ್ರಸ್ಟಆಫ್‌ಇಂಡಿಯಾ, ನವದೆಹಲಿ, 2010.

[13]ಜೆ. ಎಸ್. ಮಿಲ್, ರೇಪ್ರಸೆಂಟಿಟಿವ್‌ಗವರ್ನಮೆಂಟ್, ಬ್ಯಾಟೋಚ್ ಬುಕ್ಸ್, ಕಿಚನರ್, ಕೆನಡ, 1861

ಪರವಾಗಿ ಸರಕಾರದ ವ್ಯವಹಾರ ನಡೆಸಲು ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ. ಚುನಾಯಿತಗೊಂಡ ಪ್ರತಿನಿಧಿಗಳು ಶಾಸನಸಭೆಗಳಲ್ಲಿ ಜನರನ್ನು ಪ್ರತಿನಿಧಿಸುವಕ್ರಿಯೆಯನ್ನು ಪ್ರಾತಿನಿದ್ಯವೆಂದುಕರೆಯುತ್ತಾರೆ.

ಹನ್ನಾ ಪಿಟ್‌ಕಿನ್‌ರವರು ಪ್ರಾತಿನಿಧ್ಯಎಂದರೆ **"Make present again"**[14]ಎಂದು ಹೇಳುತ್ತಾರೆ. ಈ ವಾಕ್ಯದ ಆಧಾರದ ಮೇಲೆ ಪ್ರಾತಿನಿಧ್ಯತೆಎಂದರೆ ಪ್ರಜೆಗಳ ಅಭಿಪ್ರಾಯ ಮತ್ತು ಆಶೋತ್ತರಗಳನ್ನು ನೀತಿರಚನೆ ಪ್ರಕ್ರಿಯೆಯಲ್ಲಿ ಪ್ರತಿನಿಧಿಸುವುದು ಎಂದು ಹೇಳುತ್ತಾರೆ. ರಾಜಕೀಯ ಪ್ರಾತಿನಿಧ್ಯವೆಂದರೆ, ರಾಜಕೀಯ ನಾಯಕರು ಪ್ರಜೆಗಳ ಪರವಾಗಿ, ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸುವಿಕೆ[15]ಎಂದು ಹೇಳುತ್ತಾರೆ. ಈ ಪ್ರಾತಿನಿಧಿಕ ಪದ್ದತಿಯು ಇಂದಿನ ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಮುಖಅಂಶವಾಗಿರುವುದು ತಿಳಿದು ಬರುತ್ತದೆ.

ಸಂಸದಿಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿನಿಧಿಗಳ ಪಾತ್ರ ಮತ್ತುಜವಾಬ್ದಾರಿ :

ಇಂದಿನ ಬಹುತೇಕ ರಾಷ್ಟ್ರಗಳು ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿವೆ. ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಶಾಸಕಾಂಗ ಸಭೆಗಳಿಗೆ ಚುನಾವಣೆಗಳ ಮೂಲಕ ಚುನಾಯಿಸಿ ಕಳುಹಿಸುತ್ತಾರೆ. ಈ ರೀತಿ ಚುನಾಯಿತರಾದ ಪ್ರತಿನಿಧಿಗಳು ಚುನಾಯಿತರಾದ ಮತದಾರ ವರ್ಗಕ್ಕೆ ಜವಾಬ್ದಾರಿಯಾಗಿದ್ದುಕೊಂಡು ಶಾಸನಗಳನ್ನು ರಚನೆ ಮಾಡುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ. ಚುನಾಯಿತ ಪ್ರತಿನಿದಿಗಳನ್ನೊಳಗೊಂಡ ಕೇಂದ್ರ ಸಂಸತ್ತುರಾಷ್ಟ್ರಕ್ಕೆ ಸಂಬಂಧಿಸಿದ ಶಾಸನಗಳನ್ನು ರೂಪಿಸುವ, ಪರಮಾಧಿಕಾರವನ್ನು ಹೊಂದಿದಒಂದು ಸಂವಿಧಾನಾತ್ಮಕ ಸಂಸ್ಥೆ. ಈ ಸಂಸ್ಥೆಯ ನಿಯಮಾವಳಿಗಳ ಅಡಿಯಲ್ಲಿ ಪ್ರತಿಯೊಬ್ಬ ಪ್ರತಿನಿಧಿಯು ಕಾರ್ಯನಿರ್ವಹಿಸುತ್ತಾನೆ. ಹಾಗಾದರೆ ಚುನಾಯಿತ ಪ್ರತಿನಿಧಿಗಳ ಕಾರ್ಯಗಳೇನು ಎಂಬುದನ್ನು ನೋಡಿದಾಗ.

1. ಶಾಸನ ಸಭೆಗಳಿಗೆ ಆಯ್ಕೆಯಾಗುವುದು.
2. ಕೇಂದ್ರ ಮತ್ತುರಾಜ್ಯ ಸಭೆಗಳಲ್ಲಿ ಪ್ರಜೆಗಳನ್ನು ಪ್ರತಿನಿಧಿಸುವುದು.
3. ಪ್ರಜೆಗಳ ಆಶೆ ಆಶೋತ್ತರಗಳು ಅವರ ಕುಂದುಕೊರತೆಗಳನ್ನು ಶಾಸನ ಸಭೆಗಳಲ್ಲಿ ಪ್ರತಿನಿಧಿಸುವುದರ ಮೂಲಕ ಅವುಗಳ ಕುರಿತಾಗಿ ಶಾಸನ ಸಭೆಗಳಲ್ಲಿ ಚರ್ಚಿಸುವುದು.
4. ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಜೆಗಳಿಗೆ ನೀಡಿದ ಆಶ್ವಾಸನೆಗಳನ್ನು ಅನುಷ್ಠಾನಕ್ಕೆ ತರುವುದು.
5. ತಮ್ಮಕ್ಷೇತ್ರದ ಮತದಾರರ ಸಮಸ್ಯೆಗಳು ಮತ್ತುಅವರ ಅಗತ್ಯತೆಗಳನ್ನು ಅರಿತುಕೊಂಡುಅವರ ಅಭಿವೃದ್ಧಿಗಾಗಿ ಶ್ರಮಿಸುವುದು.
6. ಶಾಸನ ಸಭೆಗಳ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದರ ಮುಖಾಂತರ ಶಾಸನಗಳ ಮೇಲಿನ ಚರ್ಚೆಯಲ್ಲಿತಮ್ಮಅಭಿಪ್ರಾಯವನ್ನು ಮಂಡಿಸುವುದು.
7. ಶಾಸನಗಳನ್ನು ರೂಪಿಸುವುದಕ್ಕೆ ಮುಂದಾಳತ್ವ ವಹಿಸುವುದು ಮತ್ತು ಅವುಗಳನ್ನು ಜಾರಿಗೆತರುವುದು.
8. ಸರಕಾರ ಮತ್ತು ಪ್ರಜೆಗಳ ನಡುವೆ ಸಂಪರ್ಕಕೊಂಡಿಯಾಗಿ ಕಾರ್ಯನಿರ್ವಹಿಸುವದರ ಜೊತೆಗೆ ರಾಷ್ಟ್ರದ ಸಮಗ್ರತೆ ಮತ್ತುಐಕ್ಯತೆಗೆ ಸಂಬಂಧಿಸಿದಂತೆ ವಿವಿಧಧರ್ಮ, ಭಾಷೆ, ಜನಾಂಗಗಳ ಮಧ್ಯೆ ಸಮನ್ವಯತಾ ಮನೋಭಾವನೆಯನ್ನು ಸಾಧಿಸುವುದು.

ಪ್ರಾತಿನಿಧಿಕ ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿಗಳು, ಶಾಸಕಾಂಗದ ಸದಸ್ಯರಾಗಿಕಾರ್ಯಾಂಗದ ಸದಸ್ಯರಾಗಿ, ಕಾರ್ಯಾಂಗದ ಮುಖ್ಯಸ್ಥರಾಗಿ ಪ್ರಮುಖ ಪಾತ್ರ ವಹಿಸುತ್ತಾರೆ. ಪ್ರಾತಿನಿಧಿಕ ವ್ಯವಸ್ಥೆಯಲ್ಲಿ ಕಾರ್ಯಾಂಗವು ಶಾಸನ ಸಭೆಗೆ ಉತ್ತರದಾಯಿಯಾಗಿ ಮತ್ತು ಶಾಸನ ಸಭೆಯುಜನತೆಗೆ ಉತ್ತರದಾಯಿಯಾಗಿ ಕಾರ್ಯ ನಿರ್ವಹಿಸುತ್ತದೆ.[16]

ಸಾಹಿತ್ಯ ಪರಾಮರ್ಶೆ:

[14] ಪಿಟಕಿನ್ ಹನ್ನಾ, ದಿ ಕಾಂಸೆಪ್ಟ ಆಫ್‌ರೆಪ್ರಸೆಂಟೆಶನ್, ಯುನಿವರ್ಸಿಟಿ ಪ್ರೆಸ್, ಲಾಸ್‌ಎಂಜಲ್ಸ್, 1967.

[15]ಅದೇ ಪುಸ್ತಕ.

[16]ರಾಜಶೇಖರಯ್ಯಎ.ಎಮ್., ಸಂಸತ್ತಿನಕಾರ್ಯಪದ್ಧತಿ, ಸದಾನಂದ ಪ್ರಿಂಟರ್ಸ್, ಧಾರವಾಡ 1973

ಸದಾಶಿವ ಕೆ.[17]ರವರು ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ಯೂರೋಪನಲ್ಲಿ ಬ್ರಿಟಿಷ ಸಾಮ್ರಾಜ್ಯಶಾಹಿಯ ವಿರುದ್ಧ ನಡೆದರಷ್ಯಾಕ್ರಾಂತಿ, ಫ್ರಾನ್ಸ್ ಕ್ರಾಂತಿಗಳ ಕುರಿತಾಗಿ ಈ ಕ್ರಾಂತಿಗಳು ನಡೆಯಲು ಪ್ರಮುಖ ಕಾರಣಗಳೇನು? ಅಲ್ಲಿನರಾಜಕೀಯ ವ್ಯವಸ್ಥೆ ಮತ್ತು ಆಡಳಿತ ಹೇಗಿತ್ತು ಹಾಗೂ ಯೂರೋಪನಲ್ಲಿ ಬ್ರಿಟಿಷ ಆಡಳಿತಕ್ಕೆ ಅಂತ್ಯಹಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯ ಸ್ಥಾಪನೆಯಾದುದರ ಕುರಿತು ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ.

ಸುಭಾಷ್ ಸಿ. ಕಶ್ಯಾಪ್[18]ರವರು ಭಾರತದಲ್ಲಿ ಪ್ರಾತಿನಿಧಿಕ ಸಂಸ್ಥೆಗಳ ಉಗಮ ಮತ್ತು ಬೆಳವಣಿಗೆಯಾದವುಗಳ ಕುರಿತು ವಿವರಿಸಿದ್ದಾರೆ. ಭಾರತದ ಶಾಸನ ಸಭೆಯಾದ ಸಂಸತ್ತುಅತ್ಯಂತ ಪ್ರಮುಖವಾದ ಭಾರತದ ರಾಜಕೀಯ ವ್ಯವಸ್ಥೆಯ ಕೇಂದ್ರಬಿಂದು ಎಂದು ಹೇಳುವುದರ ಜೊತೆಗೆ ಸಂಸತ್ತಿನ ರಚನೆ, ಸಂಸತ್ತಿನ ಪ್ರಮುಖ ಅಂಗಗಳು ಅದರಅಧಿಕಾರ ಕಾರ್ಯಗಳನ್ನು ಸವಿವರವಾಗಿ ಹೇಳುವದರ ಮೂಲಕ ವಿಶೇಷವಾಗಿ ಉಭಯ ಸದನಗಳ ಕಾರ್ಯನಿರ್ವಹಣೆ, ಸದಸ್ಯರಿಗೆ ಲಭ್ಯವಿರುವ ವೈಧಾನಿಕ ಸಾಧನಗಳು, ಮತ್ತು ಸಮಿತಿ ವ್ಯವಸ್ಥೆಗಳ ಕುರಿತು ತಮ್ಮ ಗ್ರಂಥದಲ್ಲಿ ಚರ್ಚಿಸಿದ್ದಾರೆ.

ಬಿಪಿನ ಚಂದ್ರರವರು,[19]ಆಧುನಿಕ ಭಾರತದಲ್ಲಿ ಸ್ವಾಂತಂತ್ರ್ಯಕ್ಕಾಗಿ ನಡೆದ ಚಳುವಳಿಯ ಪ್ರಾರಂಭದಲ್ಲಿ ಬ್ರಿಟಿಷರಿಂದ ಭಾರತ ಆಳಲ್ಪಟ್ಟಿದ್ದು ಬ್ರಿಟಿಷರ ಆಡಳಿತದ ಸುಧಾರಣೆಯಅವರು ಹಲವಾರು ಕಾರ್ಯಗಳ ಮೂಲಕ ಜಾರಿಗೆತಂದ ಪ್ರಾತಿನಿಧಿಕ ವ್ಯವಸ್ಥೆ ಹೇಗಿತ್ತುಗವರ್ನರಜನರಲ್ ಆಡಳಿತದಲ್ಲಿ ಪ್ರಾಂತೀಯ ಆಡಳಿತ ಶಾಸನ ಸಭೆಗಳು ಪ್ರಾತಿನಿಧಿಕ ಸಂಸ್ಥೆಗಳು ಸ್ಥಳೀಯ ಸರಕಾರದ ಉಗಮಗೊಂಡು ಅದರ ಕಾರ್ಯಾಚರಣೆ 1909, 1919, 1935, 1947 ರ ಕಾಯ್ದೆಗಳ ಮೂಲಕ ಭಾರತದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಯಾಗುವುದರ ಜೊತೆಗೆ 1947ರ ಕಾಯ್ದೆಯ ಪ್ರಕಾರ ಬ್ರಿಟಿಷ ಭಾರತೀಯರಿಗೆ ಪರಮಾಧಿಕಾರವನ್ನು ಹಸ್ತಾಂತರಿಸಿ, ಸಂವಿಧಾನವನ್ನು ರಚನಾ ಸಭೆಯರಚನೆ, ಭಾರತದ ಸ್ವಾತಂತ್ರವಾದುದರ ಕುರಿತು ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ.

ರಾಜಶೇಖರಯ್ಯಾ ಎ.ಎ ಮ್.[20]ರವರು, ಶಾಸಕಾಂಗದ ರಚನೆ ಮತ್ತು ಕಾರ್ಯ ಕಲಾಪಗಳಿಗೆ ಸಬಂಧ ಪಟ್ಟ ವಿಷಯಗಳನ್ನು ವಿವರಿಸುವುದರ ಜೊತೆಗೆ ಸಂಸತ್ತಿನಅಧಿಕಾರ ಮತ್ತು ಕಾರ್ಯಗಳು, ಸಂಸತ್ತಿನ ಅದಿವೇಶನಗಳು ಯಾವ ನಡಾವಳಿಗಳ ಮೂಲಕ ನಡೆಯುತ್ತವೆ ಮತ್ತು ರಾಜಕೀಯ ಪಕ್ಷಗಳು ಪ್ರಾತಿನಿಧಿಕ ವ್ಯವಸ್ಥೆಯ ಸಾಧನಗಳಾಗಿ ಸಂಸತ್ತಿನಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತವೆಎಂಬುದನ್ನು ಕುರಿತು ಸಂಸತ್ತಿನ ಕಾರ್ಯ ಪದ್ದತಿ ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ.

ಚಂದ್ರಪ್ರಕಾಶ ಭಾಂಬ್ರಿರವರು,[21] ಭಾರತದ ಪ್ರಜಾಪ್ರಭುತ್ವದ ತಳಹದಿ, ಪ್ರಜಾಪ್ರಭುತ್ವ ಬೆಳದು ಬಂದದಾರಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳ ಪಾತ್ರದಕುರಿತಾಗಿ ತಮ್ಮ ಗ್ರಂಥದಲ್ಲಿ ವಿವರಿಸುತ್ತಾ, ರಾಜಕೀಯ ಪಕ್ಷಗಳು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವುಗಳ ಕಾರ್ಯದಕುರಿತು ವಿಮರ್ಶಿಸುತ್ತಾರೆ. ಅದರೊಂದಿಗೆ ಅವರು ಚುನಾವಣೆಗೆ ಸ್ಪರ್ಧಿಸುವವರ ಮುಖಾಂತರವಾಗಿ ಸಾರ್ವಜನಿಕ ಹಿತಾಸಕ್ತಿಯನ್ನು ಒಗ್ಗೂಡಿಸಿ ಪ್ರಜೆಗಳ ಅಭಿಪ್ರಾಯ ಆಶೆ ಆಶೋತ್ತರಗಳನ್ನು ಶಾಸನ ಸಭೆಗಳಲ್ಲಿ ಪ್ರತಿನಿಧಿಸುವಲ್ಲಿ ಈ ಚುನಾಯಿತ ಪ್ರತಿನಿಧಿಗಳು ಹೇಗೆ ಕಾರ್ಯನಿರ್ವಹಿಸುತ್ತಾರೆ ಎಂಬುದನ್ನು ವಿವರವಾಗಿ ಹೇಳಿದ್ದಾರೆ. ಮುಂದುವರೆದು ಭಾರತದ ಪ್ರಜಾಪ್ರಭುತ್ವದ ಪ್ರಾರಂಭಿಕ ಹಂತದಲ್ಲಿ ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆ ಹೇಗಿತ್ತು ನಂತರ ಇಂದಿರಾಗಾಂಧಿಯವರ ಕಾಲದಲ್ಲಿ ಪ್ರಜಾಪ್ರಭುತ್ವದ ಸ್ಥಿತಿಗತಿ ಹೇಗಿತ್ತುಎಂಬುದನ್ನು ವಿವರಿಸುವುದರ ಜೊತೆಗೆ

[17] ಸದಾಶಿವ ಕೆ, ಆಧುನಿಕಯುರೋಪಿನ ಇತಿಹಾಸ, ಪ್ರಿಯಾದರ್ಶಿನಿ ಪ್ರಕಾಶನ , ಮೈಸೂರು, 2006

[18]ಸುಭಾಸ್ಕಶ್ಯಪ್, ಅವರ್ ಪಾಲಿರ್ಮೆಂಟ್ , ನ್ಯಾಶನಲ್ ಬುಕ್ಟ್ರಸ್ಟಆಫ್ಇಂಡಿಯಾ, ನವದೆಹಲಿ, 2010.

[19] ಬಿಪಿನ್ ಚಂದ್ರ, ಮಾಡರ್ನಇಂಡಿಯನ್ ಹಿಸ್ಟರಿ, ನ್ಯಾಶನಲ್ ಬುಕ್ಟ್ರಸ್ಟಆಫ್ಇಂಡಿಯಾ, ನವದೆಹಲಿ, 2012.

[20]ರಾಜಶೇಖರಯ್ಯಎ.ಎಮ್., ಸಂಸತ್ತಿನಕಾರ್ಯಪದ್ಧತಿ, ಸದಾನಂದ ಪ್ರಿಂಟರ್ಸ್, ಧಾರವಾಡ 1973

[21]ಚಂದ್ರಪ್ರಕಾಶ ಬಾಂಬ್ರಿ, ಡೆಮಾಕ್ರಸಿ ಇನ್ಇಂಡಿಯಾ, ನ್ಯಾಶನಲ್ ಬುಕ್ಟ್ರಸ್ಟಆಫ್ಇಂಡಿಯಾ, ನವದೆಹಲಿ, 2007.

ಭಾರತದ ಪ್ರಜಾಪ್ರಭುತ್ವದ ಏಳು ಬೀಳುಗಳನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಿದ್ದಾರೆ.

ಯು.ಎನ್.ಗುಪ್ತಾರವರು,[22] ಭಾರತದಲ್ಲಿ ಸಂವಿಧಾನದಲ್ಲಿರುವ ಸಂಸದೀಯ ಸಂಪ್ರದಾಯಗಳು ಕ್ಯಾಬಿನೇಟ ಪದ್ದತಿಯಲ್ಲಿ ಮಂತ್ರಿಮಂಡಳದ ಸಾಮೂಹಿಕ ಜವಾಬ್ದಾರಿಯ ಕುರಿತು ವಿವರಿಸಿದ್ದಾರೆ. ಮುಂದುವರೆದು ಸಂಸದೀಯ ವ್ಯವಸ್ಥೆಯಲ್ಲಿ ಚುನಾವಣಾ ಪ್ರಕ್ರಿಯೆಯ ಪಸ್ಟ ಪಾಸ್ಟ ಪೋಸ್ಟ ಸಿಸ್ಟಮ ಮೂಲಕ ನಡೆಯುತ್ತಿದ್ದುದರಿಂದ ಚುನಯಿತಗೊಂಡ ಪ್ರತಿನಿಧಿಗಳಿಂದ ರಚನೆಯಾದ ಶಾಸಕಾಂಗವು ಮಂತ್ರಿಮಂಡಳವು ಶಾಸಕಾಂಗಕ್ಕೆ ಉತ್ತರದಾಯಿಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ಹೇಳುತ್ತ ಸಂಸದೀಯ ಸಮಿತಿಗಳ ಕುರಿತಾಗಿ ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ.

ಜಾನ್ ಸ್ಟುಅರ್ಟ ಮಿಲ್‌ರವರು,[23] ನನ್ನ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಪ್ರಾತಿನಿಧಿಕ ಸರಕಾರ ವ್ಯವಸ್ಥೆಯ ಮಾನದಂಡಗಳು ಯಾವವು, ಇಲ್ಲಿ ಪ್ರತಿನಿಧಿ ಸಭೆಗಳ ಕಾರ್ಯಗಳೇನು, ಪ್ರಜಾಪ್ರಭುತ್ವ ವ್ಯವಸ್ಥೆಯ ರಾಷ್ಟ್ರದ ಸಮಗ್ರ ಪ್ರಜೆಗಳಿಗೆ ಪ್ರತಿನಿಧ್ಯತೆಯನ್ನು ಒದಗಿಸುತ್ತದೆಯೋ ಅಥವಾ ಕೇವಲ ಬಹುಸಂಖ್ಯಾತರನ್ನ ಮಾತ್ರ ಪ್ರತಿನಿಧಿಸುತ್ತದೆಯೋ ಎಂಬುದನ್ನು ವಿವರಿಸುವುದರ ಜೊತೆಗೆ ಈ ವಿಚಾರವನ್ನು ಕುರಿತು ಮಿಲ್‌ರವರುತಮ್ಮ ಪ್ರಾತಿನಿಧಿಕ ಸರಕಾರದಲ್ಲಿ ವಿವರಣೆ ನೀಡಿದ್ದಾರೆ. ಇಲ್ಲಿರಾಜಕೀಯ ಸಂಸ್ಥೆಗಳು ಮತ್ತು ರಾಜಕೀಯ ಸಂಘಗಳ ಕುರಿತಾಗಿ ಚರ್ಚಿಸುವ ಪೂರಕ ಮತ್ತು ವೈರುಧ್ಯದ ಕಲ್ಪನೆಗಳ ಬಗ್ಗೆ ಚರ್ಚಿಸುತ್ತಾರೆ. ಇಲ್ಲಿ ನಾವು ಮೊದಲು ಸರಕಾರ ಮತ್ತು ಅದರ ಉದ್ದೇಶಗಳನ್ನು ಚರ್ಚಿಸುವುದು. ಎರಡನೇಯದಾಗಿ ಯಾವ ಸರಕಾರಗಳು ಉತ್ತಮವಾದುವುಗಳು ಉತ್ತಮವಾದವುಗಳು ಎಂಬುದನ್ನು ತಿರ್ಮಾನಿಸುವ ಬಗ್ಗೆ ಚರ್ಚಿಸುತ್ತಾರೆ. ಈ ನಿಟ್ಟಿನಲ್ಲಿ ಸರಕಾರಗಳು ಉದ್ದೇಶಿತ ಕಾರ್ಯವನ್ನು ಪೂರೈಸಲು ಆ ಎಡೆಗೆ ತಮ್ಮನ್ನು ತಾವು ಪರಿವರ್ತನೆ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ. ಇದನ್ನು ತಿಳಿಸುವ ಸಂದರ್ಭದಲ್ಲಿ ಸಂಪೂರ್ಣ ಸರ್ವಾಧಿಕಾರವು ಒಬ್ಬ ವ್ಯಕ್ತಿಯಕೈಯಲ್ಲಿಇದ್ದರೆಅವನ್ನು ಮಾಡುವಎಲ್ಲ ಕೆಲಸಗಳನ್ನು ಗುಣಾತ್ಮಕವಾಗಿ ಮತ್ತು ಬೌದ್ಧಿಕವಾಗಿ ಕಾರ್ಯನಿರ್ವಹಿಸುವದನ್ನು ಒಪ್ಪಬೇಕೆ ಎಂಬ ಪ್ರಶ್ನೇಯನ್ನು ಮುಂದಿಟ್ಟುಕೊಂಡುಅದರ ಸಾಧ್ಯಾಸಾಧ್ಯತೆಗಳನ್ನು ಚರ್ಚಿಸುತ್ತಾರೆ. ಇಂತಹ ಚಚೆಯನ್ನು ಮುಂದುವರೆಸಿ ಅತ್ಯಂತ ಉತ್ತಮವಾದ ಸರಕಾರವೆಂದರೆ ಸಾರ್ವತ್ರಿಕವಾಗಿ ಸಾರ್ವಭೌಮತ್ವವನ್ನು ಹೊಂದಿರುವದು ಮತ್ತು ಅದನ್ನು ನಿಯಂತ್ರಿಸುವ ಅಧಿಕಾರ ಜನರಅಥವಾ ಸಮುದಾಯದ ಕೈಯಲ್ಲಿ ಇರುವುದು ಎಂಬ ಚರ್ಚೆಯನ್ನು ಮಂಡಿಸುತ್ತಾರೆ. ಈ ಸಂದರ್ಭದಲ್ಲಿ ಇವರು ಪ್ರತಿನಿಧಿತ್ವ ಸರಕಾರವನ್ನು ಚಚೆಗೆ ತೆಗೆದುಕೊಂಡು ನೈತಿಕ ಸ್ಥಾನದಿಂದ ತಮ್ಮ ಚರ್ಚೆಯನ್ನು ಪ್ರಾರಂಭಿಸುತ್ತಾರೆ. ಇದು ಮನವನ ಏಳಿಗೆಗೆ ಅವಶ್ಯಕ ಎಂಬ ಚರ್ಚೆಯನ್ನು ನೈತಿಕ ನೆಲೆಗಟ್ಟಿನ ಮೇಲೆ ವಿವರಿಸುವ ಇವರು ಅದಕ್ಕಾಗಿ ಮೂಲಭೂತ ಕಟ್ಟಳೆಗಳನ್ನು ಮುಂಡಿಡುತ್ತಾರೆ. ಮೊದಲನೆಯದಾಗಿ ಅಂತಹ ಸರಕಾರಗಳನ್ನು ಪಡೆದುಕೊಳ್ಳಲು ಜನರು ಒಪ್ಪಿಗೆಯನ್ನು ನೀಡಬೇಕು. ಎರಡನೇಯದಾಗಿ ಉಳಿಸಿಕೊಳ್ಳಲು ಅವಶ್ಯಕವಿರುವ ಎಲ್ಲಾ ಕಾರ್ಯಗಳನ್ನು ಮೊದಲು ಅವರು ತಯಾರಿಸಬೇಕು. ಕೊನೆಯದಾಗಿ ಅಂತಹ ಸರಕಾರವು ಇವರಿಗೆ ನೀಡಿದ ಜವಾಬ್ದಾರಿಗಳನ್ನು ಸಂಪೂರ್ಣವಾಗಿ ನಿರ್ವಹಿಸಲು ಸಹಕರಿಸಬೇಕೆಂದು ಪ್ರಸ್ತಾಪಿಸುತ್ತಾರೆ. ಇಂತಹ ಪ್ರಸ್ತಾವನೆಗಳಲ್ಲಿ ಮಿಲ್‌ರವರು ಪ್ರಾತಿನಿಧಿಕ ಸರಕಾರಗಳು ಕೇವಲ ಪ್ರತಿನಿಧಿಗಳ ಜವಾಬ್ದರಿ ಅಷ್ಟೆ ಅಲ್ಲದೇಅದು ದ್ವಿಮುಖವಾಗಿದೆ. ಪ್ರಜೆಗಳು ಮತ್ತು ಪ್ರತಿನಿಧಿಗಳು ಒಂದಾಗಿ ಕಾರ್ಯನಿರ್ವಹಿಸಬೇಕಾದ ಜವಾಬ್ದಾರಿಯನ್ನು ವಿವರಿಸುತ್ತದೆ. ಸಮಾಜದಲ್ಲಿ ಮತದಾನದ ಹಕ್ಕಿನ ವಿಸ್ತರಣೆಕುರಿತಾಗಿ ಮತ್ತು ಪ್ರಾತಿನಿಧಿಕ ಸರಕಾರದಲ್ಲಿ ಕಾರ್ಯಾಂಗದ ಪಾತ್ರ ಮತ್ತು ಸ್ಥಳೀಯ ಪ್ರಾತಿನಿಧಿಕ ಸಂಸ್ಥೆಗಳ ಕುರಿತಾಗಿ ವಿಶ್ಲೇಷಣಾತ್ಮಕವಾಗಿ ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ.

[22] ಗುಪ್ತಾ ಯು. ಎನ್., ಇಂಡಿಯಾ ಪಾರ್ಲಿಮೆಂಟರಿ ಡೆಮಾಕ್ರಸಿ, ಅಟ್ಲಾಂಟಿಕ ಪಬ್ಲಿಷರ್ಸ್, ನವದೆಹಲಿ, 2003

[23] ಜೆ. ಎಸ್. ಮಿಲ್, ರೇಪ್ರಸೆಂಟಿಟಿವ್‌ಗವರ್ನಮೆಂಟ್, ಬ್ಯಾಟೋಚ್ ಬುಕ್ಸ್, ಕಿಚನರ್, ಕೆನಡ, 1861

ರಿವ್ಹಿಜಿಟಿಂಗದ ಕ್ರೈಸಿಸ್ ಆಪ್‌ರೆಪ್ರೆಸೆಂಟೆಷನ್: ದಿ ಇಂಡಿಯನ್‌ಕಾಂಟೆಕ್ಸ್ಟ[24]ಇದು ದೆಹಲಿಯನ್ನು ಅಧ್ಯಯನ ಕ್ಷೇತ್ರವನ್ನಾಗಿರಿಸಿಕೊಂಡು ಪ್ರಾಥಮಿಕ ದತ್ತಾಂಶಗಳ ಆಧಾರದ ಮೇಲೆ ತಯಾರಿಸಿದ ಸಂಶೋಧನಾ ವರದಿಯಾಗಿದ್ದು, ಇಲ್ಲಿ ಸಂಶೋಧಕರು ಪ್ರಜೆಗಳು ಪ್ರಾತಿನಿಧಿಕ ವ್ಯವಸ್ಥೆಯ ಸಾಂಪ್ರದಾಯಿಕ ಸಾಧನಗಳಾದ ರಾಜಕೀಯ ಪಕ್ಷಗಳಲ್ಲಿ ನಂಬಿಕೆಗಳನ್ನು ಕಳೆದುಕೊಳ್ಳುತ್ತಿದ್ದಾರೆಯೇ? ಮತ್ತು ಅವರ ಸಮಸ್ಯೆಗಳಿಗೆ ಸ್ಪಂದಿಸಿ ಅವರ ನಂಬಿಕೆಗಳನ್ನು ಪುನರ್‌ಸ್ಥಾಪಿಸಲು ಹೊಸದೊಂದು ವ್ಯವಸ್ಥೆಯ ಕಡೆಗೆ ತಿರುಗಿದ್ದಾರೆಯೇ ಎಂಬ ಪ್ರಮುಖ ಪೂರ್ವ ನಿರ್ಧರಿತ ಪ್ರಾಕ್–ಕಲ್ಪನೆಗಳೊಂದಿಗೆ ನಡೆಸಿದ ಈ ಸಂಶೋಧನೆಯಲ್ಲಿ ಇವರು ಹಾಕಿಕೊಂಡ ಪ್ರಾಕ್‌ಕಲ್ಪನೆಗಳು ನಿಜವಾಗಿರುವದು ಕಂಡುಬರುತ್ತದೆ. ಪ್ರೊ. ಚಂದೋಕೆರವರು ತಮ್ಮ ವರದಿಯಲ್ಲಿ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡು ಸುಮಾರು 7 ದಶಕಗಳು ಕಳೆದರೂ ಆಡಳಿತ ಎಂಬುದು ಪ್ರಜೆಗಳಿಂದ ತುಂಬಾಅಂತರದಲ್ಲಿದೆ ಮತ್ತು ಪ್ರತಿನಿಧಿ ಸಭೆಗಳು ಮತ್ತು ಪ್ರಜೆಗಳ ನಡುವಿನ ನಂಬಿಕೆ ಕಡಿಮೆಯಾಗತೊಡಗಿದೆ ಎಂದು ಹೇಳುತ್ತಾರೆ. ಇಂದಿನ ವ್ಯವಸ್ಥೆಯಲಿ ್ಲರಾಜಕೀಯ ಪಕ್ಷಗಳು ಮತ್ತು ಪ್ರತಿನಿಧಿಗಳು ಪ್ರಜೆಗಳ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಮತ್ತುಅವರ ಆಶೆ–ಆಶೋತ್ತರಗಳನ್ನು ಶಾಸನ ಸಭೆಗಳಲ್ಲಿ ಪ್ರತಿನಿಧಿಸುವಲ್ಲಿ ವಿಫಲರಾಗಿದ್ದಾರೆ ಮತ್ತುರಾಜಕೀಯ ಪಕ್ಷಗಳು ಹೆಚ್ಚು ಶ್ರೇಣೀಕೃತಗೊಂಡುಅತ್ಯಂತ ಸಂಕೀರ್ಣವಾಗಿರುವದರಿಂದ ಅವುಗಳಲ್ಲಿ ಪ್ರಜೆಗಳು ನಂಬಿಕೆಗಳನ್ನು ಕಳೆದುಕೊಳ್ಳಲು ಪ್ರಮುಖಕಾರಣವಾಗಿದೆಎಂದು ಹೇಳುತ್ತಾ ಮುಂದುವರೆದು ಪ್ರಜೆಗಳು ಪ್ರಮುಖವಾಗಿತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ನಾಗರಿಕ ಸಮಾಜದ ಸಂಘಟನೆಗಳು ಮತ್ತು ಸರಕಾರೇತರ ಸ್ವಯಂ ಸೇವಾ ಸಂಘಗಳತ್ತ ಮುಖ ಮಾಡುತ್ತಿದ್ದಾರೆಎಂದು ಹೇಳುತ್ತಾರೆ.

ಒನ್ ಪರ್ಸನ್, ಒನ್ ವೋಟ್, ಒನ್ ವೈಸ್: ಚೂಸಿಂಗ ದಿ ಸಿಸ್ಟಮ್ ಆಪ್‌ರಿಪ್ರಜೆಂಟಶನ್[25] ಈ ಲೇಖಕರು ಪ್ರಮುಖವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಾತಿನಿಧ್ಯತೆಯ ಅವಶ್ಯಕತೆಯ ಕುರಿತು ಹೇಳುತ್ತಾರೆ ಮತ್ತು ಪ್ರಸ್ತುತ ಚುನಾವಣಾ ವ್ಯವಸ್ಥೆಯಲ್ಲಿನ ದೋಷಗಳ ಕುರಿತಾಗಿ ಚರ್ಚಿಸುತ್ತಾರೆ. ಇವರು ಜೆ.ಎಸ್.ಮಿಲ್‌ರವರು ಪ್ರತಿಪಾಧಿಸಿದ ಪ್ರಮಾಣಾಧಾರಿತ ಪ್ರಾತಿನಿಧಿಕ ವ್ಯವಸ್ಥೆಯು ಈಗಿರುವ ವ್ಯವಸ್ಥೆಗಿಂತ ಸೂಕ್ತವಾದದ್ದು ಎಂದು ಹೇಳುತ್ತಾರೆ. ಏಕೆಂದರೆ ಪಸ್ಟ ಪಾಸ್ಟ ದಿ ಪೊಸ್ಟ ವ್ಯವಸ್ಥೆಯಲ್ಲಿ ಸೂಕ್ತ ಪ್ರಾತಿನಿಧ್ಯತೆ ದೊರಕದೆ ಇರುವುದು ಇದಕ್ಕೆ ಪ್ರಮುಖ ಕಾರಣವೆಂದು ಹೇಳುತ್ತಾರೆ ಮತ್ತು ಪ್ರಾತಿನಿಧ್ಯತೆಯು ಕೇವಲ ಪ್ರಜೆಗಳ ಆಶೋತ್ತರಗಳನ್ನು ಶಾಸನ ಸಭೆಗಳಲ್ಲಿ ಪ್ರತಿನಿಧಿಸುವ ಸಾಧನವಷ್ಟೆಅಲ್ಲ ಪ್ರಜಾಪ್ರಭುತ್ವದ ಸ್ವಯಂ ಆಳ್ವಿಕೆಗೆ ತಳಹದಿಯಾಗಿದೆ ಎಂದು ಹೇಳುವುದರ ಜೊತೆಗೆ ಯಾವುದೇ ಪ್ರಾತಿನಿಧಿಕ ವ್ಯವಸ್ಥೆ ಸಂಪೂರ್ಣವಾಗಿ ದೋಷಗಳಿಂದ ಮುಕ್ತವಾಗಿಲ್ಲ, ಎಲ್ಲ ವ್ಯವಸ್ಥೆಗಳು ಕೆಲವೊಂದು ನ್ಯೂನತೆಗಳಿಂದ ಕೂಡಿದೆ ಎಂಬ ಚರ್ಚೆಯನ್ನು ಮಂಡಿಸುತ್ತಾರೆ.

ರಿಥಿಂಕಿಂಗ್‌ಡೆಮಾಕ್ರೆಟಿಕ್‌ರಿಪ್ರಜೆಂಟೇಷನ್ :ಏಟ್‌ಥೀಯರಾಟಿಕಲ್‌ಇಶ್ಯೂಸ್[26]ಈ ಲೇಖನದಲ್ಲಿ ಪ್ರಜಾಸತ್ತಾತ್ಮಕ ಪ್ರತಿನಿಧ್ಯತೆಯ ಮಾದರಿಯು ಸಾರ್ವತ್ರಿಕ ಚುನಾವಣೆಗಳು ಮತ್ತು ಪ್ರತಿನಿಧಿಗಳ ಆಯ್ಕೆಯಆದಾರದ ಮೇಲೆ ಬೆಳೆದು ಬಂದಿದೆಎಂಬುದರಕುರಿತಾಗಿ ಹೇಳುತ್ತಾರೆ. ಪ್ರಜಾಪ್ರಭುತ್ವವವು ಏಕೀಕೃತರಾಜಕೀಯ ಘಟಕಗಳಲ್ಲಿ ತನ್ನ ಬೇರುಗಳನ್ನು ಹೊಂದಿ ಬೃಹತ್ತಾದ ಪ್ರಜಾಪ್ರಭುತ್ವವನ್ನು ನಿರ್ಮಿಸುವಲ್ಲಿ; ಸಾಮಾಜಿಕ, ರಾಜಕೀಯ, ಪ್ರಜಾಸತ್ತಾತ್ಮಕತೆ ಮತ್ತು ವೃತ್ತಿನಿರತ ರಾಜಕೀಯಗಣ್ಯರ ನಡುವೆ ಸಮಾನತೆಯನ್ನು ಸಾಧಿಸಲು ಪ್ರತಿನಿಧಿಗಳ ಚುನಾವಣೆಗಳು

[24] ನೀರಾಚಂದೋಕೆ, ರಿವ್ಹಿಜಿಟಿಂಗದ ಕ್ರೈಸಿಸ್ ಆಪ್‌ರೆಪ್ರೆಸೆಂಟೆಷನ್: ದಿ ಇಂಡಿಯನ್‌ಕಾಂಟೆಸ್ಟ, ಡೆವಲಪಿಂಗ್‌ಕಂಟ್ರೀಸ್‌ರಿಸರ್ಚ ಸೆಂಟರ್, ದೆಹಲಿ ಯುನಿವರ್ಸಿಟಿ, ದೆಹಲಿ, 2012.

[25] ಅಶೋಕ ವಿಗ್ನೇಶ್, ಒನ್ ಪರ್ಸನ್, ಒನ್ ವೋಟ್, ಒನ್ ವೈಸ್: ಚೂಸಿಂಗ ದಿ ಸಿಸ್ಟಮ್ ಆಪ್‌ರಿಪ್ರಜೆಂಟಶನ್, ರಿಸರ್ಚ ಫೌಂಡೆಶನ್ ಫಾರ್‌ಗವರ್ನನ್ಸಇನ್‌ಇಂಡಿಯಾ, ಅಹಮದಾಬಾದ್, 2011.

[26] ಡೇರಿಯೊ ಮತ್ತು ವಾರನ್, ರಿಥಿಂಕಿಂಗ್‌ಡೆಮಾಕ್ರೆಟಿಕ್‌ರಿಪ್ರಜೆಂಟೇಷನ್; ಸೆಂಟರ್ ಫಾರ್‌ದ ಸ್ಟಡಿಆಪ್‌ಡೆಮಾಕ್ರೆಟಿಕ್‌ಇನ್ಸಿಟಿಟ್ಯೂಶೆನ್‌ಯುನಿವರ್ಸಿಟಿ ಆಪ್ ಬ್ರಿಟಿಷ, ಕೊಲಂಬಿಯಾ, 2006 .

ಮಹತ್ವದ್ದಾಗಿವೆಎಂದು ಹೇಳುತ್ತಾ; ಪ್ರಜಾಸತ್ತಾತ್ಮಕ ಪ್ರಾತಿನಿಧ್ಯತೆಯ ಪ್ರಮುಖ ಕಾರ್ಯಗಳ ಕುರಿತು ಹೇಳುತ್ತಾರೆ ಇಲ್ಲಿ ಪ್ರತಿನಿಧಿಗಳು ಪ್ರಜೆಗಳಿಗಾಗಿ, ಪ್ರಜೆಗಳ ಪರವಾಗಿ ಕೆಲಸಗಳನ್ನು ಮಾಡಿ ಸರಕಾರಗಳು ಪ್ರಜೆಗಳ ಹಿತಾಸಕ್ತಿ ಮತ್ತು ಅಭಿಪ್ರಾಯಗಳಿಗೆ ಸ್ಪಂದಿಸುವಂತೆ ನೋಡಿಕೊಳ್ಳಬೇಕು, ಪ್ರಾತಿನಿಧ್ಯತೆಯೆಂಬುದು ಪ್ರತಿನಿಧಿಗಳು ಜವಾಬ್ದಾರಿಯಿಂದ, ಪ್ರಜೆಗಳಿಗೆ ಉತ್ತರದಾಯಿಯಾಗಿ ಕಾರ್ಯನಿರ್ವಹಿಸಲು ಇರುವ ರಾಜಕೀಯ ಅಧಿಕಾರವಾಗಿದೆ ಎಂದು ಹೇಳುತ್ತಾರೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಪ್ರತಿನಿಧಿಗಳು ಪ್ರಾತಿನಿಧ್ಯತೆಯನ್ನು ಪ್ರಜೆಗಳ ಸೇವೆಯನ್ನು ಮಾಡಲು ಇರುವ ರಾಜಕೀಯ ಅಧಿಕಾರಎಂದು ಪರಿಗಣಿಸದೆತಮ್ಮ ಸ್ಥಾನಮಾನ ಮತ್ತು ಪ್ರತಿಷ್ಠೆಯೆಂದು ಪರಿಗಣಿಸಿರುವದನ್ನು ನಾವು ಕಾಣುತ್ತೇವೆ. ಆದಕಾರಣದಿಂದಾಗಿ ನೀರಾಚಂದೋಕೆಯವರು ಹೇಳುವಂತೆ ಪ್ರತಿನಿಧಿಗಳು ಪ್ರಜೆಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ, ಪ್ರಜೆಗಳು ಪ್ರತಿನಿಧಿಗಳ ಮೆಲಿನ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಮತ್ತು ಪ್ರತಿನಿಧಿಗಳು ತಮ್ಮ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ವಿಫಲರಾಗಿದ್ದಾರೆಎಂದು ಹೆಳುತ್ತಾರೆ. ಮುಂದುವರೆದು ಈ ಕಾರಣದಿಂದಾಗಿ ಪ್ರಜೆಗಳು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರೇತರ ಸಂಘ ಸಂಸ್ಥೆಗಳ ಕಡೆಗೆ ನೋಡುತ್ತಿದ್ದಾರೆಎಂದು ಹೇಳಿರುವುದು ಪ್ರಸ್ತುತವಾಗಿ ಪ್ರತಿನಿಧಿಗಳ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಿದಾಗ ತಿಳಿದು ಬರುವ ಅಂಶಗಳು ಮತ್ತು ಚಂದೋಕೆಯವರು ಹೇಳಿದ ಅಂಶಗಳು ಒಂದಕ್ಕೊಂದು ಪೂರಕವೆನಿಸುತ್ತವೆ.

ಸಮಸ್ಯೆಯ ಹೇಳಿಕೆ:

ಭಾರತದಲ್ಲಿ ಸಂವಿಧಾನದ ನಿರ್ಮಾತೃಗಳ ದೇಶಕ್ಕೆ ನೀಡಿದ ಜವಾಬ್ದಾರಿಯುತವಾದ ಪ್ರಾತಿನಿಧಿಕ ಮಾದರಿಯ ಸಂಸದಿಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಭಾರತವು ಅಳವಡಿಸಿಕೊಂಡು ಸುಮಾರುಆರು ದಶಕಗಳೇ ಕಳೆದರೂ ಆಡಳಿತ ಎಂಬುದು ಸಾಮಾನ್ಯ ಪ್ರಜೆಗಳಿಂದ ತುಂಬಾ ಅಂತರದಲ್ಲಿರುವುದು ತಿಳಿದು ಬರುತ್ತದೆ. ಪ್ರಜೆಗಳು ಮತ್ತು ಪ್ರಾತಿನಿಧಿಕ ಸಂಸ್ಥೆಗಳ ನಡುವಿನ ನಂಬಿಕೆ ಕಡಿಮೆಯಾಗ ತೊಡಗಿದೆ.[27]

ಪ್ರಜೆಗಳಿಗೆ ಪ್ರಾತಿನಿಧಿಕ ವ್ಯವಸ್ಥೆಯ ಮೇಲಿರುವ ನಂಬಿಕೆ ಕಡಿಮೆಯಾಗತೊಡಗಿದೆ. ಇದರಿಂದಾಗಿ ಹಲವಾರುರೀತಿಯಲ್ಲಿ ಸಾಮಾಜಿಕ ಚಳುವಳಿಗಳು ರಾಜಕೀಯ ಬಳವಣಿಗೆಗೆ ಪ್ರಾರಂಭವಾಗುವುದರ ಜೊತೆಗೆ ಪ್ರಜೆಗಳು ನಾಗರಿಕ ಸಮಾಜದಕಡೆಗೆ ನೋಡುವಂತಾಗಿದೆ. ಜವಾಹರ್‌ಲಾಲ್ ನೆಹರುರವರು ಪ್ರಾತಿನಿಧಿಕ ಪ್ರಜಾಪ್ರಭುತ್ವದ ಅಳವಡಿಸುವ ಉದ್ದೇಶಕುರಿತಾಗಿ ''ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವುದರಿಂದ ಭಾರತ ಪ್ರತಿಯೊಬ್ಬ ಪ್ರಜೆಯ ಆಶೆ ಆಶೋತ್ತರಗಳು ಪ್ರತಿನಿಧಿಸಭೆಯಲ್ಲಿ ಪ್ರತಿನಿಧಿಸಲ್ಪಡಬೇಕು ಮತ್ತುರಾಷ್ಟ್ರದ ಅಭಿವೃದ್ಧಿಯಲ್ಲಿ ಪ್ರತಿಯೊಬ್ಬ ಪ್ರಜೆಯು ಪಾಲ್ಗೊಳ್ಳಬೇಕು'' ಎಂದು ಹೇಳಿದ್ದರು. ಆದರೆ ಇಂದು ಅವರು ಹೇಳಿದ ಮಾತಿಗೆಅರ್ಥವೇಇಲ್ಲದಂತಾಗಿದೆ. ಇಂದಿನ ಪ್ರಾತಿನಿಧಿಕ ಸಂಸ್ಥೆಗಳಾದ ರಾಜಕೀಯ ಪಕ್ಷಗಳು ಮತ್ತು ಪ್ರತಿನಿಧಿಗಳು ಪ್ರಜೆಗಳ ಅಭಿಪ್ರಾಯಗಳು, ಆಶೆ ಆಶೋತ್ತರಗಳನ್ನು ಶಾಸನ ಸಭೆಗಳಲ್ಲಿ ಮಂಡಿಸುವಲ್ಲಿ ವಿಫಲವಾಗಿರುವುದರಿಂದ ಪ್ರಜೆಗಳು ಇವುಗಳಲ್ಲಿ ನಂಬಿಕೆಗಳನ್ನು ಕಳೆದುಕೊಂಡು ನಾಗರಿಕ ಸಮಾಜದ ಸಂಘಟನೆಗಳು, ಸರಕಾರೇತರ ಸ್ವಯಂ ಸೇವಾ ಸಂಸ್ಥೆಗಳತ್ತ ಈ ನಂಬಿಕೆಗಳನ್ನು ಪುನರಸ್ಥಾಪಿಸಲು ಕೋರಿತಮ್ಮ ಬೇಡಿಕೆಗಳನ್ನು ಮಂಡನೆ ಮಾಡುತ್ತಿವೆ. ಈ ಹಿನ್ನಲೆಯಲ್ಲಿ ಇತ್ತಿಚಿನ ದಿನದಲ್ಲಿ ಸರಕಾರ ಭ್ರಷ್ಟಾಚಾರತಡೆಗಟ್ಟಲು ಲೋಕಪಾಲ ಕಾಯಿದೆಯನ್ನು ಜಾರಿಗೆತರಲು ವಿಫಲವಾದಾಗ, ಅಣ್ಣಾ ಹಜಾರೆ, ಕೆಜ್ರಿವಾಲ್‌ರಂತಹ ನಾಗರಿಕ ಸಮಾಜದ ಪ್ರತಿನಿಧಿಗಳು ನಡೆಸಿದ ಚಳುವಳಿಗಳು ಈ ಹಿಂದೆ ಕರ್ನಾಟಕದಲ್ಲಿ ಪಂಚಾಯತ್‌ರಾಜ ಸ್ಥಾಪನೆ ಹಾಗೂ ಕೃಷಿಕರ ಸಮಸ್ಯೆಗಳ ಪರಿಹಾರಕ್ಕಾಗಿ ಆದರೈತ ಚಳುವಳಿಗಳು, '1970 ರದಶಕ'ದಲ್ಲಿ ತುರ್ತುಪರಿಸ್ಥಿತಿಯ ವಿರುದ್ಧ ನಡೆದಜಯಪ್ರಕಾಶ ನಾರಾಯಣರವರ ಸಂಪೂರ್ಣ ಕ್ರಾಂತಿಗಳು ಪ್ರಮುಖ ಅವುಗಳಿಗೆ ದೊರೆತ

[27] ನೀರಾಚಂದೋಕೆ, ಕ್ರೈಸಿಸ್ ಆಫ್‌ರೆಪ್ರಸೆಂಟೇಶನ್, ಡೆವಲಪಿಂಗ್‌ರಿಸರ್ಚ ಸೆಂಟರ್, ದೆಹಲಿ ಯುನಿವರ್ಸಿಟಿ, ದೆಹಲಿ, 2013.

ಜನಬೆಂಬಲವನ್ನು ನೋಡಿದರೆ ಸರಕಾರ ಮತ್ತು ಪ್ರತಿನಿಧಿ ಸಭೆಗಳು ಜಾರಿಗೆತರಲು ವಿಫಲವಾದ ಕಾಯಿದೆಗಳನ್ನು ಜನರೇ ನೇರವಾಗಿಜಾರಿಗೆತರಲು ಹಂಬಲಿಸುತ್ತಿದ್ದಾರೆಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.[28] ಈ ಅಂಶಗಳನ್ನು ಗಮನಿಸಿದಲ್ಲಿ ಪ್ರತಿನಿಧಿಗಳು ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆಯೇ ಎಂಬ ಶಂಕೆ ಉದ್ಭವಿಸುವುದು ಸಹಜ.

ಪ್ರಾರಂಭದಲ್ಲಿ ಪ್ರತಿನಿಧಿಗಳು ತಾವು ಚುನಾಯಿತರಾಗುವ ಕ್ಷೇತ್ರದ ಹಾಗೂ ಸಮಾಜದಎಲ್ಲ ಅವಶ್ಯಕತೆಗಳನ್ನು ಮತ್ತು ಸಮಸ್ಯೆಗಳನ್ನು ಅರಿತುಕೊಂಡು ತಮ್ಮ ಸದಸ್ಯತ್ವವನ್ನು ಸಮಸ್ಯೆಗಳ ಈಡೇರಿಕೆಗೆ ಒಂದು ಸಾಧನವೆಂದು ಪರಿಗಣಿಸುತ್ತಿದ್ದರು. ಶಾಸಕಾಂಗಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಪ್ರಜೆಗಳ ಆಸೆ, ಆಶೋತ್ತರಗಳನ್ನು ಶಾಸನ ಸಭೆಗಳಲ್ಲಿ ಪ್ರತಿನಿಧಿಸುವುದರ ಮೂಲಕ ಪ್ರಜೆಗಳ ಸಮಸ್ಯೆಗಳಿಗೆ ಸ್ಪಂಧಿಸುತ್ತಿದ್ದರು. ಆದರೆ ಇಂದಿನ ಬಹುಸಂಖ್ಯಾತ ಪ್ರತಿನಿಧಿಗಳು, ಶಾಸನ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿಲ್ಲ[29] ಎಂಬುದು ಅವರು ಸಂಸದಿಯ ಕಾರ್ಯಕಲಾಪಗಳಲ್ಲಿನ ಹಾಜರಾತಿ, ಅವರು ಚರ್ಚೆಗಳಲ್ಲಿ ಭಾಗವಹಿಸುವುಕೆಯ ಪ್ರಮಾಣ ಮತ್ತು ಅವರ ಕಾರ್ಯಚಟುವಟಿಕೆಗಳನ್ನು ನೋಡಿದರೆ ಪ್ರಜೆಗಳ ಸಮಸ್ಯೆಗಳನ್ನು ಪ್ರತಿನಿಧಿಸಭೆಗಳಲ್ಲಿ ಪ್ರತಿನಿಧಿಸುತ್ತಿಲ್ಲ ಎಂಬುದು ತಿಳಿಯುತ್ತದೆ. ಸಂಸದೀಯ ಸರಕಾರ ವ್ಯವಸ್ಥೆಯಲ್ಲಿ ಸಂಸತ್ತಿನ ನಿಯಂತ್ರಣದ ಸಾಧನವೇ ಪ್ರಶ್ನೋತ್ತರಅವಧಿ ಈ ಅವಧಿಗಾಗಿ ನಡೆಯುವ ಕಲಾಪಗಳಿಗೆ ಪ್ರತಿ ನಿಮಿಷಕ್ಕೆ 2.5 ಲಕ್ಷರೂ[30]ಗಳನ್ನು ವ್ಯಯಿಸುತ್ತಿರುವಾಗ ಪ್ರತಿನಿಧಿಗಳು ಸಂಸದೀಯ ಕಲಾಪಗಳಲ್ಲಿ ಭಾಗವಹಿಸಿ ಪ್ರಜೆಗಳ ಕುಂದುಕೊರತೆಗಳು ಮತ್ತು ಅವರ ಅಗತ್ಯತೆಗಳನ್ನು ಚರ್ಚಿಸುವುದರ ಮೂಲಕ ಪ್ರಜೆಗಳ ಮೂಲಭೂತ ಅವಶ್ಯಕತೆಗಳನ್ನು ಅವರ ಬೇಡಿಕೆಗಳನ್ನು ಪೂರೈಸಬೇಕಾಗಿರುವುದು ಅವರ ಮೂಲಭೂತಕರ್ತವ್ಯ. ಆದರೆ ಇಂದಿನ ಪ್ರತಿಶತ 65 ರಷ್ಟು ಪ್ರತಿನಿಧಿಗಳು ಸಂಸದಿಯ ಕಾರ್ಯ ಕಲಾಪಗಳಲ್ಲಿ ಭಾಗಹಿಸದೆ ಇರುವುದು. ಕಾರ್ಯ ಕಲಾಪಗಳು ನಡೆಯುವ ಸಂದರ್ಭದಲ್ಲಿ ಯಾವುದೇ ಒಂದು ವಿಷಯವನ್ನಿಟ್ಟುಕೊಂಡು ಅನಿರ್ದಿಷ್ಟಾವಧಿಗೆ ಕಲಾಪಗಳ ಮುಂದೂಡುವುದು, ಅನಾವಶ್ಯಕವಾಗಿ ಸದನದ ಸಮಯವನ್ನು ಹಾಳು ಮಾಡುತ್ತಿರುವುದು ನೋಡಿದರೆ ಪ್ರಜೆಗಳಿಗೆ ಪ್ರತಿನಿಧಕ ವ್ಯವಸ್ಥೆಯ ಮೇಲೆ ಇರುವ ನಂಬಿಕೆ ಕಡಿಮೆಯಾಗಿ ಪ್ರತಿನಿಧಿಗಳು ನಮ್ಮ ಪ್ರತಿನಿಧಿಸುತ್ತಿದ್ದಾರೆಯೇ ಎಂಬ ಸಂಶಯಕಾಡತೊಡಗಿದೆ.

ಇಲ್ಲಿಯವರೆಗೆ ಪ್ರತಿನಿಧಿಗಳಿಗೆ ನೀಡುತ್ತಿರುವ ಎಲ್ಲ ರೀತಿಯ ವೇತನ, ಭತ್ಯೆ, ಮತ್ತು ಕ್ಷೇತ್ರಾಭಿವೃದ್ಧಿಯ ಭತ್ಯೆಗಳಲ್ಲಿ ಹೆಚ್ಚಳವಾಗುತ್ತಾ ಬಂದಿದೆ. ಆದರೆ ಅದಕ್ಕೆ ಪ್ರತಿಯಾಗಿ ಅವರ ಭದ್ದತೆಯಲ್ಲಿ, ಗುಣಮಟ್ಟದಲ್ಲಿ, ಮತ್ತು ಸಂಸತ್ತಿಗೆ ಗೌರವ ಹಾಗೂ ಸದನಗಳ ಕಲಾಪಗಳ ಭಾಗವಹಿಸುವಿಕೆಯಲ್ಲಿ ಇಳಿ ಮುಖವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಇದು ಪ್ರಾತಿನಿಧಿಕ ಪ್ರಜಾಪ್ರಭುತ್ವದ ಅಳಿವು–ಉಳುವಿನ ಪ್ರಶ್ನೆಯಾಗಿದೆ. ಈ ಹಿನ್ನಲೆಯಲ್ಲಿ ಈ ಕೆಳಕಂಡ ಸಂಶೋಧನಾ ಪ್ರಶ್ನೆಗಳನ್ನು ಈ ಅಧ್ಯಯನದಲ್ಲಿ ತೆಗೆದುಕೊಳ್ಳಲಾಗಿದೆ.

ಸಂಶೋಧನಾ ಪ್ರಶ್ನೆಗಳು:

- ರಾಜಕೀಯ ಪಕ್ಷಗಳಿಂದ ಸ್ಪರ್ಧಿಸಿ ಆಯ್ಕೆಯಾದ ಪ್ರತಿನಿಧಿಗಳು ಪಕ್ಷಗಳ ಪರವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆಯೇ ಅಥವಾ ಪ್ರಜೆಗಳ ಪರವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆಯೇ?
- ಪ್ರಾತಿನಿಧಿಕ ವ್ಯವಸ್ಥೆಯ ತಳಹದಿಯ ಪ್ರತಿನಿಧಿಗಳ ಕಾರ್ಯಕ್ಕೆ ಸಂಭಂಧಿಸದಂತೆ ಯಾವ ಸೈಧ್ದಾಂತಿಕ ನಿಲುವನ್ನು ಹೊಂದಿದೆ.
- ಪ್ರತಿನಿಧಿಗಳು ಪ್ರಜೆಗಳನ್ನು ಶಾಸನ ಸಭೆಗಳಲ್ಲಿ ಪ್ರತಿನಿಧಿಸುತ್ತಿದ್ದಾರೆಯೇ, ಪ್ರತಿನಿಧಿಸುತ್ತಿದ್ದರೆ.
- ಯಾವ ಪ್ರಮಾಣದಲ್ಲಿ ಪ್ರತಿನಿಧಿಸುತ್ತಿದ್ದಾರೆ, ಹಾಗೂ ಇಂತಹ ಪ್ರತಿನಿಧಿತ್ವದ ವಾಸ್ತವ

[28]ಅಣ್ಣಾ ಹಜಾರೆರವರ ಭ್ರಷ್ಟಾಚಾರ ವಿರೋಧಿಆಂದೋಲನದಚರ್ಚೆಯಒಂದು ವಿಶ್ಲೇಷಣೆ. (ಯೋಜನಾಅಭಿವೃದ್ಧಿ ಮಾಸ ಪತ್ರಿಕೆ, ಭಾರತ ಸರ್ಕಾರ, ಅಕ್ಟೋಬರ್ 2014.

[29]ಟೈಮ್ಸ್ಆಫ್ಇಂಡಿಯಾ, ಪಾಕ್ಷಿಕ ಪತ್ರಿಕೆ, ಫೆಬುವರಿ, 2014

[30]ಟೈಮ್ಸ್ಆಫ್ಇಂಡಿಯಾ, ಪಾಕ್ಷಿಕ ಪತ್ರಿಕೆ, ಫೆಬುವರಿ, 2014

ನೆಲೆಗಳಾವವು. ಇಂತಹ ಪ್ರಾತಿನಿಧಿಕ ವ್ಯವಸ್ಥೆಯಲ್ಲಿ ಪ್ರಜೆಗಳ ಜವಾಬ್ದಾರಿಯೇನು?

- ಪ್ರಾತಿನಿಧಿಕ ಸಂಸ್ಥೆಗಳಲ್ಲಿ ಪ್ರಜೆಗಳು ನಂಬಿಕೆ ಕಳೆದುಕೊಳ್ಳುತ್ತಿದಾರೆಯೇ, ಹಾಗಿದ್ದಲ್ಲಿಅದಕ್ಕೆ ಕಾರಣಗಳಾವವು ಎಂಬುದು ಪ್ರಮುಖ ಸಂಶೋಧನೆ ಸಮಸ್ಯೆಗಳಾಗಿವೆ.

ಅಧ್ಯಯನದ ಉದ್ದೇಶಗಳು:

- ಪ್ರಾತಿನಿಧಿಕ ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿಗಳ ಪಾತ್ರ ಮತ್ತು ಪ್ರತಿನಿಧಿತ್ವತೆಯನ್ನುಕುರಿತುಅಧ್ಯಯನ ಮಾಡುವುದು.
- ಪ್ರಾತಿನಿಧಿಕ ವ್ಯವಸ್ಥೆಯ ಸಮಸ್ಯೆಗಳ ಸ್ವರೂಪ, ಲಕ್ಷಣ, ಪ್ರಾಮುಖ್ಯತೆಗಳನ್ನು ಕುರಿತುಅದ್ಯಯನ ಮಾಡುವುದು.
- ಪ್ರಾತಿನಿಧ್ಯತೆಯ ಪರಿಕಲ್ಪನೆ ಹಾಗೂ ಪ್ರಾಯೋಗಿಕತೆಯ ನಡುವಿನ ಅಂತರಗಳನ್ನು ಗುರುತಿಸುವುದೇಆಗಿದೆ ಹಾಗೂ ಪ್ರಾತಿನಿಧ್ಯತೆಯಜವಾಬ್ದಾರಿಯ ನಿರ್ವಹಣೆಯಲ್ಲಿ ಪ್ರಜೆಗಳ ಜವಾಬ್ದಾರಿಯನ್ನು ವಿವರಿಸುವ ಪರಿ ಹೇಗೆ ಎಂಬುದಾಗಿದೆ.

ಅಧ್ಯಯನದ ವಿಶ್ಲೇಷಣೆ:

ಪ್ರಜಾಪ್ರಭುತ್ವದ ಚರಿತ್ರೆಯಲ್ಲಿ ಮ್ಯಾಗ್ನಕಾರ್ಟಾದಿಂದ ಪ್ರಾರಂಭವಾಗಿ ಥಾಮಸ್ ಹ್ಯಾನ್ಸ್, ಮ್ಯಾಡಿಸನ್, ರೂಸ್ಸೊ, ಖೈಸರ್, ಮಿಲ್, ಡ್ಯುಯಿ, ಸ್ಮಿತ್, ದಾಲ್, ಪಿಟ್ಕಿನ್ ಹೀಗೆ ಹಲವಾರು ಪ್ರಮುಖಚಿಂತಕರು ಸಂಸದೀಯ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಒಳಗೊಂಡಂತೆ ರಾಜಕೀಯ ಪ್ರಾತಿನಿಧ್ಯ, ಪ್ರತಿನಿಧಿತ್ವತೆ ಮತ್ತು ಉತ್ತರದಾಯಿತ್ವದ ಬಗ್ಗೆ ಹಲವಾರು ಚರ್ಚೆಗಳನ್ನು ಮಂಡಿಸಿದ್ದಾರೆ. ಇಂತಹ ಪ್ರಶ್ನೆಗಳು ಕೆಲವೊಮ್ಮೆ ನಿಜವಾಗಿಯೂ ಪ್ರತಿನಿಧಿತ್ವತೆಗೆ ಸಂಬಂಧಿಸಿದ ಪ್ರಶ್ನೆಗಳಾಗಿವೆಯೇ ಎಂಬ ಮೂಲಭೂತ ಪ್ರಶ್ನೆಗಳು ಸಹ ನಮ್ಮನ್ನು ಸಾಂದರ್ಭಿಕವಾಗಿಕಾಡುತ್ತಿವೆ. ಇದಕ್ಕೆಕಾರಣ ಪ್ರಸಕ್ತ ಸಂದರ್ಭದಲ್ಲಿ ರಾಜಕೀಯ ಪ್ರಾತಿನಿಧ್ಯತೆಯ ಹೆಚ್ಚಿನ ಪಾಲು ಸೋಲನ್ನು ಅನುಭವಿಸುತ್ತಿದ್ದು ಚುನಾಯಿತ ಪ್ರತಿನಿಧಿಗಳು ಕೇವಲ ತಮ್ಮ ಚುನಾವಣೆಗೆ ಪೂರಕವಾಗಿ ಕಾರ್ಯನಿರ್ವಹಿಸಿದವರ ಅನುಕೂಲಕ್ಕೆ ತಕ್ಕಂತೆ ಮಾತ್ರ ಕಾರ್ಯನಿರ್ವಹಿಸುತ್ತಾರೆ ಎಂಬ ಟೀಕೆಗೆಗುರಿಯಾಗಿದ್ದಾರೆ ಇಂತಹ ಸಂದರ್ಭಗಳಲ್ಲಿ ಪ್ರಜಾಪ್ರಭುತ್ವದಲ್ಲಿನ ರಾಜಕೀಯ ಪ್ರಾತಿನಿಧ್ಯತೆಯು ಪ್ರಜಾಪ್ರಭುತ್ವದಲ್ಲಿನ ಕೊರತೆ ಮತ್ತು ಸಾಂಸ್ಥಿಕ ಶಕ್ತಿಯ ಅನುಕೂಲಕ್ಕೆ ತಕ್ಕಂತೆ ವಿವರಿಸಲ್ಪಡುತ್ತದೆ. ಇಲ್ಲಿ ಮುಖ್ಯವಾಗಿ ತಿಳಿಸುವುದೇನೆಂದರೆ ರಾಜಕೀಯ ಪ್ರಾತಿನಿಧ್ಯತೆ ಮತ್ತು ಪ್ರಜಾಪ್ರಭುತ್ವದ ಸಂಬಂಧದಲ್ಲಿ ಪ್ರಜಾಪ್ರಭುತ್ವದ ಅನುಕರಣೆಗಳು ರಾಜಕೀಯ ಪ್ರಾತಿನಿಧಿತ್ವತೆಯ ಮೇಲೆ ತಮ್ಮ ಪ್ರಭಾವ ಬೀರುತ್ತಿವೆ ಎಂದು ಕಂಡು ಬರುತ್ತಿದೆ. ಈ ಕಾರಣದಿಂದ ಪ್ರತಿನಿಧಿತ್ವತೆಯ ಅಂಗವಾಗಿ ಉತ್ತರದಾಯಿತ್ವದ ಪ್ರಶ್ನೆಗಳು ಸಹ ಅನುಮಾನಾಸ್ಪದವಾಗಿ ಬಿಂಬಿಸಲ್ಪಡುತ್ತವೆ. ಈ ಕಾರಣದಿಂದ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪ್ರಾತಿನಿಧ್ಯತೆಯು ಉತ್ತರದಾಯಿತ್ವದ ಮೇಲೆ ಅವಲಂಬಿತವಾಗಿಲ್ಲವೆಂಬ ಚರ್ಚೆಗಳು ಮೂಡಿಬಂದು ರಾಜಕೀಯ ಪ್ರತಿನಿಧಿತ್ವತೆಯನ್ನು ಮತ್ತೊಬ್ಬರ ಹಿತಾಸಕ್ತಿಗೆ ಕಾರ್ಯನಿರ್ವಹಿಸುವುದು ಎಂದು ಬಿಂಬಿಸಲ್ಪಡುತ್ತದೆ. ಈ ಹಿನ್ನೆಲೆಯಲ್ಲಿ ಒಂದು ಮೌಲ್ಯಾಧಾರಿತವಾಗಿ ಪ್ರತಿನಿಧಿತ್ವತೆಯನ್ನು ಬಿಂಬಿಸುವುದಾದರೆ ರಾಜಕೀಯ ಪ್ರಪಂಚದಲ್ಲಿ ವಿಶ್ವಾಸಾರ್ಹ ಪರಿಕಲ್ಪನೆಯಾಗಿ ವಿವರಣಾತ್ಮಕವಾಗಿ ಎಲ್ಲರ ಒಪ್ಪಿಗೆಯನ್ನು ಪಡೆಯುವಂತೆ ಇರುತ್ತಿತ್ತು ಆದರೆ ಇದು ಮೌಲ್ಯಾಧಾರಿತವೂಅಲ್ಲ ವಿವರಣಾತ್ಮಕವೂ ಅಲ್ಲ ಇದೊಂದು ಪ್ರಾಯೋಗಿಕ ಕಾರ್ಯ ಇದರಲ್ಲಿ ವಾಸ್ತವಿಕತೆ ಇದ್ದು ಶಾಸನಬದ್ಧವಾಗಿ ಚುನಾಯಿತ ಪ್ರತಿನಿಧಿಯು ಚುನಾವಣಾ ನಂತರದಲ್ಲಿ ಸಂಸದೀಯ ಪ್ರಜಾಪ್ರಭುತ್ವಕ್ಕೆ ಆಯ್ಕೆಯಾದಾಗ ಅದು ಕೇವಲ ಪ್ರಜಾಪ್ರಭುತ್ವಿಕ ಶಾಸನೀಕರಣವಾಗದೇ ಇದು ಪ್ರಜಾಪ್ರಭುತ್ವದಲ್ಲೂ ಪ್ರತಿನಿಧಿತ್ವತೆಯ ಬದ್ಧತೆಯ ಶಾಸನೀಕರಣ ಸಹ ಆಗುತ್ತದೆ. ಇಲ್ಲಿರಾಜಕೀಯಪ್ರತಿನಿಧಿತ್ವವು ಕೇವಲ ಮೌಲ್ಯಾಧಾರಿತ ವಿವರಣಾತ್ಮಕ ಅಧ್ಯಯನದಲ್ಲಿ ಪರಿಗಣಿಸಲ್ಪಡದೇ, ಇದುರಾಜಕೀಯ ಪ್ರಪಂಚದ ಸತ್ಯ–ಮಿಥ್ಯಗಳನ್ನು ಒಳಗೊಂಡಂತೆ ಚರ್ಚಿತವಾಗಬೇಕಾಗುತ್ತದೆ. ಇಲ್ಲಿ

ಮತದಾರರ ನಿರ್ಧಾರವೈಯಕ್ತಿವೋ, ಸಾಮುದಾಯಿಕವೋ ಮತ್ತು ಪ್ರತಿನಿಧಿಗಳು ವ್ಯಕ್ತಿಗತ ಪ್ರತಿನಿಧಿತ್ವತೆ ನೀಡುವರೋ ಹಾಗೂ ಸಮುದಾಯದ ಪ್ರತಿನಿಧಿತ್ವತೆಗೆ ಬೆಂಬಲಿಸುವರೋಅಲ್ಲದೇ ಪಕ್ಷಾತೀತ ಮತ್ತುಆದರ್ಶಪ್ರಾಯರಾಗಿ ನಡೆದುಕೊಳ್ಳುವರೋ ಅಥವಾಇವೆಲ್ಲವನ್ನು ಮೀರಿಎಡ್ಮಂಡ ಬರ್ಕರವರು ಹೇಳಿದಂತೆ ತಮ್ಮ ಸ್ವಂತ ನಿರ್ಧಾರಕ್ಕೆ ಬದ್ಧರಾಗಿ ನಡೆದುಕೊಳ್ಳುವರೋ? ಎಂಬ ಎಲ್ಲಾ ಪ್ರಶ್ನೆಗಳು ಬೆಳಕಿಗೆ ಬರುತ್ತವೆ.

ಇಂತಹ ಹಲವಾರು ಪ್ರಶ್ನೆಗಳನ್ನು ಸಂಸದೀಯ ಪ್ರಜಾಪ್ರಭುತ್ವ ನಡೆದು ಬಂದದಾರಿಯಲ್ಲಿ ಚರ್ಚಿಸುತ್ತಾ ಮುನ್ನೆಡೆದ ಸಂದರ್ಭದಲ್ಲಿಇಂಗ್ಲೆಂಡ್‌ನ ವೆಸ್ಟ್ ಮಿನಿಸ್ಟರ್ ಮಾದರಿ, ಅಮೇರಿಕಾದ ಅಧ್ಯಕ್ಷೀಯ ಮಾದರಿ, ಅಥವಾ ಸ್ವಿಟ್ಜರಲ್ಯಾಂಡಿನ ಮಾದರಿಯಾಗಲಿ ಅಥವಾ ಫ್ರಾನ್ಸ್‌ನ ಮಾದರಿಯಾಗಲಿ ವಿವಿಧ ಪ್ರಜಾಪ್ರಭುತ್ವಿಕ ಪ್ರಶ್ನೆಗಳು ಪ್ರಾತಿನಿಧ್ಯತೆಯ ಪರಿಣಾಮಕಾರತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಚರ್ಚೆಗೆ ಬರುತ್ತವೆ. ಇಲ್ಲಿ ಪ್ರಜಾಪ್ರಭುತ್ವವಲ್ಲದ ಸರ್ವಾಧಿಕಾರಿ ರಾಷ್ಟ್ರಗಳಲ್ಲಿಯೂ ರಾಜಕೀಯ ಪ್ರತಿನಿಧಿತ್ವತೆಯ ಪ್ರಶ್ನೆಗಳು ಬೆಳಕಿಗೆ ಬರುವ ಸಂದರ್ಭದಲ್ಲಿ ಯಾವುದೇ ಒಂದು ರಾಷ್ಟ್ರಕ್ಕೆ ಸೀಮಿತವಾಗಿ ರಾಜಕೀಯ ಪ್ರತಿನಿಧಿತ್ವದ ಪ್ರಶ್ನೆಗಳನ್ನು ಕೇಳಲಾಗುವುದು. ಈ ಹಿನ್ನೆಲೆಯಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳ ನಡುವೆಯೂ ಪ್ರತಿನಿಧಿತ್ವದ ಪ್ರಶ್ನೆಯು ಹನ್ನಾ ಪಿಟ್ಕಿನ್‌ರವರು ತಿಳಿಸುವಂತೆ ಅಧಿಕಾರ ಮತ್ತು ಉತ್ತರದಾಯಿತ್ವವನ್ನು ಹೊಂದಿ ಮತ್ತೊಬ್ಬರ ಹಿತಾಸಕ್ತಿಯನ್ನು ಪ್ರತಿನಿಧಿಸುವಿಕೆ ಸಾಧ್ಯವೇ ಎಂಬ ಪ್ರಶ್ನೆಗೆರಾಜಕೀಯ ಪ್ರತಿನಿಧಿತ್ವದ ಮೂಲಭೂತ ಬಾಧ್ಯತೆಗಳೇನು? ಮತ್ತು ವಾಸ್ತವದಲ್ಲಿ ಮತ್ತೊಬ್ಬರ ಹಿತಾಸಕ್ತಿಯನ್ನು ಹೇಗೆ ವಿವರಿಸಬಹುದು ಮತ್ತುಇದನ್ನು ಪ್ರಕ್ರಿಯಾತ್ಮಕವಾಗಿ ಹೇಗೆ ಅನುಷ್ಟಾನಕ್ಕೆ ತರಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸುವುದು ಚರ್ಚಾಸ್ಪದವಾಗಿದೆ. ಈ ಹಿನ್ನೆಲೆಯಲ್ಲಿಒಬ್ಬ ಪ್ರತಿನಿಧಿಯು ಮತ್ತೊಬ್ಬರ ಹಿತಾಸಕ್ತಿಯನ್ನು ಪ್ರತಿನಿಧಿಸುವ ಸಂದರ್ಭದಲ್ಲಿ ಪ್ರತಿನಿಧಿಸುವವನ ಮತ್ತು ಪ್ರತಿನಿಧಿಸಲ್ಪಡುವ ಇಬ್ಬರ ಹಿತಾಸಕ್ತಿಗಳು ಒಂದೇ ಆಗಿರಬೇಕೆಂಬ ಚರ್ಚೆಗಳು ಇವೆ. ಆದರೆ ರಾಜಕಾರಣದ ಪ್ರಶ್ನೆ ಬಂದಾಗ ಇವುಗಳನ್ನು ಒಪ್ಪಲು ಸಾಧ್ಯವಾಗುವುದಿಲ್ಲ. 1967ರ ಕಾಲದಲ್ಲಿಯೇ ಈ ಬಗ್ಗೆ ನಾಗರಿಕರು ಮತ್ತು ನೀತಿ ನಿರೂಪಣಕಾರರ ನಡುವಿನ ಸಂಬಂಧಗಳನ್ನು ಕುರಿತಾಗಿ ವಿವಿಧ ಪ್ರಜಾಪ್ರಭುತ್ವಗಳಲ್ಲಿ ಸಾಕಷ್ಟು ಸಂಶೋಧನೆ ಮಾಡಲಾಗಿಇಲ್ಲಿ ಪಕ್ಷಪದ್ಧತಿ, ಚುನಾವಣಾ ಕಾನೂನುಗಳು, ಭೌಗೋಳಿಕವಾಗಿ ಮತದಾರರ ಹಂಚಿಕೆ, ರಾಜಕೀಯ ಪಕ್ಷಗಳ ಸಂಖ್ಯೆಗಳು, ಜನ ಹಾಗೂ ಜನಾಧಾರಿತ ಪ್ರತಿನಿಧಿತ್ವತೆಯ ಪ್ರಶ್ನೆಗಳು ಕೂಡ ಸಂಶೋಧಿಸಲ್ಪಟ್ಟಿವೆ.

ಇಂತಹ ಸಂಶೋಧನೆಗಳಲ್ಲಿ ರಾಬರ್ಟ್‌ದಾಲ್ ಹೇಳುವಂತೆ ಈ ಪ್ರತಿನಿಧಿತ್ವದ ಪ್ರಶ್ನೆಗಳು ಪ್ರಜಾಪ್ರಭುತ್ವವನ್ನು ಬದಲಾಯಿಸಿ ಪ್ರಜೆಗಳನ್ನು ಪ್ರತಿನಿಧಿಸುವ ಪ್ರಭುತ್ವದೆಡೆಗೆ ಒಯ್ದು ನಿಜವಾದ ಸರ್ವಾಧಿಕಾರ ಯಾವುದು? ಇದು ಜನ ಸಾಮಾನ್ಯರಲ್ಲಿದೆಯೋ? ಜನಪ್ರತಿನಿಧಿಗಳಲ್ಲಿದೆಯೋ? ಎಂದು ಎತ್ತಿದ್ದಾರೆ. ಈ ಚರ್ಚೆಗಳನ್ನು ಮಾಡುವ ಸಂದರ್ಭಗಳಲ್ಲಿ ಜನಪ್ರತಿನಿಧಿಗಳು ಪ್ರಜಾಪ್ರಭುತ್ವೇತರ ಸಂಸ್ಥೆಗಳಲ್ಲಿ ಸಹ ಜನರಿಗಾಗಿಯೇ ಶ್ರಮಿಸುವ ಹಿನ್ನೆಲೆಯೂ ನಾಗರಿಕರ ಭಾಗವಹಿಸುವಿಕೆ ಮತ್ತು ಪ್ರತಿನಿಧಿತ್ವದ ಲಕ್ಷಣಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಇವರು ಪ್ರತಿಪಾದಿಸಿದರು. ಇಲ್ಲಿ ನಾಗರಿಕರನ್ನು 'ಪ್ರಿನ್ಸಿಪಲ್‌ಯುನಿಟ್' ಎಂದು ಗುರುತಿಸಿದರೆ ಪ್ರತಿನಿಧಿಗಳನ್ನು 'ಏಜೆಂಟ್ಸ್' ಎಂದು ಗುರುತಿಸುವ ಸಂದರ್ಭದಲ್ಲಿ ನಾಗರಿಕರು ತಾತ್ಪೂರ್ತಿಕವಾಗಿತಮ್ಮ ಅಧಿಕಾರಗಳನ್ನು ಸಾರ್ವಜನಿಕ ನೀತಿರೂಪಣೆಯ ಏಜೆಂಟ್‌ಗಳಿಗೆ ವಹಿಸುತ್ತಾರೆ ಎಂದು ಅರ್ಥಕೊಡುತ್ತದೆ. ಇಲ್ಲಿ ನಾಗರಿಕರೆಲ್ಲರೂ ಸಮಾನರು ಮತ್ತು ಏಜೆಂಟ್‌ರೊಂದಿಗೆ ಅವರ ಸಂಬಂಧಗಳು ಸಮಾನವೆಂಬ ಅರ್ಥಕಲ್ಪಿಸುತ್ತದೆ. ಆದರೆ ಈ ಸಂಬಂಧಗಳು ವಿವಿಧ ರಾಷ್ಟ್ರಗಳಲ್ಲಿ ವಿವಿಧತೆಯಿಂದ ಕೂಡಿರುವ ಕಾರಣ ಈ ಪ್ರಜಾಪ್ರಭುತ್ವಿಕ ಪ್ರತಿನಿಧಿತ್ವವುಕೂಡ ಕೇವಲ ಪ್ರಕ್ರಿಯಾತ್ಮಕ ಪ್ರತಿನಿಧಿತ್ವವಾಗದೇ ವಿಭಿನ್ನತೆಗಳನ್ನು ಹೊಂದಿರುವ ಸಾಧ್ಯತೆಗಳನ್ನು ಬೆಳಕಿಗೆ ತಂದಿದ್ದಾರೆ.

ಇದೇ ಚರ್ಚೆಗಳು ಮುಂದುವರೆದು ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿಯೊಬ್ಬ ಎಲ್ಲರ ಹಿತಾಸಕ್ತಿಗಳನ್ನು

ಪ್ರತಿನಿಧಿಸಲು ಸಾಧ್ಯವೇ? ಎಂಬ ಪ್ರಶ್ನೆ ಬಂದಾಗ ಮಿಲ್ಲರ್ ಮತ್ತು ಸ್ಟೋಕ್ಸ್‌ರವರು 1963ರಲ್ಲಿ ಬರೆದ "Constitucy Influence in Congress" ಬರಹದೆಡೆಗೆ ತಮ್ಮ ಗಮನ ಒಯ್ಯಬೇಕಾಗುತ್ತದೆ. ಇಲ್ಲಿ ಮಿಲ್ಲರ್ ಮತ್ತು ಸ್ಟೋಕ್‌ರವರು ನಾಗರಿಕರ ಪ್ರತಿನಿಧಿತ್ವತೆಯ ನಡುವೆ ಒಂದು ಕಾರಣಾತ್ಮಕ ಸಂಬಂಧವಿರುತ್ತದೆ ಎಂಬುದನ್ನು ಪ್ರಸ್ತುತಪಡಿಸಿದ್ದಾರೆ. ಇಂತಹ ಹಲವಾರು ಅಧ್ಯಯನಗಳು 1977ರಲ್ಲಿ ಆಚೆನ್‌ರವರು 1982ರಲ್ಲಿ ಎಲ್ ಡಿ. ಪಾವೆಲ್‌ರವರು 1999ರಲ್ಲಿ ಕಿಶೆಟ್‌ರವರು ನಡೆಸಿರುವುದನ್ನು ಗಮನಕ್ಕೆ ತಂದುಕೊಂಡಲ್ಲಿ ಹೆಚ್ಚಿನ ಅಧ್ಯಯನಗಳು ನಮ್ಮ ಅಧ್ಯಯನ ಪ್ರದೇಶಕ್ಕೆ ಸಂಬಂಧಿಸಿದಂತೆ ವಿವಿಧ ಅರ್ಥಗಳನ್ನು ಕಲ್ಪಿಸಿವೆ. ಈ ಕಾರಣದಿಂದ ಯಾವುದೇ ಒಂದು ಸಾಮಾನ್ಯ ಸಿದ್ಧಾಂತವನ್ನು ಎಲ್ಲರೂ ಒಪ್ಪುವಂತೆ ರಾಜಕೀಯ ಪ್ರತಿನಿಧಿತ್ವತೆಗೆ ನೀಡಲು ಸಾಧ್ಯವಾಗಿಲ್ಲ.

ಸಂಸದೀಯ ಪ್ರಜಾಪ್ರಭುತ್ವದ ಕಾರ್ಯಾಚರಣೆಯ ಅಧ್ಯಯನವನ್ನು ಪಾವೆಲ್, ಟರಗಾಂ, ವಿಲಿಯಂಸ್ ಇವರೆಲ್ಲರು ಸುಮಾರು 25 ರಾಷ್ಟ್ರಗಳನ್ನು ತೌಲನಿಕವಾಗಿ ಅಧ್ಯಯಿನಿಸಿ ಕಂಡುಕೊಂಡ ಫಲಿತಗಳ ಹಿನ್ನೆಲೆಯಲ್ಲಿ ಈ ಅಧ್ಯಯನಕ್ಕೆ ಆದರ್ಶವಾಗಿ ಮಾತ್ರ ಸಲಹೆಗಳನ್ನು ನೀಡಬಹುದಾಗಿದೆ. ಇಲ್ಲಿ ಮೌಲ್ಯಾಧಾರಿತ ಮತ್ತು ಪ್ರಾಯೋಗಿಕ ಸಲಹೆಗಳನ್ನು ವಿಭಜಿಸಿ ನೋಡಿದಲ್ಲಿ,

1. ಇಂದಿನ ಚುನಾವಣಾ ವ್ಯವಸ್ಥೆಯಲ್ಲಿ ಫಸ್ಟ–ಪಾಸ್ಟ–ಪೊಸ್ಟ ವ್ಯವಸ್ಥೆಯನ್ನು ಬದಲಾಯಿಸುವ ಮುಖಾಂತರ ಪ್ರತಿನಿಧಿತ್ವಕ್ಕೆ ಸ್ವಲ್ಪ ಮಟ್ಟಿಗೆ ಬದಲಾವಣೆತರಬಹುದಾಗಿದೆ.
2. ಪ್ರತಿನಿಧಿಗಳ ಕಾರ್ಯದಕ್ಷತೆಯ ಅಳತೆ ಗೋಲುಗಳನ್ನು ನಿಗದಿಪಡಿಸುವ ಮುಖಾಂತರ ಪ್ರತಿನಿಧಿತ್ವತೆಯನ್ನು ಹೆಚ್ಚಿಸಬಹುದಾಗಿದೆ.
3. ಪ್ರತಿ ಮತಕ್ಷೇತ್ರದಲ್ಲಿ ಸಾರ್ವಜನಿಕ ಮೌಲ್ಯಮಾಪನ ಸಮಿತಿಗಳನ್ನು ಸಂವಿಧಾನಿಕವಾಗಿ ರಚಿಸುವ ಮುಖಾಂತರ ಜನಪ್ರತಿನಿಧಿಗಳು ಪ್ರಜೆಗಳ ಬೇಡಿಕೆಗಳಿಗೆ ವಾರ್ಷಿಕವಾಗಿ ಎಷ್ಟರ ಮಟ್ಟಿಗೆ ಸ್ಪಂದಿಸಿದ್ದಾರೆ/ ನೀತಿ–ನಿರೂಪಣೆಯ ಕಾರಣೀಕರ್ತೃಗಳಾಗಿದ್ದಾರೆ ಎಂಬುವುದನ್ನುಗ್ರಹಿಸುವ ಮೂಲಕ ಪ್ರಾತಿನಿಧ್ಯತೆಯನ್ನು ಗುರುತಿಸಬಹುದಾಗಿದೆ.
4. ಪ್ರತಿನಿಧಿಗಳ ಚುನಾವಣಾ ಅವಕಾಶಗಳನ್ನು 2 ಚುನಾವಣೆಗೆ ಮಾತ್ರ ಸೀಮಿತಗೊಳಿಸುವುದರ ಮುಖಾಂತರ ಪ್ರತಿನಿಧಿತ್ವದ ಪ್ರಕ್ರಿಯೆಯನ್ನು ಪ್ರಭಾವಗೊಳಿಸುವುದು.
5. ಈಗಾಗಲೇ ಅಸ್ಥಿತ್ವದಲ್ಲಿರುವ ಒಂದು ಮತಕ್ಷೇತ್ರದ 2/3ರಷ್ಟು ಮತದಾರರು ಪ್ರತಿನಿಧಿಯ ಕಾರ್ಯ ವೈಖರಿಯನ್ನು ಅನುಲಕ್ಷಿಸಿ ಪ್ರತಿನಿಧಿಯ ತಿರಸ್ಕಾರ ಅಥವಾ ಪ್ರತಿನಿಧಿಯ ಹಿಂದಿರುಗಿಸುವಿಕೆಯ ಬೇಡಿಯನ್ನು ಇಡುವ ಮುಖಾಂತರ ಪ್ರತಿನಿಧಿತ್ವವನ್ನು ಚುರುಕುಗೊಳಿಸ ಬಹುದು.
6. ಪ್ರತಿನಿಧಿಗಳ ಕಾರ್ಯಚಟುವಟಿಕೆ ಮತ್ತು ಶ್ರೀಮಂತಿಕೆಯ ಮೌಲ್ಯಮಾಪನವನ್ನು ಸಾಮಾಜಿಕ ಲೆಕ್ಕಪರಿಶೋಧ'ನೆ ಮಾಡುವ ಮುಖಾಂತರ ಅವರ ಉತ್ತರದಾಯಿತ್ವವನ್ನು ಸಮಾಜಕ್ಕೆ ಜವಾಬ್ದಾರರನ್ನಾಗಿ ಮಾಡಬಹುದು.
7. ಕಾಲಾನುಕ್ರಮದಲ್ಲಿ ಒಂದೇ ವಂಶಾವಳಿಯ ಪ್ರಾತಿನಿಧ್ಯತೆಯನ್ನುತಡೆಯುವ ಮುಖಾಂತರ ಪ್ರಾತಿನಿಧ್ಯತೆಯ ಹಂಚಿಕೆ ಮತ್ತು ಪ್ರಜಾಪ್ರಭುತ್ವದ ವಿಸ್ತರಣೆಯನ್ನು ಸಾಧ್ಯವಾಗಿಸುವುದು, ಇದರ ಮುಖಾಂತರ ಪರಿಣಾಮಕಾರತೆಯನ್ನು ಹೆಚ್ಚಿಸಬಹುದು.
8. ವಾರ್ಷಿಕ ನೈತಿಕತರಬೇತಿಯ ಮುಖಾಂತರ ಮತ್ತು ಈಗಾಗಲೇ ಅಸ್ತಿತ್ವದಲ್ಲಿರುವ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಹಾಗೂ ಸಾರ್ವಜನಿಕ ಸಮಿತಿಗಳಲ್ಲಿ ಶಾಸಕರ ಬದಲು ಸಾರ್ವಜನಿಕ ಪ್ರತಿನಿಧಿಗಳನ್ನು ನೇಮಿಸುವ ಮುಖಾಂತರ ಪ್ರಾತಿನಿಧ್ಯತೆ, ಪ್ರತಿನಿಧಿತ್ವತೆ ಮತ್ತು ಉತ್ತರದಾಯಿತ್ವದ ವಿಷಯದಲ್ಲಿ ಕ್ರಾಂತಿಕಾರಿಕ ಬದಲಾವಣೆತರಬಹುದು.

ಕೊನೆಯ ಮಾತು:

ಹೀಗೆ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿಗಳ ಪಾತ್ರ ಪ್ರತಿನಿಧಿತ್ವತೆ ಹಾಗೂ ಉತ್ತರದಾಯಿತ್ವದ ಅಧ್ಯಯನದ ಮುಖಾಂತರ ಈ

ಅಧ್ಯಯನದಲ್ಲಿ ಕಂಡುಕೊಂಡು ಮುಖ್ಯಾಂಶವೆಂದರೆ ಅಭಿವೃದ್ಧಿಪರ ರಾಷ್ಟ್ರಗಳಲ್ಲೂ ಇರುವ ಸಾಂಪ್ರದಾಯಿಕ ಮಾದರಿ ಪ್ರಾತಿನಿಧಿತ್ವತೆಯು ಈ ಭೂ ಭಾಗದಲ್ಲಿಕಂಡು ಬರುತ್ತಿರುವುದು ಸಹಜ ಹಾಗೂ ಸತ್ಯ. ಈ ಅಧ್ಯಯನದಲ್ಲಿ ಪ್ರಮುಖವಾಗಿ ಚರ್ಚಿಸಿರುವ ಪಿಟ್ಕಿನ ಹನ್ನಾ ಮತ್ತು ಹಲವಾರು ಸಿದ್ಧಾಂತಕಾರರ ಚಿಂತನೆಗಳನ್ನು ಗಮನಿಸಿದರೆ ಇಲ್ಲಿನ ಪ್ರತಿನಿಧಿಗಳ ವರ್ತನೆ ಪ್ರಾತಿನಿಧ್ಯತೆ ಮತ್ತು ಉತ್ತಾರದಾಯಿತ್ವವು ಈಗಾಗಲೇ ನಡೆದಿರುವ ಅಧ್ಯಯನಗಳಿಂದ ವಿಭಿನ್ನವಾಗಿಲ್ಲವೆಂದು ಗುರುತಿಸಲ್ಪಡುತ್ತದೆ. ಹೆಚ್ಚಿನ ಪ್ರತಿನಿಧಿತ್ವವು ಪಕ್ಷದ ಪರವಾಗಿದ್ದು ಜನಸ್ಪಂದನೆ ಮತ್ತು ಜನರಿಗೋಸ್ಕರವಾಗಿ ಹೊಣೆಗಾರಿಕೆಯಾಗಿರುವುದು ಅತಿ ಕಡಿಮೆ. ಈಗಾಗಲೇ ತಿಳಿಸಿದಂತೆ ಹ್ಯಾನಾಆಯರನ್ ಹೇಳುವಂತೆ ಪ್ರಾತಿನಿಧಿಕ ಸರ್ಕಾರಗಳನ್ನು ಕುರಿತು ಪ್ರಜೆಗಳು ಅನುಮಾನಾಸ್ಪದವಾಗಿ ಪ್ರತಿನಿಧಿಗಳು ನಿಜವಾಗಿಯೂ ಪ್ರಜೆಗಳನ್ನು ಪ್ರತಿನಿಧಿಸುತ್ತಾರೆಯೇ? ಎಂಬ ಪ್ರಶ್ನೆಯು ಈಗಲೂ ಕಾಡುತ್ತಿದೆ.

ಆಕರ ಗ್ರಂಥಗಳು:

1. ನೀರಾಚಂದೋಕೆ, ಕ್ರೈಸಿಸ್ ಆಫ್‌ರೆಪ್ರಸೆಂಟೇಶನ್, ಡೆವಲಪಿಂಗ್‌ರಿಸರ್ಚ ಸೆಂಟರ್, ದೆಹಲಿ ಯುನಿವರ್ಸಿಟಿ, ದೆಹಲಿ, 2013.
2. ಅಣ್ಣಾ ಹಜಾರೆರವರ ಭ್ರಷ್ಟಾಚಾರ ವಿರೋಧಿ ಆಂದೋಲನದ ಚರ್ಚೆಯ ಒಂದು ವಿಶ್ಲೇಷಣೆ. (ಯೋಜನಾಅಭಿವೃದ್ಧಿ ಮಾಸ ಪತ್ರಿಕೆ, ಭಾರತ ಸರ್ಕಾರ, ಅಕ್ಟೋಬರ್ 2014.
3. ಅಶೋಕ ವಿಗ್ನೇಶ್, ಒನ್ ಪರ್ಸನ್, ಒನ್ ವೋಟ್, ಒನ್ ವೈಸ್: ಚೂಸಿಂಗ ದಿ ಸಿಸ್ಟಮ್ ಆಪ್‌ರಿಪ್ರಜೆಂಟಶನ್, ರಿಸರ್ಚ ಫೌಂಡೆಶನ್ ಫಾರ್‌ಗವರ್ನನ್ಸಇನ್‌ಇಂಡಿಯಾ, ಅಹಮದಾಬಾದ್, 2011.
4. ಡೇರಿಯೊ ಮತ್ತು ವಾರನ್, ರಿಥಿಂಕಿಂಗ್‌ಡೆಮಾಕ್ರೆಟಿಕ್‌ರಿಪ್ರಜೆಂಟೇಷನ್; ಸೆಂಟರ್ ಪಾರ್‌ದ ಸ್ಟಡಿಆಪ್‌ಡೆಮಾಕ್ರೆಟಿಕ್‌ಇನ್ಸಿಟಿಟ್ಯೂಶೆನ್‌ಯುನಿವರ್ಸಿಟಿ ಆಪ್ ಬ್ರಿಟಿಷ, ಕೊಲಂಬಿಯಾ, 2006 .
5. ಬಿಪಿನ್ ಚಂದ್ರ, ಮಾಡರ್ನ್‌ಇಂಡಿಯನ್ ಹಿಸ್ಟರಿ, ನ್ಯಾಶನಲ್ ಬುಕ್‌ಟ್ರಸ್ಟಆಫ್‌ಇಂಡಿಯಾ, ನವದೆಹಲಿ, 2012.
6. ರಾಜಶೇಖರಯ್ಯಎ.ಎಮ್., ಸಂಸತ್ತಿನ ಕಾರ್ಯಪದ್ಧತಿ, ಸದಾನಂದ ಪ್ರಿಂಟರ್ಸ್, ಧಾರವಾಡ 1973
7. ಚಂದ್ರಪ್ರಕಾಶ ಬಾಂಬ್ರಿ, ಡೆಮಾಕ್ರಸಿ ಇನ್‌ಇಂಡಿಯಾ, ನ್ಯಾಶನಲ್ ಬುಕ್‌ಟ್ರಸ್ಟಆಫ್‌ಇಂಡಿಯಾ, ನವದೆಹಲಿ, 2007.
8. ಗುಪ್ತಾ ಯು. ಎನ್., ಇಂಡಿಯಾ ಪಾರ್ಲಿಮೆಂಟರಿ ಡೆಮಾಕ್ರಸಿ, ಅಟ್ಲಾಂಟಿಕ ಪಬ್ಲಿಷರ್ಸ್, ನವದೆಹಲಿ, 2003
9. ಜೆ. ಎಸ್. ಮಿಲ್, ರೇಪ್ರಸೆಂಟಿಟಿವ್‌ಗವರ್ನಮೆಂಟ್, ಬ್ಯಾಟೋಚ್ ಬುಕ್ಸ್, ಕಿಚನರ್, ಕೆನಡ, 1861
10. ಸದಾಶಿವ ಕೆ, ಆಧುನಿಕಯುರೋಪಿನ ಇತಿಹಾಸ, ಪ್ರಿಯಾದರ್ಶಿನಿ ಪ್ರಕಾಶನ , ಮೈಸೂರು, 2006
11. ಸುಭಾಸ್‌ಕಶ್ಯಪ್, ಅವರ್ ಪಾಲಿರ್ಮೆಂಟ್ , ನ್ಯಾಶನಲ್ ಬುಕ್‌ಟ್ರಸ್ಟಆಫ್‌ಇಂಡಿಯಾ, ನವದೆಹಲಿ, 2010

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಪ್ರಸ್ತುತ ಸಮಾಜಕ್ಕೆ ಬಸವಣ್ಣನವರ ಕಾಯಕ ತತ್ವದ ಪರಿಕಲ್ಪನೆ

ಮೋಹನ ಬೆಣಚಮರ್ಡಿ
ಕನ್ನಡ ಉಪನ್ಯಾಸಕರು
ಕೆ.ಎಲ್.ಇ.ಸಂಸ್ಥೆಯ ಎಸ್.ವಿ.ಎಸ್.ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಸವದತ್ತಿ–591126 ಬೆಳಗಾವಿ ಜಿಲ್ಲೆ
Corresponding Author–ಮೋಹನ ಬೆಣಚಮರ್ಡಿ
DOI - 10.5281/zenodo.23528730

Abstract:
ಪ್ರಸ್ತುತ ಸಮಾಜಕ್ಕೆ ಬಸವಣ್ಣರ ವಚನಗಳ ತತ್ವಗಳು ಇಂದಿಗೂ ದೀಪದಂತೆ ಬೆಳಗುತ್ತಿವೆ. 12ನೇ ಶತಮಾನದ ಕಾಲಘಟ್ಟದಲ್ಲಿ ಕ್ರಾಂತಿಯೋಗಿ ವಿಶ್ವಗುರು ಬಸವಣ್ಣನವರು ಸಾಮಾಜಿಕ ಕ್ರಾಂತಿಯ ಹರಿಕಾರರು. ಅನುಭವ ಮಂಟಪದ ಮೂಲಕ ಜಗತ್ತಿನ ಮೊದಲ ಪ್ರಜಾಪ್ರಭುತ್ವದ ಸಂಸತ್ತನ್ನು ಕಟ್ಟಿದ ಅವರು ವಚನಗಳ ಮೂಲಕ ಮನುಷ್ಯನನ್ನು ಮನುಷ್ಯನಾಗಿ ಕಾಣುವ ಪರಿಕಲ್ಪನೆಯನ್ನು ಜಾಗತೀಕರಣ, ಜಾತೀಯತೆ, ಅಸಮಾನತೆ ಮತ್ತು ಮೌಲ್ಯಕುಸಿತದಿಂದ ಹಾಗೂ ಭ್ರಷ್ಟಾಚಾರದಿಂದ ತತ್ತರಿಸುತ್ತಿರುವ ಇಂದಿನ ಸಮಾಜಕ್ಕೆ ಬಸವಣ್ಣನವರ ತತ್ವಗಳು ಮಾರ್ಗದರ್ಶಿ ಸೂತ್ರಗಳಾಗಿವೆ. ಈ ತತ್ವಗಳನ್ನು ಒಂದು ಸಮುದಾಯಕ್ಕೆ ಸೀಮಿತಗೊಳಿಸದೆ ಸಮಾನ ಮತ್ತು ನೀತಿಯುತ ಸಮಾಜ ನಿರ್ಮಾಣಕ್ಕಾಗಿ ಸಾರ್ವತ್ರಿಕ ಮಾನವತಾವಾದದ ಮಾದರಿಯಾಗಿ ಪ್ರಸ್ತುತಪಡಿಸಬೇಕಾಗಿದೆ.

Key Words:*ವಚನ ಸಾಹಿತ್ಯ, ಕಾಯಕತತ್ವ, ಕಾಯಕವೇ ಕೈಲಾಸ, ಕಾರ್ಮಿಕರ ಘನತೆ, ಅನುಭವ ಮಂಟಪ.*

12ನೇ ಶತಮಾನದಲ್ಲಿ ಬಸವಣ್ಣನವರು ಪ್ರತಿಪಾದಿಸಿದ ಕಾಯಕತತ್ವ ಕೇವಲ ಒಂದು ತಾತ್ವಿಕ ಚಿಂತನೆಯಲ್ಲ. ಅದೊಂದು ಸಮಗ್ರ ಆರ್ಥಿಕ ಸಾಮಾಜಿಕ ಮತ್ತು ಆಧ್ಯಾತ್ಮಿಕ ಕ್ರಾಂತಿಯಾಗಿದೆ. ಕಾಯಕ ಎಂದರೆ ಕೇವಲ ದೈಹಿಕ ಶ್ರಮವಲ್ಲ. ಸಮಾಜಕ್ಕೆ ಉಪಯುಕ್ತವಾದ ಪ್ರಾಮಾಣಿಕವಾದ ನಿಸ್ವಾರ್ಥವಾದ ದುಡಿಮೆ. ಕಾಯಕವನ್ನು ಕೈಲಾಸಕ್ಕೆ ಸಮಾನವೆಂದು ಹೇಳುವ ಮೂಲಕ ದುಡಿಮೆಗೆ ದೈವತ್ವವನ್ನು ನೀಡಿದ ಮೊದಲ ಚಿಂತಕರು ಬಸವಣ್ಣನವರು.

ಕಾಯಕತತ್ವ–ದುಡಿಮೆಯ ಘನತೆ:

ಕಾಯಕವೇ ಕೈಲಾಸ ಎಂಬುದು ಬಸವಣ್ಣನವರ ಪ್ರಸಿದ್ಧ ತತ್ವ. ಯಾವುದೇ ಕೆಲಸವನ್ನು ಮೇಲು ಕೀಳು ಎಂದು ನೋಡದೆ ಪ್ರಾಮಾಣಿಕವಾಗಿ ದುಡಿಯಬೇಕು ಸ್ವಂತ ಶ್ರಮದಿಂದ ಜೀವನ ನಡೆಸಬೇಕು. ಕಾಯಕ ಮಾಡುವುದರಿಂದ ವ್ಯಕ್ತಿಯಲ್ಲಿ ಆತ್ಮಗೌರವ ಸ್ವಾವಲಂಬನೆ ಮತ್ತು ಸಮಾಜದ ಅಭಿವೃದ್ಧಿಯಾಗುತ್ತದೆ ಎಂದು ತಿಳಿಸಿದರು.

ಇಂದು ಯುವಜನರು ಬಿಳಿಕಾಲರ್ ಕೆಲಸಕ್ಕೆ ಮಾತ್ರ ಮಹತ್ವ ನೀಡುತ್ತಿದ್ದಾರೆ ಕೃಷಿ, ಕಸೂತಿ, ಕಮ್ಮಾರಿಕೆ, ಚಮ್ಮಾರಿಗೆ, ನೇಯುವಿಕೆ ಮುಂತಾದ ಕಾಯಕಗಳನ್ನು ಕೀಳಾಗಿ ಕಾಣಲಾಗುತ್ತಿದೆ. ಬಸವಣ್ಣನವರು ಪ್ರತಿಯೊಬ್ಬರು ಕಾಯಕ ಮಾಡಬೇಕು ಮತ್ತು ಕಾಯಕವೇ ಪೂಜೆ ಎಂದು ಸಾರಿದರು. ಇದರಿಂದ ಆರ್ಥಿಕ ಸಮಾನತೆ ಸಾಧ್ಯ ಸ್ಕಿಲ್ ಇಂಡಿಯಾ ಮತ್ತು ಆತ್ಮ ನಿರ್ಭರ ಭಾರತದ ಮೂಲತತ್ವವೇ ಇದರಲ್ಲಿ ಇದೆ ಎಂದರೆ ಅತಿಶಯೋಕ್ತಿ ಆಗಲಾರದು.

ಕಾಯಕವೇ ಕೈಲಾಸ:

ಕಾಯಕದಲ್ಲಿ ನಿರತನಾದಡೆ
ಗುರುದರ್ಶನವಾದೀತು
ಗುರುದರ್ಶನದಲ್ಲಿ ನಿರತನಾದೆಡೆ
ಲಿಂಗ ದರ್ಶನವಾದೀತು
ಲಿಂಗದಲ್ಲಿ ನಿರತನಾದೆಡೆ
ಜಂಗಮದರ್ಶನವಾದೀತು
ಜಂಗಮದಲ್ಲಿ ನಿರತನಾದೆಡೆ
ನಿಜ ಮುಕ್ತಿಯು ನೋಡ ಕೂಡಲಸಂಗಮದೇವ

ಕಾಯಕವನ್ನು ಮನ:ಪೂರ್ವಕವಾಗಿ ಮಾಡಿದರೆ ಅದು ಗುರು–ಲಿಂಗ–ಜಂಗಮಕ್ಕೆ ಸಮವಾಗುತ್ತದೆ. ಕೆಲಸವೇ ದೇವರು ಎಂದು ತಿಳಿದು ಮಾಡುವುದೇ ಕೈಲಾಸ. ಕಾಯಕದಲ್ಲಿ ಕೀಳರಿಮೆ ಇಲ್ಲ. ಪೊರಕೆ ಹಿಡಿಯುವವನು, ಪಾಠ ಮಾಡುವವನು ಇಬ್ಬರೂ ಸಮಾನರು. ಇದು ಉದ್ಯೋಗದ ಬಗ್ಗೆ ಇರುವ ತಾರತಮ್ಯಕ್ಕೆ ಇರುವ ಮದ್ದು ಒಬ್ಬನು ದುಡಿಯಬೇಕು ದುಡಿದ ಹಣವನ್ನು ತನಗಾಗಿ ಅಷ್ಟೇ ಅಲ್ಲದೆ ಸಮಾಜಕ್ಕೂ ಹಂಚಬೇಕು. ಇದರಿಂದ ಮೋಕ್ಷ ಸಾಧನೆ ಲಭ್ಯವಾಗುತ್ತದೆ. ಮೋಕ್ಷ ಎಂಬುದು ಬೇರೆ ಎಲ್ಲೂ ಇಲ್ಲ. ಕೆಲಸವೇ ಪೂಜೆ. ಕಾಯಕ ಮಾಡುವುದು ಕೈಲಾಸ ಎಂಬುದನ್ನು ಇಂದಿನ ಸಮಾಜ ಅರಿತುಕೊಳ್ಳುವ ಅಗತ್ಯವಿದೆ.

ಕಾಯಕದಲ್ಲಿ ತಾಧ್ಯಾತ್ಮಿಕತೆ ಇರಬೇಕು:

ಆಸೆಯ ಬಿಡದೆ ಮಾಯೆ ಬಿಡದೆ
ಭವ ಬಿಡದೆ ಭ್ರಮೆಯ ಬಿಡದೆ
ಕಾಯಕವ ಮಾಡುವೆನೆಂದಡೆ
ಶಿವನು ಒಲಿಯನು ಕಾಣಾ
ಕೂಡಲಸಂಗಮದೇವ.

ಕಾಯಕ ಮಾಡುವಾಗ ಆಸೆ, ದುರಾಸೆ ಮೋಸ ಇರಬಾರದು. ಲಂಚ ಪಡೆದು ಕಳಪೆ ಕೆಲಸ ಮಾಡಿ ಜನರನ್ನು ಮೋಸಗೊಳಿಸಿ ದುಡಿದ ಹಣ ಮನೆಗೆ ಬಂದರೆ ಅಲ್ಲಿ ದೇವರು ನೆಲೆಸುವುದಿಲ್ಲ. ಇಂದಿನ ಭ್ರಷ್ಟಾಚಾರ ಕಮಿಷನ್‌ದಂದೆಗೆ ಇದು ನೇರ ಎಚ್ಚರಿಕೆ ಎನ್ನಬಹುದು. ಕಾಯಕವು ದ್ರೋಹದಿಂದ ಕೂಡಿರಬಾರದು.

ಕಾಯಕ ಮತ್ತು ದಾಸೋಹ:

ಕಾಯಕದಿಂದ ಬಂದ ಧನವನು
ದಾಸೋಹಕ್ಕೆ ಸವಿಸಿ,
ಮಿಕ್ಕುಳಿಯುವದನು ತಾವುಂಡು
ಸಂತೃಪ್ತನಾಗಿರಬೇಕು
ಇದು ಸದಾಚಾರ ಕಾಣಾ ಕೂಡಲಸಂಗಮದೇವ.

ಇದು ಬಸವಣ್ಣನವರು ಆರ್ಥಿಕಮಂತ್ರಿಯಾಗಿ ತಲಾಆದಾಯ ಹೆಚ್ಚಿದಾಗ ದುಡಿದ ಹಣವನ್ನು ಮೊದಲು ಇನ್ನೊಬ್ಬರ ಹಸಿವು ನೀಗಿಸಲು ಬಳಸಬೇಕು ನಂತರ ನೀನು ಉಣ್ಣಬೇಕು ಎಂದರು ದುಡಿದು ತಿನ್ನುವುದು ಸತ್ಯ, ದೋಚಿ ತಿನ್ನುವುದು ಅಸತ್ಯ. ಇಂದಿನ ಸಮಾಜದಲ್ಲಿ ಸಮಾಜ ಸೇವೆಗಿಂತ 800 ವರ್ಷದ ಹಿಂದಿನ ದೊಡ್ಡ ಕಲ್ಪನೆಯಾಗಿದೆ ಎಂಬುದನ್ನು ಅರಿಯಬೇಕು.

ಕಾಯಕವಿಲ್ಲದವನಿಗೆ ಭಕ್ತಿಇಲ್ಲ:

ಕಾಯಕವಿಲ್ಲದವನ ಭಕ್ತಿ ಹುಸಿಯಯ್ಯ
ಕಾಯಕ ಮಾಡಿ ಲಿಂಗವ ಪೂಜಿಸಬೇಕು
ಕಾಯಕದಲ್ಲಿ ನಿರತನಾದಡೆ
ಗುರು–ಲಿಂಗ–ಜಂಗಮರ ಸೇವೆ ಮಾಡಿದಂತೆ
ಕೂಡಲಸಂಗಮದೇವ.

ದುಡಿಮೆ ಇಲ್ಲದೆ ಕೇವಲ ಜಪ–ತಪ, ಭಜನೆ ಮಾಡುತ್ತಾ ಕುಳಿತರೆ ಅದು ನಿಜವಾದ ಭಕ್ತಿಯಲ್ಲ. ಸೋಮಾರಿತನ, ದೇವರನ್ನು ಪೂಜಿಸಬೇಕಾದರೆ ಮೊದಲು ದುಡಿಯಬೇಕು. ಕಾಯಕದಲ್ಲಿ ನಿರತನಾದರೆ ಅದು ಗುರು–ಲಿಂಗ–ಜಂಗಮರ ಸೇವೆ ಮಾಡಿದಂತೆ. ಇಂದು ಕೆಲಸ ಮಾಡದೆ ಉಚಿತ ಭಾಗ್ಯಗಳ ಮೇಲೆ ಅವಲಂಬಿತರಾಗಿರುವ ಸಮಾಜ ಕಾಯಕದ ಮಹತ್ವ ಅರಿಯಬೇಕಿದೆ.

ಕಾಯಕದಲ್ಲಿ ಅಹಂಕಾರ ಬೇಡ:

ನಾನು ಮಾಡಿದನೆಂಬ ಮನವಳಿದು

ನೀನು ಮಾಡಿಸಿದೆ ಎಂಬುದು ಕಾಯಕದ ಲಕ್ಷಣ
ತಾನು ಮಾಡಿದನೆಂಬ ಅಹಂಕಾರವಳಿದು
ನೀನು ಮಾಡಿಸಿದೆ ಎಂಬ ನಿಜ ಭಕ್ತಿ ಬರಬೇಕು
ಕೂಡಲಸಂಗಮದೇವ.

ನಾನು ದೊಡ್ಡ ಕೆಲಸ ಮಾಡುತ್ತೇನೆ. ನನ್ನ ಕೆಲಸವೇ ದೊಡ್ಡದು ಎಂಬ ಅಹಂಕಾರ ಕಾಯಕದಲ್ಲಿ ಇರಬಾರದು. ನಾನು ಒಂದು ನಿಮಿತ್ತ ಮಾತ್ರ. ಸಮಾಜ ನನಗೆ ಅವಕಾಶ ಕೊಟ್ಟಿದೆ ಎಂಬ ವಿನಯವೆ ನಿಜವಾದ ಕಾಯಕ ಯೋಗಿಯ ಲಕ್ಷಣ ಎಂಬುದನ್ನು ಪ್ರಸ್ತುತ ಸಮಾಜ ತಿಳಿಯಬೇಕಿದೆ. ಅಂದರೆ ಅಹಂ ಇಲ್ಲದ ಕಾಯಕ, ಆಸೆ ಇಲ್ಲದ ಕಾಯಕ. ಅರ್ಪಣೆಯ ಕಾಯಕ ಇವು ಕೈಲಾಸಕ್ಕೆ ಸಮಾನವಿದ್ದಂತೆ.

ಕಾಯಕವೇ ಪ್ರಸಾದ:

ತನುವಿನ ಕಾಯಕ ಮನದ ಕಾಯಕ
ಧನದ ಕಾಯಕವೆಂಬ ತ್ರಿವಿಧ ಕಾಯಕ
ತನು– ಮನ– ಧನವನು ಲಿಂಗಕ್ಕೆ ಅರ್ಪಿಸಿದೆಡೆ
ಅದೆ ತ್ರಿವಿಧ ದಾಸೋಹವು
ಕೂಡಲಸಂಗಮದೇವ.

ಬಸವಣ್ಣನವರ ಪ್ರಕಾರ ಕಾಯಕವೆಂದರೆ ಕೇವಲ ದೈಹಿಕದಿಂದ ಮಾಡುವ ಕೆಲಸವಲ್ಲ. ತನು ಮನ ಧನ ಎಂಬ ಕಾಯಕಗಳಿವೆ.

ತನುವಿನ ಕಾಯಕ: (ದೈಹಿಕದುಡಿಮೆ)

ನಮ್ಮ ದೇಹದಿಂದ ಮಾಡುವ ಕೆಲಸ. ರೈತ ಹೊಲದಲ್ಲಿ ದುಡಿಯುವುದು, ಕೂಲಿ ಕಾರ್ಮಿಕ ಕಲ್ಲು ಹೊಡೆಯುವುದು, ಶಿಕ್ಷಕ ನಿಂತು ಪಾಠ ಮಾಡುವುದು, ಕುಳಿತು ಟೈಪ್ ಮಾಡುವುದು,ಎಲ್ಲವೂ ತನುವಿನ ಕಾಯಕ. ಇಂದು ನಾವು ದೇಹ ಕರಗಿಸಲು ಏನೆಲ್ಲ ಮಾಡುತ್ತೇವೆ. ಆದರೆ ದುಡಿಯಲು ನಾಚುತ್ತೇವೆ. ಬಸವಣ್ಣ ಹೇಳಿದ್ದು ಬೆವರು ಸುರಿಸುವುದೇ ಮೊದಲ ಪೂಜೆ.

ಮನದಕಾಯಕ: (ಮನಸ್ಸಿನ ದುಡಿಮೆ)

ಮನಸ್ಸಿನಿಂದ ಮಾಡುವ ಕೆಲಸ ಒಳ್ಳೆಯದನ್ನು ಯೋಚಿಸುವುದು, ಇನ್ನೊಬ್ಬರ ಬಗ್ಗೆ ಅಸೂಯೆ ಪಡದಿರುವುದು, ಕೆಟ್ಟ ಆಲೋಚನೆಗಳನ್ನು ತೊಳೆಯುವುದು, ಮನಸ್ಸಿನಲ್ಲಿ ಸುಳ್ಳು ಮೋಸ ದ್ವೇಷ ಇಟ್ಟುಕೊಂಡು ದೇಹದಿಂದ ಎಷ್ಟೇ ಪೂಜೆ ಮಾಡಿದರೂ ಪ್ರಯೋಜನವಿಲ್ಲ. ಒಳಗೆ ಕೊಳಕು, ಹೊರಗೆ ತೊಳಕು ಇದು ಮನದ ಕಾಯಕವಿಲ್ಲದ ಭಕ್ತಿ.

ಧನದ ಕಾಯಕ:

ದುಡಿದ ಹಣವನ್ನು ಸರಿಯಾಗಿ ಬಳಸಿಕೊಳ್ಳುವುದು ಹಂಚಿಕೊಳ್ಳುವುದು, ಕಪ್ಪು ಹಣ ಮಾಡಿ ದೇವಸ್ಥಾನಕ್ಕೆ ದಾನಕೊಡುವುದು ಧನದ ಕಾಯಕವಲ್ಲ. ಪ್ರಮಾಣಿಕವಾಗಿ ದುಡಿದು ಹಸಿದವರಿಗೆ ಹಂಚುವುದೇ ಧನದ ಕಾಯಕ. ಅದೇ ದಾಸೋಹ. ಬಸವಣ್ಣನವರ ಪ್ರಕಾರ ತನು–ಮನ–ಧನ ಈ ಮೂರು ಶುದ್ಧವಾಗಿರುವವನು, ಮನಸ್ಸಿನಿಂದ ಯಾರಿಗೂ ಕೆಡಕು ಬಯಸದವನು, ಹಣವನ್ನು ಎಲ್ಲರೊಂದಿಗೆ ಹಂಚಿಕೊಳ್ಳುವನೇ ನಿಜವಾದ ಶರಣ. ಹೀಗೆ ಕೈಯಿಂದ ದುಡಿದು ಮನದಿಂದ ಒಳ್ಳೆಯದನ್ನು ಬಯಸಿ ಹಣದಿಂದ ಹಂಚಿಕೊಳ್ಳುವುದು ಇದೇ ಬಸವಣ್ಣನವರ ತ್ರಿವಿಧ ಕಾಯಕ ತತ್ವದ ಪರಿಕಲ್ಪನೆಯಾಗಿದ್ದು ಈ ತತ್ವ ಪ್ರಸ್ತುತ ಸಮಾಜಕ್ಕೆ ಅಗತ್ಯವಾಗಿದೆ.

ಪ್ರಸ್ತುತ ಸಮಾಜದಲ್ಲಿ ಕಂಡುಬರುವ ಉದ್ಯೋಗದ ಬಗೆಗಿನ ಕೀಳರಿಮೆ ಯುವಜನರಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಪರಾವಲಂಬನೆ, ಅಸಂಘಟಿತ ಕಾರ್ಮಿಕರ ಮೇಲಿನ ಶೋಷಣೆ ಮತ್ತು ಭ್ರಷ್ಟಾಚಾರದಂತ ಸಮಸ್ಯೆಗಳಿಗೆ ಕಾಯಕ ತತ್ವವು ಹೇಗೆ ಪರಿಹಾರ ನೀಡುತ್ತದೆ ಎಂಬುದನ್ನು ಬಸವಣ್ಣನವರ ಕಾಯಕತತ್ವದಿಂದ ತಿಳಿಯಬಹುದಾಗಿದೆ. ಅನುಭವಮಂಟಪದ ಎಲ್ಲ ಶ್ರಮಿಕ ಶರಣರಿಗೆ ನೀಡಿದ ಗೌರವವು ಇಂದಿನ ಕಾರ್ಮಿಕ ಘನತೆ ಮತ್ತು ಸ್ಕಿಲ್ ಇಂಡಿಯಾ ಪರಿಕಲ್ಪನೆಗೆ ಪೂರಕವಾಗಿದೆ. ಬಸವಣ್ಣನವರ ತತ್ವಗಳು ಕೇವಲ ಅಧ್ಯಾತ್ಮಿಕ ಚಿಂತನೆಯಲ್ಲ. ಬದಲಾಗಿ ಒಂದು ಸಮಗ್ರ ಸಾಮಾಜಿಕ ಆರ್ಥಿಕವ್ಯವಸ್ಥೆಗೆ ಮಾದರಿಯಾಗಿದೆ. ಬಸವಣ್ಣನವರ ಕಾಯಕ ಸಿದ್ಧಾಂತಗಳನ್ನು ಅಳವಡಿಸಿಕೊಂಡರೆ ಎಲ್ಲ ಕೆಲಸಕ್ಕೂ

ಸಮಾನ ಗೌರವ. ದುಡಿದು ತಿನ್ನುವ ಸಂಸ್ಕೃತಿ. ದುಡಿದ ಹಣದಲ್ಲಿ ಸಮಾಜಕ್ಕೆ ಹಂಚುವ ದಾಸೋಹದ ಮನೋಭಾವದಿಂದಾಗಿ ನಿರುದ್ಯೋಗ, ಆರ್ಥಿಕ ಅಸಮಾನತೆ, ಭ್ರಷ್ಟಾಚಾರ ಮತ್ತು ಸಾಮಾಜಿಕ ಕೀಳರಿಮೆ ಈ ನಾಲ್ಕು ದೊಡ್ಡ ರೋಗಗಳಿಗೆ ಒಂದೇ ಔಷಧಿಯಾಗುತ್ತದೆ ಎಂದರೆ ತಪ್ಪಾಗಲಾರದು. ಬಸವಣ್ಣನವರ ವಚನಗಳು ಹಳೆಯ ಗ್ರಂಥಗಳಲ್ಲ. ಅವು ಇಂದಿನ ಸಂವಿಧಾನದ ಭಾಗಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಕ್ಕೆ 800 ವರ್ಷಗಳ ಹಿಂದಿನ ಭಾಷ್ಯ. ಪ್ರಸ್ತುತ ಸಮಾಜ ಎದುರಿಸುತ್ತಿರುವ ಜಾತಿ ಸಂಘರ್ಷ ನಿರುದ್ಯೋಗ ನೈತಿಕ ಕುಸಿತ ಮತ್ತು ಅಸಹಿಷ್ಣುತೆಗೆ ಬಸವಣ್ಣನವರ ವಚನಗಳಲ್ಲಿ ಪರಿಹಾರವಿದೆ. ಆದ್ದರಿಂದ ಬಸವಣ್ಣನು ಒಬ್ಬ ವಿಶ್ವ ಮಾನವತಾವಾದಿಯಾಗಿ ಮಾತ್ರವಲ್ಲ, ಶ್ರೇಷ್ಠ ಆರ್ಥಿಕ ತಜ್ಞನಾಗಿಯೂ ಕೂಡ ಅವರನ್ನು ಪ್ರಸ್ತುತ ಸಮಾಜ ಕಾಣಬಹುದಾಗಿದೆ.

ಪರಾಮರ್ಶೆ ಗ್ರಂಥಗಳು:

1. ಬಸವಣ್ಣನವರ ವಚನಗಳು: ಸಂ. ಡಾ.ಎಂ.ಎಂ. ಕಲಬುರ್ಗಿ: ಕನ್ನಡ ವಿಶ್ವವಿದ್ಯಾಲಯ, ಹಂಪಿ,
2. ಸಮಗ್ರ ವಚನ ಸಂಪುಟ : ಸಂಪುಟ 1 :ಬಸವಣ್ಣ : ಕನ್ನಡ ಪುಸ್ತಕ ಪ್ರಾಧಿಕಾರ
3. ವಚನ ಸಾಹಿತ್ಯದ ಸಮಾಜೋ – ಆರ್ಥಿಕ ಚಿಂತನೆಗಳು ಡಾ. ಹಿ.ಶಿ. ರಾಮಚಂದ್ರೇಗೌಡ
4. ಕಾಯಕವೇ ಕೈಲಾಸ: ಬಸವಣ್ಣನವರ ಆರ್ಥಿಕಚಿಂತನೆ: ಡಾ. ಎಸ್.ಎಸ್. ಬಸವನಾಳ
5. ಬಸವಣ್ಣನವರ ಕಾಯಕತತ್ವ ಮತ್ತು ಪ್ರಸ್ತುತತೆ– ಡಾ.ಜಿ.ಆರ್. ಪರಮಶಿವಯ್ಯ

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಬೆಟಗೇರಿ ಕೃಷ್ಣಶರ್ಮ ಅವರ ನಲ್ವಾಡಗಳು: ಸಮಕಾಲೀನತೆಯ ನೆಲೆಗಳು ಮತ್ತು ಪ್ರಸ್ತುತತೆ.

ಡಾ.ಸವಿತಾ ಕೊಟಬಾಗಿ
ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಶರಣ ನುಲಿಯ ಚಂದಯ್ಯ ಡಾ. ಬಿ.ಆರ್. ಅಂಬೇಡ್ಕರ ಮಹಾವಿದ್ಯಾಲಯ, ಹುಬ್ಬಳ್ಳಿ–20
Corresponding Author–ಡಾ. ಸವಿತಾ ಕೊಟಬಾಗಿ
DOI - 10.5281/zenodo.23528757

ABSTRACT:

ಕನ್ನಡ ಸಾಹಿತ್ಯದಲ್ಲಿ ಆನಂದಕಂದ ಎಂಬ ಕಾವ್ಯನಾಮದಿಂದ ಪರಿಚಿತರಾದ ಡಾ.ಬೆಟಗೇರಿ ಕೃಷ್ಣಶರ್ಮ ಅವರು ನವೋದಯ ಕಾಲಘಟ್ಟದ ಜನಪದ ಭಾಷಾ ಶೈಲಿಯಲ್ಲಿ ಸಾಹಿತ್ಯ ರಚಿಸಿದ ಮಹತ್ವ ಕವಿಗಳಲ್ಲಿ ಒಬ್ಬರು. ಅವರು ರಚಿಸಿದ 'ನಲ್ವಾಡುಗಳು' ಜನಪದ ಸೊಗಡು, ಮಾನವೀಯ ಮೌಲ್ಯಗಳು ಹಾಗೂ ಸಾಮಾಜಿಕ ಪ್ರಜ್ಞೆಯನ್ನು ಒಳಗೊಂಡ ವಿಶಿಷ್ಟ ಕಾವ್ಯಸೃಷ್ಟಿಗಳಾಗಿವೆ. ಪ್ರಸ್ತುತ ಪ್ರಬಂದವು ನಲ್ವಾಡುಗಳಲ್ಲಿ ವ್ಯಕ್ತವಾದ ಸಮಕಾಲೀನತೆ ಅಂಶಗಳನ್ನು ವಿಶ್ಲೇಷಿಸುತ್ತದೆ. ನಲ್ವಾಡುಗಳಲ್ಲಿಯ ಕಾಮ–ಪ್ರೇಮ, ಪ್ರೀತಿ–ನೀತಿ, ಯುವಶಕ್ತಿಯ ಸಾಮಾಜಿಕ ಸಂಬಂದಗಳು, ಸಾಂಸ್ಕೃತಿಕ ಪ್ರಜ್ಞೆ ಹಾಗೂ ಜೀವನಮೌಲ್ಯಗಳ ಅಭಿವ್ಯಕ್ತಿ ಪ್ರಮುಖವಾಗಿ ಕಾಣಿಸಿಕೊಳ್ಳುತ್ತದೆ. ಗ್ರಾಮೀಣ ಬದುಕಿನ ಚಿತ್ರಣದ ಮೂಲಕ ಕವಿ ಮಾನವ ಸಂಬಂಧಗಳ ಸೂಕ್ಷ್ಮತೆಯನ್ನು ಮತ್ತು ಸಾಮಾಜಿಕ ಬದುಕಿನ ವಿವಿಧ ಆಯಾಮಗಳನ್ನು ಅನಾವರಣಗೊಳಿಸಿದ್ದಾರೆ.

ನಲ್ವಾಡುಗಳು ಕೇವಲ ಭಾವನಾತ್ಮಕ ಅಭಿವ್ಯಕ್ತಗಳಾಗಿರದೆ, ಸಮಾಜಮುಖಿ ಚಿಂತನೆಗಳನ್ನು ಒಳಗೊಂಡ ಸಾಹಿತ್ಯ ಕೃತಿಯಾಗಿದೆ. ವ್ಯಕ್ತಿ ಸಮಾಜದ ನಡುವಿನ ಸಂಬಂಧ, ನೈತಿಕ ಮೌಲ್ಯಗಳ ಅಗತ್ಯತೆ, ಪ್ರೇಮದ ಪಾವಿತ್ರ್ಯತೆ ಹಾಗೂ ಜನಪದ ಸಾಂಸ್ಕೃತಿಕ ಬದುಕಿನ ಮಹತ್ವ ಈ ಕವನ ಸಂಕಲನದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿವೆ. ಇಂತಹ ಮೌಲ್ಯಗಳು ಇಂದಿನ ಸಮಾಜಕ್ಕೆ ಪ್ರಸ್ತುತವಾಗಿವೆ.ಆದರಿಂದ ನಲ್ವಾಡುಗಳು ಸಮಕಲೀನ ಸಾಹಿತ್ಯದ ದೃಷ್ಟಿಯಿಂದ ಮಹತ್ವ ಪಡೆದಿವೆ. ಈ ಅಧ್ಯಯನವು ಆನಂದಕಂದರ ನಲ್ವಾಡಗಳ ಸಾಹಿತ್ಯಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಗುರುತಿಸುವ ಪ್ರಯತ್ನವಾಗಿದೆ.

ಮುಖ್ಯ ಪದಗಳು: ಬೆಟಗೇರಿಕೃಷ್ಣಶರ್ಮ, ನಲ್ವಾಡುಗಳು, ಜನಪದ ಸಂಸ್ಕೃತಿ, ಮಾನವೀಯ ಮೌಲ್ಯಗಳು, ಸಾಮಾಜಿಕ ಪ್ರಜ್ಞೆ

ಸಾಹಿತ್ಯ ಕೃತಿಗಳು ಸಮಾಜದ ಪ್ರತಿಬಿಂಬವಾದಂತೆ, ಸಮಾಜ ಶುದ್ಧೀಕರಣ ಮಾಡಲು ದಾರಿ ದೀಪವಾಗಿವೆ. ನವೋದಯದ ಮಹತ್ವದ ಕವಿಗಳಲ್ಲಿ ಒಬ್ಬರಾದ ಬೆಟಗೇರಿ ಕೃಷ್ಣಶರ್ಮ ಅವರ ಸಾಹಿತ್ಯದಲ್ಲಿ ಗ್ರಾಮೀಣ ಜೀವನದ ಅನನ್ಯತೆ, ಮಾನವೀಯ ಮೌಲ್ಯಗಳು, ಸಾಂಸ್ಕೃತಿಕ ಚಿಂತನೆಗಳು, ಜೀವನಾನುಭವಗಳ ಆಳ–ವಿಸ್ತಾರಗಳು ಇತ್ಯಾದಿ ವಿಚಾರಗಳು ಹುರುಳುಗಟ್ಟಿವೆ. ಅವರ ನಲ್ವಾಡುಗಳು ಉತ್ತರಕರ್ನಾಟಕದ ಭಾಷಾ ಶೈಲಿಯಲ್ಲಿ ನಿರೂಪಣೆಗೊಂಡು, ಕಾವ್ಯದ ಜೀವಾಳ ಬಯಲ ನಾಡಿನ ಜನರ ಅಂತರ್ಜೀವನದ ವೈವಿಧ್ಯ ಸ್ತರಗಳನ್ನ ಪರಿಚಯಿಸುತ್ತವೆ. ನಲ್ವಾಡುಗಳು ಪ್ರಮುಖವಾಗಿ ಕಾಮ–ಪ್ರೇಮ, ಪ್ರೀತಿ – ನೀತಿಗಳು ಪಕ್ವವಾಗುತ್ತ ಭಾವಯಾನದಲ್ಲಿ ಜೀವನ ಸೌಂದರ್ಯದ ಪ್ರಕಾಶಮಯ ಪ್ರಭೆಗಳಾಗಿ ಮೂಡಿ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಅಡಿಗಲ್ಲುಗಳಾಗಿವೆ. ಹೀಗೆ ನಲ್ವಾಡುಗಳಲ್ಲಿ ವ್ಯಕ್ತವಾದ ವ್ಯಕ್ತಿ–ಸಮಾಜ –ಸಂಸ್ಕೃತಿ ಚಿಂತನೆಗಳು ಇಂದಿನ ಸಮಾಜಕ್ಕೆ ಪ್ರಸ್ತುತವಾಗಿವೆ.

ಬೆಟಗೇರಿ ಕೃಷ್ಣಶರ್ಮರ ಜೀವನ ಮತ್ತು ಸಾಹಿತ್ಯದ ಹಿನ್ನೆಲೆ:

ಬಾ, ತರಣಿಯ ತುಂಬಿದ ಹೊಂಬೆಳಕೇ,
ಈ ತಮವನು ತೊಳೆಯಲು ನೆಲಕೆ!

ಹೀಗೆ ತಮ್ಮ ಜೀವಯಾನದುದ್ದಕ್ಕೂ ಕೃಷ್ಣಶರ್ಮ ಅವರು ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದರೂ, ಸಕಾರಾತ್ಮಕ ಜೀವನ ಒಲವಿನೊಂದಿಗೆ ಬದುಕಿ ಬಾಳಿದವರು. ಕೃಷ್ಣಶರ್ಮ ಅವರು 1900 ಎಪ್ರೀಲ್ 16 ರಂದು ಗೋಕಾಕ ತಾಲೂಕಿನ ಬೆಟಗೇರಿಯ ಪಾಟೀಲಿಕೆಯ ಸಾಮಾನ್ಯ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಇವರ ಜೀವನದುದ್ದಕ್ಕೂ ಬಡತನ ಬಿಡಲಿಲ್ಲ. ಜೊತೆಗೆ ಮನೆಯಲ್ಲಿ ಮೇಲಿಂದ ಮೇಲೆ ಸಾವು, ಅವರ ಅನಾರೋಗ್ಯ ಸಮಸ್ಯೆ, ಖಾಯಂ ನೌಕರಿ ಇಲ್ಲದ ತಾಪತ್ರಯಗಳಲ್ಲಿ ಸಾಹಿತ್ಯಾಭಿವ್ಯಕ್ತಿ ಆಸಕ್ತಿ ಕಳೆದುಕೊಳ್ಳಲಿಲ್ಲ. ಹಲವು ವರ್ಷ ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ಆರ್ಯವಿದ್ಯಾ ಶಿಕ್ಷಕರಾಗಿ, ಪತ್ರಿಕಾ ಸಂಪಾದಕರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಕೆಲಸಗಳನ್ನ ನಿರ್ವಹಿಸುತ್ತಾ ಕಥೆಗಾರಾಗಿ, ಕವಿಗಳಾಗಿ, ಸಂಪಾದಕರಾಗಿ, ಕಾದಂಬರಿಕಾರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿದರು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಆನಂದಕಂದ ಎಂಬ ಕಾವ್ಯನಾಮದಿಂದ ಪರಿಚಿತರಾದ ಇವರು ರಚಿಸಿದ 15 ಕವನ ಸಂಕಲನಗಳಲ್ಲಿ "ನಲ್ವಾಡುಗಳು" ವಿಶಿಷ್ಟ ಕವನ ಸಂಕಲನವಾಗಿದೆ.

ನಲ್ವಾಡುಗಳ ಸ್ವರೂಪ ಮತ್ತು ವೈಶಿಷ್ಟ್ಯಗಳು:

1) ಜಾನಪದ ಭಾಷಾ ಶೈಲಿಯಲ್ಲಿ ಅಭಿವ್ಯಕ್ತಗೊಂಡಿವೆ.
2) ಜನಪದರ ಬದಕಿನ ಸೌಂದರ್ಯವೇ ಕಾವ್ಯದ ಹೂರಣ
3) ಉತ್ತರಕರ್ನಾಟಕದ ಬಯಲು ನಾಡಿನ ಜನರ ಆಸೆ ಅಪೇಕ್ಷೆಗಳು
4) ನಾಗರಿಕ ಜೀವನಕ್ಕಿಂತ ಜನಪದರ ಬದುಕಿನ ಅನುಹ್ಯ ಸಂಬಂಧಗಳು
5) ಪ್ರೇಮಗೀತಗಳಿಂದ ದಾಂಪತ್ಯಗೀತಗಳಿಗೆ ಹೊರಳಿದ ಪರಿಪಕ್ವತೆ

ಒಟ್ಟಿಗೆ ನಲ್ವಾಡುಗಳು ಜೀವನದ ಅನುಭವಗಳು, ಚಿಂತನೆಗಳು ಮತ್ತು ಮೌಲ್ಯಗಳ ಅಭಿವ್ಯಕ್ತಿಯಾಗಿವೆ. ಸರಳ ಭಾಷೆ, ಆಪ್ತ ನಿರೂಪಣೆ, ಸಾಮಾಜಿಕ ಕಾಳಜಿ ಮತ್ತು ಮಾನವೀಯ ದೃಷ್ಟಿಕೋನ–ಇವು ನಲ್ವಾಡುಗಳ ಲಕ್ಷಣಗಳಾಗಿವೆ. ಓದುಗರನ್ನ ಚಿಂತನೆಗೆ ಹಚ್ಚುತ್ತವೆ.

ಯುವಶಕ್ತಿ: ಕಾಮ–ಪ್ರೇಮದ ಮನೋಮಯ ಅಭಿವ್ಯಕ್ತಿ:

ಬದುಕಿನಲ್ಲಿ ಆಸೆ, ಗುರಿ, ಇಚ್ಛೆ, ಮಹತ್ವಕಾಂಕ್ಷೆಗಳಿಲ್ಲದಿದ್ದರೂ ಜೀವನ ನಿರರ್ಥಕ. ಪ್ರತಿಯೊಂದು ಕಾರ್ಯ ಪ್ರಗತಿಗೆ ಇಚ್ಛೆ ಬಹಳ ಮುಖ್ಯ. ಇಚ್ಛಾಶಕ್ತಿ ಇಲ್ಲದಿದ್ದರೆ ಹುಲ್ಲಕಡ್ಡಿಯೂ ಸರಿಯದು. ಪ್ರತಿಚರಾಚರ ವಸ್ತುವಿಗೂ ಇಚ್ಛಾಶಕ್ತಿ ಅವಶ್ಯ. ಈ ಇಚ್ಛಾಶಕ್ತಿಯನ್ನು ಕಾಮ ಎಂದು ಹೇಳುವರು. ದಾಂಪತ್ಯ ಎಂಬ ರಸಬಳ್ಳಿ ನಿತ್ಯ ನಿರಂತರ ಮೊಗಮೊಗಯಿಸಬೇಕೆಂದರೆ ಪರಸ್ಪರರಲ್ಲಿ ಅರ್ಥವಂತಿಕೆ, ಸೈರಣೆ, ಸಹನೆ, ಕಾರ್ಯಬಾಹುಳ್ಯದ ವ್ಯಾಪ್ತಿ ಹಾಗೂ ಪ್ರೀತಿ ಪ್ರೇಮ, ಚೈತನ್ಯದ ಅರಿವಿನ ಹರವು, ಚಿಗರೊಡೆಯುವ ಚಿಂತನೆಯ ಎಳೆಗಳು, ಎಳೆಗಳ ನೆಯ್ಗೆಯ ಕುಸರತೆ–ಕುಶಲತೆಗಳು – ಹೀಗೆ ಹಲವು ಸದ್ವಸ್ತುವಿನ ನಿಲುವುವನ್ನ ತಿಳಿದುಕೊಳ್ಳುವ ಇಚ್ಛೆ, ಕಾರ್ಯ ಪ್ರಸರಣದ ಇಚ್ಛೆಗಳು ಇದ್ದಾಗ ಮಾತ್ರ ಭವ್ಯ ನಾಗರಿಕತೆಯನ್ನುಕಟ್ಟಲು ಸಾಧ್ಯವಾಗಿದೆ. 'ಮಾಡಬೇಕು' ನೋಡಬೇಕು' ಕ್ರಿಯಾಪ್ರವೃತ್ತರಾಗಬೇಕೆಂಬ ಇಚ್ಛೆಗಳು ಮನದಲ್ಲಿ ಮೂಡದಿದ್ದರೆ ವಿಶ್ವವು ಸೌಂದರ್ಯದ ಬೀಡಾಗುತ್ತಿರಲಿಲ್ಲ.ಸತ್ಯದ ಸಾಕ್ಷಾತ್ಕರಅನುರಣಿಸುತಿರಲಿಲ್ಲ. ಈ ಎರಡೂಆಗದಿದ್ದರೆ ಭೂಮಿ ಪ್ರದೇಶವೆಂಬ ಮನೋಮಯ ಕೋಶ ಶಿವನ ಸದನವಾಗುತ್ತಿರಲಿಲ್ಲ. ಶಿವನಿಚ್ಛೆ, ಸಾಧಕನ ಇಚ್ಛೆ, ಶಿವ–ಶಕ್ತಿಯ ಇಚ್ಛೆಗಳು ಆರ್ವಭವಿಸಿದಾಗಲೇ ಚಿಂತನ ಲಯಗಳ ತಾಂಡವ ನೃತ್ಯ ನಡೆದು: ವಿಭೂತಿಗಳು ಉಳಿದ ಕಾರಣದಿಂದಲೇ ಭುವಿ ಸ್ವರ್ಗದ ರಮ್ಯತೆಯಿಂದ ಕಂಗೋಳಿಸಿದೆ. ಇಚ್ಛೆಯನ್ನು ಸಾಧನೆಯ ಸಾಧಕವಾಗಿ ಉಪಯೋಗಿಸಿಕೊಂಡರೆ ಎಲ್ಲ ತಾಪತ್ರಯಗಳ ಕರಾಳತೆ ಕಳಚಿಕೊಂಡು ಹೋಗುತ್ತದೆ. ಈ ಜಗತ್ತಿನ ವಿಸ್ಮಯಕ್ಕೆ ಕಾರಣೀಭೂತವಾಗಿರುವ ಕ್ರಿಯಾ

ಪ್ರವೃತ್ತಿಗಳನ್ನು ಹೆಣ್ಣು–ಗಂಡಿನ ಕಾಮಕ್ಕೆ ಸಾಂಕೇತಿಸಿ ಹೇಳಿದ್ದು ಅತ್ಯಂತ ಮನೋಜ್ಞವಾಗಿದೆ.

ಎದೆಯತ್ವಾಟದಾಗ ಪ್ರೀತಿಬೀಜ ಸಸಿ
ಬಿಟ್ಟು ಬೆಳೆಯಲಾಕ
ಕಾಮನನ್ನ ಕಳಿಸ್ಯಾನ ದೇವತಾ
ನೀರು ಹನಿಸಲಾಕ:
. . . . . .
ಮರದ ಕೊಂಬಿಗೈ ಮುಂದ ಚಾಚಿ
ಬಳ್ಳಿಗಳ ಹಿಡಿಸತಾನ
ಬಳ್ಳಿಯನ್ನ ಮರವೇರಿಸಿ ಹಬ್ಬಿಸಿ
ಸೊಗಸು ಬೆಳೆಸತಾನ:
ಕಾಮನಂಥ ತೋಟಿಗರು ಇಲ್ಲ ಹುಡಿ
ಕಿದರು ಭೂಮಿಯೆಲ್ಲಾ
ಇರುಳು ಹಗಲೆನದೆ ದುಡಿದೆ ದುಡೀತಾನ
ಬಿಡುವು ಅವನಿಗಿಲ್ಲಾ!

ಕ್ರಿಯಾಶೀಲತೆಯ ಪ್ರವೃತ್ತದ ಪ್ರಕ್ರಿಯೆಗಳು ಸೊಗಸಾದ ಪರಿಸರವನ್ನ ನಿರ್ಮಿಸಿದೆ. ಕಾಮನ ತಂದೆ ತಾಯಿಗೆ ಮೊದಲ ನಮನ ಅಂದರೆ 'ಇಚ್ಛೆ'ಯನ್ನು ಪೋಷಿಸಿದ ಮನೋಮಯ, ವಿಜ್ಞಾನಮಯ, ಜ್ಞಾನಮಯ ಕೋಶಗಳಿಗೆ ಕೃತಜ್ಞತೆಗಳೆಂದ ಅರ್ಥ.

ಹದಿಹರೆಯ ವಯಸ್ಸಿನಲ್ಲಿ ಮನಸ್ಸಿನ್ನು ಕದಡುವ ಹಾಗೂ ಚಿತ್ತಚಾಂಚಲ್ಯಕ್ಕೆ ಕಾರಣವಾಗಿರುವ ಲಿಂಗಾಕರ್ಷಣೆಯ ಮೋಹ ಒಂದು ಕಡೆ ಸಾಧನಾ ತಾಪತ್ರಯವೂ ಹೌದು, ಇನ್ನೊಂದು ಕಡೆ ಜೀವಚೈತನ್ಯ ಶಕ್ತಿಯ ಆವಿರ್ಭಾವದ ಆವಿಷ್ಕಾರವೂ ಹೌದು. ಇಂತಹ ಆವಿಷ್ಕಾರಗಳು ಬಾಳ ಬುತ್ತಿಯಂತೆ ಪೋಷಣೆಯ ಆರೋಗಣೆಯಾಗಿ, ಜೀವಸ್ತಂಭಗಳಾಶ್ರಯಗಳಾಗುತ್ತವೆ. ಹೀಗಾಗಿ ಮೋಹ–ಮೋಹಿತ ಆಕರ್ಷಣೆಯ ಸೌಂದರ್ಯ ದರ್ಶನಗಳ ಅನಾವರಣಗಳೆಲ್ಲವೂ ಶಿವನಲ್ಲಿ ಧ್ಯಾನಸ್ಥವಾಗಿವೆ ಎಂಬ ವಿಷಯಗಳನ್ನು 'ನಲ್–ವಾಡಗಳು, 'ನಾಜೂಕದ ನಾರಿ' ಇತ್ಯಾದಿ ಕವನಗಳಲ್ಲಿ ವ್ಯಕ್ತಗೊಂಡಿವೆ.

ಇಲ್ಲಿ ಕವಿ ಸೌಂದರ್ಯವನ್ನು ಇತ್ಯಾತ್ಮಕ ನೆಲೆಯಿಂದ ದೃಷ್ಟಿಸಿ: ವೈವಿಧ್ಯಮಯ ಅಸ್ವಾದಗಳ ರುಚಿ ಮಧುರತೆ, ನೋಟದ ರಮ್ಯತೆ, ಇಂಪಿನ ಸೊಗಸನ್ನ, ಕಂಪಿನ ಪರಿಮಳ ಗ್ರಾಹತೆಯನ್ನು ಅತ್ಯಂತ ರಸಸಮೃದ್ಧತೆಯಿಂದ ಕವಿ ಕಲ್ಪನಾ ಹಂದರದಲ್ಲಿ ಸೋಪಜ್ಞವಾಗಿ ಮೂಡಿಬಂದಿದೆ. ಇಂತಹ ಸೋಪಜ್ಞತೆಯ ಯಜ್ಞದಲ್ಲಿ ಕವಿಯ ಕೌಶಲ್ಯದ ಕುಸರಿಯ ಎಳೆಗಳು ಗಟ್ಟಿಗೊಂಡು ಇನ್ನೂ ಚಿತ್ತಾಕರ್ಷಕವಾಗಿ ಕಂಗೊಳಿಸಿದೆ. ಈ ರೀತಿಯ ಅಭಿವ್ಯಕ್ತಿಗೆ ಕವಿ ಮನ ಮಂದಿರದಲ್ಲಿ ಮೂಡಿದ ಭಾವಲಯಗಳ ಸುಂದರ ಜೋಡಣೆಯ ಭವ್ಯದರ್ಶನವೆ ಮುಖ್ಯ ಕಾರಣವಾಗಿದೆ. ಸಾತ್ವಿಕ ಪಥಿಕ ಚಿಂತನೆಗಳೆಲ್ಲವೂ ಸಾತ್ವಿಕ ಮಂಥನಗಳಿಂದ ಸೊರೆಗೊಂಡು 'ಮೋಜಿನ ಮಾಟ' ಎಂಬ ಕವಿತೆ ಪ್ರತಿರೂಪಕವಾಗಿ ಘಟಿಸಿದೆ.

ಸುಳಿ–ಸುಳಿಯಿತು ತಂಪಿನ ಗಾಳಿ–ಉಲಿಯತೈತೆ
ಕಿನ್ನರಿಗಾಳಿ
ಬೆಳದಿಂಗಳು ತುಂಬಿದ ಮುಗಿಲ$–ಉಕ್ಕೇರಿತು ಹಾಲಿನ
ಕಡಲು
ಕನಸೊ ನನಸೊ ತಿಳಿಯದಿದವ್ವಾ–
ಮನಸು ಮೈಯ ಮರತಿದ್ದೆನವ್ವಾ–
ನಂದನವನ ಪಾರಿಜಾತ$– ಬಂದು ಭೂಮಿಗಿಳದೈತವ್ವಾ!

ಪಂಚಮಹಾಭೂತಗಳ ಕರ್ತವ್ಯದ ನಿರಂತರತೆಯ ತನ್ಮಯವು ಕವಿ ಕಣ್ಣಿಗೆ ಹಬ್ಬ! ಮನಸ್ಸಿಗೆ ಮುದ ನೀಡಿದೆ.ನಿತ್ಯಚೈತ್ರದ ಚೂತವನವಾಗಿರುವ ಭುವಿಯಒಡಲ ನಿಸರ್ಗದ ಸೌಂದರ್ಯ ಕವಿ ಕಣ್ಣಿಗೆ ದೇವಲೋಕದ ನಂದನವನದಂತೆ ಕಂಡಿದೆ. ನಿಸರ್ಗ ರಮಣೀಯತೆಯ ಸೊಗಸನ್ನ ಕವಿ 'ಮೋಜಿನ ಮಾಟ' ಎಂದು ಕರೆದಿದ್ದಾರೆ.

ಮುಗ್ದ ಕಾಮ, ಮನಸ್ಸಿನ ವಿಕ್ಷೇಪ ಭಾವಗಳು ಕರಗಿ, ಪ್ರೇಮಾಂಕುರ ಮೂಡಿದಾಂಪತ್ಯದ ಚೆಲುವು ನೂರ್ಮಡಿಸುತ್ತಿರುವಾಗ ಅತ್ತೆ ಎಂಬ ಅಧಿಕಾರ ಪ್ರವೇಶ ಪಡೆದಾಗ ಹೊಸಗಿತ್ತಿಯಾಗಿ ಪ್ರವೇಶ ಪಡೆದ ಹೆಣ್ಣಿನ ಹಂಬಲಗಳು, ಕನಸ್ಸುಗಳು ಭಗ್ನಗೊಂಡ ಹತಾಸೆ ಭಾವಗಳು 'ಅಕ್ಕನ ಆಶೀರ್ವಾದ', 'ಚದುರೀ ಸಾಕೀ ಸೋಗು', 'ಯಾರು ಹೇಳು ಈಕಿ?', 'ಗೌಡರ ಮನೆಯ ಸೊಸಿ', 'ಗೆಣತಿ ಏನ ಮಾಅಂತೀ?', ಹೂವಿನ ಬಾಳದು ಹಾಳೇನ$! ಮುಂತಾದ ಕವಿತೆಗಳಲ್ಲಿ ವ್ಯಕ್ತವಾಗಿವೆ. ಸಮಾಜದಲ್ಲಿ ಹಾಗೂ ಕೌಟುಂಬಿಕ ವ್ಯವಸ್ಥೆಯಲ್ಲಿ ಭಾವ–ಅನುಭಾವ–ನಿರ್ಭಾವಗಳಿಗಿಂತ ತರತಮ ಭಾವಗಳಿಂದಾಗಿ,

ಮನಸ್ಸಿನ ದೋಷದಿಂದಾಗಿ ಅಸಮಾನತೆ ವರ್ತನೆಗಳಿಂದಾಗಿ ಅಬಲರ ಮೇಲೆ ಹಿಂಸೆಗಳು, ಕ್ರೌರ್ಯಗಳು, ದೌರ್ಜನ್ಯಗಳು ಸದಾ ನಡೆಯುತ್ತಾ ಬಂದು ಅಬಲರಾಗಿರುವ ಹೆಣ್ಣು ಮಕ್ಕಳನ್ನು ಇನ್ನಷ್ಟು ಅಬಲರನ್ನಾಗಿ ಮಾಡಿದ ಸಂಗತಿಗಳು ಅಸಂಖ್ಯೆ. ಹೀಗೆ ಹೊಸಗಿತ್ತಿಯಾಗಿ ಬಂದ ಹೆಣ್ಣಿನ ಸಕಾರತ್ಮಕ ಹಂಬಲಗಳು ನಮ್ಮ ಕೌಟುಂಬಿಕ ರಚನೆಯಲ್ಲಿ ಕಮರಿ ಹೋಗಲು ಹಲವು ಕಾರಣಗಳು ಸುಳಿವುಗಳನ್ನು ನಲ್ವಾಡದ ಹಲವು ಕವನದಲ್ಲಿ ಬಿತ್ತರಗೊಂಡಿವೆ.

ಅತ್ತೆಯ ಕಾಟ ಗ್ರಾಮೀಣ ಸೊಗಡಿನಲ್ಲಿ ಮೂಡಿದೆ. ಮೊದಲಗಿತ್ತಿಯಾಗಿ ಬಂದಾಗಿನ ಪ್ರೀತಿ ಆನಂತರ ದಿನಗಳಲ್ಲಿ ಕರಗಿ ಅತ್ತೆ ರಾಕ್ಷಸಿ ಸ್ವರೂಪ ತಾಳಿ ಸೊಸೆಗೆ ವೈವಿದ್ಯಮಯ ಚಿತ್ರಹಿಂಸೆ ಕೊಡುತ್ತಿದ್ದರೂ ಸೊಸೆ ಮಾತ್ರ ಬದುಕಿನ ಹಂಬಲ ಕಳೆದುಕೊಳ್ಳದೆ ಸಕಾರತ್ಮಕವಾಗಿ ಸ್ಪಂದಿಸುತ್ತ ತನಗೆ ಬಂದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನಪಡುತ್ತಾಳೆ.

ಗ್ರಾಮೀಣಜೀವನದ ಸೊಗಡು:

ಬುದ್ಧಿ ಮೂಲದ ಆಧುನಿಕತೆ ಮತ್ತು ನಾಗರಿಕ ಜಗತ್ತಿನಲ್ಲಿ ಹೃದವಂತಿಕೆಯು ಅತ್ಯಂತ ಕಡಿಮೆ. ಆಧುನಿಕತೆಯ ಜಗತ್ತಿನಲ್ಲಿ ಜಾಗತೀಕರಣದ ಪ್ರಉತ್ಪನ್ನವಾಗಿ ತಂತ್ರಜ್ಞಾನ ಪ್ರವೇಶ ಪಡೆದು: ವ್ಯಾಪರಿಕರಣದ ಬಂಡವಾಳವಾಗಿ ಪರಿಣಮಿಸುತ್ತಿರುವದರಿಂದ ವ್ಯಕ್ತಿ ಮತ್ತು ಸಮಾಜದಲ್ಲಿ ಸಹಜ ಸೌಂದರ್ಯಪ್ರಜ್ಞೆ ಕುಸಿಯುತ್ತಿದೆ. ಪ್ರತಿಯೊಂದು ಸ್ವಾರ್ಥಮೂಲ ಆಕರ್ಷಣೆಯ ಸರಕಾಗುತ್ತಿರುವದರಿಂದ ಜೀವನದ ನೆಮ್ಮದಿ–ಸಂತೋಷ– ಆನಂದಗಳಂತಹ ಮೌಲ್ಯಗಳು ಕಣ್ಮರೆಯಾಗಿ ಖಿನ್ನತೆಗೆ ಜಾರಿ ಅಸ್ವಸ್ಥ ಸಮಾಜ ನಿರ್ಮಾಣವಾಗುತ್ತಿರುವದು ಜಗತ್ತಿಗೆ ಬರುವ ದುರಂತವೆ ಸರಿ. ಹೀಗಾಗಬಾರದೆಂದರೆ ಸಂಸ್ಕೃತಿ ಮೂಲವಾಗಿರುವ ಕೃಷಿ, ಕೃಷಿ ಸುತ್ತ ಹೆಣೆದಿರುವ ಆಚರಣೆಗಳು, ಜಾತ್ರೆಗಳು, ಹಬ್ಬಗಳು– ಇತ್ಯಾದಿ ಆಚಾರ– ವಿಚಾರಗಳು ಮತ್ತೆ ಅನುಷ್ಠಾನಕ್ಕೆ ಬಂದರೆ ಮಾತ್ರ ಬದುಕುವ ಸೌಹಾರ್ದತೆ, ಜೀವನದ ಸೌಂದರ್ಯಪ್ರಜ್ಞೆ ಹಾಗೂ ಹೃದಯವಂತಿಕೆಗಳು ಮುನ್ನೆಲೆಗೆ ಬಂದು ಆರೋಗ್ಯಪೂರ್ಣ ಸಮಾಜ ಕಟ್ಟಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಬೆಟಗೇರಿ ಕೃಷ್ಣಶರ್ಮ ಅವರ 'ನಲ್ವಾಡಗಳು' ಕವನಸಂಕಲನದ ಹಲವು ಕವಿತೆಗಳು ಮಹತ್ವವಾಗಿವೆ.

ಬುತ್ತೀ ತಗೊಂಡು ಹೋಗ್ತಿನಿ ಹೊಲಕ – ನಾ
ಬರ್ತಿನಿ ಹೊತ್ತು ಮಣುಗುದಕ–
ಬುತ್ತೀತೊಗೊಂಡು ಹೋಗ್ತೀನಿ ಹೊಲಕ!

ದೇಶಿಮೂಲದ ಆಚರಣೆಯ ಸುತ್ತ ಹೆಣೆದಿರುವ ಈ ಕವನದಲ್ಲಿ ನಿತ್ಯ ಬದುಕಿನ ಕಾರ್ಯ ಪ್ರವೃತ್ತಗಳಲ್ಲಿ ಜೀವನಪ್ರೀತಿ, ತಾನು ನಂಬಿದ ಭೂಮಿ ಮತ್ತು ಅದರಡಿಯಲ್ಲಿ ಮಾಡುವ ಕಾಯಕ ನಿಷ್ಠೆ ಜೊತೆಗೆ ಮಣ್ಣು, ಆ ಮಣ್ಣಿನಲ್ಲಿ ಬೆಳೆದ ಫಸಲು– ಇವುಗಳ ಕುರಿತು ಆಗಾದವಾದ ಪೂಜ್ಯ ಭಾವನೆ ವ್ಯಕ್ತವಾಗಿದೆ. ಮಣ್ಣೆಂದರೆ ರೈತನಿಗೆ ಅಪಾರ ಪ್ರೀತಿ. ಅದನ್ನಾಧರಿಸಿ ಬದುಕುತ್ತಿರುವ ಮನುಷ್ಯನಿಗೆ ತನಗೆ ಬೇಕಾದ ಅನ್ನ, ಆಹಾರ, ವಸತಿಗಳನ್ನ ಮಾತ್ರಒದಗಿಸದೆ ಮತಿನ್ನೇನೂ ನೀಡುವ ಅಪಾರ ವಿಸ್ಮಯದ ಜೀವಂತ ಜಗತ್ತಾಗಿದೆ. ರೈತನ ಜೀವಧ್ವನಿ ಬೇಸಾಯ: ಆ ಬೇಸಾಯದಲ್ಲಿ ಸಹಾಯ ಮಾಡುವ ಎತ್ತುಗಳು, ಹೊಲದಲ್ಲಿ ಬೆಳೆಯುವ ವೈವಿದ್ಯ ಬೆಳೆಗಳ ಸಮೃದ್ಧತೆಯ ಕೃತಜ್ಞತಾ ಮನೋಭಾವವು, ರೈತದಾಂಪತ್ಯದ ಸೌಂದರ್ಯಪ್ರಜ್ಞೆ ಅತ್ಯಂತ ಮನಮೋಹಕವಾಗಿ ಆಡುಭಾಷೆಯಲ್ಲಿ ವ್ಯಕ್ತಗೊಂಡಿದ್ದು ತುಂಬಾ ಆಪ್ತವಾಗಿವೆ.

ಹಬ್ಬ ಹರಿದಿನಗಳು, ಜಾತ್ರೆ–ಉತ್ಸವಗಳು, ದೇವರು, ಧರ್ಮ– ಆರಾಧನೆಗಳೆಲ್ಲವೂ ಕಲಾ ಜಗತ್ತಿನ ಮೇಲೆ ಪ್ರಭಾವ ಬೀರುವದರ ಜೊತೆಗೆ ಸತ್ಯದ ಶೋಧಕ್ಕೆದಾರಿ ನೀಡಿ ಜ್ಞಾನಶಿಸ್ತುಗಳನ್ನು ಸೃಷ್ಠಿಸುತ್ತವೆ. ಆಚರಣೆಗಳ ಹಿನ್ನೆಲೆಯಲ್ಲಿ ವೈಜ್ಞಾನಿಕ ಸತ್ಯ ಅಡಿಗಿದೆ. ಅಂತಯೇ ವರ್ಷಕ್ಕೊಮ್ಮೆ ಜಾತ್ರೆಗಳು ಹಳ್ಳಿ ಶಹರಗಳಲ್ಲಿ ನಡೆಯುತ್ತಾ ಬಂದಿವೆ. ಇಂತಹ ಜಾತ್ರೆಗಳಲ್ಲಿ ಕುಟುಂಬದ ಎಲ್ಲ ಸದಸ್ಯರೊಂದಿಗೆ ಬೀಗರು ಸಹ ಸೇರಿ ಜಾತ್ರಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವದು ನಮ್ಮ ಪರಂಪರೆ ವಾಡಿಕೆ.

ರಾಯ–ಬರದಿದ್ದರ್ಯಾತರ ಜಾತ್ರಿ–
ಕಳಿಯೂದ್ಹಾಂಗವ್ವ ಅಲ್ಲಿ ಸವಿರಾತ್ರಿ
ಬಂದ$ ಬರತಾರ ಕರೆದರೆ ಖಾತ್ರಿ–
ಕೂಡೇ ಹೋಗ್ತೀವಿ ಊರಿಗೆ ನಾವಿಬ್ಬರಾ–

ಕರಿಯಾಕ$ ಬಂದಾರ$ ತವರವರಾ!

ಹೀಗೆ ತನ್ನ ರಾಯನ ಜೊತೆಗೆ ಹೋಗುವ ಹೆಣ್ಣಿನ ಮಾನಸಿಕ ತವಕಗಳನ್ನ 'ನಮ್ಮೂರಜಾತ್ರೆ' ಸೆರೆ ಹಿಡಿದಿದೆ. ಇದು ಗ್ರಾಮೀಣ ಜೀವನ ಸಂಸ್ಕೃತಿ, ಸಂಭ್ರಮ, ಮಾನವೀಯ ಸಂಬಂಧಗಳನ್ನು ಚಿತ್ರಿಸುವ ವಿಶಿಷ್ಟ ಕವನವಾಗಿದೆ. ಈ ಕವನದಲ್ಲಿ ಜಾತ್ರೆಯ ಸಡಗರ, ಜನರ ಉತ್ಸಾಹ ಮತು ್ತಯುವ ಮನಸ್ಸಿನ ತಹತಹಿಕೆಗಳು ಅಭಿವ್ಯಕ್ತವಾಗಿವೆ. ಈ ಜಾತ್ರೆಗಳು ನಮ್ಮ ಸಾಂಸ್ಕೃತಿಕ ಜಗತ್ತಿನ ಶ್ರೀಮಂತಿಕೆಯನ್ನು ಎತ್ತಿ ತೋರಿಸುತ್ತವೆ. ಜೊತೆಗೆ ಹಳ್ಳಿಗರ ಜೀವನ ಪ್ರೀತಿ, ಸಮಾಜದ ಜೀವಪರ ಮೌಲ್ಯಗಳನ್ನು, ಒಗ್ಗಟ್ಟನ್ನು ಪ್ರತಿಬಿಂಬಿಸುತ್ತವೆ.

ಸಮಕಾಲೀನ ದೃಷ್ಟಿಯಿಂದ ನೋಡಿದಾಗ, ಈ ಕವನವು ಇಂದಿನ ಸಮಾಜಕ್ಕೆ ಪ್ರಸ್ತುತವಾಗಿದೆ. ಆಧುನಿಕ ಜೀವನದಲ್ಲಿ ಕ್ಷೀಣಿಸುತ್ತಿರುವ ಸಾಮಾಜಿಕ ಬಾಂಧವ್ಯ, ಜನಪದ ಸಂಸ್ಕೃತಿಯ ಮಹತ್ವ ಮಾನವೀಯ ಸಂಬಂಧಗಳ ಮೌಲ್ಯವನ್ನು ಈ ಕವನ ನೆನಪಿಸುತ್ತದೆ.

ನಲ್ವಾಡುಗಳಲ್ಲಿ ಮನಸ್ಸಿನ ವೈರುಧ್ಯಗಳು, ಅಸಮಾನತೆಗಳು, ಬಡತನ, ಮೂಢನಂಬಿಕೆಗಳಿಂದಾಗಿ ಹೆಣ್ಣಿನ ಮೇಲೆ ಆಗುತ್ತಿರುವ ಅನ್ಯಾಯಗಳು, ಸಂಪ್ರಾದಾಯಿಕ ಮನೋಭಾವಗಳ ಹಿಡಿತ, ಶಿಕ್ಷಣದ ಕೊರತೆ ಸಾಮಾಜಿಕ ಅನ್ಯಾಯಗಳ ಕುರಿತು ಸ್ಪಷ್ಟವಾದ ಕಾಳಜಿ ವ್ಯಕ್ತವಾಗಿದೆ. ಜೊತೆಗೆ ಕವಿ ನೈತಿಕ ಮೌಲ್ಯಗಳ ಮಹತ್ವವನ್ನು ಅತ್ಯಂತ ಇತ್ಯಾತ್ಮಕ ನೆಲೆಯಿಂದ ಕವನಗಳನ್ನು ರಚಿಸಿದಂತಿದೆ ಎಂದು ತೋರುತ್ತದೆ. ಸಮಾಜದ ಆರೋಗ್ಯಕರ ಬೆಳವಣಿಗೆಗೆ ಮೌಲ್ಯಗಳು ಅವಶ್ಯಕವೆಂಬ ಸಂದೇಶವನ್ನು 'ನಲ್ವಾಡಗಳು' ಸೂಚಿಸುತ್ತವೆ. ಕವಿಯ ಅಂಧಾನುಕರಣೆಯ ಆಚರಣೆಯ ಕಟ್ಟುನಿಟ್ಟುಗಳಲ್ಲಿ ಕ್ರೌರ್ಯಕ್ಕಿಂತ ಶಿಕ್ಷಣದ ಕೊರತೆ ಎದು ್ದಕಾಣುತ್ತದೆ. (ಗೆಣತೀ ಏನ ಮಾಡ ಅಂತೀ?)

ವ್ಯಕ್ತಿ ಮತ್ತು ಸಮಾಜ ಸಂಬಂಧ ಅವಿನಾಭಾವವಾಗಿ ಬೆಸೆದುಕೊಂಡಿವೆ. ವ್ಯಕ್ತಿ ಅಭಿವೃದ್ಧಿಯೊಂದಿಗೆ ಸಮಾಜದ ಅಭಿವೃದ್ಧಿ, ಸಮಾಜದ ಅಭಿವೃದ್ಧಿಯೊಂದಿಗೆ ವ್ಯಕ್ತಿಯ ಕಲ್ಯಾಣಕೆ ್ಕಾರಣವಾಗಿರುವ ಸತ್ಯಗಳನ್ನು ನಲ್ವಾಡುಗಳ ಕವಿತೆಗಳು ವ್ಯಕ್ತಪಡಿಸುತ್ತವೆ. ಇಂತಹ ಹಲವು ವಿಚಾರಗಳು ಇಂದಿನ ಸಮಾಜಕ್ಕೆ ಅತ್ಯಂತ ಪ್ರಸ್ತುತವಾಗಿವೆ. ಒಟ್ಟಿಗೆ ಸಾಂಸ್ಕೃತಿಕ ಬದುಕಿನ ಮೌಲ್ಯಗಳು ಕುಸಿಯುತ್ತಿರುವ ಅಂಶಗಳು ಇಂದು ಚರ್ಚೆಗೆ ಗ್ರಾಸವಾಗುತ್ತಿವೆ. ಇಂದು ಜೀವಪರ ಸತ್ಯಗಳ ಸುತ್ತ ರಚಿಸಲ್ಪಟ್ಟ ವಿಚಾರಗಳು ಆಚಾರಗಳು ಮತ್ತೆ ಮುನ್ನೆಲೆಗೆ ಬರಬೇಕಾದ ಅವಶ್ಯಕತೆ ಇದೆ ಎಂಬ ಸಮಕಾಲೀನ ಪ್ರಜ್ಞೆ ನಲ್ವಾಡು ಕವಿತೆಗಳಲ್ಲಿ ಹೂರಣಗಟ್ಟಿವೆ. ಒಟ್ಟಿಗೆ ಸಾಹಿತ್ಯಿಕ ಮತ್ತು ಮಾನವೀಯತೆ ಮೌಲ್ಯ ಹೊಂದಿರುವ ನಲ್ವಾಡುಗಳು ವಾಸ್ತವ ಬದುಕಿನ ವಿವೇಕ ಮತ್ತು ವಿಕ್ಷೇಪಗಳನ್ನೂ ಅನಾವರಣಗೊಳ್ಳಿಸುವುದರ ಜೊತೆಗೆ ಉತ್ತಮ ಬದುಕಿಗೆ ದಾರಿದೀಪವಾಗಿದೆ. ಹೀಗಾಗಿ ಬೆಟಗೇರಿ ಕೃಷ್ಣಶರ್ಮ ಅವರ ನಲ್ವಾಡುಗಳು ಸಮಕಾಲೀನ ಸಮಾಜಕ್ಕೆ ಅತ್ಯಂತ ಪ್ರಸ್ತುತ ಮತ್ತು ಸಂಪತ್ತಭರಿತ ಆಕರ ಸಾಮಗ್ರಿಯಾಗಿದೆ.

ಪರಾಮಶನ ಗ್ರಂಥಗಳು:

1) ನಲ್ವಾಡುಗಳು: ಜಾನಪದ ಪ್ರೀತಿಗೀತೆಗಳು – ಡಾ. ಬೆಟಗೇರಿ ಕೃಷ್ಣಶರ್ಮ– ಪ್ರಕಾಶಕರು ಪ್ರಸಾರಾಂಗ, ಕರ್ನಾಟಕ ಸರಕಾರ–2014
2) ಹೊಸಗ್ನಡ ಸಾಹಿತ್ಯಚರಿತ್ರೆ –ಲೇ: ಎಲ್.ಎಸ್ ಶೇಷಗಿರಿರಾವ್

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ನಗರೀಕರಣ ಮತ್ತು ಜಾಗತೀಕರಣದಿಂದ ಕನ್ನಡ ಸಾಹಿತ್ಯದ ಮೇಲಾದ ಸಾಂಸ್ಕೃತಿಕ ಬಿಕ್ಕಟ್ಟು

ಡಾ. ನಾಗರಾಜ ಡಿ. ಮುರಗೋಡ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಜಿ. ಪಿ. ಪೋರವಾಲ ಕಲಾ,
ವಾಣಿಜ್ಯ ಮತ್ತು ಪ್ಹಿ. ಪ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ
Corresponding Author–ಡಾ. ನಾಗರಾಜ ಡಿ. ಮುರಗೋಡ
DOI - 10.5281/zenodo.23528782

Abstract:

ನಗರೀಕರಣ ಮತ್ತು ಜಾಗತೀಕರಣವು ಸಮಕಾಲೀನ ಸಮಾಜದ ಸ್ವರೂಪವನ್ನು ಆಳವಾಗಿ ಬದಲಾಯಿಸಿರುವ ಪ್ರಮುಖ ಪ್ರಕ್ರಿಯೆಗಳಾಗಿವೆ. ಇವು ಆರ್ಥಿಕ ಮತ್ತು ತಾಂತ್ರಿಕ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗದೆ ಭಾಷೆ, ಸಾಹಿತ್ಯ, ಕುಟುಂಬ, ಜೀವನಶೈಲಿ, ಜನಪದ ಪರಂಪರೆ, ಸಾಂಸ್ಕೃತಿಕ ಅಸ್ಮಿತೆ ಮತ್ತು ಮಾನವ ಸಂಬಂಧಗಳ ಮೇಲೂ ಪರಿಣಾಮ ಬೀರಿವೆ. ಕನ್ನಡ ಸಾಹಿತ್ಯವೂ ಈ ಬದಲಾವಣೆಗಳಿಂದ ಹೊರತಾಗಿಲ್ಲ. ಗ್ರಾಮೀಣ ಬದುಕಿನಿಂದ ನಗರಕೇಂದ್ರಿತ ಬದುಕಿನತ್ತ ಸಾಗುವಿಕೆ, ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ನಡೆಯುವ ವಲಸೆ, ಮಾಹಿತಿ ತಂತ್ರಜ್ಞಾನದ ವಿಸ್ತರಣೆ, ಇಂಗ್ಲಿಷ್ ಭಾಷೆಯ ಪ್ರಾಬಲ್ಯ, ಜಾಗತಿಕ ಮಾರುಕಟ್ಟೆಯ ಬೆಳವಣಿಗೆ, ಉಪಭೋಗ ಸಂಸ್ಕೃತಿ ಹಾಗೂ ಡಿಜಿಟಲ್ ಮಾಧ್ಯಮಗಳ ಪ್ರಭಾವದಿಂದ ಕನ್ನಡಿಗರ ಸಾಂಸ್ಕೃತಿಕ ಅನುಭವದಲ್ಲಿ ಮಹತ್ವದ ಬದಲಾವಣೆಗಳು ಸಂಭವಿಸಿವೆ. ಇದರ ಪರಿಣಾಮ ಕನ್ನಡ ಸಾಹಿತ್ಯದಲ್ಲಿ ಹೊಸ ವಿಷಯಗಳು, ಹೊಸ ಪಾತ್ರಗಳು, ಹೊಸ ಭಾಷಾ ಪ್ರಯೋಗಗಳು ಮತ್ತು ಹೊಸ ಅಭಿವ್ಯಕ್ತಿ ವಿಧಾನಗಳು ಹುಟ್ಟಿಕೊಂಡಿವೆ. ಅದೇ ಸಂದರ್ಭದಲ್ಲಿ ಸ್ಥಳೀಯ ಭಾಷೆ, ಜನಪದ ಸಂಸ್ಕೃತಿ, ಗ್ರಾಮೀಣ ಮೌಲ್ಯಗಳು ಮತ್ತು ಸಾಂಸ್ಕೃತಿಕ ಅಸ್ಮಿತೆಯ ಕುರಿತು ಆತಂಕವೂ ವ್ಯಕ್ತವಾಗಿದೆ. ಈ ಪ್ರಬಂಧವು ನಗರೀಕರಣ ಮತ್ತು ಜಾಗತೀಕರಣದಿಂದ ಕನ್ನಡ ಸಾಹಿತ್ಯದ ಮೇಲೆ ಉಂಟಾದ ಸಾಂಸ್ಕೃತಿಕ ಬಿಕ್ಕಟ್ಟಿನ ಸ್ವರೂಪ, ಕಾರಣಗಳು, ಪರಿಣಾಮಗಳು ಮತ್ತು ಸಾಹಿತ್ಯಿಕ ಪ್ರತಿಕ್ರಿಯೆಗಳನ್ನು ವಿಶ್ಲೇಷಿಸುತ್ತದೆ.

Keywords: *ನಗರೀಕರಣ, ಜಾಗತೀಕರಣ, ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಬಿಕ್ಕಟ್ಟು, ಭಾಷೆ, ಅಸ್ಮಿತೆ, ಜನಪದ, ಆಧುನಿಕತೆ, ಉಪಭೋಗ ಸಂಸ್ಕೃತಿ ಮತ್ತು ಡಿಜಿಟಲ್ ಸಾಹಿತ್ಯ.*

ಸಾಹಿತ್ಯವು ಯಾವುದೇ ಸಮಾಜದ ಸಾಂಸ್ಕೃತಿಕ ಬದುಕಿನ ಜೀವಂತ ದಾಖಲೆಯಾಗಿದೆ. ಸಮಾಜದಲ್ಲಿ ನಡೆಯುವ ಬದಲಾವಣೆಗಳು ಸಾಹಿತ್ಯದ ವಿಷಯ, ಭಾಷೆ, ಪಾತ್ರ, ನಿರೂಪಣಾ ವಿಧಾನ ಮತ್ತು ಮೌಲ್ಯಪ್ರಜ್ಞೆಯ ಮೇಲೆ ಪರಿಣಾಮ ಬೀರುತ್ತವೆ. ಆದ್ದರಿಂದ ಸಾಹಿತ್ಯವನ್ನು ಕೇವಲ ಕಲಾತ್ಮಕ ಅಭಿವ್ಯಕ್ತಿಯಾಗಿ ನೋಡುವುದಕ್ಕಿಂತ ಸಾಮಾಜಿಕ ಮತ್ತು ಸಾಂಸ್ಕೃತಿಕ ದಾಖಲೆ ಎಂಬ ದೃಷ್ಟಿಯಿಂದಲೂ ಅಧ್ಯಯನ ಮಾಡಬೇಕಾಗುತ್ತದೆ. ಕನ್ನಡ ಸಾಹಿತ್ಯದ ದೀರ್ಘ ಇತಿಹಾಸವನ್ನು ಗಮನಿಸಿದರೆ ರಾಜಕೀಯ ಬದಲಾವಣೆ, ಧಾರ್ಮಿಕ ಚಳವಳಿ, ಸಾಮಾಜಿಕ ಸುಧಾರಣೆ, ವಸಾಹತುಶಾಹಿ, ಆಧುನಿಕತೆ, ದಲಿತ ಮತ್ತು ಬಂಡಾಯ ಚಳವಳಿ ಮುಂತಾದ ಅನೇಕ ಪ್ರಕ್ರಿಯೆಗಳು ಕನ್ನಡ ಸಾಹಿತ್ಯದ ರೂಪಾಂತರಕ್ಕೆ ಕಾರಣಗಳಾಗಿವೆ.

ಇಪ್ಪತ್ತನೇ ಶತಮಾನದ ಉತ್ತರಾರ್ಧದಿಂದ ನಗರೀಕರಣ ಮತ್ತು ಜಾಗತೀಕರಣ ಕನ್ನಡ ಸಾಹಿತ್ಯದ

ಮೇಲೆ ಹೆಚ್ಚು ಪ್ರಭಾವ ಬೀರತೊಡಗಿದವು. ಕೈಗಾರಿಕೆ, ಶಿಕ್ಷಣ, ಉದ್ಯೋಗ, ಸಾರಿಗೆ ಮತ್ತು ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದ ನಗರಗಳು ಆರ್ಥಿಕ ಚಟುವಟಿಕೆಗಳ ಕೇಂದ್ರಗಳಾದವು. ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ಜನರ ವಲಸೆ ಹೆಚ್ಚಾಯಿತು. ವಿಶೇಷವಾಗಿ ಬೆಂಗಳೂರು ಜಾಗತಿಕ ಮಾಹಿತಿತಂತ್ರಜ್ಞಾನ ಮತ್ತು ಸೇವಾ ಆರ್ಥಿಕತೆಯ ಪ್ರಮುಖ ಕೇಂದ್ರವಾಗಿ ಬೆಳೆದ ಹಿನ್ನೆಲೆಯಲ್ಲಿ ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿಯೂ ಗಮನಾರ್ಹ ಬದಲಾವಣೆಗಳು ಸಂಭವಿಸಿದವು.

ಜಾಗತೀಕರಣದಿಂದ ಕನ್ನಡ ಸಾಹಿತ್ಯವು ಪ್ರಪಂಚದ ವಿವಿಧ ಭಾಷೆ ಮತ್ತು ಸಂಸ್ಕೃತಿಗಳೊಂದಿಗೆ ವೇಗವಾಗಿ ಸಂಪರ್ಕ ಹೊಂದಿತು. ವಿದೇಶಿ ಸಾಹಿತ್ಯ, ಚಲನಚಿತ್ರ, ಸಂಗೀತ, ಆಹಾರ ಪದ್ಧತಿ, ಉಡುಪು ಮತ್ತು ಜೀವನಶೈಲಿಗಳು ಕನ್ನಡಿಗರ ಬದುಕಿನೊಳಗೆ ಪ್ರವೇಶಿಸಿದವು. ಇಂಗ್ಲಿಷ್ ಭಾಷೆಯ ಬಳಕೆ ಹೆಚ್ಚಾಯಿತು. ಸಾಮಾಜಿಕ ಮಾಧ್ಯಮ ಮತ್ತು ಅಂತರ್ಜಾಲದಿಂದ ಮಾಹಿತಿ ಮತ್ತು ಮನರಂಜನೆಗೆ ಗಡಿಗಳು ಬಹುತೇಕ ಅರ್ಥಹೀನವಾದವು. ಈ ಎಲ್ಲ ಬದಲಾವಣೆಗಳು ಕನ್ನಡ ಸಾಹಿತ್ಯದ ಮೇಲೆ ಗಣನೀಯವಾದ ಪರಿಣಾಮಗಳನ್ನು ಬೀರಿವೆ. ಈ ಪರಿಣಾಮಗಳ ಪ್ರಕ್ರಿಯೆಗಳು ಕನ್ನಡ ಸಾಹಿತ್ಯಕ್ಕೆ ಹೊಸ ಅನುಭವ ಮತ್ತು ಹೊಸ ಸೃಜನಶೀಲ ಸಾಧ್ಯತೆಗಳನ್ನು ನೀಡಿವೆ. ಹೀಗಾಗಿ ಸಾಂಸ್ಕೃತಿಕ ಬಿಕ್ಕಟ್ಟು ಎನ್ನುವುದು ನಾಶ ಮತ್ತು ಸೃಷ್ಟಿ ಎರಡನ್ನೂ ಒಳಗೊಂಡ ಸಂಕೀರ್ಣ ಪ್ರಕ್ರಿಯೆಯಾಗಿದೆ.

ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಬದಲಾವಣೆ :

ನಗರೀಕರಣವು ಜನರು ನಗರಗಳಲ್ಲಿ ನೆಲೆಸುವ ಪ್ರಕ್ರಿಯೆ ಮಾತ್ರವಲ್ಲ. ಅದು ಬದುಕಿನ ದೃಷ್ಟಿಕೋನವನ್ನು ಬದಲಾಯಿಸುವ ಸಾಂಸ್ಕೃತಿಕ ಪ್ರಕ್ರಿಯೆಯೂ ಹೌದು. ಗ್ರಾಮೀಣ ಸಮಾಜದಲ್ಲಿ ಕುಟುಂಬ, ನೆರೆಹೊರೆ, ಸಮುದಾಯ, ಕೃಷಿ, ಸ್ಥಳೀಯ ವೃತ್ತಿ, ಹಬ್ಬ ಮತ್ತು ಜನಪದ ಆಚರಣೆಗಳು ವ್ಯಕ್ತಿಯ ಬದುಕಿನೊಂದಿಗೆ ನೇರವಾಗಿ ಸಂಬಂಧ ಹೊಂದಿರುತ್ತವೆ. ನಗರದಲ್ಲಿ ಈ ಸಂಬಂಧಗಳ ಸ್ವರೂಪ ಬದಲಾಗುತ್ತದೆ. ಉದ್ಯೋಗ, ವೃತ್ತಿ, ಶಿಕ್ಷಣ, ಆದಾಯ ಮತ್ತು ವೈಯಕ್ತಿಕ ಆಯ್ಕೆಗಳು ವ್ಯಕ್ತಿಯ ಜೀವನದ ಪ್ರಮುಖ ಆಧಾರಗಳಾಗುತ್ತವೆ. ಈ ಬದಲಾವಣೆಗಳು ಕನ್ನಡ ಸಾಹಿತ್ಯದ ಮೇಲೆ ಸ್ಪಷ್ಟವಾಗಿ ಗೋಚರಿಸುತ್ತವೆ. ನಗರ ಕೇಂದ್ರಿತ ಸಾಹಿತ್ಯದಲ್ಲಿ ಏಕಾಂತ, ಒತ್ತಡ, ಸ್ಪರ್ಧೆ, ವಲಸೆ, ಉದ್ಯೋಗ, ವಸತಿ ಸಮಸ್ಯೆ, ಕುಟುಂಬದ ಬದಲಾವಣೆ, ಪೀಳಿಗೆಯ ಸಂಘರ್ಷ ಮತ್ತು ವ್ಯಕ್ತಿಯ ಅಸ್ತಿತ್ವದ ಪ್ರಶ್ನೆಗಳು ಮುಖ್ಯವಾಗುತ್ತವೆ. ಗ್ರಾಮದಿಂದ ನಗರಕ್ಕೆ ಬಂದ ವ್ಯಕ್ತಿ ಹೊಸ ಬದುಕನ್ನು ಸ್ವೀಕರಿಸುವಾಗ ತನ್ನ ಹಿಂದಿನ ಸಾಂಸ್ಕೃತಿಕ ಅನುಭವಗಳನ್ನು ಸಂಪೂರ್ಣವಾಗಿ ತ್ಯಜಿಸಲಾರ. ಹೀಗಾಗಿ ಅವನಲ್ಲಿ ಎರಡು ಜಗತ್ತುಗಳ ನಡುವಿನ ಸಂಘರ್ಷ ಉಂಟಾಗುತ್ತದೆ. ಈ ಮನೋವೈಜ್ಞಾನಿಕ ಸಂಘರ್ಷ ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಜಾಗತೀಕರಣವು ನಗರೀಕರಣದ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿದೆ. ಇಂದು ಒಂದು ನಗರವು ಕೇವಲ ಸ್ಥಳೀಯ ಜನರ ವಾಸಸ್ಥಳವಾಗಿರದೆ ವಿವಿಧ ರಾಜ್ಯಗಳು ಮತ್ತು ದೇಶಗಳಿಂದ ಬಂದಜನರ ಸಾಂಸ್ಕೃತಿಕ ಸಂಗಮವಾಗುತ್ತಿದೆ. ಬೆಂಗಳೂರಿನಂತಹ ನಗರಗಳಲ್ಲಿ ಕನ್ನಡದ ಜೊತೆಗೆ ಅನೇಕ ಭಾರತೀಯ ಮತ್ತು ವಿದೇಶಿ ಭಾಷೆಗಳು ಬಳಕೆಯಾಗುತ್ತವೆ. ಈ ಬಹುಸಾಂಸ್ಕೃತಿಕ ವಾತಾವರಣವು ಕನ್ನಡ ಸಾಹಿತ್ಯದ ಅನುಭವ ವಲಯವನ್ನು ವಿಸ್ತರಿಸಿದೆ. ಆಧುನಿಕ ಕನ್ನಡ ಲೇಖಕರು ಸ್ಥಳೀಯ ಜೀವನದ ಜೊತೆಗೆ ಜಾಗತಿಕ ಉದ್ಯೋಗ, ವಲಸೆ, ತಂತ್ರಜ್ಞಾನ, ಜಾಗತಿಕ ಮಾರುಕಟ್ಟೆ ಮತ್ತು ಹೊಸ ಮಧ್ಯಮ ವರ್ಗದ ಜೀವನಶೈಲಿಯನ್ನು ಸಾಹಿತ್ಯದ ವಿಷಯವನ್ನಾಗಿ ಮಾಡಿಕೊಂಡಿದ್ದಾರೆ. ಹೀಗಾಗಿ ಕನ್ನಡ ಸಾಹಿತ್ಯದ ಭೌಗೋಳಿಕ ಮತ್ತು ಸಾಂಸ್ಕೃತಿಕ ವ್ಯಾಪ್ತಿ ವಿಸ್ತರಿಸಿದೆ.

ಭಾಷೆ, ಅಸ್ಮಿತೆ ಮತ್ತು ಸಾಂಸ್ಕೃತಿಕ ಬಿಕ್ಕಟ್ಟು :

ಭಾಷೆ ಸಂಸ್ಕೃತಿಯ ಮೂಲಾಧಾರ. ಒಂದು ಸಮುದಾಯದಇತಿಹಾಸ, ನೆನಪು, ಜನಪದಜ್ಞಾನ, ಆಚರಣೆ, ಅನುಭವ ಮತ್ತು ಮೌಲ್ಯಗಳು ಭಾಷೆಯ ಮೂಲಕ ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತವೆ. ಹೀಗಾಗಿ ಭಾಷೆಯ ಬಳಕೆಯಲ್ಲಿ ಬದಲಾವಣೆ ಸಂಭವಿಸಿದಾಗ

ಅದರ ಪರಿಣಾಮ ಸಾಂಸ್ಕೃತಿಕ ಬದುಕಿನ ಮೇಲೂ ಬೀಳುತ್ತದೆ. ಜಾಗತೀಕರಣದ ಪರಿಣಾಮವಾಗಿ ಇಂಗ್ಲಿಷ್ ಭಾಷೆಯ ಪ್ರಭಾವ ಕನ್ನಡದ ಮೇಲೆ ಹೆಚ್ಚಾಗಿದೆ. ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಉದ್ಯೋಗ ಮತ್ತು ವ್ಯಾಪಾರದ ಕ್ಷೇತ್ರಗಳಲ್ಲಿ ಇಂಗ್ಲಿಷ್ ವ್ಯಾಪಕವಾಗಿ ಬಳಕೆಯಾಗುತ್ತಿದೆ. ನಗರ ಪ್ರದೇಶಗಳ ಯುವಜನರ ಮಾತುಕತೆಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮಿಶ್ರಣ ಹೆಚ್ಚಾಗಿದೆ. ಜಾಹೀರಾತು, ಮಾಧ್ಯಮ ಮತ್ತು ಡಿಜಿಟಲ್ ಸಂವಹನದಲ್ಲಿಯೂ ಇಂಗ್ಲಿಷ್ ಪದಗಳ ಬಳಕೆ ಸಾಮಾನ್ಯವಾಗಿದೆ. ಇದರಿಂದ ಕನ್ನಡ ಭಾಷೆ ಅಳಿದುಹೋಗುತ್ತದೆ ಎಂಬ ನಿರ್ಣಯಕ್ಕೆ ತಕ್ಷಣ ಬರುವುದು ಸರಿಯಲ್ಲ. ಭಾಷೆಗಳು ಪರಸ್ಪರ ಪ್ರಭಾವ ಬೀರುವುದು ಸಹಜ. ಕನ್ನಡವು ಇತಿಹಾಸದುದ್ದಕ್ಕೂ ಸಂಸ್ಕೃತ, ಪ್ರಾಕೃತ, ಪರ್ಷಿಯನ್, ಉರ್ದು, ಇಂಗ್ಲಿಷ್ ಮತ್ತುಇತರ ಭಾಷೆಗಳಿಂದ ಪದಗಳನ್ನು ಸ್ವೀಕರಿಸಿಕೊಂಡು ತನ್ನ ಅಭಿವ್ಯಕ್ತಿಯನ್ನು ವಿಸ್ತರಿಸಿಕೊಂಡಿದೆ. ಆದರೆ ಕನ್ನಡದ ಜ್ಞಾನಭಾಷೆಯ ಸ್ಥಾನ ಮತ್ತು ಸಾರ್ವಜನಿಕ ಬಳಕೆಯ ವ್ಯಾಪ್ತಿ ಕುಗ್ಗದಂತೆ ನೋಡಿಕೊಳ್ಳುವುದು ಅಗತ್ಯ. ಇಲ್ಲಿ ಕನ್ನಡ ಸಾಹಿತ್ಯದ ಜವಾಬ್ದಾರಿ ಮಹತ್ವದ್ದಾಗಿದೆ. ಜಾಗತಿಕ ಜ್ಞಾನವನ್ನು ಕನ್ನಡಕ್ಕೆ ತರುವ ಅನುವಾದಗಳು ಹೆಚ್ಚಬೇಕು. ವಿಜ್ಞಾನ, ತಂತ್ರಜ್ಞಾನ, ಅರ್ಥಶಾಸ್ತ್ರ ಮತ್ತು ಹೊಸ ಜ್ಞಾನ ಕ್ಷೇತ್ರಗಳಲ್ಲಿ ಕನ್ನಡದಲ್ಲಿ ಉತ್ತಮ ಬರಹಗಳು ನಿರ್ಮಾಣವಾಗಬೇಕು. ಆಗ ಕನ್ನಡವು ಕೇವಲ ಭಾವನೆ ಮತ್ತು ಸಾಹಿತ್ಯದ ಭಾಷೆಯಾಗಿರದೆ ಜ್ಞಾನ ಮತ್ತು ಚಿಂತನೆಯ ಭಾಷೆಯಾಗಿಯೂ ಬಲಗೊಳ್ಳುತ್ತದೆ. ಇಲ್ಲಿ ಭಾಷೆಯ ಪ್ರಶ್ನೆಯೊಂದಿಗೆ ಅಸ್ಮಿತೆಯ ಪ್ರಶ್ನೆಯೂ ಸಂಬಂಧ ಹೊಂದಿದೆ. ಜಾಗತೀಕರಣದ ಸಂದರ್ಭದಲ್ಲಿ ವ್ಯಕ್ತಿಯು ಒಂದೇ ಸಮಯದಲ್ಲಿ ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಜಾಗತಿಕ ಅಸ್ಮಿತೆಗಳನ್ನು ಹೊಂದಿರಬಹುದು. ಕನ್ನಡ ಸಾಹಿತ್ಯವು ಈ ಬಹುಮಟ್ಟದ ಅಸ್ಮಿತೆಯ ಸಂಕೀರ್ಣತೆಯನ್ನು ದಾಖಲಿಸುವ ಪ್ರಮುಖ ಮಾಧ್ಯಮವಾಗಿದೆ.

ಪರಂಪರೆ ಮತ್ತುಗ್ರಾಮೀಣ ಸಂಸ್ಕೃತಿ :

ನಗರೀಕರಣದ ಪರಿಣಾಮವಾಗಿ ಗ್ರಾಮೀಣ ಸಮಾಜದ ಸ್ವರೂಪದಲ್ಲಿಯೂ ಬದಲಾವಣೆ ಸಂಭವಿಸಿದೆ. ಕೃಷಿಯ ಮೇಲಿನ ಅವಲಂಬನೆ ಕಡಿಮೆಯಾಗುವುದು, ಯುವ ಜನರು ನಗರಗಳಿಗೆ ವಲಸೆ ಹೋಗುವುದು, ಸಾಂಪ್ರದಾಯಿಕ ವೃತ್ತಿಗಳ ಬದಲಾವಣೆ, ಶಿಕ್ಷಣದ ವಿಸ್ತರಣೆ ಮತ್ತು ಮಾಧ್ಯಮಗಳ ಪ್ರಭಾವ ಗ್ರಾಮೀಣ ಸಂಸ್ಕೃತಿಯನ್ನು ಹೊಸ ರೂಪಕ್ಕೆ ತಂದಿವೆ. ಈ ಬದಲಾವಣೆ ಕನ್ನಡ ಸಾಹಿತ್ಯದಲ್ಲಿ ಗ್ರಾಮೀಣ ಬದುಕಿನ ನೆನಪು ಮತ್ತು ಅದರ ಪರಿವರ್ತನೆಯ ರೂಪದಲ್ಲಿ ವ್ಯಕ್ತವಾಗಿದೆ. ಕೃಷಿ, ಭೂಮಿ, ಮಳೆ, ಪ್ರಕೃತಿ, ಜಾನುವಾರು, ಹಬ್ಬ, ಜಾತ್ರೆ, ಜನಪದ ನಂಬಿಕೆ ಮತ್ತು ಸಮುದಾಯ ಸಂಬಂಧಗಳು ಸಾಹಿತ್ಯದಲ್ಲಿ ಮಹತ್ವದ ಸ್ಥಾನ ಪಡೆದಿವೆ. ಆದರೆ ಇವುಗಳ ಚಿತ್ರಣ ಈಗ ಕೇವಲ ಗ್ರಾಮೀಣಜೀವನದ ವರ್ಣನೆಯಾಗಿ ಉಳಿಯದೆ, ಬದಲಾಗುತ್ತಿರುವ ಸಾಂಸ್ಕೃತಿಕ ಪರಿಸ್ಥಿತಿಯ ವಿಮರ್ಶೆಯಾಗಿ ಕಾಣಿಸಿಕೊಳ್ಳುತ್ತಿದೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕೃತಿಗಳಲ್ಲಿ ಪ್ರಕೃತಿ, ಗ್ರಾಮೀಣ ಬದುಕು ಮತ್ತು ಆಧುನಿಕ ಅಭಿವೃದ್ಧಿಯ ನಡುವಿನ ಸಂಬಂಧಗಳನ್ನು ಸೂಕ್ಷ್ಮವಾಗಿ ಗಮನಿಸಬಹುದು. 'ಕರ್ವಾಲೋ', 'ಚಿದಂಬರ ರಹಸ್ಯ' ಮತ್ತು 'ಜುಗಾರಿಕ್ರಾಸ್' ಮುಂತಾದ ಕೃತಿಗಳಲ್ಲಿ ಪರಿಸರ, ಮನುಷ್ಯ ಮತ್ತು ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಗಳ ಸಂಬಂಧಗಳನ್ನು ವಿವಿಧ ರೀತಿಯಲ್ಲಿ ಕಾಣಬಹುದು. 'ಕರ್ವಾಲೋ' ಮತ್ತು 'ಚಿದಂಬರ ರಹಸ್ಯ' ಕೃತಿಗಳು ಹಳ್ಳಿಯ ಮುಗ್ಧ ಪರಿಸರಕ್ಕೆ ವಿಜ್ಞಾನ ಮತ್ತು ನಗರದ ಆಲೋಚನಾ ಲಹರಿ ಪ್ರವೇಶಿಸುವುದನ್ನು ತೋರಿಸುವುದರ ಜೊತೆಗೆ ಜಾಗತೀಕರಣದ ಪ್ರಭಾವದಿಂದ ಕೀಟನಾಶಕಗಳ ಬಳಕೆ, ಕಾಡಿನ ನಾಶ ಮತ್ತು ದುರಾಶೆ ಹೇಗೆ ಹಳ್ಳಿಯ ಪರಿಸರ ಸಮತೋಲನವನ್ನು ಕದಡುತ್ತಿದೆ ಎಂಬುದನ್ನು ವಿಶ್ಲೇಷಿಸುತ್ತವೆ.

ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯು ವಲಸೆಯ ಬಿಕ್ಕಟ್ಟನ್ನು ತಲೆಮಾರುಗಳ ಹಿನ್ನೆಲೆಯಲ್ಲಿ ಅದ್ಭುತವಾಗಿ ಚಿತ್ರಿಸುತ್ತದೆ. ನಗರದ ಏಕಾಂತ, ಒತ್ತಡ ಮತ್ತು ವಸತಿ ಸಮಸ್ಯೆಗಳು ಕಾದಂಬರಿಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಜಾಗತೀಕರಣ ಮತ್ತು ನಗರೀಕರಣವು ನೀಡುವ ಭೌತಿಕ ಸುಖ ತಾತ್ಕಾಲಿಕ ಎಂಬುದನ್ನು ಅರಿತು

ಅಲ್ಲಿನ ಪಾತ್ರಗಳು ಅಂತಿಮವಾಗಿ ತಮ್ಮ ಸಾಂಸ್ಕೃತಿಕ ಬೇರುಗಳನ್ನು ಹುಡುಕುತ್ತಾ ತಮ್ಮ ಹಳ್ಳಿಯ ಮಣ್ಣಿಗೆ ಮರಳುವ ಅನಿವಾರ್ಯತೆಯನ್ನು ಚಿತ್ರಿಸುತ್ತದೆ.

'ಸಂಸ್ಕಾರ' ದಲ್ಲಿ ಪ್ರಾಣೇಶಾಚಾರ್ಯರ ಪಾತ್ರದ ಮೂಲಕ ಅನಂತಮೂರ್ತಿಯವರು ಸಾಂಪ್ರದಾಯಿಕ ಮೌಲ್ಯಗಳು ಆಧುನಿಕತೆಯ ಮುಖಾಮುಖಿಯಾದಾಗ ಹೇಗೆ ಕುಸಿದುಬೀಳುತ್ತವೆ ಎಂಬುದನ್ನುತೋರಿಸುತ್ತಾರೆ. ಜಾಗತೀಕರಣದ ಮುನ್ನವೇ ಆರಂಭವಾದ ಈ ಸಾಂಸ್ಕೃತಿಕ ಬಿಕ್ಕಟ್ಟು, ಇಂದು ನಗರಗಳಲ್ಲಿ ವಾಸಿಸುವ ಪ್ರತಿಯೊಬ್ಬ ಆಧುನಿಕ ಕನ್ನಡಿಗನ ಅಂತರಂಗದ ಸಂಘರ್ಷವಾಗಿದೆ. ಹಳೆಯ ಸಂಸ್ಕಾರವೂ ಇಲ್ಲದ, ಹೊಸ ಆಧುನಿಕತೆಯನ್ನೂ ಪೂರ್ಣವಾಗಿ ಅರಗಿಸಿಕೊಳ್ಳಲಾಗದ ತತ್ತರಉಂಟಾಗಿದೆ.

ಭೈರಪ್ಪನವರ 'ದಾಟು' ಕಾದಂಬರಿಯು ಜಾತಿ ಪದ್ಧತಿಯ ಚೌಕಟ್ಟುಗಳು ಮತ್ತು ಆಧುನಿಕ ಶಿಕ್ಷಣ ತಂದ ಬದಲಾವಣೆಗಳನ್ನು ಚರ್ಚಿಸುತ್ತದೆ. ಜಾಗತೀಕರಣದ ಕಾಲದಲ್ಲಿ ಸಾಂಪ್ರದಾಯಿಕ ಮೌಲ್ಯಗಳು ಮತ್ತು ಹೊಸ ತಲೆಮಾರಿನ ಆಕಾಂಕ್ಷೆಗಳ ನಡುವೆ ನಡೆಯುವ ಪೀಳಿಗೆಯ ಸಂಘರ್ಷವನ್ನು ಧ್ವನಿಸುತ್ತದೆ.

'ಒಡಲಾಳ' ದಲ್ಲಿ ಸಾಕವ್ವನ ಪಾತ್ರದ ಮೂಲಕ ದೇವನೂರ ಮಹಾದೇವ ಅವರು ಗ್ರಾಮೀಣ ಬಡತನದ ತೀವ್ರತೆಯನ್ನು ಚಿತ್ರಿಸುತ್ತಾರೆ. ಆಧುನಿಕ ಕಾನೂನು ಮತ್ತು ನಗರೀಕರಣದ ಆಡಳಿತ ವ್ಯವಸ್ಥೆಯು ಹಳ್ಳಿಯ ಮುಗ್ಧ ಜನರನ್ನು ಹೇಗೆ ಶೋಷಿಸುತ್ತವೆ ಹಾಗೂ ಅವರ ಸಾಂಸ್ಕೃತಿಕ ಅಸ್ಮಿತೆಯನ್ನು ಹೇಗೆ ನಗಣ್ಯವಾಗಿಸುತ್ತವೆ ಎಂಬುದನ್ನು ಕೃತಿ ಧ್ವನಿಸುತ್ತದೆ. 'ಕುಸುಮಬಾಲೆ' ಕಾದಂಬರಿಯು ವಿಶಿಷ್ಟ ಜನಪದ ಶೈಲಿ ಮತ್ತು ಭಾಷಾ ಸೊಗಡಿನ ಮೂಲಕ ತಳಸಮುದಾಯಗಳ ಸಾಂಸ್ಕೃತಿಕ ಜಗತ್ತನ್ನು ಕಟ್ಟಿಕೊಡುವುದರೊಂದಿಗೆ ಜಾಗತೀಕರಣದ ಅಬ್ಬರದಲ್ಲಿ ಈ ವಿಶಿಷ್ಟ ದೇಶಿ ಭಾಷಾ ಶೈಲಿ ಹಾಗೂ ದಲಿತ–ಜನಪದ ಸಂಸ್ಕೃತಿಗಳು ನಶಿಸಿಹೋಗುವ ಅಪಾಯವನ್ನು ಓದುಗರಿಗೆ ಮನದಟ್ಟಾಗಿಸುತ್ತದೆ. ಇದೇ ರೀತಿಯಲ್ಲಿ ಅನೇಕ ಕನ್ನಡ ಲೇಖಕರು ಗ್ರಾಮೀಣ ಬದುಕಿನ ಪರಿವರ್ತನೆಯನ್ನು ದಾಖಲಿಸಿದ್ದಾರೆ.

ಜನಪದ ಸಂಸ್ಕೃತಿಯ ಮೇಲೆಯೂ ನಗರೀಕರಣ ಮತ್ತು ಜಾಗತೀಕರಣದ ಪ್ರಭಾವವಿದೆ. ಜನಪದಗೀತೆ, ಕಥೆ, ನೃತ್ಯ, ಕಲೆ ಮತ್ತು ಆಚರಣೆಗಳು ಹೊಸ ಮಾಧ್ಯಮಗಳ ಮೂಲಕ ನಗರ ಮತ್ತು ಜಾಗತಿಕ ಪ್ರೇಕ್ಷಕರನ್ನು ತಲುಪುತ್ತಿವೆ ಎಂಬುದು ಒಂದು ಕಡೆ ಸಂರಕ್ಷಣೆಗೆ ಅವಕಾಶ ನೀಡಿದರೆ ಮತ್ತೊಂದು ಕಡೆ ವಾಣಿಜ್ಯೀಕರಣದ ಅಪಾಯವನ್ನೂ ಉಂಟುಮಾಡುತ್ತದೆ. ಜನಪದಕಲೆಯ ಮೂಲ ಸಾಮಾಜಿಕ ಮತ್ತು ಸಾಂಸ್ಕೃತಿಕಅರ್ಥ ಕಳೆದುಹೋಗಿ ಕೇವಲ ಮನರಂಜನೆಯ ವಸ್ತುವಾಗಿ ಉಳಿಯುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು. ಆದ್ದರಿಂದ ಜನಪದ ಸಂಸ್ಕೃತಿಯನ್ನು ಸಂಗ್ರಹಿಸಿ ಸಂರಕ್ಷಿಸುವುದರ ಜೊತೆಗೆ ಅದರ ಜೀವಂತ ಸಾಮಾಜಿಕ ಸಂದರ್ಭಗಳನ್ನೂ ಉಳಿಸುವ ಅಗತ್ಯವಿದೆ. ಕನ್ನಡ ಸಾಹಿತ್ಯವು ಜನಪದಜ್ಞಾನ ಮತ್ತು ಅನುಭವಗಳನ್ನು ಆಧುನಿಕ ಓದುಗರಿಗೆ ತಲುಪಿಸುವ ಸೇತುವೆಯಾಗಿ ಕಾರ್ಯನಿರ್ವಹಿಸಬೇಕಾಗಿದೆ.

ಉಪಭೋಗ ಸಂಸ್ಕೃತಿ, ಕುಟುಂಬ ಮತ್ತು ಮಾನವ ಸಂಬಂಧಗಳು :

ಜಾಗತೀಕರಣದೊಂದಿಗೆ ಮಾರುಕಟ್ಟೆ ಸಂಸ್ಕೃತಿಯ ಪ್ರಭಾವ ಹೆಚ್ಚಾಗಿದೆ. ವಸ್ತುಗಳು ಕೇವಲ ಅಗತ್ಯಗಳನ್ನು ಪೂರೈಸುವ ಸಾಧನಗಳಾಗಿರದೆ ವ್ಯಕ್ತಿಯ ಸಾಮಾಜಿಕ ಸ್ಥಾನಮಾನ ಮತ್ತು ಜೀವನಶೈಲಿಯ ಸಂಕೇತಗಳಾಗುತ್ತಿವೆ. ಜಾಹೀರಾತುಗಳು ವ್ಯಕ್ತಿಯ ಆಸೆ ಮತ್ತು ಅಭಿರುಚಿಗಳನ್ನು ರೂಪಿಸುತ್ತಿವೆ. ಯಶಸ್ಸು, ಸಂತೋಷ ಮತ್ತು ಪ್ರತಿಷ್ಠೆಯ ಕಲ್ಪನೆಗಳೂ ಆರ್ಥಿಕ ಸಾಧನೆಯೊಂದಿಗೆ ಸಂಬಂಧಿಸಲಾರಂಭಿಸಿವೆ. ಈ ಉಪಭೋಗ ಸಂಸ್ಕೃತಿಯ ಪರಿಣಾಮ ಸಾಹಿತ್ಯದಲ್ಲಿ ವ್ಯಕ್ತಿಯ ಅಂತರಂಗದ ಸಂಘರ್ಷವಾಗಿ ವ್ಯಕ್ತವಾಗುತ್ತದೆ. ಹಣ, ಉದ್ಯೋಗ, ಸ್ಪರ್ಧೆ ಮತ್ತು ಸಾಮಾಜಿಕ ಸ್ಥಾನಮಾನಕ್ಕಾಗಿ ನಡೆಯುವ ಹೋರಾಟದ ನಡುವೆ ವ್ಯಕ್ತಿ ತನ್ನ ಕುಟುಂಬ ಮತ್ತು ಮಾನವ ಸಂಬಂಧಗಳಿಂದ ದೂರವಾಗುವ ಸಾಧ್ಯತೆ ಇದೆ.

ನಗರಜೀವನದ ವೇಗ ಮತ್ತು ವೃತ್ತಿಪರ ಒತ್ತಡದಿಂದ ಏಕಾಂತದ ಅನುಭವ ಹೆಚ್ಚಾಗುತ್ತಿದೆ. ಇದರಿಂದ ಕುಟುಂಬ ವ್ಯವಸ್ಥೆಯಲ್ಲಿಯೂ ಬದಲಾವಣೆ ಸಂಭವಿಸಿದೆ. ಸಂಯುಕ್ತ ಕುಟುಂಬದಿಂದ ಸಣ್ಣ ಕುಟುಂಬದತ್ತ ಸಾಗುವಿಕೆ, ಉದ್ಯೋಗಕ್ಕಾಗಿ ವಲಸೆ,

ಮಹಿಳೆಯರ ಆರ್ಥಿಕ ಸ್ವಾವಲಂಬನೆ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಬದಲಾಗುತ್ತಿರುವ ವಿವಾಹ ಸಂಬಂಧಗಳು ಸಾಹಿತ್ಯದ ಪ್ರಮುಖ ವಿಷಯಗಳಾಗಿವೆ. ಹಿರಿಯರು ಮತ್ತು ಯುವಜನರ ನಡುವಿನ ಮೌಲ್ಯ ಸಂಘರ್ಷವೂ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುತ್ತದೆ. ಮಹಿಳೆಯ ಸ್ಥಾನಮಾನಗಳಲ್ಲಿನ ಬದಲಾವಣೆ ಈ ಸಂದರ್ಭದಲ್ಲಿ ವಿಶೇಷವಾಗಿ ಗಮನಾರ್ಹವಾಗಿದೆ. ಶಿಕ್ಷಣ ಮತ್ತು ಉದ್ಯೋಗದಿಂದ ಮಹಿಳೆಯರಿಗೆ ಹೊಸ ಅವಕಾಶಗಳು ದೊರೆತಿವೆ. ಆದರೆ ಕುಟುಂಬದ ಸಾಂಪ್ರದಾಯಿಕ ನಿರೀಕ್ಷೆಗಳು ಮತ್ತು ವೃತ್ತಿಜೀವನದ ಬೇಡಿಕೆಗಳ ನಡುವೆ ಉಂಟಾಗುವ ಸಂಘರ್ಷ ಸಾಹಿತ್ಯದಲ್ಲಿ ವ್ಯಕ್ತವಾಗಿದೆ. ಆಧುನಿಕ ಕನ್ನಡ ಮಹಿಳಾ ಸಾಹಿತ್ಯವು ಮಹಿಳೆಯನ್ನು ಕೇವಲ ಕುಟುಂಬದ ಪಾತ್ರಕ್ಕೆ ಸೀಮಿತಗೊಳಿಸದೆ ಸ್ವತಂತ್ರ ಅಸ್ತಿತ್ವ ಮತ್ತು ಚಿಂತನೆಯುಳ್ಳ ವ್ಯಕ್ತಿಯಾಗಿ ಪ್ರತಿಷ್ಠಾಪಿಸಿದೆ.

ಜಾಗತಿಕ ಸಂಪರ್ಕ ಮತ್ತು ಕನ್ನಡ ಸಾಹಿತ್ಯದ ಹೊಸ ಸಾಧ್ಯತೆಗಳು :

ಜಾಗತೀಕರಣದ ಅತ್ಯಂತ ಮಹತ್ವದ ಸಾಧನಗಳಲ್ಲಿ ಡಿಜಿಟಲ್ ತಂತ್ರಜ್ಞಾನವೂ ಒಂದು. ಅಂತರ್ಜಾಲ ಮತ್ತು ಸಾಮಾಜಿಕ ಮಾಧ್ಯಮಗಳು ಕನ್ನಡ ಸಾಹಿತ್ಯದ ಸೃಷ್ಟಿ, ಪ್ರಕಟಣೆ ಮತ್ತು ಪ್ರಸಾರದ ವಿಧಾನಗಳನ್ನು ಬದಲಿಸಿವೆ. ಬ್ಲಾಗ್, ಇ–ಪುಸ್ತಕ, ಆನ್‌ಲೈನ್ ಪತ್ರಿಕೆ, ಪಾಡ್‌ಕಾಸ್ಟ್, ಆಡಿಯೊ ಪುಸ್ತಕ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಕನ್ನಡ ಸಾಹಿತ್ಯವು ಹೊಸ ಓದುಗರನ್ನು ತಲುಪುತ್ತಿದೆ. ಹಿಂದೆ ಮುದ್ರಿತ ಪುಸ್ತಕವೇ ಸಾಹಿತ್ಯದ ಪ್ರಮುಖ ಮಾಧ್ಯಮವಾಗಿದ್ದರೆ ಇಂದು ಡಿಜಿಟಲ್ ವೇದಿಕೆಗಳೂ ಸಾಹಿತ್ಯದ ಪ್ರಮುಖ ವಲಯಗಳಾಗಿವೆ. ಹೊಸ ಬರಹಗಾರರಿಗೆ ತಮ್ಮ ಬರಹಗಳನ್ನು ನೇರವಾಗಿ ಓದುಗರಿಗೆ ತಲುಪಿಸುವ ಅವಕಾಶ ದೊರೆತಿದೆ. ಯುವಜನರು ತಮ್ಮ ಅನುಭವಗಳನ್ನು ಕವನ, ಕಥೆ, ಬ್ಲಾಗ್, ಡಿಜಿಟಲ್ ಲೇಖನ ಮತ್ತು ಇತರ ರೂಪಗಳಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಆದರೆ ಡಿಜಿಟಲ್ ಸಂಸ್ಕೃತಿಯಲ್ಲಿ ವೇಗದ ಓದು, ಸಂಕ್ಷಿಪ್ತ ಬರಹ ಮತ್ತು ದೃಶ್ಯಮಾಧ್ಯಮಗಳಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತದೆ. ಇದರಿಂದ ದೀರ್ಘ ಮತ್ತು ಗಂಭೀರ ಸಾಹಿತ್ಯ ಓದುವ ಅಭ್ಯಾಸದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಹೀಗಾಗಿ ಡಿಜಿಟಲ್ ಮಾಧ್ಯಮವನ್ನು ಸಾಹಿತ್ಯದ ಪರ್ಯಾಯವೆಂದು ನೋಡುವ ಬದಲು ಮುದ್ರಿತ ಮತ್ತು ಡಿಜಿಟಲ್ ಸಾಹಿತ್ಯದ ಪರಸ್ಪರ ಪೂರಕ ಸಂಬಂಧವನ್ನು ಬೆಳೆಸುವುದು ಅಗತ್ಯವಿದೆ.

ಜಾಗತೀಕರಣದಿಂದ ಅನುವಾದ ಚಟುವಟಿಕೆಗಳೂ ವಿಸ್ತರಿಸಿವೆ. ವಿಶ್ವದ ವಿವಿಧ ಭಾಷೆಗಳ ಸಾಹಿತ್ಯ ಕನ್ನಡಕ್ಕೆ ಬರುತ್ತಿದ್ದರೆ, ಕನ್ನಡ ಸಾಹಿತ್ಯವೂ ಇತರ ಭಾಷೆಗಳಿಗೆ ಅನುವಾದಗೊಳ್ಳುತ್ತಿದೆ. ಇದರಿಂದ ಕನ್ನಡ ಸಾಹಿತ್ಯದ ಅನುಭವ ಮತ್ತು ಅಭಿವ್ಯಕ್ತಿಯ ವ್ಯಾಪ್ತಿ ಹೆಚ್ಚಾಗಿದೆ. ಸ್ತ್ರೀವಾದ, ದಲಿತಚಿಂತನೆ, ಪರಿಸರವಾದ, ವಲಸೆ ಸಾಹಿತ್ಯ, ಅಸ್ತಿತ್ವವಾದ ಮತ್ತು ಬಹುಸಾಂಸ್ಕೃತಿಕತೆಯಂತಹ ಜಾಗತಿಕ ವಿಚಾರಗಳು ಕನ್ನಡ ಸಾಹಿತ್ಯದೊಂದಿಗೆ ಸಂವಾದ ನಡೆಸಿವೆ. ಇದರಿಂದಒಂದು ಮಹತ್ವದ ಸಾಂಸ್ಕೃತಿಕ ಸಾಧ್ಯತೆ ಹುಟ್ಟುತ್ತಿದೆ. ಇಂದು ಜಾಗತಿಕ ಪ್ರಭಾವಗಳನ್ನು ಸ್ವೀಕರಿಸುತ್ತಲೇ ಸ್ವಂತ ಪರಂಪರೆಯನ್ನು ಮರುಪರಿಶೀಲಿಸಬೇಕಾಗಿದೆ. ಸ್ಥಳೀಯ ಅನುಭವಗಳನ್ನು ಜಾಗತಿಕ ದೃಷ್ಟಿಕೋನದೊಂದಿಗೆ ಜೋಡಿಸುವುದರಿಂದ ಕನ್ನಡ ಸಾಹಿತ್ಯದ ವ್ಯಾಪ್ತಿ ಇಂದು ಇನ್ನಷ್ಟು ವಿಸ್ತರಿಸತೊಡಗಿದೆ.

ನಗರೀಕರಣ ಮತ್ತು ಜಾಗತೀಕರಣದಿಂದ ಕನ್ನಡ ಸಾಹಿತ್ಯದ ಮೇಲೆ ಉಂಟಾದ ಸಾಂಸ್ಕೃತಿಕ ಬಿಕ್ಕಟ್ಟು ಬಹುಮುಖವಾದದ್ದು. ಇದು ಭಾಷೆಯ ಪ್ರಶ್ನೆಯಷ್ಟೇ ಅಲ್ಲದೆ ಗ್ರಾಮೀಣ ಸಂಸ್ಕೃತಿ, ಜನಪದ ಪರಂಪರೆ, ಕುಟುಂಬ ವ್ಯವಸ್ಥೆ, ಮಹಿಳಾ ಅಸ್ಮಿತೆ, ಉಪಭೋಗ ಸಂಸ್ಕೃತಿ, ಪರಿಸರ, ಡಿಜಿಟಲ್‌ಜೀವನ ಮತ್ತು ಜಾಗತಿಕ ಸಾಹಿತ್ಯದೊಂದಿಗಿನ ಸಂಬಂಧಗಳನ್ನೂ ಒಳಗೊಂಡಿದೆ. ಇದರಿಂದ ಪರಂಪರಾಗತ ಮೌಲ್ಯಗಳು ದುರ್ಬಲಗೊಂಡಿದ್ದರೂ, ಹೊಸ ಸಾಮಾಜಿಕ ಅನುಭವಗಳು ಮತ್ತು ಸೃಜನಶೀಲ ಸಾಧ್ಯತೆಗಳು ಕೂಡ ಹುಟ್ಟಿಕೊಂಡಿವೆ. ಹೀಗಾಗಿ ಇದು ನಾಶ ಮತ್ತು ನಿರ್ಮಾಣ, ಸಂಘರ್ಷ ಮತ್ತು ಸಮನ್ವಯ, ಸ್ಥಳೀಯತೆ ಮತ್ತು ಜಾಗತಿಕತೆಗಳ ನಡುವಿನ ನಿರಂತರ ಪ್ರಕ್ರಿಯೆಯಾಗಿದೆ.

ಇಂದು ಕನ್ನಡ ಸಾಹಿತ್ಯದ ಮುಂದೆಇರುವ ಸವಾಲು ಜಾಗತೀಕರಣವನ್ನು ಸಂಪೂರ್ಣವಾಗಿ

ತಿರಸ್ಕರಿಸುವುದಲ್ಲ. ಹಾಗೆಯೇ ಜಾಗತಿಕ ಸಂಸ್ಕೃತಿಯನ್ನು ವಿಮರ್ಶೆಯಿಲ್ಲದೆ ಸ್ವೀಕರಿಸುವುದೂ ಅಲ್ಲ. ಜಾಗತಿಕಜ್ಞಾನ ಮತ್ತು ತಂತ್ರಜ್ಞಾನವನ್ನು ಸ್ವೀಕರಿಸುತ್ತಲೇ ಕನ್ನಡ ಭಾಷೆಯ ಸೃಜನಶೀಲ ಸಾಮರ್ಥ್ಯವನ್ನು ವಿಸ್ತರಿಸುವುದು ಮುಖ್ಯವಾಗಿದೆ. ಪರಂಪರೆಯ ಜೀವಂತ ಮೌಲ್ಯಗಳನ್ನು ಉಳಿಸಿಕೊಂಡು ಆಧುನಿಕ ಜಗತ್ತಿನೊಂದಿಗೆ ಸೃಜನಾತ್ಮಕ ಸಂವಾದ ನಡೆಸುವುದರಲ್ಲಿ ಮತ್ತು ಸ್ಥಳೀಯ ಸಂಸ್ಕೃತಿಯ ಬೇರುಗಳನ್ನು ಕಾಪಾಡಿಕೊಂಡು ಜಾಗತಿಕ ಅನುಭವಗಳತ್ತ ತೆರೆದುಕೊಳ್ಳುವುದಾಗಿದೆ. ಹೀಗಾಗಿ ನಗರೀಕರಣ ಮತು ಜಾಗತೀಕರಣದಿಂದ ಉಂಟಾಗಿರುವ ಸಾಂಸ್ಕೃತಿಕ ಬಿಕ್ಕಟ್ಟು ಕನ್ನಡ ಸಾಹಿತ್ಯಕ್ಕೆ ಒಂದು ಸಮಸ್ಯೆಯಾಗಿ ಪರಿಣಮಿಸಿಲ್ಲ; ಬದಲಾಗಿ ಅದು ತನ್ನ ಸ್ವರೂಪವನ್ನು ಮರುಪರಿಶೀಲಿಸಿಕೊಳ್ಳಲು, ಹೊಸ ಅನುಭವಗಳನ್ನು ಸ್ವೀಕರಿಸಲು ಮತ್ತು ಜಾಗತಿಕ ಸಾಹಿತ್ಯಿಕ ವಲಯದಲ್ಲಿ ತನ್ನದೇ ಆದ ವಿಶಿಷ್ಟ ಧ್ವನಿಯನ್ನು ರೂಪಿಸಿಕೊಳ್ಳಲು ದೊರೆತ ಒಂದು ಐತಿಹಾಸಿಕ ಅವಕಾಶವೂ ಆಗಿದೆ.

ಆಕರ ಗ್ರಂಥಗಳು:

1. ಅನಂತಮೂರ್ತಿ, ಯು.ಆರ್. ; ಸಂಸ್ಕಾರ, ಅಕ್ಷರ ಪ್ರಕಾಶನ, ಬೆಂಗಳೂರು.
2. ಕಾರಂತ, ಕೆ. ಶಿವರಾಮ ; ಮರಳಿ ಮಣ್ಣಿಗೆ, ಸಪ್ನ ಬುಕ್ ಹೌಸ್, ಬೆಂಗಳೂರು.
3. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಕರ್ವಾಲೋ, ಪುಸ್ತಕ ಪ್ರಕಾಶನ, ಬೆಂಗಳೂರು.
4. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಚಿದಂಬರರಹಸ್ಯ, ಪುಸ್ತಕ ಪ್ರಕಾಶನ, ಬೆಂಗಳೂರು.
5. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಜುಗಾರಿಕ್ರಾಸ್, ಪುಸ್ತಕ ಪ್ರಕಾಶನ, ಬೆಂಗಳೂರು.
6. ಭೈರಪ್ಪ, ಎಸ್.ಎಲ್., ದಾಟು, ಸಾಹಿತ್ಯ ಭಂಡಾರ, ಬೆಂಗಳೂರು.
7. ದೇವನೂರ ಮಹಾದೇವ, ಒಡಲಾಳ, ಪುಸ್ತಕ ಪ್ರಕಾಶನ, ಬೆಂಗಳೂರು.
8. ದೇವನೂರ ಮಹಾದೇವ, ಕುಸುಮಬಾಲೆ, ಪುಸ್ತಕ ಪ್ರಕಾಶನ, ಬೆಂಗಳೂರು.
9. ಶಾಮರಾಯ, ತ.ಸು., ಕನ್ನಡ ಸಾಹಿತ್ಯಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

International Journal of Advance and Applied Research
www.ijaar.co.in
ISSN – 2347-7075 Impact Factor – 8.141
Peer Reviewed Bi-Monthly
Vol. 7 No.53 September - October- 2026

ಮಂಕುತಿಮ್ಮನ ಕಗ್ಗ ಆಧುನಿಕ ಸಮಾಜಕ್ಕೆ ಕೈಗನ್ನಡಿ

ಡಾ.ಅರುಂಧತಿ ಎಫ್.ಬದಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಕೆ.ಎಲ್.ಇ ಸಂಸ್ಥೆಯ ಎಸ್.ವಿ.ಎಸ್ ಬೆಳ್ಳುಬ್ಬಿ
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ
Corresponding Author–ಡಾ.ಅರುಂಧತಿ ಎಫ್.ಬದಾಮಿ
DOI - 10.5281/zenodo.23528805

ಸಾರಾಂಶ: ಕನ್ನಡದ ಭಗವದ್ಗೀತೆ ಎಂದೇ ಹೆಸರುವಾಸಿಯಾದ ಮಂಕುತಿಮ್ಮನ ಕಗ್ಗವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಒಂದು ವಿಶ್ವಕೋಶವಿದ್ದಂತೆ. 945 ಚೌಪದಿಗಳನ್ನು ಒಳಗೊಂಡ ಈ ಕೃತಿಯು ಭಗವದ್ಗೀತೆಯ ನಂತರ ಭಾರತೀಯ ತತ್ವಶಾಸ್ತ್ರವನ್ನು ಅತ್ಯಂತ ಆಳವಾಗಿ ಕನ್ನಡದಲ್ಲಿ ಹೇಳಿದ ಕೃತಿ ಎಂದು ಪರಿಗಣಿಸಲ್ಪಟ್ಟಿದೆ. "ಮಂಕುತಿಮ್ಮನೆಂದರೆ ನಮ್ಮೊಳಗಿನ ಅಮಾಯಕ, ಹುಚ್ಚು ಮನಸ್ಸೇ" ಆಗಿದೆ. ಆ ಮನಸ್ಸಿಗೆ ಹೇಳುವ ಬೋಧನೆಯೇ ಈ ಕಗ್ಗವಾಗಿದೆ. ಪ್ರಸ್ತುತ ಆಧುನಿಕ ಸಮಾಜದಲ್ಲಿ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ಸಾಮಾಜಿಕ ಜಾಲತಾಣಗಳ ಅತೀಯಾದ ಬಳಕೆಯಿಂದಾಗಿ ಇಂದಿನ ಜನಾಂಗ ಒತ್ತಡ, ಖಿನ್ನತೆ ಮತ್ತು ಅಸ್ತಿತ್ವದ ಬಿಕ್ಕಟ್ಟನ್ನು ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ 80 ವರ್ಷಗಳ ಹಿಂದೆಯೇ ರಚಿತಗೊಂಡ ಈ ಕಗ್ಗವು ಪ್ರಸ್ತುತ ಕಾಲಘಟ್ಟಕ್ಕೂ ಹೇಗೆ ಅನ್ವಯಿಸುತ್ತದೆ ಎಂಬುದನ್ನು ಈ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಮುಖ್ಯ ಪದಗಳು : ಮಂಕುತಿಮ್ಮನ ಕಗ್ಗ, ಡಿವಿಜಿ, ಆಧುನಿಕ ಸಂದೇಶ, ಜೀವನದರ್ಶನ, ಮಂಕುತಿಮ್ಮ, ತತ್ವಶಾಸ್ತ್ರ

ಮಂಕುತಿಮ್ಮನ ಕಗ್ಗದಂತ ತಾತ್ವಿಕ ಹಿನ್ನಲೆಯ ಕೃತಿಯನ್ನು ಕೊಟ್ಟ ಡಿ.ವಿ.ಗುಂಡಪ್ಪವರು ಕೇವಲ ಕವಿಯಲ್ಲ. ಅವರೊಬ್ಬ ಪತ್ರಕರ್ತರು, ತತ್ವಜ್ಞಾನಿಗಳು ಕೂಡಾ ಹೌದು. ಬದುಕಿನ ನಿರಂತರ ಹೋರಾಟ, ಸಿಹಿ–ಕಹಿ, ಏಳು–ಬೀಳುಗಳ ಅನುಭವವನ್ನು ಉಂಡ ನಂತರದಲ್ಲಿ ಅಂದರೆ ಅವರ ಜೀವನದ 56 ನೇ ವಯಸ್ಸಿನಲ್ಲಿ ಈ ಮಂಕುತಿಮ್ಮನ ಕಗ್ಗವನ್ನು ರಚಿಸಿದ್ದಾರೆ. ಭಾರತೀಯ ದರ್ಶನಗಳಾದ ಅದ್ವೈತ್, ವಿಶಿಷ್ಟಾದ್ವೈತ, ಕರ್ಮಸಿದ್ಧಾಂತಗಳನ್ನು ಅಷ್ಟೇ ಅಲ್ಲ ಪಾಶ್ಚಾತ್ಯದ ಅಸ್ತಿತ್ವವಾದದ ಚಿಂತನೆಗಳನ್ನೂ ಈ ಕೃತಿಯಲ್ಲಿ ಗಮನಿಸಬಹುದು. ಎರಡನೇಯ ಮಹಾಯುದ್ಧ ನಡೆಯುತ್ತಿರುವ ಸಂದರ್ಭ 1943ರಲ್ಲಿ ಈ ಕೃತಿ ಅಸ್ತಿತ್ವವನ್ನು ಪಡೆದುಕೊಂಡರೂ ಇಂದಿಗೂ ಪ್ರಸ್ತುತವಾಗಿದೆ. ಅನಿಶ್ಚಿತತೆ, ಸಾವು, ಭಯದಿಂದ ಆಗಲೂ ಜಗತ್ತು ತತ್ತರಿಸಿ ಹೋಗಿತ್ತು. ಇಂದೂ 2026 ರಲ್ಲಿಯೂ ಮನುಷ್ಯ ಇಂತಹುದ್ದೇ ಭೀಕರ ಪರಿಸ್ಥಿತಿಗಳಾದ ಯುದ್ಧ, ಪ್ರಕೃತಿ ವಿಕೋಪ, ಹವಾಮಾನ ವೈಪರಿತ್ಯ, ರುದ್ರ ಭಯಂಕರವಾದ ಹೊಸ ಹೊಸ ರೋಗಗಳಿಗೆ ನಲುಗಿ ಹೋಗಿದ್ದಾನೆ. ಇಂದಿಗೂ ಅನಿಶ್ಚಿತತೆ, ಸಾವು, ಭಯಗಳನ್ನು ಎದುರಿಸುತ್ತಿದ್ದಾನೆ. ಈ ಸಂದರ್ಭದಲ್ಲಿ ಡಿವಿಜಿಯವರ ಮಂಕುತಿಮ್ಮನ ಕಗ್ಗ ಸೋತ ಮನಸ್ಸಿಗೆ ಸಾಂತ್ವಾನ, ಧೈರ್ಯ ನೀಡುವ ಕೆಲಸವನ್ನು ಮಾಡುತ್ತದೆ.

"ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ
ಕುದುರೆ ನೀನ್, ಅವನು ಪೇಳ್ವಂತೆ ಪಯಣಿಗರು
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು
ಪದ ಕುಸಿಯೆ ನೆಲವಿಹುದು–ಮಂಕುತಿಮ್ಮ"

ನಮ್ಮನ್ನು ಆಳುವ ವಿಧಿ ನಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತದೆಯೋ ಅಲ್ಲಿಗೆ ಹೋಗಲೇಬೇಕು. ಮನುಷ್ಯನಿಗೆ ಬೇರೆ ದಾರಿಯಿಲ್ಲ. ಒಂದು ವೇಳೆ ಸಂಪೂರ್ಣ ಸೋತು ಕುಸಿದು ಹೋದಾಗಲೂ ದೇವ ಸ್ವರೂಪವೆನ್ನುವಂತೆ ಕೊನೆಯಲ್ಲಿ ನೆಲವಿಹುದೆಂದು, ಆತನೆಂದಿಗೂ ಕೈಬಿಡುವುದಿಲ್ಲವೆಂಬ ಭರವಸೆಯ ಬೆಳಕನ್ನೂ ನೀಡುತ್ತಾರೆ.

ಪ್ರಸ್ತುತ ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಸಾಕಷ್ಟು ನೂತನ ಆವಿಷ್ಕಾರಗಳಾಗಿ ಮಾನವ ಕುಲವನ್ನು ಯಾರೂ ಸೋಲಿಸಲು ಸಾಧ್ಯವೇ ಇಲ್ಲ ಎಂಬ ಹುಂಬತನದ ಅಹಂಕಾರದಲ್ಲಿದ್ದ ಮನುಷ್ಯನನ್ನು 21 ನೇ ಶತಮಾನದಲ್ಲಿ ವಿಧಿಸೋಲಿಸಿ ಸುಣ್ಣವಾಗಿಸಿತು. ವಿಧಿ ಲಿಖಿತವನ್ನು ತಪ್ಪಿಸಲಿಕ್ಕೆ ಸಾಧ್ಯವೇ ಇಲ್ಲವೆಂಬಂತೆ ಮನುಷ್ಯ ಈ ಶತಮಾನದಲ್ಲಿ ಭಯಂಕರವಾದ, ಊಹಿಸಲೂ ಅಸಾಧ್ಯವಾದ ಸುನಾಮಿ, ಕರೋನಾ, ಭೂಕುಸಿತ, ಅತಿವೃಷ್ಟಿ, ಅನಾವೃಷ್ಟಿಗಳಂತಹ ಇನ್ನೂ ಅನೇಕ ಪ್ರಕೃತಿ ವಿಕೋಪಗಳಿಗೆ ಬಲಿಯಾಗಬೇಕಾಯಿತು. ಅದರ ಮುಂದೆಜ್ಞಾನಿ, ವಿಜ್ಞಾನಿ, ಸಾಹಸಿ ಎನಿಸಿಕೊಂಡ ಮನುಷ್ಯ ಅಸಹಾಯಕನಾದ. ಕುಟುಂಬ, ಹಣ, ನೆಮ್ಮದಿ ಇನ್ನೂ ಏನೇನೋ. ಎಲ್ಲವನ್ನೂ ಕಳೆದುಕೊಂಡು ನಿಂತಾಗ ಡಿವಿಜಿ ಹೇಳುವ ಮಾತು ಗಮನಾರ್ಹ.

"ಬುದ್ಧಿಮಾತಿದು ನಿನಗೆ: ಸಿದ್ಧನಿರು ಸಕಲಕ್ಕಮ್
ಎದ್ದುಕುಣಿಯಲಿ ಕರ್ಮ, ದೈವ ನಿದ್ರಿಸಲಿ
ಅದ್ಭುತಗಳರಿದಲ್ಲ: ಭವ್ಯಕ್ಕೆ ಹೆದ್ದಿಲ್ಲ
ಸಿದ್ಧನಾಗೆಲ್ಲಕ್ಕಂ–ಮಂಕುತಿಮ್ಮ

"ತಿರುಗಿಸಲಿ ವಿಧಿರಾಯನಿಚ್ಛೆಯಿಂ ಯಂತ್ರವನು
ಚರಿಕೆ ತಾರಾಗ್ರಹಗಳಿಷ್ಟವೋದಂತೆ
ಪರಿಹಾಸದಿಂ ಕರ್ಮದೈವ ಕೇಕೆಗಳಿಡಲಿ
ಸ್ಥಿರಚಿತ್ತ ನಿನಗಿರಲಿ– ಮಂಕುತಿಮ್ಮ"

ಎಂಬ ಈ ಮಾತು ಸೋತು ಸುಣ್ಣವಾದ ಮನಸ್ಸಿಗೆ ಧೈರ್ಯವನ್ನು, ಸಮಚಿತ್ತತೆಯನ್ನು, ಬದುಕಿನಲ್ಲಿ ಏನೇ ಬಂದರೂ ಅದನ್ನು ಧೈರ್ಯದಿಂದ ಎದುರಿಸುತ್ತೇನೆಂಬ ಛಾತಿಯನ್ನು, ದೃಢತೆಯನ್ನು ಬೆಳೆಸಿಕೊಳ್ಳಬೇಕೆಂಬ ಮನೋಬಲವನ್ನು ನೀಡುತ್ತದೆ.

ಆಧುನಿಕ ಸಮಾಜದಲ್ಲಿ ಇಂದಿನ ಜನಾಂಗವು ವಿಜ್ಞಾನ, ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ಸಾಮಾಜಿಕ ಜಾಲತಾಣಗಳ ಅತೀಯಾದ ಬಳಕೆಯಿಂದಾಗಿ ಒತ್ತಡ, ಖಿನ್ನತೆಯಂತಹ ಮಾನಸಿಕ ಸಮಸ್ಯೆಯಿಂದ ಬಳಲುತ್ತಿದೆ. ಮಾತ್ರವಲ್ಲ ತಮ್ಮ ಅಸ್ತಿತ್ವದ ಕುರಿತಾಗಿಯೇ ಅನೇಕ ಸಂದಿಗ್ಧತೆಗಳನ್ನು ಎದುರಿಸುತ್ತಿದೆ. ಮುಂಜಾನೆಯಿಂದ ರಾತ್ರಿಯವರೆಗೂ ವೇಗದ ಬದುಕನ್ನು ಬದುಕುತ್ತಿದ್ದೇವೆ. ಈ ಓಡುವಿಕೆಯಿಂದಾಗಿ ನೆಮ್ಮದಿಯನ್ನು ಕಳೆದುಕೊಂಡು ಮಾನಸಿಕ ಅಶಾಂತಿಯಿಂದ ಇಂದಿನ ಜನಾಂಗ ಬಳಲುತ್ತಿದೆ. ಅಂತಹವರು ಬದುಕೊಂದು ಬಡಿದಾಟ, ಗೋಳಾಟವೆಂದುಕೊಳ್ಳಲಾರದೆ ಬದುಕನ್ನು ಅರ್ಥಪೂರ್ಣವಾಗಿ ಬದುಕಬೇಕೆಂದು ಹೇಳುತ್ತಾರೆ. ಜಗತ್ತಿನ ಚೇತನ ವಸ್ತುಗಳಲ್ಲಿ ಮಾತ್ರವಲ್ಲದೆ ಜಡವಸ್ತುಗಳಲ್ಲಿಯೂ ಸೃಷ್ಟಿಕರ್ತ ನೆಲೆಸಿದ್ದು ಬದುಕು ಅರ್ಥಪೂರ್ಣವಾಗಿರುವುದರಿಂದ ಅದನ್ನು ನಿರರ್ಥಕವೆಂದುಕೊಳ್ಳಲಾರದೆ ಜೀವಿಸಬೇಕೆಂದು ಹೇಳುತ್ತಾನೆ.

"ವ್ಯರ್ಥವೀಜೀವನದ ಬಡಿದಾಟವೆನ್ನದಿರು
ಅರ್ಥವಹುದದು ನಿನಗೆ ಪೂರ್ಣದರ್ಶನದಿಂ
ನರ್ತಿಪನು ಜಡಜೀವರೂಪಂಗಳಲಿ ಬೊಮ್ಮ
ಪೂರ್ತಿಯಿದನರಿಯೆ ಸೊಗ –ಮಂಕುತಿಮ್ಮ"

ಇಂದಿನ ಜನಾಂಗದ ಬಹುತೇಕ ದೊಡ್ಡ ಸಮಸ್ಯೆಯೆಂದರೆ ಇದ್ದುದನ್ನು ಬಿಟ್ಟು ಇರದುದರ ಆಸೆ ಪಡುವುದು. ಮನುಷ್ಯನ ಆಸೆಗೆ ಕೊನೆಯೆಂಬುದಿಲ್ಲ. ಪಡೆದಷ್ಟು ಅವನ ಆಸೆ ಹೆಚ್ಚುತ್ತಲೇ ಹೋಗುತ್ತದೆ. "ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾ: ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ವ್ಯರ್ಥವಾದ ಆಸೆ, ಕರ್ಮ ಮತ್ತು ವ್ಯರ್ಥವಾದ ಜ್ಞಾನವುಳ್ಳ ವಿಕ್ಷಿಪ್ತ ಚಿತ್ತರಾದ ಅಜ್ಞಾನಿ ಜನರು ರಾಕ್ಷಸಿ ಅಸುರೀ ಮತ್ತು ಮೋಹಿನೀ ಪ್ರಕೃತಿಯನ್ನೇ ಆಶ್ರಯಿಸಿಕೊಂಡಿರುತ್ತಾರೆಂದು ಗೀತೆ ಹೇಳುತ್ತದೆ. ಈ ತತ್ವಗಳನ್ನೇ ಡಿವಿಜಿಯವರ ಕಗ್ಗದಲ್ಲಿಯೂ ಕಾಣುತ್ತೇವೆ..

"ಇದ್ದುದನು ಬಿಡುವೆ, ಇರದುದನು ಬಯಸುವೆ,
ಇರುವುದೆಲ್ಲವ ಬಿಟ್ಟುಇರದುದರ ಕನಸು ಕಾಣುವೆ,
ಇರದುದನು ಪಡೆದರೆ ಮತ್ತೆಇನ್ನೊಂದರ ಬಯಕೆ
ಇದು ಮಾನವನ ವ್ಯಥೆಯೆ ಮಂಕುತಿಮ್ಮ" ಮನುಷ್ಯನ ವ್ಯಥೆಗೆ ಕಾರಣ ನಿರಂತರವಾದ ಆಸೆಯೇ ಇದಕ್ಕೆ ಕಾರಣ. ಇದನ್ನೇ **Fear of Missing out** ಎಂದು ಕರೆಯುತ್ತಾರೆ. ಬದುಕಿನಲ್ಲಿ ಬಯಕೆಗೆ ಕೊನೆಯೆಂಬುದಿಲ್ಲವಾದ್ದರಿಂದ ಇದ್ದುದರಲ್ಲಿಯೇ ತೃಪ್ತಿಯಿಂದ ಇರಬೇಕೆಂಬ ಅವರ ಹಿತನುಡಿ ಪಾಲಿಸಿದರೆ ಬದುಕು ಸುಂದರವಾಗುತ್ತದೆ.

ಹಾಗೆಯೇ ಬದುಕೊಂದು ಹೋರಾಟ, ಅದೊಂದು ಯುದ್ಧವಿದ್ದಂತೆ. ಆ ಯುದ್ಧವನ್ನು ಮಾಡಲೇಬೇಕು. ಬೇರೆ ಗತಿಯಿಲ್ಲ. ಆದರೆ ಇದಕ್ಕಂಜಿ ಬದುಕಿನಿಂದ ಪಲಾಯನಗೊಂಡರೆ, ವಿಧಿಯನ್ನೇ ಎದುರು ಹಾಕಿಕೊಳ್ಳಲೆತ್ನಿಸಿದರೆ ಆತ ಮತ್ತೆ ವಿಧಿಯ ಬಾಯಿಗೆ ಆಹಾರವಾಗದೆ ಇರಲಾರ. ಬಂದದ್ದನ್ನು ಬುದ್ಧಿವಂತಿಕೆಯಿಂದ ಎದುರಿಸಬೇಕು. ಆತ್ಮಹತ್ಯೆಯಂತಹ ಕೆಟ್ಟ ನಿರ್ಧಾರ ತೆಗೆದುಕೊಂಡು ವಿಧಿಯನ್ನು ಎದುರು ಹಾಕಿಕೊಂಡರೆ ಎಂದಾದರೂ ವಿಧಿಯ ಬಾಯಿಗೆ ಸಿಕ್ಕಿಹಾಕಿಕೊಳ್ಳಲೇಬೇಕಾದ್ದರಿಂದ ಕಷ್ಟಗಳಿಗೆ ಹೆದರಿ ಬದುಕಿನಿಂದ ಪಲಾಯನಗೊಳ್ಳಬೇಕೆಂದು ಯೋಚಿಸುವ ಅಸಹಾಯಕರಿಗೆ, ವಿಧಿಯನ್ನೇ ಪ್ರಶ್ನಿಸುವವರಿಗೆ

"ಬದುಕೊಂದು ಕದನವೆಂದಂಜಿ ಬಿಟ್ಟೋಡವನು
ಬೀದಿಯ ಬಾಯಿಗೆ ಕವಳವಾಗದುಳಿಯುವನೆ?
ಎದೆಯನುಕ್ಕಾಗಿಸುತ, ವತಿಗದೆಯ ಪಿಡಿದು, ನೀ
ನೆದುರು ನಿಲೆ ಬಿದಿಯೊಲಿವ – ಮಂಕುತಿಮ್ಮ"

ಎಂದು ಹೇಳುತ್ತಾರೆ.

ಆದರೆ ಸುಂದರವಾದ ಈ ಬದುಕನ್ನು ಅರ್ಥಬದ್ಧವಾಗಿ ಬಾಳಬೇಕಾದರೆ ಈ ಬದುಕಿಗೊಬ್ಬ ನಾಯಕ ಬೇಕು. ನಮ್ಮ ಬದುಕಿನ ನಾಯಕ ನಾವೇ ಆಗಬೇಕು. ಇದೆಲ್ಲವೂ ಸತ್ಯ. ಆದರೂ ಮನುಷ್ಯ ಪ್ರಯತ್ನವನ್ನೂ ಮೀರಿ ವಿಧಿಯೇ ನಾಯಕನಂತೆ ವರ್ತಿಸುತ್ತದೆ. ಕಾರಣ ಆಗು ಹೋಗುಗಳ ಕುರಿತು ಚಿಂತಿಸದೆ ಮನಸ್ಸನ್ನು ಶಾಂತವಾಗಿಟ್ಟುಕೊಳ್ಳಲು ಹೇಳುತ್ತಾರೆ.

"ಮುಂದೇನು ಮತ್ತೇನು ಗತಿಯೆಂದು ಚಿಂತಿಸಬೇಡ
ನಿನ್ನ ಕೈಯೊಳಗಿಹುದೇ ವಿಧಿಯ ಲೆಕ್ಕಣಿಕೆ
ಕಣ್ಣಿಗೆಟುಕದೇ ಸಾಗುತಿಹುದು ದೈವದ ಸಂಚು
ತಣ್ಣಗಿರಿಸಾತ್ಮವನು ಮಂಕುತಿಮ್ಮ"

ಹಾಗೆಯೇ ತನ್ನಿಂದ ಆವ ಕೆಲಸಗಳೂ ಆಗದು ಎಂಬ ನಕಾರಾತ್ಮಕ ಚಿಂತೆಯನ್ನು ಹೊಂದಿರುವವರಿಗೆ ಮತ್ತು ಸೋಮಾರಿಗಳಿಗೆ ಡಿವಿಜಿ ಹೇಳುವ ಈ ಮಾತುಗಮನಾರ್ಹ.

"ನಿನಗಿರದಕಣ್ ಬಾಯಿ ವಾಲ್ಮೀಕಿಗೆಂತಾಯ್ತು?
ಮುನಿಕವಿತೆಗೆಂತು ನಿನ್ನೆದೆಯೊಳೆಡೆಯಾಯ್ತು?
ಘನಮಹಮನೊಳ್ ಜ್ವಲಿಸುತಿತರರೊಳು ನಿದ್ರಿಸುತೆ
ಅನಲನೆಲ್ಲರೊಳಿಹನು– ಮಂಕುತಿಮ್ಮ"

ದೇವರದೃಷ್ಟಿಯಲ್ಲಿ ಎಲ್ಲ ಜೀವಿಗಳೂ ಸಮ. ಹೀಗಿರುವಾಗ ರಾಮಾಯಣದಂತಹ ಮಹಾಕಾವ್ಯವನ್ನು ಬರೆಯಲು ವಾಲ್ಮೀಕಿಗೆ ಸಾಧ್ಯವಾಗಿದೆ ಎಂದ ಮೇಲೆ ಉಳಿದವರಿಗೂ ಮಹತ್ಕಾರ್ಯಗಳನ್ನು ಸಾಧಿಸುವುದು ಅಸಾಧ್ಯವೇನಲ್ಲ. ಹಿರಿದಾದ ಹಿರಿಮೆಯುಳ್ಳವನಲ್ಲಿ ಉರಿಯುತ್ತಿರುವ ಅಗ್ನಿಯೇ ಎಲ್ಲರಲ್ಲಿಯೂ ಇರುತ್ತದೆ.ಈ ಅಗ್ನಿಯನ್ನು ಎಚ್ಚರಗೊಳಿಸಿದರೆ ಎಲ್ಲರೂ ವಾಲ್ಮೀಕಿಯಂತಹ ಶ್ರೇಷ್ಠ ಕವಿಗಳಾಗಬಹುದು. ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ಸೂಚಿಸುತ್ತಾರೆ.

ಸ್ವಲ್ಪ ಸಡಿಲು, ಸ್ವಲ್ಪ ಬಿಗಿ, ಇದೇ ಜೀವನ ರೀತಿ
ಇಲ್ಲವೇ ಹೆಚ್ಚಿಸಲು ಕಷ್ಟ, ಹೆಚ್ಚೇ ಇಲ್ಲವೆನಲು ನಷ್ಟ
ಅಲ್ಪವೋ ಹೆಚ್ಚೋ ತಿಳಿದು
ನಡೆಯುವುದು ಬಲ್ಲಿದ ಮಂಕುತಿಮ್ಮ"

ಇದನ್ನು ಇಂದಿನ ವೃತ್ತಿ ಮತ್ತು ಕೌಟುಂಬಿಕ ಜೀವನಕ್ಕೆ ಹೋಲಿಸಬಹುದು. ನಮ್ಮ ವೃತ್ತಿಜೀವನ ಮತ್ತು ಕೌಟುಂಬಿಕ ಜೀವನವನ್ನು ಹೇಗೆ ಸಮವಾಗಿ ನಿಭಾಯಿಸಿಕೊಂಡು ಹೋಗಬೇಕೆನ್ನುವುದನ್ನು ತುಂಬಾ ಸುಂದರವಾಗಿ ಹೇಳುತ್ತಾರೆ. ತುಂಬಾ ಬಿಗಿ ಮಾಡಿದರೆ ಹಗ್ಗ ಹರಿಯುತ್ತದೆ. ತುಂಬಾ ಸಡಿಲ ಮಾಡಿದರೆ ಹಾಳಾಗುತ್ತದೆ. ಆದ್ದರಿಂದ ವೃತ್ತಿ ಮತ್ತು ಕೌಟುಂಬಿಕ ಬದುಕನ್ನು ಸಾಗಿಸುವ ಮಧ್ಯಮ ಮಾರ್ಗವನ್ನು ಅನುಸರಿಸಬೇಕೆಂದು ಕವಿ ಹೇಳುತ್ತಾರೆ.

"ಬೆಳಗುವ ಹಗಲು, ಇರುಳ ಕತ್ತಲೆ, ಎರಡೂ ಬೇಕು
ನಗುವೂ ಅಳುವೂ. ಸುಖದುಃಖವೂ ಬಾಳಿನಲಿ ಬೇಕು
ಬಿಸಿಲು ನೆರಳಿನ ಜೋಡು
ಬೆಸೆದ ಬಾಳೇ ಚೆಲುವು ಮಂಕುತಿಮ್ಮ"

ಎಂಬಲ್ಲಿ ಮಧುರಚೆನ್ನರು ಹೇಳುವ ಸಪ್ಪೆ ಬಾಳುವೆಗಿಂತ ಉಪ್ಪು ಬಾಳು ಲೇಸು ಎಂಬ ಮಾತು ನೆನಪಿಗೆ ಬರುತ್ತದೆ. ಹಗಲು–ರಾತ್ರಿಯಂತೆ ಜೀವನದಲ್ಲಿ ನಗು–ಅಳು, ಸುಖ–ದುಃಖ ಎಲ್ಲವೂ ಇದ್ದಗಲೇ ಬದುಕಿಗೊಂದು ಅರ್ಥ ಬರುತ್ತದೆ, ಸಣ್ಣ ಸಣ್ಣ ವಿಷಯಗಳಿಗೆ ಜೀವನಕ್ಕೆ ವಿಧಾಯ ಹೇಳುವ ಇಂದಿನ ತಲೆಮಾರಿಗೆ ಈ ಮಾತು ಅತ್ಯಂತ ಸೂಕ್ತವಾಗಿದೆ.

ಹಾಗೆಯೇ

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ" ಎನ್ನುವಲ್ಲಿ ಒಬ್ಬ ವ್ಯಕ್ತಿ ಎಲ್ಲ ಕಡೆ ಒಂದೇ ರೀತಿಯಿಂದ ಇರಲಾರದೆ ಸಂದರ್ಭಕ್ಕೆ ತಕ್ಕಂತೆ ಬದಲಾಗಬೇಕು. ಹುಲ್ಲಿನಂತೆ ವಿನಯ, ಮನೆಯಲ್ಲಿ ಮಲ್ಲಿಗೆಯಂತೆ ಮೃದು, ಸಂಕಷ್ಟದಲ್ಲಿ ಕಲ್ಲಿನಂತೆ ಗಟ್ಟಿ, ದೀನ ದುರ್ಬಲರಿಗೆ ಸಿಹಿಯಾಗಿರಬೇಕು ಎಂಬಲ್ಲಿ **Situational Leadership** ಕುರಿತಾಗಿಯೂ ಹೇಳುತ್ತಾರೆ, ಉನ್ನತಸ್ಥಾನ ಗೌರವವನ್ನು ಹೇಗೆ ಗಳಿಸಬೇಕೆಂಬುದನ್ನು ಹೇಳುತ್ತಾರೆ.

ಜೀವನವದೊಂದು ಕಲೆ: ಕಲೆಯ ಕಲಿಸುವುದೆಂತು?
ಸಾವಿರದ ನಿಯಮ ಉಕ್ತಿಗಳನೊರೆದೊಡೆಯುಂ
ಆವುದೋಕುಶಲತೆಯದೊಂದಿರದೆಜಯವಿರದು
ಆ ವಿವರ ನಿನ್ನೊಳಗೆ – ಮಂಕುತಿಮ್ಮ

ಜೀವನವನ್ನು ನಡೆಸುವುದು ಒಂದು ಕಲೆ. ಅದನ್ನು ಕಲಿಸುವುದು ಹೇಗೆ? ಸಾವಿರಾರು ನಿಯಮ ಮತ್ತು ಉಪಾಯಗಳನ್ನು ಹೇಳಿದರೂ, ಯಾವುದೋ ಒಂದು ಕುಶಲತೆಯಿಲ್ಲದಿದ್ದರೆ ಜಯ ಸಿಗುವುದಿಲ್ಲ. ಆ ಕುಶಲತೆಯ ವಿವರ ನಮ್ಮಲ್ಲಿರಬೇಕು ಮಾತ್ರವಲ್ಲ ಯುಕ್ತಿ ಮತ್ತು ಉಕ್ತಿಗಳೆರಡರಲ್ಲಿಯೂ ಮನುಷ್ಯ ನಿಷ್ಣಾತನಾಗಬೇಕು. ಅಂದಾಗ ಬದುಕನ್ನು ಜಯಿಸಲು ಸಾಧ್ಯವೆಂದು ಹೇಳುತ್ತಾರೆ. ಒಟ್ಟಾರೆಯಾಗಿ ಕನ್ನಡಕ್ಕೆ ಭಗವದ್ಗೀತೆಯ ಸ್ವರೂಪದಲ್ಲಿ ಇದು ಉಪದೇಶಾಮೃತವನ್ನು ನೀಡುತ್ತದೆ,

ಪರಾಮರ್ಶನ ಗ್ರಂಥಗಳು:

1. ಗುಂಡಪ್ಪ.ಡಿ.ವಿ: ಮಂಕುತಿಮ್ಮನ ಕಗ್ಗ(ಮೂಲ ಕೃತಿ) ಗೋಖಲೆ ಪ್ರಕಾಶನ: ಬೆಂಗಳೂರು:1943
2. ಕೀರ್ತಿನಾಥ ಕುರ್ತಕೋಟಿ: ಕನ್ನಡ ಸಾಹಿತ್ಯ ವಿಮರ್ಶೆ :ಧಾರವಾಡ
3. ಅಮೂರ್. ಜಿ. ಎಸ್: ಡಿ.ವಿ.ಜಿ ಕೃತಿಗಳ ವಿಮರ್ಶೆ

Journal Indexing





















Published by - Young Researcher Association, Kolhapur (Maharashtra)